ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೃಷ್ಣನ ಧ್ಯಾನ
ಉತ್ತರಪ್ರದೇಶದ ಮೊರಾದಾಬಾದ್‌ನಲ್ಲಿ ಶನಿವಾರ ಯುವತಿಯೊಬ್ಬರು ಕೃಷ್ಣನ ವಿಗ್ರಹ ಖರೀದಿಯಲ್ಲಿ ತೊಡಗಿದ್ದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಕಣಿವೆನಾಡು ಕಾಶ್ಮೀರ ಈಗ ಬದಲಾಗಿದೆ ಎಂದರೆ ಸಾಲದು. ಭಯ, ಅಪನಂಬಿಕೆ ಕರಗಲು ಪ್ರೀತಿಯ ಬೆಸುಗೆ ಬೇಕು

ದ್ರಾವಿಡ್‌ಗೆ ಬಲಾಢ್ಯ ತಂಡ ಕಟ್ಟುವ ಹೊಣೆ? 14

ಸಿಂಘು ಗಡಿ: ದಲಿತ ಕೃಷಿ ಕಾರ್ಮಿಕ ಲಖ್‌ಬೀರ್ ಸಿಂಗ್ ಭೀಕರ ಹತ್ಯೆ ಪ್ರಕರಣ

ಉನ್ನತ ಮಟ್ಟದ ತನಿಖೆಗೆ ಆಗ್ರಹ 5B

ಕೇರಳದಲ್ಲಿ ಭಾರಿ ಮಳೆ: ಪ್ರವಾಹ, ಭೂಕುಸಿತಕ್ಕೆ 10 ಸಾವು 8

ಕುಸಿಯುತ್ತಿದೆ ಸಹಕಾರಿ ಕ್ಷೇತ್ರ: ಸಕ್ಕರೆ ಕಾರ್ಖಾನೆಗಳ ಎನ್‌ಪಿಎ ₹750 ಕೋಟಿ

ಬಲಾಢ್ಯರದ್ದೇ ಸವಾರಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಇಡೀ ರಾಜ್ಯವನ್ನು ವ್ಯಾಪಿಸಿಕೊಂಡಿರುವ ಸಹಕಾರಿ ಆರ್ಥಿಕ ವ್ಯವಸ್ಥೆ ಈಗ ಬಲಾಢ್ಯರ ಸಾಲದ ಭಾರದಿಂದ ಕುಸಿಯತೊಡಗಿದೆ. ಸಹಕಾರ ಬ್ಯಾಂಕ್‌ಗಳ ಚುಕ್ಕಾಣಿ ಹಿಡಿದ ಪ್ರಭಾವಿಗಳು, ರಾಜಕಾರಣಿಗಳು ಮತ್ತು ಬಲಿಷ್ಠರು ಹಸ್ತಕ್ಷೇಪ, ಸ್ವಜನಪಕ್ಷಪಾತದ ಮೂಲಕ ಸಹಕಾರ ಬ್ಯಾಂಕ್‌ಗಳ ಹಣವನ್ನು ತಮ್ಮವರಿಗೆ ಬೇಕಾಬಿಟ್ಟಿಯಾಗಿ ಸಾಲ ನೀಡುತ್ತಿರುವುದು ಸಹಕಾರಿ ಚಳವಳಿಗೇ ಕಂಟಕವಾಗಿ ಪರಿಣಮಿಸಿದೆ.

ಕೃಷಿ, ಹೈನುಗಾರಿಕೆ, ಮೀನುಗಾರಿಕೆ, ಸಕ್ಕರೆ ಉತ್ಪಾದನೆ ಸೇರಿದಂತೆ ಹಲವು ಚಟುವಟಿಕೆಗಳಿಗೆ ಸಹಕಾರಿ ಕ್ಷೇತ್ರವೇ ಬೆನ್ನೆಲುಬು. ರಾಜ್ಯದ ಒಟ್ಟು ಜನಸಂಖ್ಯೆಯ ಮೂರನೇ ಒಂದರಷ್ಟು ಮಂದಿ ಸಹಕಾರಿ ಸಂಸ್ಥೆಗಳ ಸದಸ್ಯರಾಗಿದ್ದಾರೆ. ₹ 1.36 ಲಕ್ಷ ಕೋಟಿ ದುಡಿಯುವ ಬಂಡವಾಳ ಹೊಂದಿರುವ ರಾಜ್ಯದ ಸಹಕಾರಿ ರಂಗ, ಅಧಿಕಾರಸ್ಥರ ಕಪಿಮುಷ್ಠಿಯಲ್ಲಿ ಸಿಲುಕಿ ಏದುಸಿರು ಬಿಡುತ್ತಿದೆ.

ಮೂರನೇ ಎರಡರಷ್ಟು ಸಹಕಾರಿ ಸಂಸ್ಥೆಗಳು ಲಾಭದಲ್ಲಿದ್ದರೆ, ಮೂರನೇ ಒಂದರಷ್ಟು ಸಂಸ್ಥೆಗಳು ನಷ್ಟದ ಭಾರ ಹೊತ್ತು ಬಸವಳಿದಿವೆ.

ರಾಜ್ಯದ ಸಹಕಾರ ಸಂಸ್ಥೆಗಳಲ್ಲಿ ಭ್ರಷ್ಟಾಚಾರ, ವಂಚನೆ, ಅಕ್ರಮಗಳ ಸಂಖ್ಯೆ ಏರುಗತಿಯಲ್ಲೇ ಸಾಗುತ್ತಿದೆ. ಕೆಲವು ವರ್ಷಗಳಿಂದೀಚೆಗೆ ಸಾವಿರಾರು ಸಂಸ್ಥೆಗಳು ಬಾಗಿಲು ಮುಚ್ಚಿವೆ. ಸದ್ಯ ರಾಜ್ಯದ ವಿವಿಧೆಡೆ 53 ದೊಡ್ಡ ಸಹಕಾರ ಸಂಸ್ಥೆಗಳು ಅಕ್ರಮಗಳ ಭಾರ ತಾಳಲಾರದೇ ಕುಸಿದುಬೀಳುವ ಸ್ಥಿತಿಗೆ ತಲುಪಿವೆ. ಇನ್ನೂ ನೂರಾರು ಸಹಕಾರ ಸಂಘಗಳಲ್ಲಿ ಅಕ್ರಮ, ಅವ್ಯವಹಾರಗಳು ನಡೆದಿರುವ ಆರೋಪಗಳಿವೆ.

ಅಕ್ರಮಗಳ ಹೆಬ್ಬಾಗಿಲು ಅಪೆಕ್ಸ್: ರಾಜ್ಯದ ಎಲ್ಲ ಸಹಕಾರ ಸಂಸ್ಥೆಗಳ ಆಧಾರ ಸ್ತಂಭವಾಗಿರುವ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಹಲವು ವರ್ಷಗಳಿಂದ ಅಕ್ರಮಗಳ ಗೂಡಾಗಿದೆ. ಅಪೆಕ್ಸ್ ಬ್ಯಾಂಕ್ ಕೇಂದ್ರ ಕಚೇರಿ ಮತ್ತು ಶಾಖೆಗಳ ಮೂಲಕ ಸಾಲ ಹಂಚಿಕೆಯಲ್ಲಿ ಅಕ್ರಮಗಳು ನಡೆಯುತ್ತಿರುವ ದೂರುಗಳಿಗೆ ಕೊನೆಯೇ ಇಲ್ಲದಂತಹ ಸ್ಥಿತಿಯಿದೆ.

ರಾಜಕಾರಣಿಗಳ ಒಡೆತನದ ಸಹಕಾರಿ ಸಂಸ್ಥೆಗಳಿಗೆ, ಅಪೆಕ್ಸ್ ಬ್ಯಾಂಕ್ ನಿಯಮ ಮೀರಿ ನೂರಾರು ಕೋಟಿ ರೂಪಾಯಿ ಸಾಲ ನೀಡಿರುವುದು ಅಲ್ಲಿ ನಡೆಯುತ್ತಿರುವ ಅಕ್ರಮ ವಹಿವಾಟುಗಳಿಗೆ ಒಂದು ಸಣ್ಣ ಉದಾಹರಣೆಯಷ್ಟೆ. ರಿಯಲ್ ಎಸ್ಟೇಟ್ ಉದ್ಯಮಿಗಳು, ಕೈಗಾರಿಕೋದ್ಯಮಿಗಳು ಹಾಗೂ ವ್ಯಾಪಾರಿಗಳಿಗೆ ಸರಿಯಾದ ಆಧಾರವಿಲ್ಲದೇ ಕೋಟಿಗಟ್ಟಲೆ ಸಾಲ ನೀಡುವ ಜಾಲವೊಂದು ಅಪೆಕ್ಸ್ ಬ್ಯಾಂಕ್‌ನಲ್ಲಿ ಸಕ್ರಿಯವಾಗಿದೆ ಎಂಬ ಆರೋಪ ಬಲವಾಗಿಯೇ ಇದೆ.

ರಾಜಕಾರಣಿಗಳು ನಿರ್ದೇಶಕರಾಗಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು, ರಾಜಕಾರಣಿಗಳ ಒಡೆತನವಿರುವ ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಅಪೆಕ್ಸ್ ಬ್ಯಾಂಕ್ ₹ 3,173.42 ಕೋಟಿ ಸಾಲ ನೀಡಿದೆ. ಬಹುತೇಕ ಸಕ್ಕರೆ ಕಾರ್ಖಾನೆಗಳು ಸಾಲ ಮರುಪಾವತಿಸುತ್ತಿಲ್ಲ. ಸಕ್ಕರೆ ಕಾರ್ಖಾನೆಗಳ ವಸೂಲಾಗದ ಸಾಲದ ಮೊತ್ತವೇ ₹ 734.24 ಕೋಟಿ ಮೀರಿದೆ. ರಾಜಕಾರಣಿಗಳ ಒತ್ತಡಕ್ಕೆ ಮಣಿದು ಕಾರ್ಖಾನೆಗಳ ಸಾಮರ್ಥ್ಯ ಲೆಕ್ಕಿಸದೇ ಸಾಲ ಮಂಜೂರು ಮಾಡಿದ್ದ ಅಪೆಕ್ಸ್ ಬ್ಯಾಂಕ್ ಈಗ ಅನುತ್ಪಾದಕ ಆಸ್ತಿಯ ಹೆಚ್ಚಳದಿಂದ ಅಡಕತ್ತರಿಯಲ್ಲಿ ಸಿಲುಕಿದೆ.

6ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 6

ಒಳನೋಟ

ಕಂಟಕವಾದ ಸಾಲ

ಪ್ರತಿಕ್ರಿಯಿಸಿ: 9606038256
feedback@prajavani.co.in

ರಾಜ್ಯದ ಸಹಕಾರ ಕ್ಷೇತ್ರದ ವಿಸ್ತಾರ

ಒಟ್ಟು ಸಹಕಾರ ಸಂಸ್ಥೆಗಳು	50,803
ಒಟ್ಟು ಸದಸ್ಯರು	2,43,95,000
ಒಟ್ಟು ಷೇರು ಬಂಡವಾಳ	₹ 6,300 ಕೋಟಿ
ಸದಸ್ಯರ ಷೇರು ಬಂಡವಾಳ	₹ 6,046 ಕೋಟಿ
ದುಡಿಯುವ ಬಂಡವಾಳ	₹ 1,36,786 ಕೋಟಿ
ಲಾಭದಲ್ಲಿರುವ ಸಂಸ್ಥೆಗಳು	26,040
ನಷ್ಟದಲ್ಲಿರುವ ಸಂಸ್ಥೆಗಳು	14,420
ಲಾಭ– ನಷ್ಟ ಎರಡೂ ಇಲ್ಲದ ಸಂಸ್ಥೆಗಳು	10,343

ಸಹಕಾರಿ ಸಂಸ್ಥೆಗಳ ವಿವರ

- 1 ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್
- 262 ಸಹಕಾರಿ ಮತ್ತು ಸೌಹಾರ್ದ ಸಹಕಾರಿ ಬ್ಯಾಂಕ್‌ಗಳು
- 21 ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು
- 45,164 ಸಹಕಾರ ಸಂಘಗಳು
- 5,355 ಸೌಹಾರ್ದ ಸಹಕಾರಿಗಳು

₹ 100 ಕೋಟಿಗಿಂತ ಹೆಚ್ಚು ಸಾಲ ಪಡೆದವರು

ಸಕ್ಕರೆ ಕಾರ್ಖಾನೆ	ಪಾಲುದಾರರು	ಸಾಲದ ಮೊತ್ತ (₹ಕೋಟಿಗಳಲ್ಲಿ)
ಬೀಳಗಿ ಶುಗರ್ಸ್, ಬಾಗಲಕೋಟೆ	ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ	241.16
ನಿರಾಣಿ ಶುಗರ್ಸ್, ಎಂಆರ್‌ಎನ್ ಕೇನ್ ಪವರ್ ಲಿಮಿಟೆಡ್, ಸಾಯಿ ಪ್ರಿಯಾ ಶುಗರ್ಸ್, ಬಾಗಲಕೋಟೆ	ಸಚಿವ ಮುರುಗೇಶ್ ಆರ್. ನಿರಾಣಿ	205.11
ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ	ಕಲ್ಮೇಶ್ ಎಸ್. ಸರವಾಡ್	172.27
ಭಾಲ್ಕೇಶ್ವರ ಶುಗರ್ಸ್, ಭಾಲ್ಕಿ	ಮಾಜಿ ಶಾಸಕ ಪ್ರಕಾಶ್ ಖಂಡ್ರೆ	162.38
ಹರ್ಷ ಶುಗರ್ಸ್, ಬೆಳಗಾವಿ	ಶಾಸಕಿ ಲಕ್ಷ್ಮಿ ಹೆಬ್ಬಾಳಕರ	157.43
ಬಾಲಾಜಿ ಶುಗರ್ಸ್, ವಿಜಯಪುರ	ವೆಂಕಟೇಶ್ ಎಸ್. ಪಾಟೀಲ	141.85
ಮೈಲಾರ್ ಶುಗರ್ಸ್, ಹೂವಿನ ಹಡಗಲಿ, ಬಳ್ಳಾರಿ	ಉದಯ ಪುರಾಣಿಕ್ ಮತ್ತು ಗಚ್ಚಿನಮನಿ	136.93
ಸೌಭಾಗ್ಯಲಕ್ಷ್ಮಿ ಶುಗರ್ಸ್, ಗೋಕಾಕ	ಶಾಸಕ ರಮೇಶ ಜಾರಕಿಹೊಳಿ	112.88
ಸಾವರಿನ್ ಇಂಡಸ್ಟ್ರೀಸ್, ತೇರದಾಳ	ಶಿವಕುಮಾರ್ ಮಲಘಾಣ	105.04
ಚಾಮುಂಡೇಶ್ವರಿ ಶುಗರ್ಸ್, ಮಂಡ್ಯ	ಎಂ. ಶ್ರೀನಿವಾಸನ್	100

ಸರ್ಕಾರದ ಯೋಜನೆ ಜ.26ರಿಂದ ಮನೆ ಬಾಗಿಲಿಗೆ

ದಾವಣಗೆರೆ: ಸರ್ಕಾರ ವಿಧಾನಸೌಧದಲ್ಲಿ ಇರುವುದಲ್ಲ, ಜನರ ಬಳಿಗೇ ಬರಬೇಕು. ಅದಕ್ಕಾಗಿ ಸರ್ಕಾರದ ಸೌಲಭ್ಯಗಳನ್ನು ಜನರ ಮನೆ ಬಾಗಿಲಿಗೆ ಒಯ್ಯುವ 'ಜನಸೇವಕ' ಕಾರ್ಯಕ್ರಮವನ್ನು ಮುಂದಿನ ಜನವರಿ 26ರಿಂದ ರಾಜ್ಯದಾದ್ಯಂತ ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು. 5B

ನಾನೇ ಪಕ್ಷದ ನಾಯಕಿ: ಸೋನಿಯಾ ಗಾಂಧಿ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮಲ್ಲಸಂದ್ರ ಕೋಟೆಯ ಗೋಡೆ ಕುಸಿದಿದ್ದು, ಬಿಬಿಎಂಪಿ ದಾಸರಹಳ್ಳಿ ವಲಯದ ಜಂಟಿ ಆಯುಕ್ತ ನರಸಿಂಹಮೂರ್ತಿ ಪರಿಶೀಲನೆ ನಡೆಸಿದರು —ಪ್ರಜಾವಾಣಿ ಚಿತ್ರ

ಕಳಪೆ ಕಾಮಗಾರಿ: ತನಿಖೆಗೆ ಶಾಸಕ ಮಂಜುನಾಥ್ ಆಗ್ರಹ

ಮಲ್ಲಸಂದ್ರ ಕೋಟೆಯ ಗೋಡೆ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲ ವರ್ಷಗಳ ಹಿಂದಷ್ಟೇ ನಿರ್ಮಾಣಗೊಂಡಿರುವ ಮಲ್ಲಸಂದ್ರ ಕೋಟೆಯ ಒಂದು ಪಾರ್ಶ್ವದ ಗೋಡೆ ಮಳೆಗೆ ಕುಸಿದಿದೆ.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಲ್ಲಸಂದ್ರ ವಾರ್ಡಿನ 7 ಎಕರೆ ಜಾಗದಲ್ಲಿ ಸುತ್ತಲ ಕೋಟೆ ರೀತಿಯ ಗೋಡೆ ನಿರ್ಮಿಸಲಾಗಿದೆ. ಒಂದೂವರೆ ವರ್ಷದ ಹಿಂದಷ್ಟೇ ಈ ಕೆಂಪೇಗೌಡ ಪಾರ್ಕ್ ಅನ್ನು ಸಂಸದ ಡಿ.ವಿ.ಸದಾನಂದಗೌಡ ಉದ್ಘಾಟನೆ ಮಾಡಿದ್ದರು. ಕಾಮಗಾರಿ ಆರಂಭವಾದ ದಿನದಿಂದಲೂ ಈ ಕಾಮಗಾರಿ ವಿವಾದಕ್ಕೀಡಾಗಿತ್ತು. ಗೋಡೆಯ ಒಂದು ಭಾಗ ಕುಸಿದಿರುವುದರಿಂದ ಈಗ ಮತ್ತೆ ಕಾಮಗಾರಿ ಚರ್ಚೆಗೆ ಗ್ರಾಸವಾಗಿದೆ. ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರೇ ಅದನ್ನು ಸರಿಪಡಿಸಲು ಮುಂದಾದರು.

ಸ್ಥಳಕ್ಕೆ ಭೇಟಿ ನೀಡಿದ್ದ ಶಾಸಕ ಆರ್.ಮಂಜುನಾಥ್, 'ಕಳಪೆ ಕಾಮಗಾರಿ ನಿರ್ವಹಿಸಿರುವುದರಿಂದ ಗೋಡೆ ಕುಸಿದಿದೆ. ಅದಕ್ಕೇ ತೇಪೆ ಹಾಕುವುದರಿಂದ ಮತ್ತೆ ಬೀಳುವ ಸಾಧ್ಯತೆ ಇದೆ' ಎಂದರು.

'ಟೆಂಡರ್ ಕರೆಯದೆಯೇ ಮಲ್ಲಸಂದ್ರ ಬಂಡೆಯಲ್ಲಿದ್ದ ಕಲ್ಲನ್ನೇ ಬಳಕೆ ಮಾಡಿಕೊಂಡು ಕಾಮಗಾರಿ ನಿರ್ವಹಿಸಲಾಗಿದೆ. ಈ ಕಳಪೆ ಕಾಮಗಾರಿಗೆ ಈ ಹಿಂದಿನ ಶಾಸಕರು ಮತ್ತು ಪಾಲಿಕೆಯ ಮಾಜಿ ಸದಸ್ಯರು ಕಾರಣ. ಕಳಪೆ ಕಾಮಗಾರಿ ಬಗ್ಗೆ ಸಮಗ್ರ ತನಿಖೆಗೆ ಆಗ್ರಹಿಸಿ ಪ್ರಧಾನ ಮಂತ್ರಿ ಮತ್ತು ಮುಖ್ಯಮಂತ್ರಿಗೆ ಪತ್ರ ಬರೆಯುತ್ತೇನೆ' ಎಂದು ತಿಳಿಸಿದರು.

ಈ ಆರೋಪಕ್ಕೆ ಪ್ರತಿಕ್ರಿಯಿಸಿದ ಮಲ್ಲಸಂದ್ರ ವಾರ್ಡ್‌ನ ಪಾಲಿಕೆಯ ಮಾಜಿ ಸದಸ್ಯ ಎನ್. ಲೋಕೇಶ್, 'ಈ ಕಾಮಗಾರಿಯನ್ನು ಶಾಸಕರು ಅರ್ಧಕ್ಕೆ ನಿಲ್ಲಿಸಿದ್ದಾರೆ. ಪೂರ್ಣಗೊಂಡಿದ್ದರೆ ಮಳೆ ನೀರು ನುಗ್ಗಲು ಅವಕಾಶ ಇರುತ್ತಿರಲಿಲ್ಲ. ಕಳಪೆ ಕಾಮಗಾರಿ ನಡೆದಿದ್ದರೆ ಬಿಬಿಎಂಪಿ ಮುಖ್ಯ ಆಯುಕ್ತರ ತಾಂತ್ರಿಕ ಹಾಗೂ ಜಾಗೃತ ಕೋಶವು (ಟಿವಿಸಿಸಿ) ತನಿಖೆ ನಡೆಸಿ, ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಿದೆ' ಎಂದರು.

ಗೋಡೆ ಕುಸಿದು ಹಾನಿ

ಭಾರಿ ಮಳೆಗೆ ದಾಸರಹಳ್ಳಿ ಕ್ಷೇತ್ರ ವ್ಯಾಪ್ತಿಯ ಚಿಮಣಿ ಹಿಲ್‌ನಲ್ಲಿ ತಡೆಗೋಡೆಯೊಂದು ಕುಸಿದಿದೆ.

ಗೋಡೆ ಕುಸಿತದಿಂದ ಮನೆಯ ಹಿಂಭಾಗದ ಅಡಿಪಾಯಕ್ಕು ಹಾನಿ ಉಂಟಾಗಿದೆ. ಮಳೆ ಇನ್ನಷ್ಟು ಸುರಿದರೆ ಮಣ್ಣು ಕುಸಿದು ಮನೆಗೆ ಹಾನಿಯಾಗುವ ಸಂಭವ ಇದೆ.

ಹೆಚ್ಚಿನ ಹಾನಿ ಆಗುವುದನ್ನು ತಡೆಯಲು ಮನೆಯ ಮಾಲೀಕರು ಟಾರ್ಪಲ್ ಹೊದಿಸಿದ್ದಾರೆ.

ದಲಿತ ಮಹಾಸಭಾ
ನಂ. 681, 9ನೇ "ಎ" ಅಡ್ಡರಸ್ತೆ, ಮಹಾಲಕ್ಷ್ಮೀಪುರಂ, ಬೆಂಗಳೂರು–560086
DMS

ಸಭೆಯ ಸೂಚನಾ ಪತ್ರ

ದಿನಾಂಕ : 30–10–2021 ರಂದು ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ವಿಳಾಸದಲ್ಲಿರುವ ಕೇಂದ್ರ ಕಛೇರಿಯಲ್ಲಿ ಸರ್ವಸದಸ್ಯರ ಸಭೆಯನ್ನು ಕರೆಯಲಾಗಿದೆ. ಈ ಸಭೆಗೆ ಎಲ್ಲರೂ ತಪ್ಪದೇ ಹಾಜರಾಗಲು ಕೋರಿದೆ.

ಸಭೆಯ ಕಾರ್ಯಸೂಚಿ :
1) ಸರ್ವಸದಸ್ಯರನ್ನು ಸ್ವಾಗತಿಸುವುದು.
2) ಸಭೆಯ ಕಾರ್ಯಸೂಚಿಯನ್ನು ಓದುವುದು,
3) 2021–22 ರಿಂದ ಮೂರು ವರ್ಷಗಳಿಗೆ ಕಾರ್ಯಕಾರಿ ಸಮಿತಿಯನ್ನು ರಚಿಸುವುದು,
4) 2016–17 ರಿಂದ 2020–21 ರ ಲೆಕ್ಕಪತ್ರಗಳನ್ನು ಮಂಡಿಸುವುದು.
5) ಸದಸ್ಯತ್ವ ಬಂದಿರತಕ್ಕಂತಹ ಅರ್ಜಿಯನ್ನು ಪರಿಶೀಲಿಸಿ ಅಂಗೀಕರಿಸುವುದು.
6) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳನ್ನು ಚರ್ಚಿಸುವುದು.

ಸ್ಥಳ : ಬೆಂಗಳೂರು
ದಿನಾಂಕ : 01–10–2021

ಪ್ರಧಾನ ಕಾರ್ಯದರ್ಶಿ
ದಲಿತ ಮಹಾಸಭಾ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಪಶ್ಚಿಮ ವಲಯರವರ ಕಚೇರಿ, ಕಲ್ಯಾಣ ಇಲಾಖೆ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.

ಸಂಖ್ಯೆ: ಕ.ಅ(ಪ)/ಪಿಆರ್/194/2021–22 ದಿನಾಂಕ: 11.10.2021

ಸಾರ್ವಜನಿಕ ಪ್ರಕಟಣೆ

ವಿಷಯ: 2019–20ನೇ ಸಾಲಿನ ಕಾಮಗಾರಿಗಳ ಲೆಕ್ಕ ಶೀರ್ಷಿಕೆ ಪಿ–2415ರ ಅನುದಾನದಡಿಯಲ್ಲಿ ಮಹಾಲಕ್ಷ್ಮೀಪುರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ವಾರ್ಡ್–43, 67, 68, 75 ಮತ್ತು 102ರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸುವ ಬಗ್ಗೆ.

2019–20ನೇ ಸಾಲಿನ ಪಶ್ಚಿಮ ವಲಯದ ಮಹಾಲಕ್ಷ್ಮೀಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್–43, 67, 68, 75 ಮತ್ತು 102ಕ್ಕೆ ಸಂಬಂಧಪಟ್ಟಂತೆ 2019–20ನೇ ಸಾಲಿನ ಕಾಮಗಾರಿಗಳ ಲೆಕ್ಕ ಶೀರ್ಷಿಕೆ ಪಿ–2415ರ ಅನುದಾನದಡಿಯಲ್ಲಿ ಕಲ್ಯಾಣ ಇಲಾಖೆ ವತಿಯಿಂದ ಈ ಕೆಳಕಂಡ ಕಲ್ಯಾಣ ಕಾರ್ಯಕ್ರಮವನ್ನು ಅನುಷ್ಠನಗೊಳಿಸಲು, ಸದರಿ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಮಾತ್ರ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಅಂಗವಿಕಲರು ಹಾಗೂ ಸಾಮಾನ್ಯ ವರ್ಗದ ಸಮುದಾಯದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	–: ಕಲ್ಯಾಣ ಕಾರ್ಯಕ್ರಮಗಳ ವಿವರ :–
1.	ಪಾಲಿಕೆ, ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸುವುದು. ಅರ್ಹ ಅಂಗವಿಕಲರಿಗೆ ಆದ್ಯತೆ ನೀಡುವುದು.

ಯೋಜನೆಗಳನ್ನು ಪಡೆಯಲು ಅಭ್ಯರ್ಥಿಗೆ ಇರಬೇಕಾದ ಅರ್ಹತೆಗಳು ಹಾಗೂ ಮಾನದಂಡಗಳು:–

ಕ್ರ.ಸಂ	ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳ ವಿವರ
1.	ಅರ್ಜಿದಾರರು ಪಶ್ಚಿಮ ವಲಯದ ವಾರ್ಡ್–43, 67, 68, 75 ಮತ್ತು 102ರ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು
2.	ಒಂದು ಕುಟುಂಬದಲ್ಲಿ ಒಂದು ಯೋಜನೆಗೆ ಒಬ್ಬರು ಮಾತ್ರ ಅರ್ಹರಾಗಿರುತ್ತಾರೆ.
3.	ಸದರಿ ಕಾರ್ಯಕ್ರಮಗಳ ಯೋಜನೆಗೆ ನಿಗಧಿಪಡಿಸಿರುವ ಅಭ್ಯರ್ಥಿಗಳ ವಯೋಮಿತಿ ಪರಿಶಿಷ್ಟ ಜಾತಿ / ಪಂಗಡದವರಿಗೆ, ಹಿಂದುಳಿದ / ಅಲ್ಪ ಸಂಖ್ಯಾತ ವರ್ಗದವರಿಗೆ ಕನಿಷ್ಟ 18 ವರ್ಷಗಳ ವಯೋಮಿತಿ ಹೊಂದಿರಬೇಕು
4.	ಲ್ಯಾಪ್‌ಟಾಪ್ ಸೌಲಭ್ಯವನ್ನು ಪಡೆಯಲು ಅಭ್ಯರ್ಥಿಗಳು ಪಿಯುಸಿ ಹಾಗೂ ಪ್ರಸ್ತುತ ಉನ್ನತ ವ್ಯಾಸಂಗ (ಪದವಿ) ಮಾಡುತ್ತಿರುವ ಬಗ್ಗೆ ವ್ಯಾಸಂಗದ ಪ್ರಮಾಣ ಪತ್ರ, ಕಾಲೇಜು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.
5.	ಪರಿಶಿಷ್ಟ ಜಾತಿ / ಪಂಗಡದವರಿಗೆ, ಹಿಂದುಳಿದ / ಅಲ್ಪ ಸಂಖ್ಯಾತ ವರ್ಗದವರಿಗೆ ತಹಸೀಲ್ದಾರ್ ರವರಿಂದ ಗಣಕೀಕೃತ ಜಾತಿ ಪ್ರಮಾಣ ಪತ್ರ ಹಾಗೂ ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು, ಲ್ಯಾಪ್‌ಟಾಪ್ ಸೌಲಭ್ಯಗಳನ್ನು ಪಡೆಯಲು ರೂ.2.00 ಲಕ್ಷಗಳ ಮೀರದೆ ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. (ವಿದ್ಯಾಭ್ಯಾಸಕ್ಕೆ ಎಲ್ಲಾ ಅಭ್ಯರ್ಥಿಯ ಹೆಸರಿನಲ್ಲಿ ಪರಿಶಿಷ್ಟ ಜಾತಿ / ಪಂಗಡದವರಿಗೆ, ಹಿಂದುಳಿದ / ಅಲ್ಪಸಂಖ್ಯಾತ ವರ್ಗದವರ ಆದಾಯ ಪ್ರಮಾಣ ಪತ್ರವಿರಬೇಕು)
6.	ಅರ್ಜಿದಾರರು ವಯೋಮಿತಿ ದೃಢೀಕರಿಸಲು ಎಸ್.ಎಸ್.ಎಲ್.ಸಿ ಅಂಕಪಟ್ಟಿ / ಶಾಲಾ–ಕಾಲೇಜಿನ ವರ್ಗಾವಣೆ ಪ್ರಮಾಣ ಪತ್ರ / ಜನನ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು.
7.	ಅಭ್ಯರ್ಥಿಗಳು ಅರ್ಜಿಯೊಂದಿಗೆ 3 ಇತ್ತೀಚಿನ ಭಾವಚಿತ್ರ, ಯೋಜನೆಗೆ ನಿಗಧಿಪಡಿಸಿದ ವಿದ್ಯಾರ್ಹತೆಯ ದಾಖಲೆಗಳು, ವಾಸಸ್ಥಳ ದೃಢೀಕರಣ ಪತ್ರಗಳಾದ ಮತದಾರರ ಗುರುತಿನ ಚೀಟಿ / ಪಡಿತರ ಚೀಟಿ / ಅಡಿಗೆ ಅನಿಲ ರಸೀದಿ / ಪರವಾನಿಗೆ ಪ್ರತಿಯನ್ನು ಸಲ್ಲಿಸಬೇಕು.
8.	ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಿರುವ ಎಲ್ಲಾ ದಾಖಲೆಗಳನ್ನು (ಜೆರಾಕ್ಸ್ ಪ್ರತಿಗಳನ್ನು) ಗೆಜೆಟೆಡ್ ಅಧಿಕಾರಿಯಿಂದ ಅಥವಾ ನೋಟರಿಯವರಿಂದ ದೃಢೀಕರಿಸಿ ಸಲ್ಲಿಸಬೇಕು.
9.	ಆರ್ಥಿಕ ಸಹಾಯ ಕೋರಿ ಸಲ್ಲಿಸುವ ಅರ್ಜಿದಾರರು ಈ ಹಿಂದೆ ಸರ್ಕಾರ / ಸರ್ಕಾರೇತರ ಸಂಸ್ಥೆಗಳಿಂದ ಉಚಿತವಾಗಿ / ಸಾಲದ ಮುಖಾಂತರ ಇಂತಹ ಯಾವುದೇ / ಸವಲತ್ತುಗಳನ್ನು ಪಡೆದಿಲ್ಲವೆಂದು ರೂ.20/–ರ ಛಾಪ ಕಾಗದದಲ್ಲಿ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
10.	ಮೇಲ್ಕಂಡಂತೆ ಆಯೋಜಿಸಿರುವ ಕಲ್ಯಾಣ ಕಾರ್ಯಕ್ರಮಗಳಿಗೆ / ಯೋಜನೆಗಳಿಗೆ ಪಾಲಿಕೆಯು ಹೊರಡಿಸಿರುವ ಮಾರ್ಗಸೂಚಿಗಳ ಮಾನದಂಡಗಳನ್ವಯ ಫಲಾನುಭವಿಗಳನ್ನು ಆಯ್ಕೆ ಮಾಡುವುದರಿಂದ ಸೌಲಭ್ಯಗಳನ್ನು ಪಡೆಯಲು ಹೆಚ್ಚಿನ ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ ಪಶ್ಚಿಮ ವಲಯ ಕಲ್ಯಾಣ ವಿಭಾಗಕ್ಕೆ ಸಂಪರ್ಕಿಸಿ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ಅರ್ಜಿಯನ್ನು ಸಲ್ಲಿಸುವುದು.
11.	ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ / ಪಾಲಿಕೆಯು ಆಗಿಂದ್ದಾಗೆ ಹೊರಡಿಸುವ ಸುತ್ತೋಲೆ / ಮಾರ್ಗಸೂಚಿಗಳಿಗೆ ಅನುಗುಣವಾಗಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು.

ಅರ್ಜಿ ಸಲ್ಲಿಸಲು ಇಚ್ಛಿಸುವವರು ಪಾಲಿಕೆಯ ಅಂತರ್ಜಾಲವಾದ **www.bbmp.gov.in** ರಲ್ಲಿ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿ, ಎಲ್ಲಾ ದಾಖಾಲಾತಿಗಳೊಂದಿಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳವರೆಗೆ ಕಾಲವಕಾಶವಿದ್ದು, ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪಶ್ಚಿಮ ವಲಯದ ಕಲ್ಯಾಣ ಇಲಾಖೆಯಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಕಲ್ಯಾಣಾಧಿಕಾರಿಗಳು, ಕಲ್ಯಾಣ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪಶ್ಚಿಮ ವಲಯ, ಸಂಪಿಗೆ ರಸ್ತೆ, ಬಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು – 560020. ಇವರನ್ನು ಸಂಪರ್ಕಿಸಬಹುದಾಗಿದೆ. ಸಹಿ/–

ಜಂಟಿ ಆಯುಕ್ತರು, (ಪಶ್ಚಿಮ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗುಡುಗು–ಸಿಡಿಲು ಸಮೇತ ಮಳೆ ಅಬ್ಬರ • ಹಲವೆಡೆ ಮನೆಗಳಿಗೆ ನುಗ್ಗಿದ ನೀರು

ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಕಟ್ಟಡ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಲವು ದಿನಗಳಿಂದ ಮಳೆ ಬಿಟ್ಟು ಬಿಟ್ಟು ಸುರಿಯುತ್ತಿದೆ. ಶನಿವಾರವೂ ಹಲವೆಡೆ ಗುಡುಗು ಸಿಡಿಲಿನಿಂದ ಕೂಡಿದ ಮಳೆಯ ಅಬ್ಬರ ಜೋರಾಗಿತ್ತು. ಕಮರ್ಷಿಯಲ್ ಸ್ಟ್ರೀಟ್ ಮುಖ್ಯರಸ್ತೆಯಲ್ಲಿದ್ದ 100 ವರ್ಷ ಹಳೇ ಕಟ್ಟಡವೊಂದು ಮಧ್ಯಾಹ್ನ ಕುಸಿದು ಬಿದ್ದಿತು.

ಕಟ್ಟಡ ಕುಸಿದ ಸ್ಥಳದಲ್ಲಿ ಅದರ ಅವಶೇಷಗಳಡಿ ದ್ವಿಚಕ್ರ ವಾಹನ ಹಾಗೂ ಪೀಠೋಪಕರಣಗಳು ಸಿಲುಕಿದ್ದವು. ಅವಶೇಷಗಳ ತೆರವು ಕಾರ್ಯಾಚರಣೆ ರಾತ್ರಿಯವರೆಗೂ ನಡೆಯಿತು.

'ಹಳೇ ಕಟ್ಟಡವಾಗಿದ್ದರಿಂದ, ನಿರಂತರ ಮಳೆಯಿಂದಾಗಿ ಹಾನಿ ಆಗಿತ್ತು. ಶುಕ್ರವಾರವೇ ಕಟ್ಟಡದ ಗೋಡೆಯ ಒಂದು ಭಾಗದಲ್ಲಿ ಇಟ್ಟಿಗೆಗಳು ಕುಸಿದು ಬಿದ್ದಿದ್ದವು. ಸ್ಥಳಕ್ಕೆ ಭೇಟಿ ನೀಡಿದ್ದ ಬಿಬಿಎಂಪಿ ಅಧಿಕಾರಿಗಳು, ಕಟ್ಟಡ ಪರಿಶೀಲನೆ ನಡೆಸಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಕಟ್ಟಡ ಹಾಗೂ ಅದರ ಸುತ್ತಮುತ್ತಲಿನ 6 ಮಳಿಗೆಗಳನ್ನು ಬಿಬಿಎಂಪಿ ಅಧಿಕಾರಿಗಳು ಸ್ಥಳಾಂತರಗೊಳಿಸಿದ್ದರು. ಈ ಪ್ರದೇಶದಲ್ಲಿ ಸಾರ್ವಜನಿಕರು ಓಡಾಡದಂತೆ ನಿರ್ಬಂಧ ವಿಧಿಸಿ ಸೂಚನಾ ಪಟ್ಟಿಗಳನ್ನು ಕಟ್ಟಿದ್ದರು. ಹೀಗಾಗಿ, ಯಾರೂ ಕಟ್ಟಡ ಬಳಿ ಹೋಗಲಿಲ್ಲ. ಮಧ್ಯಾಹ್ನ ಕಟ್ಟಡ ಕುಸಿದರೂ ಯಾವುದೇ ಜೀವ ಹಾನಿ ಸಂಭವಿಸಲಿಲ್ಲ' ಎಂದೂ ತಿಳಿಸಿದರು.

'ಎರಡು ವರ್ಷಗಳ ಹಿಂದೆಯೂ ಕಟ್ಟಡದ ಮಾಲೀಕರಿಗೆ ಬಿಬಿಎಂಪಿ ಅಧಿಕಾರಿಗಳು ನೋಟಿಸ್ ನೀಡಿರುವ ಮಾಹಿತಿ ಸಿಕ್ಕಿದೆ. ನಿವೇಶನಕ್ಕೆ ಸಂಬಂಧಿಸಿದ ವ್ಯಾಜ್ಯ ನ್ಯಾಯಾಲಯದಲ್ಲಿ ಇದ್ದಿದ್ದರಿಂದ, ಕಟ್ಟಡದ ತೆರವು ಸಾಧ್ಯವಾಗಿರಲಿಲ್ಲ' ಎಂದೂ ಅಧಿಕಾರಿ ವಿವರಿಸಿದರು.

ಮಳೆ ಶುರುವಾದ ಬಳಿಕ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಸಾಕಷ್ಟು ಸಮಸ್ಯೆಗಳು ಉಂಟಾಗುತ್ತಿವೆ. ರಸ್ತೆಯಲ್ಲಿ ಜನ ಓಡಾಡಲೂ ಸಮಸ್ಯೆ ಎದುರಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಂಡಿದ್ದ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವುದೇ ದುಃಸ್ಥಿತಿಗೆ ಕಾರಣವೆಂದು ಸ್ಥಳೀಯರು ಆರೋಪಿಸಿದ್ದಾರೆ.

ಶನಿವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಿಸಿಲಿನ ವಾತಾವರಣವಿತ್ತು. ಮಧ್ಯಾಹ್ನದ ನಂತರ, ಹಲವೆಡೆ ಮೋಡ ಕವಿದ ವಾತಾವರಣ ಕಾಣಿಸಿಕೊಂಡು ಜಿಟಿ ಜಿಟಿ ಮಳೆ ಶುರುವಾಯಿತು. ನಂತರ, ಧಾರಾಕಾರವಾಗಿ ಮಳೆ ಸುರಿಯಲಾರಂಭಿಸಿತ್ತು. ಮಳೆ ಜೊತೆ, ಗಾಳಿ, ಗುಡುಗು–ಸಿಡಿಲಿನ ಅಬ್ಬರವೂ ಹೆಚ್ಚಿತ್ತು. ಮಧ್ಯಾಹ್ನ ಶುರುವಾದ ಮಳೆ, ಹಲವೆಡೆ ಸಂಜೆ ಹಾಗೂ ರಾತ್ರಿಯವರೆಗೂ ಉತ್ತಮವಾಗಿ ಸುರಿಯಿತು. ಅಲ್ಲಲ್ಲ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು.

ನಗರದಲ್ಲಿ ವಿವಿಧ ಕಡೆ ಸ್ಮಾರ್ಟ್ ಸಿಟಿ ಯೋಜನೆ ಹಾಗೂ ರಾಜಕಾಲುವೆ ಕಾಮಗಾರಿಗಳು ನಡೆಯುತ್ತಿದ್ದು, ಜೋರು ಮಳೆಯಿಂದಾಗಿ ಕಾಮಗಾರಿ ಸ್ಥಳದಲ್ಲಿ ಸಾಕಷ್ಟು ತೊಂದರೆ ಆಗುತ್ತಿದೆ.

ರಾಜಾಜಿನಗರ, ಬಸವೇಶ್ವರ ನಗರ, ವಿಜಯನಗರ, ದೀಪಾಂಜಲಿನಗರ, ಪಾದರಾಯನಪುರ, ಚಾಮರಾಜಪೇಟೆ, ಕಾಟನ್‌ಪೇಟೆ, ಚಿಕ್ಕಪೇಟೆ, ಮೆಜೆಸ್ಟಿಕ್, ಗಾಂಧಿನಗರ, ಬಸವನಗುಡಿ, ಹನುಮಂತನಗರ, ಗಿರಿನಗರ, ಹೊಸಕೆರೆಹಳ್ಳಿ, ಕೆಂಗೇರಿ, ರಾಜರಾಜೇಶ್ವರಿ ನಗರ, ನಾಯಂಡಹಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಸಾಧಾರಣ ಮಳೆ ಆಯಿತು.

ಯಶವಂತಪುರ, ಪೀಣ್ಯ, ದಾಸರಹಳ್ಳಿ, ಹೆಬ್ಬಾಳ, ವಸಂತನಗರ, ಶಿವಾಜಿನಗರ, ಆರ್‌.ಟಿ.ನಗರ, ಸಂಜಯನಗರ, ಜೆ.ಸಿ.ನಗರ, ಶೇಷಾದ್ರಿಪುರ, ವಿಲ್ಸನ್ ಗಾರ್ಡನ್, ಶಾಂತಿನಗರ, ಎಂ.ಜಿ.ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಬಡಾವಣೆ, ಎಲೆಕ್ಟ್ರಾನಿಕ್ ಸಿಟಿ, ವೈಟ್‌ಫೀಲ್ಡ್, ಬೆಳ್ಳಂದೂರು, ವಿದ್ಯಾರಣ್ಯಪುರ, ಯಲಹಂಕ ಹಾಗೂ ಸುತ್ತಮುತ್ತ ಮಳೆ ಜೋರಾಗಿತ್ತು.

ನಿತ್ಯದ ಕೆಲಸಗಳಿಗಾಗಿ ಸುರಿಯುವ ಮಳೆಯಲ್ಲೇ ಜನರು ಸಂಚರಿಸಿದರು. ಕೆಲವರು, ಕೊಡೆ ಆಶ್ರಯದಲ್ಲಿ ಸುತ್ತಾಡುತ್ತಿದ್ದ ದೃಶ್ಯಗಳು ಕಂಡುಬಂದವು.

ಬಹುತೇಕ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿದ್ದು, ಅಲ್ಲಲ್ಲ ನೀರು ನಿಂತುಕೊಂಡಿತ್ತು. ಅದರಲ್ಲೇ ವಾಹನಗಳು ಸಂಚರಿಸಿದವು.

ನಿರಂತರ ಮಳೆಯಿಂದ ಹಾನಿಯಾಗಿ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಹಳೇ ಕಟ್ಟಡವೊಂದು ಶನಿವಾರ ಕುಸಿದು ಬಿದ್ದಿತು

ಉರುಳಿ ಬಿದ್ದ ಮರಗಳು

ನಿರಂತರ ಮಳೆಯಿಂದಾಗಿ ಜಯನಗರ 9ನೇ ಹಂತದಲ್ಲಿ ದೊಡ್ಡ ಗಾತ್ರದ ಮರವೊಂದು ಉರುಳಿಬಿದ್ದಿತ್ತು. ಈ ಮಾರ್ಗದಲ್ಲಿ ವಾಹನಗಳ ಸಂಚಾರ ಕೆಲ ಹೊತ್ತು ಸ್ಥಗಿತಗೊಂಡಿತ್ತು. ದಟ್ಟಣೆಯೂ ಕಂಡುಬಂತು. ಈ ಬಗ್ಗೆ ಸ್ಥಳೀಯರು ಬಿಬಿಎಂಪಿ ಸಹಾಯವಾಣಿಗೆ ದೂರು ನೀಡಿದ್ದರು. ಅರಣ್ಯ ವಿಭಾಗದ ಸಿಬ್ಬಂದಿ ಹಾಗೂ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಮರ ತೆರವು ಮಾಡಿದರು. ಬಳಿಕವೇ ವಾಹನಗಳ ಸಂಚಾರ ಯಥಾಸ್ಥಿತಿಗೆ ಮರಳಿತು.

ಕುಮಾರಸ್ವಾಮಿ ಲೇಔಟ್ ಹಾಗೂ ಬನ್ನೇರುಘಟ್ಟ ರಸ್ತೆಯಲ್ಲೂ ದೊಡ್ಡ ಗಾತ್ರದ ಮರದ ಕೊಂಬೆಗಳು ಬಿದ್ದಿದ್ದವು. ಅಲ್ಲಲ್ಲ ಕೊಂಬೆಗಳನ್ನು ಬಿಬಿಎಂಪಿ ಸಿಬ್ಬಂದಿ ತೆರವು ಮಾಡಿದರು.

ಮನೆಗಳಿಗೆ ನುಗ್ಗಿದ ನೀರು

ದೊಡ್ಡಬೊಮ್ಮಸಂದ್ರ, ರಾಜರಾಜೇಶ್ವರಿನಗರ, ದೊಮ್ಮಲೂರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಕಾಲುವೆ ನೀರು ಮನೆಗಳಿಗೆ ನುಗ್ಗಿತ್ತು. ಹಬ್ಬದ ಸಂಭ್ರಮ ಮುಗಿಸಿದ್ದ ನಿವಾಸಿಗಳು, ಮನೆಗೆ ನುಗ್ಗಿದ್ದ ನೀರು ಹೊರ ಹಾಕುವುದರಲ್ಲೇ ದಿನ ಕಳೆದರು.

ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಕಾಲುವೆಗಳು ತುಂಬಿ ಹರಿಯುತ್ತಿವೆ. ರಸ್ತೆಗಳಲ್ಲೂ ಹೊಳೆಯಂತೆ ನೀರು ಹರಿಯುತ್ತಿವೆ. ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಇಲ್ಲದಿದ್ದರಿಂದ ಮನೆಗಳಿಗೆ ನುಗ್ಗುತ್ತಿದೆ. ಮನೆಯೊಳಗೆ ಕಸವೂ ಸೇರುತ್ತಿದ್ದು, ಇದರಿಂದ ದುರ್ನಾತ ಬರುತ್ತಿದೆ.

2018ರಲ್ಲಿ ನಿರ್ಮಿಸಿದ್ದ ಪೊಲೀಸ್ ವಸತಿ ಕಟ್ಟಡದಲ್ಲಿ ಬಿರುಕು • ಐಐಎಸ್ಸಿ ತಜ್ಞರಿಂದ ಪರಿಶೀಲನೆ

ಮೂರೇ ವರ್ಷಕ್ಕೆ ವಾಲಿತು ವಸತಿ ಸಮುಚ್ಚಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಿನ್ನಿ ಮಿಲ್ ಬಳಿ ನಿರ್ಮಿಸಿರುವ ಪೊಲೀಸ್ ವಸತಿ ಸಮುಚ್ಚಯದಲ್ಲಿ ಬಿರುಕು ಕಾಣಿಸಿಕೊಂಡು, ಏಳು ಮಹಡಿಯ 'ಬಿ' ಬ್ಲಾಕ್‌ನ ಅರ್ಧ ಕಟ್ಟಡ ಎಡಕ್ಕೆ ವಾಲಿದೆ. ಅಪಾಯದ ಮುನ್ಸೂಚನೆ ಸಿಗುತ್ತಿದ್ದಂತೆಯೇ ಇಲ್ಲಿನ ನಿವಾಸಿಗಳನ್ನು ಸ್ಥಳಾಂತರಿಸಲು ಪೊಲೀಸ್ ಇಲಾಖೆ ಕ್ರಮ ಕೈಗೊಂಡಿದೆ.

ಬೆಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ಅವರ ಕುಟುಂಬದವರ ವಾಸಕ್ಕಾಗಿ 2018ರಲ್ಲಿ ಈ ವಸತಿ ಸಮುಚ್ಚಯವನ್ನು ನಿರ್ಮಿಸಲಾಗಿತ್ತು. ಏಳು ಮಹಡಿಗಳ 'ಬಿ' ಬ್ಲಾಕ್ ಕಟ್ಟಡದಲ್ಲಿ 64 ಕುಟುಂಬಗಳು ನೆಲೆಸಿವೆ. ಕಟ್ಟಡದ ಅರ್ಧ ಭಾಗದಲ್ಲಿ ಹಲವು ತಿಂಗಳ ಹಿಂದೆಯೇ ಬಿರುಕು ಕಾಣಿಸಿಕೊಂಡಿತ್ತು. ಈ ಕಟ್ಟಡವೀಗ ಎಡಕ್ಕೆ ವಾಲಿದ್ದು, ಸಮುಚ್ಚಯದಲ್ಲಿ ವಾಸವಿರುವ ಕುಟುಂಬಗಳ ಆತಂಕಕ್ಕೆ ಕಾರಣವಾಗಿದೆ.

ವಸತಿ ಸಮುಚ್ಚಯದಲ್ಲಿ ಕುಟುಂಬಗಳು ನೆಲೆಸಿದ ನಂತರ, ಪೊಲೀಸ್ ಗೃಹ ಮಂಡಳಿಯ ತಾಂತ್ರಿಕ ತಜ್ಞರ ತಂಡ ಇದನ್ನು ಹಲವು ಬಾರಿ ಪರಿಶೀಲನೆ ನಡೆಸಿತ್ತು. ಈ ಬಗ್ಗೆ ಪೊಲೀಸ್ ಕಮಿಷನರ್ ಅವರಿಗೆ ಕಾಲ ಕಾಲಕ್ಕೆ ವರದಿ ನೀಡಿತ್ತು.

ಇತ್ತೀಚೆಗಷ್ಟೇ ಪರಿಷ್ಕೃತ ವರದಿ ನೀಡಿದ್ದ ತಾಂತ್ರಿಕ ಸಮಿತಿಯು, 'ಕಟ್ಟಡದ ಹಲವೆಡೆ ಬಿರುಕು ಕಾಣಿಸಿಕೊಂಡಿದೆ. ಒಂದೂವರೆ ವರ್ಷದ ಹಿಂದೆಯೇ ಕಟ್ಟಡ ಎಡಕ್ಕೆ ಸ್ವಲ್ಪ ವಾಲಿರುವುದು ಕಂಡುಬಂದಿದೆ. ಕಟ್ಟಡದ ಸುರಕ್ಷತೆ ಬಗ್ಗೆ ಹೆಚ್ಚಿನ ತಪಾಸಣೆ ನಡೆಸಬೇಕಿದೆ. ಪೊಲೀಸ್ ಸಿಬ್ಬಂದಿ ಹಾಗೂ ಕುಟುಂಬದವರ ಜೀವದ ಸುರಕ್ಷತೆ ಮುಖ್ಯ. ಹಾಗಾಗಿ ಇಲ್ಲಿ ನೆಲೆಸಿರುವ ಕುಟುಂಬಗಳನ್ನು ತೆರವು ಮಾಡಬೇಕು' ಎಂದು ಶಿಫಾರಸು ಮಾಡಿತ್ತು.

ವರದಿ ಕೈ ಸೇರುತ್ತಿದ್ದಂತೆ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಗುರುವಾರ (ಅ.14) ವಸತಿ ಸಮುಚ್ಚಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಕಮಲ್ ಪಂತ್, 'ವಸತಿ ಸಮುಚ್ಚಯ ವಾಲಿರುವ ಬಗ್ಗೆ ತಾಂತ್ರಿಕ ಸಮಿತಿ ವರದಿ ನೀಡಿದೆ. ಹೀಗಾಗಿ, ಸಿಬ್ಬಂದಿ ಹಾಗೂ ಅವರ ಕುಟುಂಬದವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು.

'ಕಟ್ಟಡ ಸುರಕ್ಷಿತವೇ ಅಥವಾ ಅಸುರಕ್ಷಿತವೇ ಎಂಬುದನ್ನು ತಜ್ಞರೇ ಹೇಳಬೇಕು. ಈ ಬಗ್ಗೆ ಪರಿಶೀಲನೆ ನಡೆಸುವಂತೆ ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರನ್ನು ಕೋರಲಾಗಿದೆ' ಎಂದೂ ಅವರು ತಿಳಿಸಿದರು.

2018ರಲ್ಲಿ ನಿರ್ಮಿಸಿದ್ದ ಕಟ್ಟಡ: '2018ರಲ್ಲಿ ₹ 23 ಕೋಟಿ ವೆಚ್ಚದಲ್ಲಿ ವಸತಿ ಸಮುಚ್ಚಯ ನಿರ್ಮಿಸಲಾಗಿತ್ತು. ಕೇವಲ ಮೂರೇ ವರ್ಷಕ್ಕೆ ಕಟ್ಟಡದಲ್ಲಿ ಬಿರುಕು ಕಾಣಿಸಿಕೊಂಡಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಒಂದೂವರೆ ವರ್ಷದ ಹಿಂದೆಯೇ ಕಟ್ಟಡ ವಾಲಿದೆ. ಮಳೆಗೂ ಕಟ್ಟಡ ವಾಲಿರುವುದಕ್ಕೂ ಸಂಬಂಧವಿಲ್ಲ. ಈಗ ನಗರದಲ್ಲಿ ಹೆಚ್ಚು ಮಳೆ ಆಗುತ್ತಿದ್ದು, ಕುಟುಂಬದವರು ಆತಂಕಗೊಂಡಿದ್ದಾರೆ. ವೃದ್ಧರು, ಮಕ್ಕಳು, ಮಹಿಳೆಯರು ಇದ್ದಾರೆ. ಎಲ್ಲರನ್ನೂ ಏಕಕಾಲದಲ್ಲಿ ಸ್ಥಳಾಂತರಿಸಲು ಆಗುವುದಿಲ್ಲ. ಎಲ್ಲರ ಸುರಕ್ಷತೆ ದೃಷ್ಟಿಯಿಂದ ಹಂತ ಹಂತವಾಗಿ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗುತ್ತಿದೆ' ಎಂದೂ ತಿಳಿಸಿದರು.

ಬಿನ್ನಿ ಮಿಲ್ ಬಳಿ ನಿರ್ಮಿಸಲಾಗಿರುವ ಪೊಲೀಸ್ ವಸತಿ ಸಮುಚ್ಚಯ — ಪ್ರಜಾವಾಣಿ ಚಿತ್ರ

'32 ಕುಟುಂಬಗಳ ಸ್ಥಳಾಂತರ'

'ಬಿ' ಬ್ಲಾಕ್‌ನ ಅರ್ಧದಷ್ಟು ಕಟ್ಟಡದಲ್ಲಿ ವಾಸವಿರುವ 32 ಕುಟುಂಬಗಳಿಗೆ ಅಸುರಕ್ಷಿತ ಭಾವ ಕಾಡುತ್ತಿದೆ. ಈ ಕುಟುಂಬಗಳನ್ನು ಅನ್ನಪೂರ್ಣೇಶ್ವರಿನಗರದಲ್ಲಿರುವ ಮತ್ತೊಂದು ವಸತಿ ಸಮುಚ್ಚಯಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

'ಕಮಿಷನರ್ ಅವರ ಸೂಚನೆಯಂತೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ. ಕಟ್ಟಡದ ಸುರಕ್ಷತೆ ಬಗ್ಗೆ ತಜ್ಞರ ನೀಡುವ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ತಿಳಿಸಿದರು.

'ಸಮುಚ್ಚಯ ನಿರ್ಮಾಣಕ್ಕೆ ಟೆಂಡರ್'

ವಸತಿ ಸಮುಚ್ಚಯ ವಾಲಿರುವ ಬಗ್ಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಬಿನ್ನಿ ಮಿಲ್ ಪ್ರದೇಶದಲ್ಲಿ 10ಸಾವಿರ ಮನೆಗಳುಳ್ಳ ಹೊಸ ಪೊಲೀಸ್ ವಸತಿ ಸಮುಚ್ಚಯ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದ್ದು, ಇದಕ್ಕಾಗಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ. ಹೊಸ ಕಟ್ಟಡಗಳು ನಿರ್ಮಾಣವಾದರೆ ಪೊಲೀಸರ ವಸತಿ ಸಮಸ್ಯೆ ಪರಿಹಾರವಾಗುತ್ತದೆ' ಎಂದರು.

ಗೋಡೆ ಕುಸಿದು ಅಕ್ಕನ ಮಗ ಸಾವು ಆಘಾತದಿಂದ ಚಿಕ್ಕಮ್ಮ ನಿಧನ

ಹಂಪಾಪುರ (ಮೈಸೂರು ಜಿಲ್ಲೆ): ಸಮೀಪದ ಜಿ.ಬಿ.ಸರಗೂರು ಗ್ರಾಮದಲ್ಲಿ ಶನಿವಾರ ರಾತ್ರಿ ಸುರಿದ ಮಳೆಯಿಂದಾಗಿ ಮನೆ ಗೋಡೆ ಕುಸಿದು ಬೋರೇಗೌಡ (55) ಎಂಬುವರು ಮೃತಪಟ್ಟ ವಿಷಯ ತಿಳಿದ ಅವರ ಚಿಕ್ಕಮ್ಮ (70) ಹೊನ್ನಮ್ಮ ಹೃದಯಾಘಾತದಿಂದ ಮೃತಪಟ್ಟರು.

ಗ್ರಾಮದ ಕೆಂಪೇಗೌಡ ಎಂಬುವರ ಮನೆ ಗೋಡೆಯು ಬೋರೇಗೌಡರ ಮನೆ ಮೇಲೆ ಬಿದ್ದಿದ್ದರಿಂದ ಗೋಡೆ ಕುಸಿದು ದುರಂತ ಸಂಭವಿಸಿತು. ಬೋರೇಗೌಡರ ಇಬ್ಬರು ಮಕ್ಕಳು ಅಪಾಯದಿಂದ ಪಾರಾಗಿದ್ದಾರೆ.

ಸ್ಥಳಕ್ಕೆ ಶಾಸಕ ಅನಿಲ್ ಚಿಕ್ಕಮಾದು, ತಹಶೀಲ್ದಾರ್ ನರಗುಂದ ಭೇಟಿ ನೀಡಿದ್ದರು.

ಮಾರಾಟವಾಗದ ಹೂವುಗಳನ್ನು ಕೆ.ಆರ್‌ಮಾರುಕಟ್ಟೆಯಲ್ಲಿ ಬಿಟ್ಟು ಹೋಗಿರುವ ವ್ಯಾಪಾರಿಗಳು –ಪ್ರಜಾವಾಣಿ ಚಿತ್ರ

ಹಬ್ಬದಿಂದ ಹೆಚ್ಚಾಯಿತು ಕಸ ವಿಲೇವಾರಿಗೆ ಮಳೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಧ ಪೂಜೆ ಹಾಗೂ ವಿಜಯದಶಮಿ ಹಬ್ಬದಿಂದ ನಗರದಲ್ಲಿ ಕಸದ ಪ್ರಮಾಣ ಶೇ 35ರಷ್ಟು ಹೆಚ್ಚಾಗಿದೆ. ನಾಲ್ಕೈದು ದಿನಗಳಿಂದ ಸತತ ಮಳೆ ಸುರಿಯುತ್ತಿರುವುದರಿಂದ ಕಸ ವಿಲೇವಾರಿಯೂ ಬಿಬಿಎಂಪಿಗೆ ತಲೆನೋವಾಗಿ ಪರಿಣಮಿಸಿದೆ.

ಹಬ್ಬಗಳ ಸಲುವಾಗಿ ನಗರದ ಮಾರುಕಟ್ಟೆಗಳಿಗೆ ಬಾಳೆ ಕಂದು, ಹೂವು ಹಾಗೂ ಕುಂಬಳಕಾಯಿಗಳನ್ನು ವ್ಯಾಪಾರಿಗಳು ಭಾರಿ ಪ್ರಮಾಣದಲ್ಲಿ ತಂದಿದ್ದರು. ಕೋವಿಡ್‌ನಿಂದಾಗಿ ವ್ಯಾಪಾರ ನಿರೀಕ್ಷಿತ ಪ್ರಮಾಣದಲ್ಲಿ ಆಗಿರಲಿಲ್ಲ. ಹಾಗಾಗಿ, ಅನೇಕ ವ್ಯಾಪಾರಿಗಳು ಬಾಳೆ ಕಂದು, ಕುಂಬಳಕಾಯಿ ಹಾಗೂ ಹೂವು-ಗಳನ್ನೆಲ್ಲ ಮಾರುಕಟ್ಟೆಯ ಬಳಿಯೇ ರಾಶಿ ಹಾಕಿ ತೆರಳಿದ್ದರು. ಕೆ.ಆರ್. ಮಾರುಕಟ್ಟೆ, ಕಲಾಸಿಪಾಳ್ಯ ಸಗಟು ಮಾರುಕಟ್ಟೆ, ಮಡಿವಾಳ ಮಾರುಕಟ್ಟೆ, ಯಶವಂತಪುರ, ಯಲಹಂಕದ ರೈತರ ಸಂತೆ ಬಳಿ ಕಸದ ರಾಶಿಯೇ ಕಂಡು ಬಂತು.

ಭಕ್ತರು ಮನೆಗಳಲ್ಲಿ ದೇವರ ಪೂಜೆಗೆ ಬಳಸಿದ್ದ ಬಾಳೆ ಕಂದು ಹಾಗೂ ಹೂವುಗಳ ಕಸವೂ ಹೆಚ್ಚುವರಿಯಾಗಿ ಸೇರಿಕೊಂಡಿದ್ದರಿಂದ ನಗರದಲ್ಲಿ ಉತ್ಪತ್ತಿಯಾಗುವ ಹಸಿ ಕಸದ ಪ್ರಮಾಣ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿತ್ತು.

‘ನಿತ್ಯ 4 ಸಾವಿರ ಟನ್‌ಗಳಷ್ಟು ಹಸಿ ಕಸ ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತದೆ. ಆದರೆ, ಎರಡು ದಿನಗಳಿಂದ ನಿತ್ಯ 5,200 ಟನ್‌ಗಳಷ್ಟು ಕಸ ಉತ್ಪತ್ತಿಯಾಗಿದೆ. ಅವುಗಳನ್ನು ವಿಲೇ ಮಾಡುವುದಕ್ಕೆ ಸ್ವಚ್ಛತಾ ಸಿಬ್ಬಂದಿ ಎರಡು ಪಾಳಿಗಳಲ್ಲಿ ಕೆಲಸ ಮಾಡಬೇಕಾಯಿತು’ ಎಂದು ಬಿಬಿಎಂಪಿ ಜಂಟಿ ಆಯುಕ್ತ (ಕಸ ನಿರ್ವಹಣೆ) ಸರ್ಫರಾಜ್ ಖಾನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಳೆ ಬಂದಿದ್ದರಿಂದ ಕಸ ಸಂಗ್ರಹಕ್ಕೂ ಸಮಸ್ಯೆಯಾಗಿದೆ. ಭೂಭರ್ತಿ ಕೇಂದ್ರಗಳಿಗೆ ಕಸ ಸಾಗಿಸುವ ವಾಹನಗಳು ಕಚ್ಚಾ ರಸ್ತೆಯಲ್ಲೇ ಸಾಗಬೇಕು. ಮಳೆಯಿಂದಾಗಿ ಈ ರಸ್ತೆಗಳು ಕೆಸರುಮಯವಾಗಿದ್ದ-ರಿಂದ ವಾಹನಗಳು ಸ್ಥಳವನ್ನು ತಲುಪುವುದಕ್ಕೆ ಹಾಗೂ ಕಸವನ್ನು ವಾಹನಗಳಿಂದ ಇಳಿಸುವುದಕ್ಕೆ ಸಮಸ್ಯೆಯಾಯಿತು. ಸಾಮಾನ್ಯವಾಗಿ ನಿತ್ಯ 300 ಲೋಡ್‌ಗಳಷ್ಟು ಕಸ ಭೂಭರ್ತಿಕೇಂದ್ರವನ್ನು ತಲುಪುತ್ತದೆ. ಶುಕ್ರವಾರ 500 ಲೋಡ್‌ಗಳಷ್ಟು ಕಸವನ್ನು ಸಾಗಿಸಿದ್ದೇವೆ. ಶನಿವಾರ ರಾತ್ರಿವರೆಗೆ 350 ಲೋಡ್‌ಗಳಷ್ಟು ಕಸ ವಿಲೇ ಮಾಡಿದ್ದೇವೆ. ಕಸ ವಿಲೇವಾರಿ ರಾತ್ರಿಯೂ ಮುಂದುವರಿದಿದೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ಜಯಂತ ಕಾಯ್ಕಿಣಿ

ಜಯಂತ ಕಾಯ್ಕಿಣಿ ಅವರ ಆಯ್ದ ಪುಸ್ತಕಗಳ ಇ-ಪುಸ್ತಕ ಆವೃತ್ತಿ ಬಿಡುಗಡೆ: ಅತಿಥಿಗಳು-ವಸುಧೇಂದ್ರ, ಪ್ರಭಾ ಕಂಬತ್ತಳ್ಳಿ, ಪವಮಾನ್, ಆಯೋಜನೆ-ಮೈಲ್ಯಾಂಗ್‌ಬುಕ್ಸ್, ಬೆಳಿಗ್ಗೆ 10 (ಆನ್‌ಲೈನ್ ಕಾರ್ಯಕ್ರಮ)

‘ಶಿಕ್ಷಣ ಉಳಿಸಿ’ ರಾಜ್ಯಮಟ್ಟದ ಸಮ್ಮೇಳನ:ಉದ್ಘಾಟನೆ-ಪ್ರೊ.ಎಸ್.ಜಿ.ಸಿದ್ಧರಾಮಯ್ಯ, ಅತಿಥಿ-ಅನಿಸ್ ರಾಯ್, ಮಾತನಾಡುವವರು-ಅಲ್ಲಮಪ್ರಭು ಬೆಟ್ಟದೂರು, ಕೆ.ಉಮಾ, ಟಿ.ಆರ್.ಚಂದ್ರಶೇಖರ್, ರಾಜಶೇಖರ್, ಆಯೋಜನೆ-ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, ಸ್ಥಳ-ಯುವಿಸಿಇ ಅಲುಮ್ನಿ ಹಾಲ್, ಕೆ.ಆರ್.ವೃತ್ತ, ಬೆಳಿಗ್ಗೆ 10.30

ಸತ್ಯಜಿತ್ ರೇ-100 ಅವರ ಫಿಲಂಗಳ ಹೊರಳು ನೋಟ ಸಂವಾದ ಸರಣಿ: ‘ಸತ್ಯಜಿತ್ ರೇ ರಾಜಕೀಯ ಫಿಲಂ ಮಾಡಲು ಹಿಂಜರಿಯುತ್ತಿದ್ದರೇ?-‘ಗಣಶತ್ರು’ ಒಳಗೊಂದು ಇಣುಕು ಉಪನ್ಯಾಸ-ಆದಿತ್ಯ ಚಟರ್ಜಿ, ಆಯೋಜನೆ-ಸಮುದಾಯ ಕರ್ನಾಟಕ, ಸಹಯಾನ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಪುಸ್ತಕ ಸಂಭ್ರಮ:ವಿವೇಕ ಶಾನಭಾಗ ಅವರ ‘ಇಲ್ಲಿರುವುದು ಸುಮ್ಮನೆ’ ಹೊಸ ನಾಟಕ ಕುರಿತು ಸಂವಾದ:ಭಾಗವಹಿಸುವವರು-ಜೋಗಿ, ವಿವೇಕ ಶಾನಭಾಗ, ಆಯೋಜನೆ, ಸ್ಥಳ-ರಂಗಶಂಕರ, ಮಧ್ಯಾಹ್ನ 12

‘ಅಂಚೆ ಸೇವಾ ಪ್ರಶಸ್ತಿ’ ಪ್ರದಾನ:ಅತಿಥಿ-ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್ ಶಾರದಾ ಸಂಪತ್, ಪುರಸ್ಕೃತರು-ಶಂಕರ್ ವೈ.ಹರಿಜನ್, ಎಚ್.ಅಶ್ವತ್ಥ್, ಎನ್.ಸೋಮಶೇಖರ, ಜೆ.ಮೋಹನ್, ವಿ.ತಾರಾ, ಶ್ರೀವತ್ಸ, ನಾಗಮ್ಮ ಎಸ್.ಮಂತ, ಸ್ಥಳ-ಮೇಘದೂತ ಸಭಾಂಗಣ, ಪ್ರಧಾನ ಅಂಚೆ ಕಚೇರಿ (ಜಿಪಿಒ), ಸಂಜೆ 4

ಸಾಹಿತ್ಯ ಅಕಾಡೆಮಿಯ ‘ಯುವ ಪುರಸ್ಕಾರ-2020’ ಪ್ರಶಸ್ತಿ ಪ್ರದಾನ:ಅಧ್ಯಕ್ಷತೆ-ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಅತಿಥಿ-ಹಿಂದಿ ಕವಿ ಅರುಣ್ ಕಮಲ್, ಸ್ಥಳ-ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 5

ಬರಗೂರು ರಾಮಚಂದ್ರಪ್ಪ ಅವರ ‘ಚಳವಳಿಯ ಹಾಡುಗಳು’ ಪುಸ್ತಕ ಬಿಡುಗಡೆ:ಎಚ್.ದಂಡಪ್ಪ, ಅತಿಥಿ-ನಟರಾಜ ಹುಳಿಯಾರ್, ಅಧ್ಯಕ್ಷತೆ-ಕೆ.ಶರೀಫಾ, ಆಯೋಜನೆ-ಜನ ಪ್ರಕಾಶನ, ಬುಕ್‌ಬ್ರಹ್ಮ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ(ಕುಳಿತಿರುವವರು ಎಡದಿಂದ) ರವಿರಾಜ್ ಅವಸ್ಥಿ, ನೇತ್ರಾ ಮೇಟಿ, ಮಾಲಾಶ್ರೀ ಎಂ.ವಿ, ಶ್ರೀದೇವಿ ಬಿ.ವಿ, ಬಿಂದುಮಣಿ ಆರ್‌.ಎನ್ ಮತ್ತು ಡಿ.ಸೂರಜ್ ಅವರನ್ನು ಗೌರವಿಸಲಾಯಿತು. (ನಿಂತಿರುವವರು ಎಡದಿಂದ) ಅಸ್ತ್ರ ಸಾಫ್ಟ್‌ನ ಪ್ರವೀಣ್ ಶ್ರೀವತ್ಸ, ಪಿ.ಸಿ. ಶ್ರೀನಿವಾಸ್, ಜಿಕೆವಿಕೆ ವಿಶ್ರಾಂತ ಕುಲಪತಿ ನಾರಾಯಣಗೌಡ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಸಚಿವ ಬಿ.ಸಿ ನಾಗೇಶ್, 'ಇಂಡಿಯಾ ಫಾರ್ ಐಎಎಸ್ ಅಕಾಡೆಮಿ' ಆಡಳಿತ ಮಂಡಳಿ ಅಧ್ಯಕ್ಷ ಸಿ.ಎಸ್. ಕೇದಾರ್, ಸಹ ಸಂಸ್ಥಾಪಕ ನವೀನ್ ಇದ್ದಾರೆ –ಪ್ರಜಾವಾಣಿ ಚಿತ್ರ

‘ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೇವೆ ಒದಗಿಸಿ’

ಬೆಂಗಳೂರು: ‘ಪರಿಶಿಷ್ಟರು, ಹಿಂದುಳಿದವರು ಸೇರಿದಂತೆ ದೇಶದ ಕಟ್ಟ ಕಡೆಯ ವ್ಯಕ್ತಿಗೂ ಸೇವೆ ನೀಡುವ ಮನೋಭಾವವನ್ನು ಎಲ್ಲರೂ ಬೆಳೆಸಿ-ಕೊಳ್ಳಬೇಕು’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು 2020ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ರಾಜ್ಯದ ಅಭ್ಯರ್ಥಿಗಳಿಗೆ ಕಿವಿಮಾತು ಹೇಳಿದರು.

‘ಇಂಡಿಯಾ ಫಾರ್ ಐಎಎಸ್’ ಅಕಾಡೆಮಿ ಹಮ್ಮಿಕೊಂಡಿದ್ದ ಕಾರ್ಯಕ್ರ-ಮದಲ್ಲಿ ಅವರು ರಾಜ್ಯದ 33 ಸಾಧಕರನ್ನು ಸನ್ಮಾನಿಸಿ ಶನಿವಾರ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೃತಕ ಬುದ್ಧಿಮತ್ತೆಯ ‘ಮಾರ್ಗದರ್ಶಿ’ ತಂತ್ರಾಂಶ ಬಿಡುಗಡೆ ಮಾಡಲಾಯಿತು.

‘ತಾನು ಐಎಎಸ್, ಐಪಿಎಸ್ ಅಧಿಕಾರಿ ಎಂಬ ಅಹಂ ಯಾರಲ್ಲೂ ಇರಬಾರದು. ಜನಸಾಮಾನ್ಯರ ದೂರುಗಳಿಗೆ ಕಿವಿಯಾಗಬೇಕು. ಸಮಾಜದ ಒಳಿತಿಗಾಗಿ ನೀಡುವ ಸಲಹೆ ಸೂಚನೆಗಳನ್ನು ಸ್ವೀಕರಿಸುವ ಹಾಗೂ ಪಾಲಿಸುವ ವ್ಯವಧಾನ ಬೆಳೆಸಿಕೊಳ್ಳಬೇಕು’ ಎಂದರು.

‘ಪ್ರಭಾವಿಗಳು ನೇರವಾಗಿ ಅಧಿಕಾರಿ-ಗಳನ್ನು ಭೇಟಿಯಾಗಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಆದರೆ ಅಧಿಕಾರಿಗ-ಳನ್ನು ಕಂಡರೆ ಬಡವರು ಹಾಗೂ ಅನಕ್ಷ-ರಸ್ಥರು ಭಯ ಬೀಳುವ ಪರಿಸ್ಥಿತಿ ಇದೆ. ಅಂತಹವರ ಸೇವೆಗೆ ಕಟಿಬದ್ಧರಾಗಬೇಕು’ ಎಂದರು.

ಇಂಡಿಯಾ ಫಾರ್ ಐಎಎಸ್ ಅಕಾಡೆಮಿ ಸಂಸ್ಥಾಪಕ ಶ್ರೀನಿವಾಸ್ ‘ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ತರಬೇತಿ ನೀಡಬೇಕೆಂಬುದು ಸಂಸ್ಥೆಯ ಗುರಿ. ನಾಲ್ಕು ವರ್ಷಗಳ ಹಿಂದೆ ರಾಜ್ಯದ ಅಭ್ಯರ್ಥಿಗಳು ತರಬೇತಿಗಾಗಿ ನವದೆಹಲಿ, ಉತ್ತರಾ-ಖಂಡಕ್ಕೆ ಹೋಗಬೇಕಿತ್ತು. ಲಕ್ಷಾಂತರ ಹಣ ಪಾವತಿಸಲಾಗದೆ ಬಡ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಐಎಎಸ್, ಐಪಿಎಸ್ ಕನಸನ್ನೇ ಕೈಚೆ-ಲ್ಲುತ್ತಿದ್ದರು. ಅಂತಹ ವಿದ್ಯಾರ್ಥಿಗಳ ಕನಸನ್ನು ಪೋಷಿಸುವ ಕೆಲಸವನ್ನು ಸಂಸ್ಥೆ ಮಾಡುತ್ತಿದೆ’ ಎಂದು ತಿಳಿಸಿದರು.

‘ಗಹನ ವಿಚಾರವನ್ನೂ ಡಿವಿಜಿ ಸುಬೋಧವಾಗಿ ತಿಳಿಸುತ್ತಿದ್ದರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿ.ವಿ.ಗುಂಡಪ್ಪನ-ವರು ಗಹನವಾದ ವಿಚಾರಗಳನ್ನು ಸುಬೋಧವಾಗಿ ತಿಳಿಸುತ್ತಿದ್ದ-ರು. ಅವರ ಕೃತಿಗಳು ಇಲ್ಲದೇ ಹೋಗಿದ್ದರೆ ಈ ಹೊತ್ತಿನ ಅರಿವಾಗಲಿ, ಸಮಾಧಾನವಾಗಲಿ, ಸಂತೋಷವಾಗಲಿ ಇರುತ್ತಿರಲಿಲ್ಲ. ಇದು ಅತಿಶಯೋಕ್ತಿ-ಯಲ್ಲ’ ಎಂದು ವಿದ್ವಾಂಸ ಶತಾವಧಾನಿ ಆರ್.ಗಣೇಶ ಅಭಿಪ್ರಾಯಪಟ್ಟರು.

ನಗರದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಹಾಗೂ ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಿವಿಜಿ ಸಾಹಿತ್ಯ ಸಂಭ್ರಮ –ಮತ್ತೆ! ಮತ್ತೆ! ಕಾರ್ಯ-ಕ್ರಮದಲ್ಲಿ ಡಿವಿಜಿಯವರ ಮರು-ಮುದ್ರಣಗೊಂಡಿರುವ 19 ಪುಸ್ತಕ-ಗಳನ್ನು ಬಿಡುಗಡೆಗೊಳಿಸಿ ಶನಿವಾರ ಮಾತನಾಡಿದರು.

‘ಸಮಾಜಕ್ಕೆ ಗಾಳಿ, ನೀರು, ಆಹಾರ, ನೆಲೆ ಹೇಗೆ ಅಗತ್ಯವೋ, ಅದೇ ರೀತಿ ಒಳ್ಳೆಯ ಸಾಹಿತ್ಯ, ಸಂಗೀತವೂ ಬೇಕು. ಅವು ಜೀವನ ಸಂಸ್ಕಾರಕಗಳಿದ್ದಂತೆ ಎಂದು ಡಿವಿಜಿಯವರೇ ಬರೆದಿದ್ದಾರೆ. ಅವರ ಬರವಣಿಗೆಗಳನ್ನು ಜನ ಈಗಲೂ ಇಷ್ಟಪಡುತ್ತಿದ್ದಾರೆ ಎಂದರೆ ಸಮಾಜ ಆರೋಗ್ಯವಾಗಿದೆ ಎಂದರ್ಥ’ ಎಂದರು.

‘19 ಕೃತಿಗಳಲ್ಲಿ 10 ಬಗೆಯ ಪ್ರಾತಿನಿಧಿಕ ಸಾಹಿತ್ಯ ಪ್ರಕಾರಗಳಿವೆ. ಡಿವಿಜಿಯವರ ಸಾಹಿತ್ಯದ ಹರವು ಎಷ್ಟು ವಿಸ್ತಾರವಾದುದು ಎಂಬುದು ಇದರಿಂದ ಅರ್ಥವಾಗುತ್ತದೆ. ಜ್ಞಾನಪೀಠ ಪ್ರಶಸ್ತಿಯ ಅಂತಿಮ ಸುತ್ತಿಗೆ ಆಯ್ಕೆಯಾದ ಮೂರು ಕೃತಿಗಳಲ್ಲಿ ಡಿವಿಜಿಯವರ ಮಂಕುತಿಮ್ಮನ ಕಗ್ಗವೂ ಇತ್ತು. ರಾಜಕೀಯ ಹಾಗೂ ಇತರ ಕಾರಣಗಳಿಂದಾಗಿ ಅದು ಪ್ರಶಸ್ತಿಗೆ ಆಯ್ಕೆಯಾಗಲಿಲ್ಲ ಎಂಬುದು ಬೇಸರದ ವಿಷಯ. ಕನ್ನಡದ ಎಲ್ಲಾ ಬಗೆಯ ಸಾಹಿತ್ಯ ಪ್ರಕಾರಗಳಿಗೂ ಯೋಗದಾನ ಸಲ್ಲಿಸಿ ಓದುಗರನ್ನು ಹಾಗೂ ಸಾಹಿತ್ಯ ಪ್ರಕಾರಗಳನ್ನು ಬೆಳೆಸಿದವರು ಡಿವಿಜಿ’ ಎಂದು ಹೇಳಿದರು.

‘ರಾಜ್ಯಶಾಸ್ತ್ರ, ರಾಜ್ಯ ಕುಟುಂಬ, ರಾಜಕೀಯ ಪ್ರಸಂಗಗಳು-1, ರಾಜಕೀಯ ಪ್ರಸಂಗಗಳು-2 ಹಾಗೂ ರಾಜ್ಯಾಂಗ ತತ್ವಗಳು ಎಂಬ ಐದು ಕೃತಿಗಳು ಡಿವಿಜಿಯವರು ರಾಜ್ಯಶಾಸ್ತ್ರ-ವನ್ನು ಕುರಿತು ಬರೆದ ಪಂಚರತ್ನಗಳು. ರಾಜಕೀಯ ಪ್ರಸಂಗಗಳು ಕೃತಿಯಲ್ಲಿ ಕಮ್ಯುನಿಸ್ಟ್ ಸಿದ್ಧಾಂತದ ಯೋಗ್ಯತೆ ಏನು ಎಂಬುದನ್ನು ಯಾವ ರಾಗ ದ್ವೇಷವೂ ಇಲ್ಲದೆ ಬಹಳ ಸಹಾನುಭೂತಿಯಿಂದ-ಲೇ ವಿಶ್ಲೇಷಿಸಿದ್ದಾರೆ’ ಎಂದು ತಿಳಿಸಿದರು.

ಶತಾವಧಾನಿ ಆರ್‌.ಗಣೇಶ (ಬಲತುದಿ) ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನದ ಸುಬ್ರಹ್ಮಣ್ಯ, ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ಹಾಗೂ ಎಸ್‌.ಆರ್‌.ರಾಮಸ್ವಾಮಿ ಇದ್ದರು– ಪ್ರಜಾವಾಣಿ ಚಿತ್ರ

ಬಿಡುಗಡೆಯಾದ ಕೃತಿಗಳು

ಡಿವಿಜಿ: ರಾಜ್ಯಶಾಸ್ತ್ರ, ರಾಜ್ಯ ಕುಟುಂಬ, ದಿವಾನ್ ಸಿ.ರಂಗಾಚಾರ್ಲು, ಪುರುಷ ಸೂಕ್ತ, ಇಂದ್ರವಜ್ರ, ಉಮರನ ಒಸಗೆ, ಶೃಂಗಾರಮಂಗಳಂ, ರಾಜಕೀಯ ಪ್ರಸಂಗಗಳು-1, ರಾಜಕೀಯ ಪ್ರಸಂಗಗಳು-2, ತಿಲೋತ್ತಮೆ ಕನಕಾಲುಕಾ, ಪ್ರಹಸನತ್ರಯೀ, ಶ್ರೀ ವಿದ್ಯಾರಣ್ಯ ವಿಜಯ, ಈಶೋಪನಿಷತ್ತು, ನಿವೇದನ, ಬೆಕ್ಕೋಜಿ, ಗೀತ ಶಾಕುಂತಲ, ವೇದ-ವೇದಾಂತ, ಕಾವ್ಯ ಸ್ವಾರಸ್ಯ, ಸಾಹಿತ್ಯ ಶಕ್ತಿ.

ಎ.ನರಸಿಂಹ ಭಟ್: ಮಂಕುತಿಮ್ಮನ ಕಗ್ಗ: ಅರ್ಥಾನುಸಂಧಾನ.

ದಿ.ಕೊರ್ಗಿ ವೆಂಕಟೇಶ್ವರ ಉಪಾಧ್ಯಾಯ: ಪಂಚ ಪ್ರಪಂಚ, ಮೂರರ ಮಹಿಮೆ, ಶಬ್ದ ಸಂಸಾರ, ಹತ್ತರ ಹಿರಿಮೆ.



‘ಕಾವೇರಿ ತೀರ್ಥೋದ್ಭವ’ ಇಂದು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಜೀವನದಿ ಕಾವೇರಿ ಉಗಮ ಸ್ಥಳವಾದ ತಲಕಾವೇರಿ ಕ್ಷೇತ್ರವು ತೀರ್ಥೋದ್ಭವಕ್ಕೆ ಸಜ್ಜಾಗಿದ್ದು, ಭಾನುವಾರ ಮಧ್ಯಾಹ್ನ 1.11ಕ್ಕೆ ಕಾವೇರಿಯು ತೀರ್ಥ-ರೂಪಿಣಿಯಾಗಿ ಭಕ್ತರಿಗೆ ಒಲಿಯಲಿದ್ದಾಳೆ.

ತಲಕಾವೇರಿ, ಭಾಗಮಂಡಲದಲ್ಲಿ ಜಾತ್ರೆಯ ಸಂಭ್ರಮ ಮನೆ ಮಾಡಿದೆ. ಕಾವೇರಿಯ ದರ್ಶನದ ಬಳಿಕ ಕ್ಷೇತ್ರದಲ್ಲಿ ಒಂದು ತಿಂಗಳು ಜಾತ್ರೆಯ ಸಂಭ್ರಮ ಇರಲಿದೆ.

ಭೂಕಂಪನ: ವಿಜ್ಞಾನಿಗಳ ಭೇಟಿ ಇಂದು

ಕಲಬುರಗಿ: ಪದೇಪದೇ ಭೂಕಂಪನ ಸಂಭವಿಸುತ್ತಿರುವ ಜಿಲ್ಲೆಯ ಗ್ರಾಮಗಳಿಗೆ ಹೈದರಾಬಾದ್‌ನಿಂದ ರಾಷ್ಟ್ರೀಯ ಭೌಗೋಳಿಕ ಸಂಶೋಧನಾ ಸಂಸ್ಥೆಯ (ಎನ್‌ಜಿಆರ್‌ಐ) ವಿಜ್ಞಾನಿಗಳ ತಂಡ ಭಾನುವಾರ (ಅ.17) ಭೇಟಿ ನೀಡಲಿದೆ.

‘ಎನ್‌ಜಿಆರ್‌ಐನ ಹಿರಿಯ ವಿಜ್ಞಾನಿ ಸುರೇಶ ಗುಂಡಪತಿ ಅವರ ನೇತೃತ್ವದ ಕೇಂದ್ರ ಅಧ್ಯಯನ ತಂಡವು ಭಾನುವಾರ ಅಧ್ಯಯನ ಕೈಗೊಳ್ಳಲಿದೆ’ ಎಂದು ಜಿಲ್ಲಾಧಿಕಾರಿ ವಿ.ವಿ.ಜ್ಯೋತ್ಸ್ನಾ ತಿಳಿಸಿದ್ದಾರೆ.

ಸಿಎಂ ನೋಡಲು ಬಂದ ಬಾಲಕನಿಗೆ ಪೊಲೀಸ್ ಏಟು

ಪೊಲೀಸ್ ಸಿಬ್ಬಂದಿಯೊಬ್ಬರು ಹೊಡೆದಿದ್ದರಿಂದ ನಿತಿನ್‌ನ ತಲೆಯಿಂದ ರಕ್ತ ಸುರಿಯುತ್ತಿರುವುದು.

ದಾವಣಗೆರೆ: ಹೊನ್ನಾಳಿ ತಾಲ್ಲೂಕಿನ ಕುಂದೂರಿನಲ್ಲಿ ಶನಿವಾರ ನಡೆದ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದ ಮುಖ್ಯಮಂತ್ರಿಯನ್ನು ನೋಡಲು ಬಂದ ಬಾಲಕನ ತಲೆಗೆ ಪೊಲೀಸ್ ಸಿಬ್ಬಂದಿಯೊಬ್ಬರು ಟೋಪಿಯಿಂದ ಹೊಡೆದಿದ್ದರಿಂದ ಗಾಯವಾಗಿ ರಕ್ತ ಸುರಿದಿದೆ.

ನಿತಿನ್ ಎಂಬ ಬಾಲಕ ಗಾಯಗೊಂಡಿದ್ದಾನೆ. ಕಾರ್ಯಕ್ರಮ ಇನ್ನೂ ಆರಂಭವಾಗಿರಲಿಲ್ಲ. ಮುಖ್ಯಮಂತ್ರಿ ಸಹಿತ ಗಣ್ಯರು ಸಭಾಂಗಣಕ್ಕೆ ಬಂದಿರಲಿಲ್ಲ. ಈ ಸಮಯದಲ್ಲಿ ವೇದಿಕೆಯ ಪಕ್ಕಕ್ಕೆ ಬಂದಿದ್ದ ಬಾಲಕನ ತಲೆಗೆ ಪೊಲೀಸರೊಬ್ಬರು ಟೋಪಿಯಿಂದ ಹೊಡೆದಾಗ ಗಾಯವಾಗಿ ರಕ್ತ ಬಂದಿದೆ.

‘ನಾನು ಹೊಡೆದಿಲ್ಲ. ಬಾಲಕನೇ ಇತರೊಡನೆ ಗಲಾಟೆ ಮಾಡಿಕೊಂಡಿದ್ದಾನೆ’ ಎಂದು ಆರಂಭದಲ್ಲಿ ಹೇಳಿದ್ದ ಪೊಲೀಸ್ ಸಿಬ್ಬಂದಿ ಬಳಿಕ ‘ಇದು ಆಕಸ್ಮಿಕ ಘಟನೆ’ ಎಂದು ಸಮಜಾಯಿಷಿ ನೀಡಿದ್ದಾರೆ.

‘ಲಿಂಗಾಯತ ಸ್ವತಂತ್ರ ಧರ್ಮ ಹೋರಾಟಕ್ಕೆ ಹಿನ್ನಡೆ ಆಗಿಲ್ಲ’

ಪ್ರಜಾವಾಣಿ ವಾರ್ತೆ

ಗದಗ: ‘ಲಿಂಗಾಯತ ಧರ್ಮ ಎಂದೆಂದಿಗೂ ಸ್ವತಂತ್ರ ಧರ್ಮ. ಹಿಂದೆಯೂ ಇತ್ತು. ಇಂದೂ ಇದೆ. ಹಾಗೆಯೇ, ಮುಂದೆಯೂ ಇರುತ್ತದೆ. ಆದರೆ, ಅದಕ್ಕೆ ಸರ್ಕಾರದ ಮಾನ್ಯತೆ ಬೇಕಿತ್ತು. ಅದಕ್ಕೆ ಪೂರಕವಾಗಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಐತಿಹಾಸಿಕ ದಾಖಲೆಗಳನ್ನು ಸರ್ಕಾರಕ್ಕೆ ಒದಗಿಸಿಕೊಟ್ಟಿದ್ದಾರೆ’ ಎಂದು ಭಾಲ್ಕಿ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದೇವರು ಹೇಳಿದರು.

ಶನಿವಾರ ಗದುಗಿನ ತೋಂಟದಾರ್ಯ ಮಠದಲ್ಲಿ ನಡೆದ ಲಿಂಗೈಕ್ಯ ಸಿದ್ಧಲಿಂಗ ಶ್ರೀಗಳ ತೃತೀಯ ಪುಣ್ಯಸ್ಮರಣೆ ‘ಮರಣವೇ ಮಹಾನವಮಿ’ ಕಾರ್ಯಕ್ರಮದಲ್ಲಿ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿದರು.

‘ಲಿಂಗಾಯತ ಧರ್ಮ ಎಲ್ಲೂ ವಿಂಗಡಣೆ ಆಗಿಲ್ಲ. ಅದೇರೀತಿ, ಲಿಂಗಾಯತ ಸ್ವತಂತ್ರ ಧರ್ಮ ಹೋರಾಟಕ್ಕೆ ಹಿನ್ನಡೆಯೂ ಆಗಿಲ್ಲ. ಲಿಂಗಾಯತ ಧರ್ಮ ಮತ್ತೊಮ್ಮೆ ಬೆಳಗಲಿದೆ. ತೋಂಟದ ಸಿದ್ಧರಾಮ ಶ್ರೀಗಳ ನೇತೃತ್ವದಲ್ಲಿ ಸಂಘಟಿತ ಹೋರಾಟ ನಡೆಸಿ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಗೆ ಪ್ರಯತ್ನಿಸಬೇಕು’ ಎಂದು ಹೇಳಿದರು.

ಗದುಗಿನ ತೋಂಟದಾರ್ಯ ಮಠದಲ್ಲಿ ಶನಿವಾರ ನಡೆದ ಲಿಂಗೈಕ್ಯ ತೋಂಟದ ಸಿದ್ಧಲಿಂಗ ಸ್ವಾಮೀಜಿ ತೃತೀಯ ಪುಣ್ಯಸ್ಮರಣೆ ಆಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ಅವರಿಗೆ ₹5 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡ ‘ಡಾ. ತೋಂಟದ ಸಿದ್ಧಲಿಂಗ ಶ್ರೀ ರಾಷ್ಟ್ರೀಯ ಪ್ರಶಸ್ತಿ’ಯನ್ನು ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ ಪ್ರದಾನ ಮಾಡಿದರು.

‘ಲಿಂಗಾಯತ ಸ್ವತಂತ್ರ ಧರ್ಮ ಹೋರಾಟದ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದಲ್ಲಿ ಸಮಿತಿಯನ್ನು ನೇಮಕ ಮಾಡಿದರು. ಅದರಂತೆ ಈ ವಿಷಯದಲ್ಲಿ ಸರ್ಕಾರಕ್ಕೆ ಸ್ಪಷ್ಟ ನಿರ್ದೇಶನ ನೀಡುವಂತಹ ವರದಿಯನ್ನು ನಾಗಮೋಹನ್‌ದಾಸ್ ಅವರು ನೀಡಿದ್ದಾರೆ’ ಎಂದು ಗದುಗಿನ ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ ತಿಳಿಸಿದರು.

ಈ ವೇಳೆ ಮುಂಡರಗಿ–ಬೈಲೂರು ಮಠದ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ಗದಗ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ. ಮೌಲ್ವಿ, ಹಿರಿಯ ರಾಜಕಾರಣಿ ಎಸ್.ಎಸ್.ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಶಿರೋಳ ಮಠದ ಗುರುಬಸವ ಸ್ವಾಮೀಜಿ, ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಅಮರೇಶ ಅಂಗಡಿ, ತೋಂಟದಾರ್ಯ ಮಠದ ಆಡಳಿತಾಧಿಕಾರಿ ಎಸ್.ಎಸ್.ಪಟ್ಟಣಶೆಟ್ಟಿ ಉಪಸ್ಥಿತರಿದ್ದರು.

ಐದು ಜಿಲ್ಲೆಗಳಲ್ಲಿ ‘ಆರೆಂಜ್ ಅಲರ್ಟ್’

ಬೆಂಗಳೂರು: ರಾಜ್ಯದಲ್ಲಿ ನೈರುತ್ಯ ಮುಂಗಾರು ಚುರುಕುಗೊಂಡಿರುವುದರಿಂದ ದಕ್ಷಿಣ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಅ.17ರಂದು ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮೈಸೂರು, ಮಂಡ್ಯ, ಕೊಡಗು, ಚಿಕ್ಕಮಗಳೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ.

ರಾಮನಗರ, ಕೋಲಾರ, ಹಾಸನ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಿರುವುದಾಗಿ ಇಲಾಖೆ ತಿಳಿಸಿದೆ.

ವಾಯುಭಾರ ಕುಸಿತ ಹಾಗೂ ಮೇಲ್ಮೈ ಸುಳಿಗಾಳಿಗಳ ಪರಿಣಾಮವಾಗಿ ಮಳೆಯಾಗಲಿದೆ. ಅ.18ರಿಂದ ಮಳೆ ದಿಢೀರ್ ತಗ್ಗಲಿದ್ದು, 21ರವರೆಗೆ ಹೆಚ್ಚು ಮಳೆಯಾಗುವ ಯಾವುದೇ ಸೂಚನೆಗಳಿಲ್ಲ. ಕೆಲವೆಡೆ ಮಾತ್ರ ಮಳೆಯಾಗಬಹುದು ಎಂದು ಮಾಹಿತಿ ನೀಡಿದೆ.

ಮಳೆ ಎಲ್ಲಿ, ಎಷ್ಟು?: ಹಾಸನದಲ್ಲಿ ಶನಿವಾರ 11 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ 7, ಬೆಳ್ತಂಗಡಿ 6, ಚಿಂತಾಮಣಿ 4, ಮೈಸೂರು 3, ಕೊಳ್ಳೇಗಾಲ 2, ಬೆಂಗಳೂರು ನಗರ ಹಾಗೂ ಸಕಲೇಶಪುರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ಶಿರಾಲಿಯಲ್ಲಿ 33.5 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಬೀದರ್‌ನಲ್ಲಿ 18 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	118.22	10,427	5,022
ಹಾರಂಗಿ	2,859	2,858.28	999	1,750
ಕಬಿನಿ	2,284	2,279.84	2,100	2,000
ಹೇಮಾವತಿ	2,922	2,911.38	3,288	4,123
ಲಿಂಗನಮಕ್ಕಿ	1,819	1,815.60	662	5,399
ಸೂಪಾ (ಮೀ)	564	557.03	1,687	1,687
ಮಾಣಿ	594.36	587.42	802	-
ತುಂಗಭದ್ರಾ	1,633	1,632.99	47,022	46,542
ಮಲಪ್ರಭಾ	2,079.50	2,079.50	1,294	1,294
ಘಟಪ್ರಭಾ	2,175	2,175	2,509	2,509
ಭದ್ರಾ	186	186	3,316	3,316
ಆಲಮಟ್ಟಿ (ಮೀ)	519.60	519.60	15,988	15,988
ನಾರಾಯಣಪುರ (ಮೀ)	492.25	492.21	15,000	11,300

* ನೆಲಮಟ್ಟದಿಂದ

ಮಳೆ: ಮನೆಗಳಿಗೆ ನುಗ್ಗಿದ ನೀರು

ಶ್ರೀನಿವಾಸಪುರ: ಪಟ್ಟಣದ ಸುತ್ತಮುತ್ತ ಶುಕ್ರವಾರ ಸಂಜೆ ಮೂರು ಗಂಟೆಗಳ ಕಾಲ ಎಡೆಬಿಡದೇ ಸುರಿದ ಭಾರಿ ಮಳೆಯಿಂದಾಗಿ ನಾಗರಿಕ ಜೀವನ ಅಸ್ತವ್ಯಸ್ತಗೊಂಡಿದೆ.

ಮಳೆಯ ಹೊಡೆತಕ್ಕೆ ಶ್ರೀನಿವಾಸಪುರ ಸೇರಿ ಸಮೀಪದ ಹೆಬ್ಬಟ, ಚಲ್ದಿಗಾನಹಳ್ಳಿ, ಪನಸಮಾಕನಹಳ್ಳಿ ಗ್ರಾಮಗಳಲ್ಲಿ, ಮಳೆ ನೀರು ಮನೆಗಳಿಗೆ ನುಗ್ಗಿದ್ದು, ಹಲವು ಮನೆ ಹಾಗೂ ಶಾಲೆ ಕುಸಿದಿದ್ದು, ಯಾವುದೇ ಜೀವಹಾನಿ ಸಂಭವಿಸಿಲ್ಲ.

ರಾಜ್ಯೋತ್ಸವ ಪ್ರಶಸ್ತಿಗೆ 6,210 ಅರ್ಜಿ

ಬೆಂಗಳೂರು: 2021-22ನೇ ಸಾಲಿನ 66ನೇ ರಾಜ್ಯೋತ್ಸವ ಪ್ರಶಸ್ತಿಗೆ 6,210 ಅರ್ಜಿಗಳು ಸಲ್ಲಿಕೆ ಆಗಿವೆ. ಶಿಕ್ಷಣ, ಸಾಹಿತ್ಯ, ಸಂಗೀತ, ಕಲೆ, ನಾಟಕ, ಕ್ರೀಡೆ, ಕೃಷಿ, ವಿಜ್ಞಾನ-ತಂತ್ರಜ್ಞಾನ ಸೇರಿದಂತೆ 26 ಕ್ಷೇತ್ರಗಳಲ್ಲಿ ಅರ್ಜಿಗಳು ಬಂದಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೇಂದ್ರ ಕಚೇರಿಗೆ ನೇರವಾಗಿ 1,450 ಅರ್ಜಿಗಳು ಹಾಗೂ ‘ಸೇವಾ ಸಿಂಧು’ ಪೋರ್ಟಲ್ ಮೂಲಕ 4,770 ಹೆಸರುಗಳು ಬಂದಿವೆ. ಈ ಹೆಸರುಗಳನ್ನು 28,857 ಜನರು ಆನ್‌ಲೈನ್ ಮೂಲಕ ಶಿಫಾರಸ್ಸು ಮಾಡಿದ್ದಾರೆ.

ಈ ವರ್ಷ ಮೊದಲ ಬಾರಿ ಆನ್‌ಲೈನ್ (ಸೇವಾ ಸಿಂಧು) ಮೂಲಕ ಹೆಸರು ಶಿಫಾರಸು ಮಾಡಲು ಅವಕಾಶ ನೀಡಲಾಗಿತ್ತು. 2018-19ನೇ ಸಾಲಿನ ಪ್ರಶಸ್ತಿಗೆ 1,300, 2019-20ನೇ ಸಾಲಿಗೆ 1,191, 2020-21ನೇ ಸಾಲಿನಲ್ಲಿ 1,144 ಅರ್ಜಿಗಳು ಬಂದಿದ್ದವು.

‘ಅರ್ಜಿ ಸಲ್ಲಿಕೆಗೆ ಆನ್‌ಲೈನ್ ವ್ಯವಸ್ಥೆ ಮಾಡಿರುವುದರಿಂದ ಹೆಚ್ಚು ಜನರು ನೇರವಾಗಿ ಭಾಗಿಯಾಗಿದ್ದು ರಾಜ್ಯೋತ್ಸವ ಪ್ರಶಸ್ತಿಗೆ ಹೆಚ್ಚಿನ ಗೌರವ ತಂದಿದೆ. ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯಲಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ತಿಳಿಸಿದ್ದಾರೆ.

20 ರಿಂದ ಪುರಂದರದಾಸರ ಸಂಗೀತ ಆರಾಧನೆ

ಬೆಂಗಳೂರು: ಸಂತ ಪುರಂದರದಾಸರ ಆರಾಧನಾ ಸಮಿತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಇದೇ 20ರಿಂದ 24ರವರೆಗೆ ‘ಪುರಂದರದಾಸರ ಸಂಗೀತ ಆರಾಧನೆ’ ಕಾರ್ಯಕ್ರಮವನ್ನು ಮಲ್ಲತ್ತಹಳ್ಳಿಯ ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ ಭವನದಲ್ಲಿ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಟಿ.ಎಸ್. ನಾಗಾಭರಣ, ‘ಪುರಂದರದಾಸರಿಗೆ ಗೌರವ ಸೂಚಿಸುವ ಸಲುವಾಗಿ ಐದು ದಿನಗಳ ಕಾಲ ಕರ್ನಾಟಕ ಸಂಗೀತ, ಹಿಂದುಸ್ತಾನಿ ಸಂಗೀತ, ಕೀರ್ತನೆ, ಭಜನೆ, ಭರತನಾಟ್ಯ, ರಂಗ ಗೀತೆ, ಜಾನಪದ ಗೀತೆಗಳ ಗಾಯನವೂ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ತಿಳಿಸಿದರು.

ಪ್ರತಿದಿನ ಮಧ್ಯಾಹ್ನ 3ರಿಂದ 4 ಗಂಟೆಯವರೆಗೆ ಯುವ ನೃತ್ಯ ಪ್ರತಿಭೆಗಳ ಪ್ರದರ್ಶನ ಏರ್ಪಡಿಸಲಾಗಿದ್ದು, ಆಸಕ್ತರು 9845227800 ಅನ್ನು ಸಂಪರ್ಕಿಸಬಹುದು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ನಂ. 5 & 6, "ಜಲಭವನ," ಬಿಟಿಎಂ ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029.
ದೂರವಾಣಿ: 080-41106504-18/26 ಫ್ಯಾಕ್ಸ್:080-26539206, e-mail : cekwbbng@gmail.com

ತಿದ್ದುಪಡಿ

2021–22ನೇ ಸಾಲಿನ ರಾಮನಗರ ಮತ್ತು ಚನ್ನಪಟ್ಟಣ ನಗರಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳಿಗೆ ಟೆಂಡರ್ ಸಂ.No.:KWB/CE(B)/RMN&CHPO&M/1327/2021-22 ಹಾಗು ವರ್ಕ್ ಇಂಡೆಂಟ್ ಸಂಖ್ಯೆ : KUWSDB/2021-22/WS/WORK_INDENT3055), ಈ ದಿನಪತ್ರಿಕೆಯಲ್ಲಿ ದಿನಾಂಕ: 14.10.2021 ರಂದು ಪ್ರಕಟಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21.11.2021, ಸಂಜೆ 17.30 ಗಂಟೆಯವರೆಗೆ ಬದಲಾಗಿ **12.11.2021, ಸಂಜೆ 17.30** ಎಂದು ಓದಕೊಳ್ಳುವುದು. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
(ಕಂಪನಿಗಳ ಕಾಯಿದೆ 2013ರಡಿಯಲ್ಲಿ ಸ್ಥಾಪಿತವಾಗಿರುವ ಸಂಸ್ಥೆ)
ಸಿಐಎನ್ ಸಂಖ್ಯೆ: ಯು74999ಕೆಎ2018ಪಿಎಲ್‌ಸಿ109175
Bengaluru SMART CITY

ಕಾರ್ಯಪಾಲಕ ಅಭಿಯಂತರರ ಕಚೇರಿ–02, ಬೃಬೆಂಮಪಾಲಿಕೆ ಕಟ್ಟಡ, ತಿಮ್ಮಯ್ಯ ರಸ್ತೆ, ಅಲಿಯನ್ಸ್ ಫ್ರಾನ್ಕಯಿಸ್ ಡೇ ಶಾಲೆ ಎದುರು, ವಸಂತನಗರ, ಬೆಂಗಳೂರು – 560 052. ದೂರವಾಣಿ: 080–22200080

ಟೆಂಡರ್ ರದ್ದುಪಡಿಸುವಿಕೆ / ಹಿಂಪಡೆಯುವಿಕೆ

ಟೆಂಡರ್ ಸಂಖ್ಯೆ: ಬೆಂಸ್ಮಾಲಿ/ಟಿಎಸ್/ಕಾಪಾಅ–02/ಟೆಂಡರ್–04/2021–22, ದಿನಾಂಕ: 04.10.2021ರಂತೆ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದಾಗಿ ಸದರಿ ಕಾಮಗಾರಿಗಳನ್ನು ರದ್ದುಪಡಿಸಲಾಗಿದೆ / ಹಿಂಪಡೆಯಲಾಗಿದೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಬೆಂಗಳೂರಿನಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಚೇರಿಗೆ ಭದ್ರತಾ ಸೇವೆಗಳನ್ನು ಒದಗಿಸುವುದು.
2	ಬೆಂಗಳೂರಿನಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಚೇರಿಗೆ ಸ್ವಚ್ಛತೆ ಸೇವೆಗಳನ್ನು ಒದಗಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು–02, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಕಛೇರಿ ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003. ದೂ: 080–23346551.

No.KFD/HOFF/B10/PUR/12/2021-ICT-KFD Date: 13.10.2021

ಆಲ್–ಇನ್–ಒನ್–ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ಲೇಸರ್‌ಜೆಟ್ ಮಲ್ಟಿಫಂಕ್ಷನ್ ಪ್ರಿಂಟರ್‌ಗಳನ್ನು ಅಗತ್ಯ ಸಾಫ್ಟ್‌ವೇರ್, ಪೆರಿಫೆರಲ್ಸ್‌ಗಳನ್ನು ಸರಬರಾಜು ಮಾಡಲು ಮತ್ತು ಸಮಗ್ರ ವಾರಂಟಿ ಒದಗಿಸಲು ಟೆಂಡರ್ ಅಧಿಸೂಚನೆ.

ಕರ್ನಾಟಕ ಅರಣ್ಯ ಇಲಾಖೆಯ ವಿವಿಧ ಕಛೇರಿಗಳಿಗೆ ಅಗತ್ಯವಿರುವ ಆಲ್–ಇನ್–ಒನ್–ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ಲೇಸರ್‌ಜೆಟ್ ಮಲ್ಟಿಫಂಕ್ಷನ್ ಪ್ರಿಂಟರ್‌ಗಳನ್ನು ಸರಬರಾಜು ಮಾಡಲು ಮತ್ತು ಸಮಗ್ರ ವಾರಂಟಿ ಒದಗಿಸಲು "ಇ–ಟೆಂಡರ್" ಅಧಿಸೂಚನೆ ಸಂಖ್ಯೆ: FD/2021-22/IND1846 ಯನ್ನು ದಿನಾಂಕ: 12.10.2021 ರಂದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದ್ದು, ಆಸಕ್ತರಿಂದ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಮುಖಾಂತರ ದಿನಾಂಕ: 12.10.2021 ರಿಂದ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 12.11.2021ರ ಸಂಜೆ 5.30 ಗಂಟೆಯವರೆಗೆ ಅವಕಾಶವಿರುತ್ತದೆ. ತಾಂತ್ರಿಕ ಬಿಡ್ಡನ್ನು 15.11.2021ರ ಬೆಳಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡಿನ ಮೌಲ್ಯಮಾಪನದ ನಂತರ ತೆರೆಯಲಾಗುವುದು. ಟೆಂಡರ್ ಅಧಿಸೂಚನೆಯ ಪೂರ್ಣ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮಾಹಿತಿ ಸಂವಹನ ತಂತ್ರಜ್ಞಾನ)

DIPR/DDU/Zen/R.O:1880/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಆಯುಕ್ತರ ಕಛೇರಿ, ಬಳ್ಳಾರಿ ಮಹಾನಗರಪಾಲಿಕೆ,
ಬಳ್ಳಾರಿ ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101
ದೂರವಾಣಿ ಸಂಖ್ಯೆ : 08392–273479 / 278168
ವೆಬ್‌ಸೈಟ್: www.bellarycity.mrc.gov.in
ಇ–ಮೇಲ್: bellarycommissioner@yahoo.co.in

ಸಂಖ್ಯೆ: ಮನಪಾಬ/ಆಶಾ/ಡಿ.ಪಿ.ಆರ್./ಟೆಂಡರ್/ಕಾಂಪ್ಯಾಕ್ಟರ್/01/2021–22 ದಿ:13.10.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬಳ್ಳಾರಿ ಮಹಾನಗರಪಾಲಿಕೆ ವತಿಯಿಂದ ಸ್ವಚ್ಛಭಾರತ ಯೋಜನೆಯ ಘನತ್ಯಾಜ್ಯ ವಸ್ತು ನಿರ್ವಹಣೆಯ ಅನುದಾನದಡಿಯಲ್ಲಿ ಪೌರ ಘನತ್ಯಾಜ್ಯ ನಿರ್ವಹಣೆಗಾಗಿ ಅಗತ್ಯವಿರುವ 3 ಸಂಖ್ಯೆ ಕಾಂಪ್ಯಾಕ್ಟರ್ ವಾಹನಗಳನ್ನು ಖರೀದಿಸಲು ಟೆಂಡರ್‌ಗೆ ಇಟ್ಟ ಮೊತ್ತ ರೂ.103.20 ಲಕ್ಷಗಳು/– ಇರುತ್ತದೆ. **ಇಂಡೆಂಟ್ ಸಂಖ್ಯೆ:** DMA/2020-21/IND11735/CALL-2. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ದಿನಾಂಕ: 18.10.2021 ರಿಂದ 02.11.2021 ರ ಸಂಜೆ 4.00ಗಂಟೆ ಒಳಗಾಗಿ ಡೌನ್‌ಲೋಡ್ ಮಾಡಿಕೊಂಡು, ದಿನಾಂಕ:02.11.2021 ರಂದು ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬಹುದು, ಟೆಂಡರ್ ತೆರೆಯುವ ದಿನಾಂಕ: 06.11.2021 ಬೆಳಗ್ಗೆ 11.30 ಗಂಟೆಗೆ. ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಮತ್ತು ಹೆಚ್ಚಿನ ವಿವರಗಳಿಗೆ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ದೂರವಾಣಿ–ಸಂ:08392–273479ಗೆ–ಕರೆಮಾಡಿ–ಮಾಹಿತಿ–ಪಡೆಯಬಹುದು–ಹಾಗೂ–ವೆಬ್‌ಸೈಟ್:–*http://eproc.karnataka.gov.in* ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಆಯುಕ್ತರು, ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/436/ಎಂಸಿಎ/2021–22

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರಸಂ:ಕಾಇಂ:ಲೋಇವಿ:ತುಮ:ಕಿಇಂ–3:ಟೆಂಡರ್–18/2021–22 ದಿನಾಂಕ: 11.10.2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.18/2021–22 ದಿನಾಂಕ: 11.10.2021

ಈ ಕಚೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 18/2021–22: ದಿನಾಂಕ 11.10.2021 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ;5054–ಜಿಲ್ಲಾ ಮುಖ್ಯ ರಸ್ತೆಗಳು–ಸುಧಾರಣೆ ರ ಅಡಿಯಲ್ಲಿ 01 ಕಾಮಗಾರಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಟ ಹಾಗೂ ಕನಿಷ್ಠ ಮೊತ್ತ **ರೂ.422.46 ಲಕ್ಷಗಳು,** ಇ.ಎಂ.ಡಿ ಗರಿಷ್ಠ ಮತ್ತು ಕನಿಷ್ಠ ಮೊತ್ತ **ರೂ.633700/–**ಗಳು. ಅರ್ಹ ಗುತ್ತಿಗೆದಾರರು : 1ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **16.11.2021** ರ 16.00 ಗಂಟೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **18.10.2021** ರಿಂದ **18.11.2021**ರ 16.00ಗಂಟೆಯುವರೆಗೆ ಪಡೆಯುಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **18.11.2021** ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **19.11.2021** ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23.11.2021** ಸಂಜೆ 16.30ಗಂಟೆಗೆ. ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/348/MCA/2021-22

ಪುರಸಭಾ ಕಾರ್ಯಾಲಯ, ಹಗರಿಬೊಮ್ಮನಹಳ್ಳಿ, ವಿಜಯನಗರ
Website:www.hagaribommanahallitown.mrc.gov.in
Email:itstaff_ulb_hbhalli@yahoo.in Phone:08397-238358
ನಂ.ಪುಸಹ/ತಾ.ಶಾ/ಈಪ್ರಾಕ್1/ಸಿಆರ್/2/2020–21 ದಿನಾಂಕ: 16.10.2021

"ಅಲ್ಪಾವಧಿ ಟೆಂಡರ್ ಪ್ರಕಟಣೆ(ಇ–ಪೋರ್ಟಲ್ ಮೂಲಕ)"

ಸನ್ 2019–20ನೇ ಸಾಲಿನ ಎಸ್.ಎಫ್.ಸಿ.ಕು.ನಿ.ಸ.ಪ. ಯೋಜನೆ ನಿಧಿಯಡಿ ಹಾಗೂ ಇನ್ನಿತರೆ ಯೋಜನೆಯಡಿ ಬರುವ ಕಾಮಗಾರಿಗಳಿಗೆ ಕರ್ನಾಟಕ ನಾಗರೀಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ತಿದ್ದುಪಡಿ ಅಧಿನಿಯಮ 2001 ರ ಪ್ರಕಾರ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ /ಅಧೀಕೃತ ಸರಬರಾಜುದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಕ್ಯುಮೆಂಟ್ ನಿಬಂಧನೆಗೊಳಪಟ್ಟಂತೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ **(https://eproc.karnataka.gov.in)** ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೆಬ್‌ಸೈಟ್ **www.hagaribommanahallitown.mrc.gov.in** ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ವಿವರ: (1) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಬಗ್ಗೆ ವಿಚಾರಿಸಲು ಕೊನೆಯ ದಿನಾಂಕ: **22.10.2021 ಸಾಯಂಕಾಲ 17.00ಗಂಟೆಗೆ** (2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **25.10.2021 ಸಾಯಂಕಾಲ 17.30 ಗಂಟೆಗೆ** (3) ಇ–ಪ್ರೊಕ್ಯೂರ್‌ಮೆಂಟ್ ತೆರೆಯುವ ದಿನಾಂಕ ಮತ್ತು ಸಮಯ: **26.10.2021 ಸಾಯಂಕಾಲ 17.31ಗಂಟೆಗೆ ಅಥವಾ ತಿಳಿಸಿದ ಮುಂದಿನ ಸಮಯದಲ್ಲಿ. ಯೋಜನೆಯ ಮತ್ತು ಕಾಮಗಾರಿಗಳ ವಿವರ : (1) DMA/2021-22/RD/WORK_INDENT120780 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)** 27.98 **ಗುತ್ತಿಗೆದಾರರ ಕಾಯ್ದಿರುಸುವಿಕೆ (ಮೀಸಲಾತಿ)** ಇತರೆ (2) DMA/2021-22/BD/WORK_INDENT120788 **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)** 19.35 **ಗುತ್ತಿಗೆದಾರರ ಕಾಯ್ದಿರುಸುವಿಕೆ (ಮೀಸಲಾತಿ)** ಪರಿಶಿಷ್ಟ ಜಾತಿ. (3) DMA/2021-22/BD/WORK_INDENT120785 **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)** 10.00 **ಗುತ್ತಿಗೆದಾರರ ಕಾಯ್ದಿರುಸುವಿಕೆ (ಮೀಸಲಾತಿ)** ಪರಿಶಿಷ್ಟ ಪಂಗಡ. ಹೆಚ್ಚಿನ ವಿವರ ಹಾಗೂ ಷರತ್ತುಗಳನ್ನು ಪುರಸಭೆಯ ತಾಂತ್ರಿಕ ಶಾಖೆಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– **ಆಢಳಿತಾಧಿಕಾರಿಗಳು** ಪುರಸಭೆ ಹಗರಿಬೊಮ್ಮನಹಳ್ಳಿ.
ಸಹಿ/– **ಮುಖ್ಯಾಧಿಕಾರಿ,** ಪುರಸಭೆ ಹಗರಿಬೊಮ್ಮನಹಳ್ಳಿ.
ವಾಸಾಸಂಇ/ಹೊಸಪೇಟೆ/ವಿಜಯನಗರ ಜಿಲ್ಲೆ ಅಲಕ್‌ನಂದ/46/2021–22

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು, ಮೈಸೂರು ಜಿಲ್ಲೆ
ದೂರವಾಣಿ ಸಂಖ್ಯೆ: 08221: 226245, 223320, 227245, Email: sstnanjangud@gmail.com
ಸಂಖ್ಯೆ: ಎಸ್‌ಎಸ್‌ಟಿ/ಡಿವಿಪಿ/ಇ–ಟೆಂಡರ್ ಪಾರ್ಕಿಂಗ್ /1/2020–21 ದಿನಾಂಕ: 29–09–2021

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
ಇ–ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ ಪ್ರಕಾರ)

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ 2021–21 ನೇ ಸಾಲಿಗೆ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಸೇರಿದ ಪ್ರದೇಶದಲ್ಲಿ ಭಕ್ತರು ನಿಲುಗಡೆ ಮಾಡುವ ವಾಹನಗಳ ಮೇಲೆ ಶುಲ್ಕವಸೂಲಿ ಮಾಡುವ ಗುತ್ತಿಗೆ ಹಕ್ಕನ್ನು ಪಡೆದುಕೊಳ್ಳಲು ಇ–ಟೆಂಡರ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ, ಗುತ್ತಿಗೆ ಅವಧಿಯು ಆದೇಶ ನೀಡಿದ ದಿನಾಂಕದಿಂದ 1 ವರ್ಷ ಅವಧಿಯಾಗಿದ್ದು ಟೆಂಡರ್‌ನ ಎಲ್ಲಾ ಅಗತ್ಯ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ (E-Procurement Website: http://eproc.karnataka.gov.in) ಮೂಲಕ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಮೂಲಕ ಮಾಹಿತಿ ಪಡೆಯಬಹುದಾಗಿದೆ.

ಕ್ರ.ಸಂ	ಟೆಂಡರ್‌ನ ವಿವರ	ಇ.ಎಂ.ಡಿ. ಮೊತ್ತ
01	ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ 2021–22ನೇ ಸಾಲಿಗೆ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಸೇರಿದ ಪ್ರದೇಶದಲ್ಲಿ ಭಕ್ತರು ನಿಲುಗಡೆ ಮಾಡುವ ವಾಹನಗಳ ಮೇಲೆ ಶುಲ್ಕವಸೂಲಿ ಮಾಡುವ ಹಕ್ಕನ್ನು ಪಡೆದುಕೊಳ್ಳಲು ಗುತ್ತಿಗೆ ಹಕ್ಕಿನ ಬಗ್ಗೆ.	2,00,000=00

ಇ–ಪ್ರಕ್ಯೂರ್ ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡತಿದೆ.

1.	ಇ–ಪೋರ್ಟಲ್ ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	16–10–2021	ರ ನಂತರ
2.	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	04–11–2021	ಸಂಜೆ: 5.00 ಗಂಟೆಯವರಗೆ
3.	ಇ–ಟೆಂಡರ್ ನ್ನು ತೆರೆಯುವ ದಿನಾಂಕ ಮತ್ತು ಕಾಲ	06–11–2021	11.00 ಗಂಟೆ ನಂತರ

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಶ್ರೀಕಂಠೇಶ್ವರ ದೇವಸ್ಥಾನ ನಂಜನಗೂಡು

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ,
ಚಾವಿಸನಿನಿ, ಮೈಸೂರು–570017.

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section,
CESC, Mysuru-570017.

Telephone No: 9448994705 Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177
ಚಾವಿಸನಿನಿ/ಪ್ರ.ವ್ಯ(ಖ)/ಉ.ಪ್ರ.ವ್ಯ(ಖ)/ಸ.ಪ್ರ..ವ್ಯ(ಖ)–2/21–22/11891 ದಿನಾಂಕ: 16.10.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ಯು ಈ ಕೆಳಕಂಡ ಅಲ್ಪಾವಧಿ ಟೆಂಡರ್‌ಗಳಿಗೆ ಅರ್ಹ ಬಿಡ್ಡುದಾರರಿಂದ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದೆ.

(ಅ). ಕೆಳಕಂಡ ವಿದ್ಯುತ್ ಪರಿವರ್ತಕಗಳನ್ನು ಸರಬರಾಜು ಮಾಡಲು:–

ಕ್ರ.ಸಂ.	ವಿಚಾರಣಾ ಸಂಖ್ಯೆಗಳು	ಸೇವೆಯ ವಿವರ
1	CESC/GM(P)/C2- 5135/ 13-10-2021	250 ಕೆವಿಎ ಸ್ಟಾರ್–1 11 ಕೆ.ವಿ/433ವೋ ಅಲ್ಯೂಮಿನಿಯಂ ವೈಂಡಿಂಗ್ ವಿದ್ಯುತ್ ಪರಿವರ್ತಕಗಳ ಸರಬರಾಜು

(ಆ). ಸೇವಾ ಟೆಂಡರ್:

ಕ್ರ.ಸಂ.	ವಿಚಾರಣಾ ಸಂಖ್ಯೆಗಳು	ಸೇವೆಯ ವಿವರ
1	CESC/GM(P)/ C2-5136/ 13-10-2021	ಟಿ. ನರಸೀಪುರ ತಾಲ್ಲೂಕು ವ್ಯಾಪ್ತಿಯಲ್ಲಿ 11 ಕಿ ವೋ ದರ್ಜೆಯ 25, 63, 100 ಕೆವಿಎ ಸಾಮರ್ಥ್ಯದ 3&4 ಸ್ಟಾರ್ ರೇಟೆಡ್ ಮತ್ತು ಕನ್ವೆನ್ಷನಲ್ ಪರಿವರ್ತಕಗಳನ್ನು ಬೈ ಬ್ಯಾಕ್ ಆಧಾರದಲ್ಲಿ ಮೂಲ ಸೌಕರ್ಯ ಒದಗಿಸುವುದರೊಂದಿಗೆ ದುರಸ್ತಿಗೊಳಿಸುವುದು ಮತ್ತು ರೀಕಂಡಿಷನಿಂಗ್ ಮಾಡುವುದು.

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **htt//www.eproc.karnataka.gov.in**ನಲ್ಲಿ ದಿನಾಂಕ **18.10.2021**ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ 080–46010000/22631200 /68948777 ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/– ಪ್ರಧಾನ ವ್ಯವಸ್ಥಾಪಕರು (ಖರೀದಿ), ಚಾವಿಸನಿನಿ, ಮೈಸೂರು.
DIPR/DDMYS/MCA/599/2021-22

ನೆಲಕಚ್ಚಿದ ಕಟ್ಟಡಗಳ ಅವಶೇಷಗಳಡಿ ಸರಕು–ಸರಂಜಾಮು, ಆಭರಣ– ಹಣ ಹುಡುಕಾಟ

ಉಳಿಯಿತು ಜೀವ, ಕುಸಿಯಿತು ಜೀವನ

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: 'ಮಹಾಮಳೆಯ ಅಬ್ಬರಕ್ಕೆ ಓಲಾಡಿದ ಕಟ್ಟಡದಿಂದ ಓಡೋಡಿ ಬಂದಿದ್ದರಿಂದ ಜೀವವೇನೋ ಉಳಿಯಿತು. ಆದರೆ, ಜೀವನ ಕುಸಿದು ಮೂರಾಬಟ್ಟೆಯಾಗಿದೆ...'

ಕಮಲಾನಗರದಲ್ಲಿ ಕುಸಿದ ಕಟ್ಟಡದ ಅವೇಶೇಷಗಳ ಅಡಿಯಲ್ಲಿ ಸಿಲುಕಿರುವ ತಮ್ಮ ಸರಕು–ಸರಂಜಾಮು, ಬಟ್ಟೆ–ಬರೆ, ಹಣ– ಆಭರಣ, ದವಸ–ಧಾನ್ಯಗಳನ್ನು ಹುಡುಕುತ್ತಿರುವ ಮನೆ ಕಳೆದುಕೊಂಡ ನಿವಾಸಿಗಳ ಒಡಲ ಅಳಲು ಇದು.

'ಅಂದು ರಾತ್ರಿ 10 ಗಂಟೆ ಸುಮಾರಿಗೆ ಕಟ್ಟಡ ಅಲುಗಾಡಿದ ಕ್ಷಣದಲ್ಲಿ ನಮ್ಮ ಬದುಕಿನ ಬುಡವೂ ಅಲುಗಾಡುತ್ತಿದೆ ಎಂಬುದು ಹೊಳೆಯಲಿಲ್ಲ. ಮಕ್ಕಳನ್ನು ಎಳೆದುಕೊಂಡು ಓಡೋಡಿ ರಸ್ತೆಗೆ ಬಂದು ನಿಂತ ಗಳಿಗೆಯಲ್ಲೇ ನಮ್ಮ ಬದುಕೂ ಬೀದಿಗೆ ಬಿದ್ದಿದೆ ಎಂಬುದು ತಿಳಿಯಲಿಲ್ಲ. ಕಣ್ಮುಚ್ಚಿ ಬಿಡುವಷ್ಟರಲ್ಲಿ ಎಲ್ಲವೂ ಮುಗಿದು ಹೋಗಿದೆ. ಬದುಕು ಕಟ್ಟಿಕೊಳ್ಳಲು ಇಷ್ಟು ವರ್ಷ ಸವೆಸಿದ ಶ್ರಮ ಒಮ್ಮೆಲೆ ಅಳಿಸಿಹೋಗಿದೆ' ಎಂದು ನಿವಾಸಿಗಳು ಹೇಳುವಾಗ ನಾಲ್ಕು ದಿನಗಳಿಂದ ಅಳುವಿನ ಕೋಡಿ ಹರಿಸಿ ಬರಿದಾಗಿರುವ ಕಣ್ಣುಗಳಲ್ಲಿ ದುಃಖವಿನ್ನೂ ಮಡುಗಟ್ಟಿತ್ತು.

'ಹೊಟ್ಟೆ–ಬಟ್ಟೆ ಕಟ್ಟಿ ಉಳಿತಾಯ ಮಾಡಿ, ಒಂದೊಂದೇ ವಸ್ತುಗಳನ್ನು ಮನೆಗೆ ತಂದು ಸಂಸಾರದ ಗೂಡು ಕಟ್ಟಿಕೊಂಡಿದ್ದೆವು. ಎಲ್ಲವೂ ನಮ್ಮ ಕಣ್ಣೆದುರಿಗೇ ಮಣ್ಣುಪಾಲಾಯಿತು. ಕಣ್ಮುಚ್ಚಿದರೆ ಸಾಕು ಆ ಚಿತ್ರಣವೇ ಸ್ಮೃತಿ-ಪಟಲದಲ್ಲಿ ಮೂಡುತ್ತಿದೆ. ಅವಶೇಷಗಳ ಅಡಿಯಲ್ಲಿ ಅಳಿದು–ಉಳಿದಿರುವ ವಸ್ತುಗಳು ಸಿಗುತ್ತವೇನೋ ಎಂದು ಹುಡುಕುತ್ತಿದ್ದೇವೆ' ಎಂದು ಹೇಳಿದರು.

'ಮಕ್ಕಳ ಸಹಿತ ಜೀವ ಉಳಿಸಿಕೊಂಡ ಸಮಾಧಾನವೇನೋ ಇದೆ. ನುಜ್ಜುಗುಜ್ಜಾದ ಪಾತ್ರೆ, ಪೀಠೋಪಕರಣ, ಟಿ.ವಿ, ಫ್ರಿಡ್ಜು, ವಾಷಿಂಗ್ ಮೆಷಿನ್‌ಗಳನ್ನು ನೋಡಿ ಸಂಕಟವಾಗುತ್ತಿದೆ' ಎಂದು ಧನಲಕ್ಷ್ಮಿ ಹೇಳಿದರು.

ಅವಶೇಷಗಳ ಅಡಿಯಲ್ಲಿ ಸಿಲುಕಿರುವ ವಸ್ತುಗಳನ್ನು ಎತ್ತಿಕೊಡಲು ಬಿಬಿಎಂಪಿಯಿಂದ ಹಿಟಾಚಿ ವ್ಯವಸ್ಥೆ ಮಾಡಲಾಗಿದೆ. ಬೇರೆ ಯಾರೂ ಆ ವಸ್ತುಗಳನ್ನು ಎತ್ತಿಕೊಳ್ಳದಂತೆ ಪೊಲೀಸರು ಹಗಲು–ರಾತ್ರಿ ಕಾವಲಿದ್ದಾರೆ. ನಿವಾಸಿಗಳು ಕೂಡ ಅಲ್ಲಿಂದ ಕದಲಿಲ್ಲ. ಸಿಕ್ಕ ವಸ್ತುಗಳನ್ನು ಪೊಲೀಸರು ಪಟ್ಟಿ ಮಾಡಿಕೊಂಡು ಜೋಪಾನವಾಗಿ ವಾರಸುದಾರರಿಗೆ ಹಿಂದಿರುಗಿಸುತ್ತಿದ್ದಾರೆ. ನಿವಾಸಿಗಳ ತಾತ್ಕಾಲಿಕ ಆಶ್ರಯಕ್ಕೆ ಸರ್ಕಾರಿ ಶಾಲೆಯಲ್ಲಿ ವ್ಯವಸ್ಥೆ ಮಾಡಿದ್ದರೂ, ಸಂಬಂಧಿಕರ ಮನೆಗಳಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ.

ಕಮಲಾನಗರದಲ್ಲಿ ನೆಲಸಮಗೊಳಿಸಿದ ಕಟ್ಟಡಗಳ ಅವಶೇಷಗಳ ಅಡಿ ಸಿಲುಕಿರುವ ವಸ್ತುಗಳನ್ನು ಹುಡುಕುತ್ತಿರುವ ಮನೆ ಕಳೆದುಕೊಂಡ ನಿವಾಸಿಗಳು (ಎಡ ಚಿತ್ರ) ಅವಶೇಷಗಳ ಅಡಿ ಸಿಕ್ಕ ಮಕ್ಕಳ ಶಾಲಾ ಪುಸ್ತಕಗಳನ್ನು ಒಣಗಿಸುತ್ತಿರುವ ಪೋಷಕರು –ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ಪ್ರಜಾವಾಣಿ ವಿಶೇಷ

₹7 ಲಕ್ಷ ಮೌಲ್ಯದ ಆಭರಣ ಸುರಕ್ಷಿತ

ಲೋಕೇಶ್ –ಧನಲಕ್ಷ್ಮಿ ದಂಪತಿ ತಮ್ಮ ಮಗಳ ಮದುವೆಗೆಂದು ಮಾಡಿಸಿದ್ದ ಒಡವೆ ಸೇರಿ ಅಂದಾಜು ₹7 ಲಕ್ಷ ಮೌಲ್ಯದ ಚಿನ್ನದ ಆಭರಣಗಳು ಅವಶೇಷಗಳ ಅಡಿ ಸುರಕ್ಷಿತವಾಗಿ ಶನಿವಾರ ದೊರೆತವು.

ಪ್ಲಾಸ್ಟಿಕ್ ಚೀಲದಲ್ಲಿ ಕಟ್ಟಿ ಅಡುಗೆ ಮನೆಯಲ್ಲಿ ಪಾತ್ರೆಯೊಂದರಲ್ಲಿ ಇರಿಸಿದ್ದರು. ಆ ಆಭರಣಗಳು ಕಟ್ಟಡ ಕುಸಿದರೂ ಚೆಲ್ಲಾಪಿಲ್ಲಿಯಾಗದೆ ಪಾತ್ರೆಯಲ್ಲೇ ಸುರಕ್ಷಿತವಾಗಿದ್ದವು. ಕಟ್ಟಡ ಬಿದ್ದ ಕ್ಷಣದಿಂದ ಆಭರಣ ಸಿಕ್ಕರೆ ಸಾಕು ಎಂದು ಜೀವ ಬಿಗಿ ಹಿಡಿದು ಹಗಲು–ರಾತ್ರಿ ಅಲ್ಲೇ ಕುಳಿತಿದ್ದ ಇಡೀ ಕುಟುಂಬ ಆಭರಣದ ಚೀಲ ಸಿಕ್ಕ ಕೂಡಲೇ ಸಂಭ್ರಮದಲ್ಲಿ ತೇಲಾಡಿತು.

'ದೀಪಾವಳಿ ವೇಳೆಗೆ ಮಗಳ ಮದುವೆ ನಡೆಯಲಿದೆ. ಅದಕ್ಕಾಗಿಯೇ ಬೇರೆ ಮನೆ ಮಾಡಿ ಬುಧವಾರ ಹೊಸ ಮನೆಗೆ ಹೋಗಲು ಸಿದ್ಧತೆ ನಡೆಸಿದ್ದೆವು. ಮಂಗಳವಾರ ರಾತ್ರಿ ಈ ರೀತಿ ಆಯಿತು. ಒಡವೆ ಸಿಕ್ಕಿದ ಖುಷಿ ಇದೆ. ₹1 ಲಕ್ಷಕ್ಕೂ ಅಧಿಕ ನಗದು, ಬೆಳ್ಳಿ ಆಭರಣ ಸಿಗಬೇಕಿದೆ' ಎಂದು ಲೋಕೇಶ್ ಹೇಳಿದರು.

ಇನ್ನುಳಿದ ಕುಟುಂಬದವರೂ ತಮ್ಮ ವಸ್ತು, ಒಡವೆಗಳು ಸುರಕ್ಷಿತವಾಗಿ ಸಿಗಲಿವೆ ಎಂಬ ಭರವಸೆಯಲ್ಲಿ ಕಾದು ಕುಳಿತಿದ್ದಾರೆ.

ತಲಾ ₹1 ಲಕ್ಷ ನೆರವು

ಮನೆ ಕಳೆದುಕೊಂಡ ಬಾಡಿಗೆದಾರ 6 ಕುಟುಂಬಗಳಿಗೆ ಸಚಿವ ಕೆ. ಗೋಪಾಲಯ್ಯ ಅವರು ತಲಾ ₹1 ಲಕ್ಷ ನೆರವು ನೀಡಿದ್ದಾರೆ ಎಂದು ನಿವಾಸಿಗಳು ಹೇಳಿದರು.

ಅಕ್ಕಪಕ್ಕದಲ್ಲಿ ಇದ್ದ ಶೆಡ್ ರೀತಿಯ ನಾಲ್ಕು ಮನೆಗಳೂ ಜಖಂಗೊಂಡಿದ್ದು, ಅವರಿಗೆ ತಲಾ ₹15 ಸಾವಿರ ನೀಡಿದ್ದಾರೆ ಎಂದು ತಿಳಿಸಿದರು.

'ಉಟ್ಟ ಬಟ್ಟೆಯಲ್ಲೇ ಬೀದಿಗೆ ಬಂದ ಕುಟುಂಬಗಳಿಗೆ ವೈಯಕ್ತಿಕವಾಗಿ ನೆರವಾಗಿದ್ದೇನೆ. ಸರ್ಕಾರದಿಂದ ಎಷ್ಟು ಪರಿಹಾರ ಕೊಡಿಸಲು ಸಾಧ್ಯ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಕೆ. ಗೋಪಾಲಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯ-ನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 18ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗಲಿರುವ ಸ್ಥಳಗಳು: ತುಂಗಾ ನಗರ, ಸುವರ್ಣ ನಗರ, ದುಬಾಸಿಪಾಳ್ಯ, ಭುವನೇಶ್ವರಿ ನಗರ, ಕುರುಬರಹಳ್ಳಿ ಪೈಪ್‌ಲೈನ್ ರಸ್ತೆ, ಅಗ್ರಹಾರ ದಾಸರಹಳ್ಳಿ, ವಿಜಯನಗರ, ಹೊಸಹಳ್ಳಿ, ಹಂಪಿನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ಚಂದ್ರಾ ಬಡಾವಣೆ, ಕಾಮಾಕ್ಷಿಪಾಳ್ಯ, ಪಂಚಶೀಲ ನಗರ, ಸಂಜೀವಿನಿ ನಗರ, ಮೂಡಲಪಾಳ್ಯ, ಉಲ್ಲಾಳ ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ನಕಲಿ ಚಿನ್ನದ ಬಿಸ್ಕತ್ ಮಾರಿ ₹1.30 ಕೋಟಿ ವಂಚನೆ

ಬೆಂಗಳೂರು: ನಗರದ ಚಿನ್ನದ ವ್ಯಾಪಾರಿಯೊಬ್ಬರಿಗೆ ನಕಲಿ ಚಿನ್ನದ ಬಿಸ್ಕತ್ ಮಾರಾಟ ಮಾಡಿ ₹1.30 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಆರೋಪಿ ಇಲ್ಯಾಸ್ ಖಾನ್ ಅಜ್ಮೇರ್ (40) ಎಂಬಾತನನ್ನು ಎಸ್.ಜೆ. ಪಾರ್ಕ್ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಇಲ್ಯಾಸ್, ಚಿನ್ನದ ವ್ಯಾಪಾರದ ಮಧ್ಯವರ್ತಿ ಆಗಿದ್ದ. ನಕಲಿ ಚಿನ್ನ ಮಾರಿದ್ದ ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದು, ಗುಜರಾತ್‌ನಲ್ಲಿರುವ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತನ್ನ ಬಳಿ 3 ಕೆ.ಜಿ ತೂಕದ ಚಿನ್ನದ ಬಿಸ್ಕತ್ ಇರುವುದಾಗಿ ಹೇಳಿದ್ದ ಪ್ರಮುಖ ಆರೋಪಿ, ಇಲ್ಯಾಸ್‌ನನ್ನು ಸಂಪರ್ಕಿಸಿದ್ದ. ಬಿಸ್ಕತ್ ಮಾರಾಟ ಮಾಡಿಸಿಕೊಟ್ಟರೆ ಉತ್ತಮ ಕಮಿಷನ್ ನೀಡುವುದಾಗಿ ತಿಳಿಸಿದ್ದ. ಪ್ರಮುಖ ಆರೋಪಿಯನ್ನು ಬೆಂಗಳೂರಿಗೆ ಕರೆಸಿದ್ದ ಇಲ್ಯಾಸ್, ನಗರ್ತಪೇಟೆಯ ಚಿನ್ನದ ವ್ಯಾಪಾರಿ ರಾಹುಲ್ ಕುಮಾರ್ ಎಂಬುವರ ಪರಿಚಯ ಮಾಡಿಸಿದ್ದ.'

'ಚಿನ್ನದ ಬಿಸ್ಕತ್ ನೋಡಿದ್ದ ರಾಹುಲ್‌ಕುಮಾರ್, ₹ 1.30 ಕೋಟಿ ನೀಡಿ ಖರೀದಿಸಿದ್ದ. ಹಣ ಪಡೆದುಕೊಂಡ ಪ್ರಮುಖ ಆರೋಪಿ ನಗರ ತೊರೆದಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸೆ. 16ರಂದು ಚಿನ್ನದ ವ್ಯಾಪಾರಿಯೊಬ್ಬರು ರಾಹುಲ್ ಕುಮಾರ್ ಅವರ ಮಳಿಗೆಗೆ ಬಂದಿದ್ದರು. ಬಿಸ್ಕತ್ ಖರೀದಿಸಲು ಮುಂದಾಗಿದ್ದ ಅವರು, ಅದನ್ನು ಪರೀಕ್ಷೆ ಮಾಡಿಸಿಕೊಂಡು ಬರುವುದಾಗಿ ತೆಗೆದುಕೊಂಡು ಹೋಗಿದ್ದರು. ಮಳಿಗೆ ಕೆಲಸಗಾರರೂ ಜೊತೆಗೆ ತೆರಳಿದ್ದರು. ಚಿನ್ನದ ಬಿಸ್ಕತ್ ನಕಲಿ ಎಂಬುದು ಪರೀಕ್ಷೆ ವೇಳೆ ಗೊತ್ತಾಗಿತ್ತು. ಬಳಿಕ ರಾಹುಲ್ ಕುಮಾರ್ ಅವರು ಠಾಣೆಗೆ ದೂರು ನೀಡಿದ್ದರು' ಎಂದೂ ಹೇಳಿವೆ.

ಉದ್ದಿಮೆ ಪರವಾನಗಿಗೆ ಲಂಚ ಗ್ರಾ.ಪಂ. ನೌಕರರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀನು ಮತ್ತು ಮಾಂಸದ ಅಂಗಡಿ ತೆರೆಯಲು ಉದ್ದಿಮೆ ಪರವಾನಗಿ ನೀಡಲು ₹ 3,500 ಲಂಚ ಪಡೆದ ಬೆಂಗಳೂರು ನಗರ ಜಿಲ್ಲೆಯ ಸೀಗೆಹಳ್ಳಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಸುಬ್ರಮಣಿ ಮತ್ತು ಬಿಲ್ ಸಂಗ್ರಾಹಕ ಮಂಜುನಾಥ ಸಿ. ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಂಧಿಸಿದೆ.

ಅಪರಾಧ ಸುದ್ದಿ

ಕೆ.ದೊಮ್ಮಸಂದ್ರದಲ್ಲಿ ಮೀನು ಮತ್ತು ಮಾಂಸದ ಅಂಗಡಿ ತೆರೆಯಲು ಉದ್ದಿಮೆ ಪರವಾನಗಿ ಕೋರಿ ರಾಮಮೂರ್ತಿನಗರದ ನಿವಾಸಿಯೊಬ್ಬರು ಸೀಗೆಹಳ್ಳಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದರು. ಪರವಾನಗಿ ನೀಡಲು ₹1,500 ಶುಲ್ಕದ ಜತೆಗೆ ₹3,500 ಲಂಚ ಕೊಡುವಂತೆ ಸುಬ್ರಮಣಿ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಎಸಿಬಿಗೆ ದೂರು ನೀಡಿದ್ದರು.

ಬುಧವಾರ ಅರ್ಜಿದಾರರು ಗ್ರಾಮ ಪಂಚಾಯಿತಿಗೆ ಹೋದಾಗ ಸುಬ್ರಮಣಿ ಪರವಾಗಿ ಮಂಜುನಾಥ ಲಂಚದ ಹಣ ಪಡೆದರು. ತಕ್ಷಣ ದಾಳಿಮಾಡಿದ ಎಸಿಬಿ ಬೆಂಗಳೂರು ನಗರ ಘಟಕದ ಅಧಿಕಾರಿಗಳು, ಇಬ್ಬರನ್ನೂ ಬಂಧಿಸಿದರು ಎಂದು ತನಿಖಾ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯ: ಹಣಕ್ಕಾಗಿ ಬ್ಲ್ಯಾಕ್‌ಮೇಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್‌ಸ್ಟಾಗ್ರಾಮ್' ಮೂಲಕ ಯುವತಿಯೊಬ್ಬರನ್ನು ಪರಿಚಯಿಸಿಕೊಂಡು ಅವರ ಅರೆನಗ್ನ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಿ-ಕೊಂಡು ಬ್ಲ್ಯಾಕ್‌ಮೇಲ್ ಮಾಡಲಾಗುತ್ತಿದ್ದು, ಈ ಬಗ್ಗೆ ಬಸವನಗುಡಿ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬನಶಂಕರಿ ನಿವಾಸಿಯಾಗಿರುವ 21 ವರ್ಷದ ಯುವತಿ ದೂರು ನೀಡಿದ್ದಾರೆ. ಆರೋಪಿ ಚಿರಾಗ್ ಹಾಗೂ ಆತನ ಸ್ನೇಹಿತ ಹರ್ಷಿತ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.'

'ಸಂತ್ರಸ್ತ ಯುವತಿ, ಇನ್‌ಸ್ಟಾಗ್ರಾಮ್‌ನಲ್ಲಿ ಖಾತೆ ಹೊಂದಿದ್ದಾರೆ. ಅದೇ ಖಾತೆ ಮೂಲಕ 2020ರಲ್ಲಿ ಅವರಿಗೆ ಆರೋಪಿ ಚಿರಾಗ್ ಪರಿಚಯವಾಗಿತ್ತು. ಇಬ್ಬರ ನಡುವೆ ಸ್ನೇಹ ಏರ್ಪಟ್ಟು, ಮೊಬೈಲ್ ನಂಬರ್ ಸಹ ವಿನಿಮಯ ಮಾಡಿಕೊಂಡಿದ್ದರು. ನಂತರ, ಚಾಟಿಂಗ್ ಮಾಡಲಾರಂಭಿಸಿದ್ದರು. ದಿನ ಕಳೆದಂತೆ ಸಲುಗೆಯೂ ಬೆಳೆದಿತ್ತು.'

'ತನ್ನ ಪೋಷಕರು ಮೈಸೂರಿನಲ್ಲಿರುವುದಾಗಿ ಹೇಳಿದ್ದ ಚಿರಾಗ್, ಅವರನ್ನು ಪರಿಚಯ ಮಾಡಿಸುವುದಾಗಿ ಹೇಳಿದ್ದ. ಸೆ. 26ರಂದು ಯುವತಿಯನ್ನು ಮೈಸೂರಿಗೆ ಕರೆದುಕೊಂಡು ಹೋಗಿದ್ದ. ಅಲ್ಲಿಯೇ ವಸತಿ ಗೃಹವೊಂದರ ಕೊಠಡಿಯಲ್ಲಿ ಇಬ್ಬರೂ ಉಳಿದುಕೊಂಡಿದ್ದರು. ಅದೇ ಕೊಠಡಿಗೆ ಇನ್ನೊಬ್ಬ ಆರೋಪಿ ಹರ್ಷಿತ್ ಸಹ ಬಂದಿದ್ದ'

'ಪಾನೀಯದಲ್ಲಿ ಮತ್ತು ಬರುವ ಔಷಧಿ ಬೆರೆಸಿ ಯುವತಿಗೆ ಕುಡಿಸಿದ್ದ ಆರೋಪಿಗಳು, ಅವರು ಪ್ರಜ್ಞೆ ತಪ್ಪುತ್ತಿದ್ದಂತೆ ಬಟ್ಟೆಗಳನ್ನು ಬಿಚ್ಚಿದ್ದರು. ಅರೆನಗ್ನವಾಗಿದ್ದ ಯುವತಿಯ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಿಕೊಂಡಿದ್ದರು. ಅದೇ ಫೋಟೊ ಹಾಗೂ ವಿಡಿಯೊವನ್ನು ಯುವತಿಗೆ ತೋರಿಸಿದ್ದ ಆರೋಪಿಗಳು, ₹ 5 ಲಕ್ಷ ಹಣಕ್ಕೆ ಬೇಡಿಕೆ ಇರಿಸಿದ್ದರು. ಹಣ ನೀಡದಿದ್ದರೆ, ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸಿದ್ದರು' ಎಂದೂ ಮೂಲಗಳು ಹೇಳಿವೆ.

ಮೆಜೆಸ್ಟಿಕ್ ವಸತಿಗೃಹದಲ್ಲಿ ಅಕ್ರಮ ಬಂಧನ: 'ಯುವತಿಯನ್ನು ಮೆಜೆಸ್ಟಿಕ್ ಬಳಿ ಕರೆಸಿಕೊಂಡಿದ್ದ ಆರೋಪಿಗಳು, ವಸತಿಗೃಹವೊಂದರ ಕೊಠಡಿಯಲ್ಲಿ ಅಕ್ರಮ ಬಂಧನದಲ್ಲಿರಿಸಿದ್ದರು. ಈ ಬಗ್ಗೆಯೂ ಯುವತಿ ದೂರಿನಲ್ಲಿ ಆರೋಪಿಸಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಕೆಲಸದ ಆಮಿಷ: ಹಣ ಕಿತ್ತ 'ವರ'

ಬೆಂಗಳೂರು: 'ವೈವಾಹಿಕ ಜಾಲತಾಣವೊಂದರಲ್ಲಿ ಪರಿಚಯವಾಗಿದ್ದ ವ್ಯಕ್ತಿಯೊಬ್ಬ ಸರ್ಕಾರಿ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ ₹ 60,300 ಪಡೆದು ವಂಚಿಸಿ, ನಾಪತ್ತೆಯಾಗಿದ್ದಾನೆ' ಎಂದು ಆರೋಪಿಸಿ ಯುವತಿಯೊಬ್ಬರು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

'ಬಿಟಿಎಂ ಎರಡನೇ ಹಂತದ ಬಡಾವಣೆ ನಿವಾಸಿಯಾಗಿರುವ 29 ವರ್ಷದ ಯುವತಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ರಾಜು ವಿಠ್ಠಲ್ ಪಡುಕೋಟೆ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವರನನ್ನು ಹುಡುಕುತ್ತಿದ್ದ ಯುವತಿ, ವೈವಾಹಿಕ ಜಾಲತಾಣವೊಂದರಲ್ಲಿ ವೈಯಕ್ತಿಕ ವಿವರವನ್ನು ನಮೂದಿಸಿ ಖಾತೆ ತೆರೆದಿದ್ದರು. ಅಲ್ಲಿಯೇ ಯುವತಿಗೆ ಆರೋಪಿ ಪರಿಚಯವಾಗಿತ್ತು. ತಾನು ಹೆಸ್ಕಾಂನಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದ ಆರೋಪಿ, ಮದುವೆಯಾಗುವ ಭರವಸೆ ನೀಡಿದ್ದ' ಎಂದು ಮೂಲಗಳು ತಿಳಿಸಿವೆ.

ದುಪ್ಪಟ್ಟು ಲಾಭದ ಆಮಿಷ ₹ 24.45 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಪ್ಪಟ್ಟು ಲಾಭದ ಆಮಿಷವೊಡ್ಡಿ ₹ 24.45 ಲಕ್ಷ ಹೂಡಿಕೆ ಮಾಡಿಸಿಕೊಂಡು ವಂಚಿಸಿರುವ ಕುರಿತು ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಹಾಲಕ್ಷ್ಮಿಪುರ ನಿವಾಸಿಯಾಗಿರುವ 27 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರ ಮೊಬೈಲ್‌ಗೆ ಅಪರಿಚಿತ ಸಂಖ್ಯೆಯಿಂದ ಸಂದೇಶದ ಸಮೇತ ಲಿಂಕ್ ಬಂದಿತ್ತು. 'ಈ ಲಿಂಕ್ ಕ್ಲಿಕ್ ಮಾಡಿ ₹ 100 ಹೂಡಿಕೆ ಮಾಡಿದರೆ, ₹ 150 ಲಾಭ ಬರುತ್ತದೆ' ಎಂಬುದಾಗಿ ಸಂದೇಶದಲ್ಲಿ ಬರೆಯಲಾಗಿತ್ತು. ಸಂದೇಶ ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 21.45 ಲಕ್ಷ ಹೂಡಿಕೆ ಮಾಡಿದ್ದರು.'

'ನಿಗದಿತ ದಿನದೊಳಗೆ ಲಾಭದ ಹಣ ಹಾಗೂ ಅಸಲು ವಾಪಸು ಬಂದಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ ಪ್ರತಿಕ್ರಿಯೆ ಸಿಕ್ಕಿರಲಿಲ್ಲ. ನೊಂದ ಯುವಕ, ಠಾಣೆಗೆ ದೂರು ನೀಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಚಿತ್ರದುರ್ಗದ ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಶರಣರು ಶೂನ್ಯಪೀಠವನ್ನು ಶನಿವಾರ ಸರಳವಾಗಿ ಅಲಂಕರಿಸಿದರು. ಶರಣ ಸಂಸ್ಕೃತಿ ಉತ್ಸವ ಸಮಿತಿ ಕಾರ್ಯಾಧ್ಯಕ್ಷ ಕೆ.ಎಸ್.ನವೀನ್ ಬಂಗಾರದ ಪಾದುಕೆ ಹಾಗೂ ಶಿವಶರಣ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಚಿನ್ನದ ಕಿರೀಟವನ್ನು ಹಿಡಿದಿದ್ದರು.

'ಯಾವ ನೈತಿಕತೆ ಮೇಲೆ ಅಶೋಕ್ ಹಾರನಹಳ್ಳಿ ಸ್ಪರ್ಧೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹಕಾರಿ ಬ್ಯಾಂಕಿನ ವಂಚನೆ ಪ್ರಕರಣಗಳ ಆರೋಪಿಗಳ ಪರ ವಕಾಲತ್ತು ವಹಿಸಿರುವ ವಕೀಲ ಅಶೋಕ್ ಹಾರನಹಳ್ಳಿ ಅವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಯಾವ ನೈತಿಕತೆಯ ಮೇಲೆ ಸ್ಪರ್ಧಿಸುತ್ತಿದ್ದಾರೆ' ಎಂದು ಬ್ರಾಹ್ಮಣ ಸಮಾಜದ ಮುಖಂಡ ಶಂಕರ್ ಗುಹಾ ದ್ವಾರಕನಾಥ್ ಪ್ರಶ್ನಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಲೆನಾಡು ಎಜುಕೇಷನಲ್ ಟ್ರಸ್ಟ್ ವಿಷಯವಾಗಿ ಅಶೋಕ್ ಹಾರನಹಳ್ಳಿ ಅವರೂ ಸೇರಿದಂತೆ ಆರು ಮಂದಿ ಸದಸ್ಯರ ಮೇಲೆ ಪ್ರಕರಣ ದಾಖಲಿಸುವಂತೆ ಹಾಸನದ ಸಿವಿಲ್ ಕೋರ್ಟ್ ಆದೇಶಿಸಿದೆ. ಆದರೆ, ಮಹಾಸಭಾ ಚುನಾವಣೆಯ ಅಖಾಡಕ್ಕಿಳಿಯಲು ಅಶೋಕ್ ಅವರು ಏರ್ಪಡಿಸಿರುವ ಬೃಹತ್ ಸಭೆಯಲ್ಲಿ ಶಾಸಕ ರವಿಸುಬ್ರಹ್ಮಣ್ಯ ಅವರು ಉಪಸ್ಥಿತರಿರುವುದು ಹಲವು ಅನುಮಾನಗಳನ್ನು ಹುಟ್ಟುಹಾಕಿದೆ' ಎಂದರು.

'ವಸಿಷ್ಠ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವಂಚನೆ ಪ್ರಕರಣದ ಆರೋಪ ಹೊತ್ತಿರುವ ಅಂದಿನ ಮಹಾಸಭಾದ ಅಧ್ಯಕ್ಷ ವೆಂಕಟನಾರಾಯಣ ಅವರು ಯಾವ ನೈತಿಕತೆಯ ಕಾರಣಕ್ಕಾಗಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಯಿತೋ, ಅದೇ ನೈತಿಕತೆ ಅಶೋಕ್ ಅವರಿಗೆ ಅನ್ವಯಿಸುವುದಿಲ್ಲವೇ' ಎಂದೂ ಪ್ರಶ್ನಿಸಿದರು.

'ಬಸವನಗುಡಿ ಕ್ಷೇತ್ರದ ಬಹುತೇಕ ಬ್ರಾಹ್ಮಣರ ಕಣ್ಣೀರಿಗೆ ಕಾರಣರಾದ ಗುರುರಾಘವೇಂದ್ರ ಕೋ-ಆಪರೇಟಿವ್ ಬ್ಯಾಂಕ್‌ನ ಅತಿದೊಡ್ಡ ಸುಸ್ತಿದಾರ ರಘುನಾಥ್ ಪರ ಅಶೋಕ್ ಅವರು ವಕಾಲತ್ತು ವಹಿಸಿದ್ದು, ಇವರ ಬೆಂಬಲಕ್ಕೆ ಶಾಸಕ ಹಾಗೂ ಸಂಸದ ನಿಂತಿರುವುದು ಖಂಡನೀಯ. ಇದರ ಹಿಂದೆ ದೊಡ್ಡ ಪಿತೂರಿ ನಡೆದಿದೆ' ಎಂದು ಅನುಮಾನ ವ್ಯಕ್ತಪಡಿಸಿದರು.

'ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಸ್ಥಾನವನ್ನು ದುರುಪಯೋಗಪಡಿಸಿಕೊಂಡು, ವೆಂಕಟನಾರಾಯಣ ಮತ್ತು ಅವರ ತಂಡ ವಂಚನೆ ಪ್ರಕರಣಗಳನ್ನು ಮುಚ್ಚಿಹಾಕಲು ತಂತ್ರಗಾರಿಕೆ ರೂಪಿಸಿರುವ ಸಂಶಯ ಮೂಡುತ್ತಿದೆ' ಎಂದೂ ಆರೋಪಿಸಿದರು.

ಅರ್ಥಹೀನ ಆರೋಪ: ಹಾರನಹಳ್ಳಿ

'ನಾನು ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಕಾರಣಕ್ಕೆ ನನ್ನ ಮೇಲೆ ಸುಳ್ಳು ಆರೋಪಗಳನ್ನು ಮಾಡಲಾಗುತ್ತಿದ್ದು, ಅವೆಲ್ಲವೂ ಅರ್ಥಹೀನ' ಎಂದು ಅಶೋಕ ಹಾರನಹಳ್ಳಿ ಪ್ರತಿಕ್ರಿಯಿಸಿದ್ದಾರೆ.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ನಾನು ನನ್ನ ವಕೀಲ ವೃತ್ತಿಯನ್ನು ನಿರ್ವಹಿಸಿದ್ದೇನೆ ಅಷ್ಟೇ. ಸರಿ–ತಪ್ಪುಗಳನ್ನು ನಿರ್ಧರಿಸಿ, ತೀರ್ಪು ನೀಡುವುದು ನ್ಯಾಯಾಲಯ. ಬ್ರಾಹ್ಮಣ ಮಹಾಸಭಾದ ಚುನಾವಣೆಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ' ಎಂದು ಸ್ಪಷ್ಟಪಡಿಸಿದರು.

ಟೈಲರ್ ಸಾವು

ಬೆಂಗಳೂರು: ಬಾಗಲಗುಂಟೆಯ ಯೂರೊ ಕ್ಲೋತಿಂಗ್ ಗಾರ್ಮೆಂಟ್ಸ್ (ಇ.ಸಿ.ಜಿ) ಕಾರ್ಖಾನೆಯಲ್ಲಿ ಟೈಲರ್ ಆಗಿ ಕೆಲಸ ಮಾಡುತ್ತಿದ್ದ ಉಮಾಶ್ರೀ (26) ಎಂಬುವರು ಅನುಮಾನಾಸ್ಪದ ರೀತಿಯಲ್ಲಿ ಕುಸಿದು ಬಿದ್ದು ಮೃತಪಟ್ಟಿದ್ದು, ಕಾರ್ಖಾನೆ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಟಿ. ದಾಸರಹಳ್ಳಿಯ ಕೆಂಪೇಗೌಡ ನಗರದ ನಿವಾಸಿಯಾಗಿದ್ದ ಉಮಾಶ್ರೀ ಸಾವಿನ ಬಗ್ಗೆ ಪತಿ ಬಾಲಯ್ಯ ದೂರು ನೀಡಿದ್ದಾರೆ. ಅಪರಾಧ ಸಂಚು (ಐಪಿಸಿ 34) ಹಾಗೂ ನಿರ್ಲಕ್ಷ್ಯದಿಂದ ಸಾವನ್ನುಂಟು ಮಾಡಿದ (ಐಪಿಸಿ 306) ಆರೋಪದಡಿ ಕಾರ್ಖಾನೆಯ ವ್ಯವಸ್ಥಾಪಕ ಹಾಗೂ ಆಡಳಿತ ಮಂಡಳಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಂಧವ್ಯ ವೃದ್ಧಿಗೆ ಆಸಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು : ತಂತ್ರಜ್ಞಾನ ಆಧಾರಿತ ಕ್ಷೇತ್ರಗಳಲ್ಲಿ ಸೇವೆ ಒದಗಿಸುವ ಮೂಲಕ ಸಂಯುಕ್ತ ಅರಬ್ ಸಂಸ್ಥಾನದ (ಯುಎಇ) ಜತೆಗಿನ ಸಂಬಂಧ ವೃದ್ಧಿಗೆ ಕರ್ನಾಟಕ ಸರ್ಕಾರ ಉತ್ಸುಕವಾಗಿದೆ ಎಂದು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಶನಿವಾರ ದುಬೈನಲ್ಲಿ ಆರಂಭವಾದ 'ವರ್ಲ್ಡ್ ದುಬೈ ಎಕ್ಸ್‌ಪೋ–2020' ಮೇಳದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಕರ್ನಾಟಕ ನವೋದ್ಯಮಗಳ ತೊಟ್ಟಿಲು. ಹಲವು ಕ್ಷೇತ್ರಗಳಲ್ಲಿನ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಶಕ್ತಿ ರಾಜ್ಯಕ್ಕಿದೆ. ಯುಎಇಯಲ್ಲಿ ಸಾಗಣೆ, ಆರೋಗ್ಯ ಸೇವೆ, ತ್ಯಾಜ್ಯ ನಿರ್ವಹಣೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನೆರವು ನೀಡುವ ಸಾಮರ್ಥ್ಯ ರಾಜ್ಯದ ನವೋದ್ಯಮಗಳಿಗೆ ಇದೆ' ಎಂದರು.

ಕರ್ನಾಟಕದಲ್ಲಿ ಹೂಡಿಕೆಗೆ ಹೆಚ್ಚು ಅವಕಾಶಗಳಿವೆ. ಯುಎಇ ಉದ್ಯಮಿಗಳು ಈ ಅವಕಾಶವನ್ನು ಬಳಸಿಕೊಳ್ಳಬೇಕು. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಅನಿಮೇಷನ್ ಸೇರಿದಂತೆ ಹಲವು ಕ್ಷೇತ್ರಗಳಿಗೆ ರಾಜ್ಯ ಸರ್ಕಾರ ಪ್ರತ್ಯೇಕ ನೀತಿಗಳನ್ನು ಜಾರಿಗೊಳಿಸಿದೆ. ರಾಜ್ಯಕ್ಕೆ ಬರುವ ಹೂಡಿಕೆದಾರರಿಗೆ ಆಕರ್ಷಕ ಸೌಲಭ್ಯ ಮತ್ತು ಪ್ರೋತ್ಸಾಹ ನೀಡಲಾಗುವುದು ಎಂದು ಆಹ್ವಾನ ನೀಡಿದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ, ಕೈಮಗ್ಗ ನಿಗಮದ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ, ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಿ. ರೂಪಾ ಮೌದ್ಗಿಲ್, ಕೈಗಾರಿಕಾ ಇಲಾಖೆ ನಿರ್ದೇಶಕಿ ಮೀನಾ ನಾಗರಾಜ್, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎನ್. ಶಿವಶಂಕರ್ ನಿಯೋಗದಲ್ಲಿದ್ದರು.

ದುಬೈನಲ್ಲಿ ಶನಿವಾರ ಆರಂಭವಾದ 'ದುಬ್ಐ ವರ್ಲ್ಡ್ ಎಕ್ಸ್‌ಪೋ–2020'ರಲ್ಲಿ ಪಾಲ್ಗೊಂಡಿರುವ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಿ. ರೂಪಾ ಮೌದ್ಗಿಲ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ, ಉದ್ಯಮಿ ಕ್ರಿಸ್ ಗೋಪಾಲಕೃಷ್ಣನ್, ಐ.ಟಿ ಮತ್ತು ಬಿ.ಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ಕೆಐಎಡಿಬಿ ಸಿಇಒ ಎನ್. ಶಿವಶಂಕರ್ ನೇತೃತ್ವದ ನಿಯೋಗ ಮಳಿಗೆಯೊಂದರ ಬಳಿ ಮಾಹಿತಿ ಪಡೆಯುತ್ತಿರುವುದು

ಉಗ್ರರ ದಾಳಿ: ನಾಗರಿಕರ ಸಾವು

ಶ್ರೀನಗರ: ಶಂಕಿತ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಶ್ರೀನಗರದ ಸಫಾ ಕದಲ್‌ನಲ್ಲಿ ಸಂಜೆ 6.45ಕ್ಕೆ ನಡೆದ ದಾಳಿ ವೇಳೆ ಬಿಹಾರದ ಅರವಿಂದ್ ಕುಮಾರ್ ಶಾ ಮೃತಪಟ್ಟಿದ್ದಾರೆ. ಕೆಲ ಸಮಯದ ಬಳಿಕ ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲೆಯಲ್ಲಿ ನಡೆದ ದಾಳಿಯಲ್ಲಿ ಉತ್ತರ ಪ್ರದೇಶದ ಸಗೀರ್ ಅಹಮದ್ ಎಂಬುವವರು ಸಾವಿಗೀಡಾಗಿದ್ದಾರೆ. ಸೇನೆಯು ಶಂಕಿತ ಉಗ್ರರಿಗಾಗಿ ಕಾರ್ಯಾಚರಣೆ ಆರಂಭಿಸಿದೆ.

ಎಸ್.ಎಲ್. ಭೈರಪ್ಪ ಅವರ ಕಾದಂಬರಿ ಆಧಾರಿತ ನಾಟಕ

ಮೈಸೂರಿನಿಂದ ಬೆಂಗಳೂರಿಗೆ 'ಪರ್ವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಎಸ್.ಎಲ್. ಭೈರಪ್ಪ ಅವರ ಕಾದಂಬರಿ ಆಧರಿತ 'ಪರ್ವ' ನಾಟಕದ ಪ್ರದರ್ಶನವನ್ನು ಇದೇ 23 ಮತ್ತು 24ರಂದು ಇಲ್ಲಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮೈಸೂರು ರಂಗಾಯಣ ಆಯೋಜಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, '43 ವರ್ಷ ಹಳೆಯ ಕಾದಂಬರಿಯನ್ನು ರಂಗರೂಪಕ್ಕೆ ಅಳವಡಿಸಲಾಗಿದೆ. ಕೋವಿಡ್ ಕಾಲಘಟ್ಟದಲ್ಲಿ ರೂಪುಗೊಂಡಿರುವ ಈ ನಾಟಕಕ್ಕೆ ಮೈಸೂರಿನಲ್ಲಿ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಲ್ಲಿ ಏರ್ಪಡಿಸಿದ್ದ 16 ಪ್ರದರ್ಶನಗಳನ್ನು 6 ಸಾವಿರ ಮಂದಿ ವೀಕ್ಷಿಸಿದ್ದಾರೆ. ಮುಂದುವರಿದ ರಂಗ ಪ್ರಯೋಗದ ಮೊದಲ ಹೆಜ್ಜೆಯಾಗಿ ಈಗ ಬೆಂಗಳೂರಿನಲ್ಲಿ ಪ್ರದರ್ಶನ ಮಾಡಲಾಗುತ್ತಿದೆ' ಎಂದರು.

'ಕಲಾವಿದರು ಸೇರಿದಂತೆ 60 ಮಂದಿಯ ತಂಡವು ಈ ನಾಟಕವನ್ನು ಸಿದ್ಧಪಡಿಸಿದೆ. ರಂಗಕರ್ಮಿ ಪ್ರಕಾಶ್ ಬೆಳವಾಡಿ ನಿರ್ದೇಶಿಸಿದ್ದಾರೆ. ನಾಟಕ ಸಿದ್ಧತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ₹ 50 ಲಕ್ಷ ಬಿಡುಗಡೆ ಮಾಡಿದೆ. ಒಂದು ವರ್ಷದಿಂದ 35ಕ್ಕೂ ಹೆಚ್ಚು ಕಲಾವಿದರಿಗೆ ಮಾಸಿಕ ಸಂಭಾವನೆ ₹ 38 ಲಕ್ಷ ವೆಚ್ಚ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

ದೇಶದ 5 ಕಡೆ ಪ್ರದರ್ಶನ: 'ಈ ರಂಗಪ್ರಯೋಗ ರಾಜ್ಯ ಹಾಗೂ ದೇಶದ ವಿವಿಧೆಡೆ ಪ್ರದರ್ಶನಗೊಳ್ಳಲಿದೆ. 8 ಗಂಟೆಗಳ ಈ ನಾಟಕದಲ್ಲಿ ಮಧ್ಯಾಹ್ನ ಊಟಕ್ಕೆ ಅರ್ಧಗಂಟೆ ಹಾಗೂ ತಲಾ 10 ನಿಮಿಷಗಳ ಮೂರು ಚಹಾ ವಿರಾಮ ನೀಡಲಾಗುತ್ತದೆ. ಸರ್ಕಾರವು ಘೋಷಿಸಿದ ಅನುದಾನವು ಬಿಡುಗಡೆಯಾದ ಬಳಿಕ ಹೊರ ರಾಜ್ಯಗಳಲ್ಲಿಯೂ ಪ್ರದರ್ಶನ ನೀಡಲಾಗುತ್ತದೆ. ವಾರಾಣಸಿ, ಗುಜರಾತ್, ದೆಹಲಿ, ಮುಂಬೈ ಹಾಗೂ ಚಂಡೀಗಡದಲ್ಲಿ ಪ್ರದರ್ಶನಕ್ಕೆ ಯೋಜನೆ ರೂಪಿಸಲಾಗಿದೆ' ಎಂದು ಅಡ್ಡಂಡ ಸಿ. ಕಾರ್ಯಪ್ಪ ವಿವರಿಸಿದರು.

ರಂಗ ನಟ, ನಿರ್ದೇಶಕ ಬಿ.ವಿ. ರಾಜಾರಾಮ್, 'ಪರ್ವ ಕಾದಂಬರಿಯನ್ನು ಓದಿದರೂ ನಾಟಕ ವೀಕ್ಷಿಸಿದಾಗ ಅದರ ಮಹತ್ವವು ಧ್ವನಿಪೂರ್ಣವಾಗಿ ತಲುಪಲಿದೆ. ಅನೇಕ ಪಾತ್ರಗಳಲ್ಲಿನ ಅಂತರಂಗದ ಮಾತುಗಳನ್ನು ಕೇಳಬಹುದಾಗಿದೆ' ಎಂದು ಹೇಳಿದರು.

'ಪರ್ವ' ನಾಟಕದ ದೃಶ್ಯ

'ಪರ್ವ' ನಾಟಕವು ರಾಷ್ಟ್ರ ಮಟ್ಟದಲ್ಲಿ ಪ್ರದರ್ಶನ ಕಾಣಲಿದೆ. ಇದಕ್ಕಾಗಿ ₹1 ಕೋಟಿ ಅನುದಾನ ಬಿಡುಗಡೆಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ

ಎಸ್. ರಂಗಪ್ಪ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ

ನಗರದಲ್ಲಿ ಎರಡು ಪ್ರದರ್ಶನ

ನಾಟಕ ಪ್ರಸ್ತುತಿ: ರಂಗಾಯಣ ಮೈಸೂರು
ನಾಟಕ ನಿರ್ದೇಶನ: ಪ್ರಕಾಶ್ ಬೆಳವಾಡಿ
ಪ್ರದರ್ಶನದ ಅವಧಿ: ಬೆಳಿಗ್ಗೆ 10ರಿಂದ ಸಂಜೆ 6
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ
ಟಿಕೆಟ್ ದರ: ₹ 500, ₹ 250
ಟಿಕೆಟ್ ದೊರೆಯುವ ಸ್ಥಳ: ರವೀಂದ್ರ ಕಲಾಕ್ಷೇತ್ರ ಕೌಂಟರ್ ಹಾಗೂ ಆನ್‌ಲೈನ್ ಕೊಂಡಿ: www.rangayana.org
ಸಂಪರ್ಕ ಸಂಖ್ಯೆ: 9449679780, 9341493458

'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಗ್ರಾಮ ವಾಸ್ತವ್ಯಕ್ಕೆ ಸಿ.ಎಂ ಬೊಮ್ಮಾಯಿ ಚಾಲನೆ

ಸರ್ಕಾರದ ಯೋಜನೆ ಜ.26ರಿಂದ ಮನೆ ಬಾಗಿಲಿಗೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಸರ್ಕಾರ ವಿಧಾನಸೌಧದಲ್ಲಿ ಇರುವುದಲ್ಲ, ಜನರ ಬಳಿಗೇ ಬರಬೇಕು. ಆದ್ದರಿಂದ ಸರ್ಕಾರದ ಸೌಲಭ್ಯಗಳನ್ನು ಜನರ ಮನೆ ಬಾಗಿಲಿಗೆ ಒಯ್ಯುವ 'ಜನಸೇವಕ' ಕಾರ್ಯಕ್ರಮವನ್ನು ಮುಂದಿನ ಜನವರಿ 26ರಿಂದ ರಾಜ್ಯಾದ್ಯಂತ ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ನ್ಯಾಮತಿ ತಾಲ್ಲೂಕಿನ ಸುರಹೊನ್ನೆ ಮತ್ತು ಹೊನ್ನಾಳಿ ತಾಲ್ಲೂಕಿನ ಕುಂದೂರಿನಲ್ಲಿ 'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಗ್ರಾಮ ವಾಸ್ತವ್ಯ ಕಾರ್ಯಕ್ರಮಕ್ಕೆ ಶನಿವಾರ ಚಾಲನೆ ನೀಡಿ ಮಾತನಾಡಿದರು.

'ನಿಮ್ಮ ರೇಷನ್ ನಿಮ್ಮ ಮನೆ ಬಾಗಿಲಿಗೆ ತಲುಪಲಿದೆ. ನೀವು ರೇಷನ್ ಹುಡುಕಿಕೊಂಡು ಹೋಗಬಾರದು. ಸಾಮಾಜಿಕ ಭದ್ರತೆಯ ಯೋಜನೆಗಳು, ಆರೋಗ್ಯ ತಪಾಸಣೆ ಹೀಗೆ ಎಲ್ಲವೂ ನಿಮ್ಮ ಮನೆಯಲ್ಲೇ ಆಗಬೇಕು. ಜಿಲ್ಲಾಧಿಕಾರಿ, ತಹಶೀಲ್ದಾರ್‌ರಿಂದ ಹಿಡಿದು ಎಲ್ಲರೂ ನಿಮ್ಮಲ್ಲಿಗೆ ಬರಬೇಕು' ಎಂದು ಅವರು ಹೇಳಿದರು.

ಹೊನ್ನಾಳಿ ತಾಲ್ಲೂಕಿನ ಕುಂದೂರಿನಲ್ಲಿ ಕಂದಾಯ ಸಚಿವ ಆರ್‌. ಅಶೋಕ, ಜಿಲ್ಲಾಧಿಕಾರಿ ಮತ್ತು ಇತರ ಅಧಿಕಾರಿಗಳ ಗ್ರಾಮವಾಸ್ತವ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಲು ಬಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸ್ಥಳೀಯ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ಎತ್ತಿನ ಗಾಡಿಯಲ್ಲಿ ಕರೆದುಕೊಂಡು ಬಂದರು.

ಪ್ರಜಾವಾಣಿ ಚಿತ್ರ– ಸತೀಶ ಬಡಿಗೇರ್

ಸಿ.ಎಂ ಹುದ್ದೆ ಚರ್ಚೆ

ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿಯೇ ಮುಂದಿನ ಚುನಾವಣೆ ನಡೆಯಲಿದೆ ಎಂದು ಆರಂಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಏಕಾಏಕಿ ಈ ಬಗ್ಗೆ ಮಾತನಾಡಿದರು. ಬಳಿಕ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅದನ್ನು ಮುಂದುವರಿಸಿದರು. 'ರಾಜ್ಯಕ್ಕೆ ಬಯಸದೇ ಬಂದ ಭಾಗ್ಯ ಬಸವರಾಜ ಬೊಮ್ಮಾಯಿ. ಅವರಿಗೆ ನಮ್ಮ ಪೂರ್ಣ ಬೆಂಬಲ ಇದೆ. ಮುಂದಿನ ಒಂದೂವರೆ ವರ್ಷ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ' ಎಂದು ತಿಳಿಸಿದರು.

ಸಚಿವ ಆರ್. ಅಶೋಕ ಅವರು ಈ ಚರ್ಚೆಯನ್ನು ಇನ್ನಷ್ಟು ಮುಂದಕ್ಕೆ ಒಯ್ದರು. 'ಮುಂದಿನ ಒಂದೂವರೆ ವರ್ಷ ಮಾತ್ರವಲ್ಲ, ಅದರ ನಂತರದ ಚುನಾವಣೆಯ ಬಳಿಕ ಸರ್ಕಾರವೂ ಬಸವರಾಜ ಬೊಮ್ಮಾಯಿ ನಾಯಕತ್ವದಲ್ಲಿ-ಯೇ ಇರುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒತ್ತುವರಿ ತಡೆಗೆ ಕ್ರಮ: ತಹಶೀಲ್ದಾರ್

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಒತ್ತುವರಿ ಆಗಿರುವ ಜಾಗಗಳನ್ನು ಕಾನೂನು ಪ್ರಕಾರ ಉಳಿಸುವ ಹಾಗೂ ಮುಂದೆ ಒತ್ತುವರಿ ಆಗದಂತೆ ತಡೆಯುವ ಕ್ರಮ ವಹಿಸಲಾಗುವುದು' ಎಂದು ಬೆಂಗಳೂರು ಪೂರ್ವ ತಾಲ್ಲೂಕಿನ ವಿಶೇಷ ತಹಶೀಲ್ದಾರ್ ನಾಗಪ್ರಶಾಂತ್ ತಿಳಿಸಿದರು.

ಪೂರ್ವ ತಾಲ್ಲೂಕಿನ ಬಿದರಹಳ್ಳಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಜಿಲ್ಲಾಧಿಕಾರಿಗಳ ನಡೆ-ಹಳ್ಳಿಯ ಕಡೆ' ಕಾರ್ಯಕ್ರಮದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

'ರಾಜ್ಯದಲ್ಲೇ ಮೊದಲ ಬಾರಿಗೆ 1,100 ಎಕರೆ ಭೂಮಿಯನ್ನು ಅನಧಿಕೃತ ಬಡಾವಣೆಗಳೆಂದು ಬೆಂಗಳೂರು ನಗರ ಜಿಲ್ಲೆಯಲ್ಲಿ ಗುರುತಿಸಲಾಗಿದೆ. ನಿವೇಶನ ಖರೀದಿಸುವವರು ಎಚ್ಚರಿಕೆಯಿಂದ ಇರಬೇಕು' ಎಂದರು.

'ರೈತರು ಬೆಳೆ ಸಮೀಕ್ಷೆ ಮಾಡಿಸಬೇಕು. ಇಲ್ಲದಿದ್ದರೆ, ತುಂಬಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಮೀಕ್ಷೆಯಿಂದ ಸರ್ಕಾರದ ಸವಲತ್ತುಗಳನ್ನು ವಿತರಿಸಲು ಹಾಗೂ ದಾಖಲೆ ಇಟ್ಟುಕೊಳ್ಳಲು ಸುಲಭವಾಗುತ್ತದೆ' ಎಂದು ಹೇಳಿದರು.

ಹಲವಾರು ವರ್ಷಗಳ ಹಿಂದೆ ರಸ್ತೆಗಾಗಿ ಬಿಡಿಎ ರೈತರ ಸಾವಿರಾರು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದೆ. ಆದರೆ, ಅಧಿಕಾರಿಗಳು ಅದನ್ನು ಪಹಣಿಯಲ್ಲಿ ನಮೂದಿಸಿದ್ದಾರೆಯೇ ಹೊರತು ಯಾವುದೇ ಅಭಿವೃದ್ಧಿ ಮಾಡಿಲ್ಲ, ಪರಿಹಾರವನ್ನೂ ನೀಡಲಿಲ್ಲ' ಎಂದು ಸ್ಥಳೀಯ ಮುಖಂಡ ಗಣೇಶ್ ದೂರಿದರು.

ಬಿದರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವರುಣ್, 'ಜಿಲ್ಲಾಧಿಕಾರಿ ಅವರು ಬಂದಿದ್ದರೆ ಕೆಲವು ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಬಹುದಿತ್ತು. ಸಾರ್ವಜನಿಕರಿಗೆ ಜಿಲ್ಲಾಧಿಕಾರಿಗಳ ಗೈರು ಹಾಜರಿಯಿಂದಾಗಿ ನಿರಾಸೆಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಗ್ರಾಮ ವಾಸ್ತವ್ಯಕ್ಕೆ ವಿಶೇಷ ತಹಶೀಲ್ದಾರ್ ನಾಗಪ್ರಶಾಂತ್ ಅವರನ್ನು ಗ್ರಾಮಸ್ಥರು ಬಂಡಿಯಲ್ಲಿ ಬರಮಾಡಿಕೊಂಡರು. ಬಿದರಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಸುಜಾತ, ಉಪ ತಹಶೀಲ್ದಾರ್ ಸುರೇಶ್ ಭೂ ನ್ಯಾಯ ಮಂಡಳಿ ಸದಸ್ಯ ಮಧುಕುಮಾರ್, ಕಾರ್ಯನಿರ್ವಹಣಾಧಿಕಾರಿ ಮಂಜುನಾಥ್ ಹಾಗೂ ಇತರರು ಇದ್ದರು.

'ಅಲ್ಪಸಂಖ್ಯಾತರ ಮತಕ್ಕಾಗಿ ಆರ್‌ಎಸ್‌ಎಸ್ ಟೀಕೆ'

ಪ್ರಜಾವಾಣಿ ವಾರ್ತೆ

ಆರಗ ಜ್ಞಾನೇಂದ್ರ

ಬೆಂಗಳೂರು: ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಮತ್ತು ಎಚ್‌.ಡಿ. ಕುಮಾರಸ್ವಾಮಿ ಅಲ್ಪಸಂಖ್ಯಾತರ ಮತಗಳಿಗಾಗಿ ಹಲ್ಲು ಗಿಂಜುತ್ತಿದ್ದಾರೆ. ಅದೇ ಉದ್ದೇಶದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿರುದ್ಧ ಟೀಕೆ ಮಾಡುತ್ತಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಚೇರಿ ಜಗನ್ನಾಥ ಭವನದಲ್ಲಿ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಭಾನುವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ಅಲ್ಪಸಂಖ್ಯಾತರ ಮತ ಪಡೆಯಲು ಮಾಜಿ ಮುಖ್ಯಮಂತ್ರಿಗಳಿಬ್ಬರೂ ಸ್ಪರ್ಧೆಗಿಳಿದಿದ್ದಾರೆ. ಅವರಿಬ್ಬರ ಉದ್ದೇಶ ಎಲ್ಲರಿಗೂ ಗೊತ್ತಿದೆ. ಆರ್‌ಎಸ್‌ಎಸ್ ಜಗತ್ತಿನ ಅತಿದೊಡ್ಡ ಸ್ವಯಂಸೇವಾ ಸಂಘಟನೆ. ಇದು ಅವರಿಗೂ ಗೊತ್ತು. ಆದರೆ, ಮತಕ್ಕಾಗಿ ಟೀಕಿಸುತ್ತಿದ್ದಾರೆ' ಎಂದು ಆರಗ ಜ್ಞಾನೇಂದ್ರ ಅವರು ಹೇಳಿದರು.

1ರಿಂದ 5ನೇ ತರಗತಿ ಮಕ್ಕಳಿಗೆ ಶಾಲೆ ಆರಂಭ: ಎರಡು ದಿನದಲ್ಲಿ ನಿರ್ಧಾರ

ಬೆಂಗಳೂರು: ಒಂದರಿಂದ ಐದನೇ ತರಗತಿವರೆಗಿನ ಮಕ್ಕಳಿಗೆ ಭೌತಿಕ ತರಗತಿ ಆರಂಭಿಸುವ ಕುರಿತು ಎರಡು ದಿನದಲ್ಲಿ ನಿರ್ಧರಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ತರಗತಿ ಆರಂಭಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆಯುವ ಉನ್ನತ ಮಟ್ಟದ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

'ಸೌಲಭ್ಯ ಸಕಾಲದಲ್ಲಿ ತಲುಪಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ಸವಲತ್ತುಗಳನ್ನು ಸಾರ್ವಜನಿಕರಿಗೆ ಸಕಾಲದಲ್ಲಿ ಒದಗಿಸಬೇಕು' ಎಂದು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ಆನೇಕಲ್ ತಾಲ್ಲೂಕಿನ ಹುಸ್ಕೂರು ಗ್ರಾಮ ಪಂಚಾಯಿತಿಯಲ್ಲಿ ಹಮ್ಮಿಕೊಂಡಿದ್ದ 'ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. 'ಕೋವಿಡ್‌ನಿಂದಾಗಿ ಸ್ಥಗಿತಗೊಂಡಿದ್ದ ಈ ಕಾರ್ಯಕ್ರಮವನ್ನು ಸರ್ಕಾರದ ನಿರ್ದೇಶನದಂತೆ ಮುಂದುವರಿಸಲಾಗಿದೆ. ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ ಸ್ಥಳದಲ್ಲೇ ಪರಿಹಾರ ಒದಗಿಸಲಾಗುವುದು' ಎಂದರು.

'ಪಿ.ಎಂ ಕಿಸಾನ್ ಯೋಜನೆಯಡಿ ₹10 ಸಾವಿರ ಧನಸಹಾಯ ನೀಡಲಾಗುತ್ತಿದ್ದು, ಇದರ ಸದುಪಯೋಗಪಡಿಸಿಕೊಳ್ಳಲು ರೈತರಿಗೆ ನೋಂದಣಿ ಮಾಡಿಸಿಕೊಳ್ಳುವಂತೆ ಅರಿವು ಮೂಡಿಸಬೇಕು' ಎಂದು ಅವರು ಹೇಳಿದರು.

ಫಲಾನುಭವಿಗಳಿಗೆ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಸಂಧ್ಯಾ ಸುರಕ್ಷಾ ಯೋಜನೆ ಆದೇಶ ಪತ್ರ ವಿತರಿಸಿದರು

'ಫ್ರುಟ್ಸ್ ಪೋರ್ಟಲ್‌ನಲ್ಲಿ ಆನೇಕಲ್ ತಾಲ್ಲೂಕಿನ ಶೇ 46ರಷ್ಟು ರೈತರು ಮಾತ್ರ ನೊಂದಾಯಿಸಿಕೊಂಡಿದ್ದಾರೆ. ಉಳಿದ ರೈತರು ಶೀಘ್ರ ನೋಂದಾಯಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಆರು ಫಲಾನುಭವಿಗಳಿಗೆ ಸಂಧ್ಯಾ ಸುರಕ್ಷಾ ಯೋಜನೆ, ನಾಲ್ವರು ಫಲಾನುಭವಿಗಳಿಗೆ ನಿರ್ಗತಿಕ ವಿಧವಾ ವೇತನ ಮತ್ತು ಇಂದಿರಾ ಗಾಂಧಿ ವೃದ್ಧಾಪ್ಯ ವೇತನ ಹಾಗೂ ಮನಸ್ವಿನಿ ಪಿಂಚಣಿ ಆದೇಶ ಪತ್ರ ವಿತರಿಸಲಾಯಿತು.

ಆನೇಕಲ್ ತಾಲ್ಲೂಕಿನ ತಹಶೀಲ್ದಾರ್ ಪಿ. ದಿನೇಶ್, ಮುಖ್ಯ ಎಂಜಿನಿಯರ್ ಲಕ್ಷ್ಮೀನಾರಾಯಣ್, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಪಾಪಮ್ಮ, ಉಪಾಧ್ಯಕ್ಷರಾದ ಎನ್. ಮುನಿರತ್ನಮ್ಮ ಇದ್ದರು.

ಜಿಲ್ಲಾಧಿಕಾರಿ ನಡೆ–ಹಳ್ಳಿ ಕಡೆ: ರೈತರ ಅಡ್ಡಿ

ಕೆಂಗೇರಿ: 'ಸ್ವಾಧೀನ ಪಡಿಸಿ ಕೊಂಡಿರುವ ಭೂಮಿಗೆ ಸೂಕ್ತ ಬೆಲೆ ನೀಡಬೇಕು' ಎಂದು ಒತ್ತಾಯಿಸಿ ಇಲ್ಲಿನ ಗೋಣಿಪುರ ಹಾಗೂ ತಿಟ್ಟಹಳ್ಳಿ ಸುತ್ತಮುತ್ತಲ ರೈತರು 'ಜಿಲ್ಲಾಧಿಕಾರಿ ನಡೆ–ಹಳ್ಳಿಯ ಕಡೆ' ಕಾರ್ಯಕ್ರಮಕ್ಕೆ ಅವಕಾಶ ನೀಡದೆ, ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಅವರನ್ನು ಶನಿವಾರ ವಾಪಸ್ ಕಳುಹಿಸಿದರು.

ಕಾರ್ಯಕ್ರಮದ ಅಂಗವಾಗಿ ಉಪವಿಭಾಗಾಧಿಕಾರಿ ಶಿವಣ್ಣ ಹಾಗೂ ತಹಶೀಲ್ದಾರ್ ರಾಮಲಕ್ಷಣ ಅವರು ಗೋಣಿಪುರಕ್ಕೆ ಶನಿವಾರ ಆಗಮಿಸಿದ್ದರು.

ಈ ವೇಳೆ ಸ್ಥಳಕ್ಕೆ ಆಗಮಿಸಿದ ಭೂ ಸ್ವಾಧೀನಗೊಂಡ ರೈತರು,' ಬಿಡದಿ ಟೌನ್‌ಶಿಪ್‌ಗಾಗಿ ವಶಪಡಿಸಿ ಕೊಂಡಿರುವ ಗೊಲ್ಲಹಳ್ಳಿ, ಗೋಣಿ ಪುರ, ತಿಟ್ಟಹಳ್ಳಿ, ಚಿನ್ನಕುರ್ಚಿ, ಪಿಳ್ಳಯ್ಯನಪಾಳ್ಯ, ಸೀಗೆಹಳ್ಳಿ ಹಾಗೂ ಸುತ್ತಮುತ್ತಲ ರೈತರ ಜಮೀನಿಗೆ ಕೇವಲ ₹41 ಲಕ್ಷ ನಿಗದಿ ಮಾಡಲಾಗಿದೆ. ಮಾರುಕಟ್ಟೆ ಮೌಲ್ಯ ಆಧರಿಸಿ ದರ ನಿಗದಿ ಮಾಡ ಬೇಕು' ಎಂದು ಆಗ್ರಹಿಸಿದರು.

'ಎಕರೆಗೆ ₹2 ಕೋಟಿ ಪರಿಹಾರ ನೀಡಬೇಕು. ಜಿಲ್ಲಾಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಕೂಡಲೇ ಮಧ್ಯ ಪ್ರವೇಶಿಸಿ, ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಒತ್ತಾಯಿಸಿದರು.

'ಖೇಣಿ ಹಾಗೂ ಅವರ ಬೆಂಬಲಿಗರಿಂದ ರೈತರ ಜಮೀನಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ. ಪರಿಹಾರ ಮೊತ್ತ ಪಡೆಯಲು ರೈತರು ಹರಸಾಹಸ ಪಡುತ್ತಿದ್ದಾರೆ. ಕೆಲ ಅಧಿಕಾರಿಗಳು ಈ ಮೊತ್ತದಲ್ಲೂ ಪಾಲು ಕೇಳುತ್ತಿದ್ದಾರೆ' ಎಂದು ದೂರಿದರು.

ಕಾರ್ಯಕ್ರಮಕ್ಕೆ ರೈತರು ಅವಕಾಶ ನೀಡದ ಕಾರಣ ಕಾರ್ಯಕ್ರಮವನ್ನು ಮುಂದೂಡಿ ಅಧಿಕಾರಿಗಳು ಅಲ್ಲಿಂದ ನಿರ್ಗಮಿಸಿದರು.

'ಮುಸ್ಲಿಂ ನಾಯಕರ ಮುಗಿಸುತ್ತಿರುವ ಸಿದ್ದರಾಮಯ್ಯ'

ಪ್ರಜಾವಾಣಿ ವಾರ್ತೆ

ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: 'ಅಲ್ಪಸಂಖ್ಯಾತರ ಕಲ್ಯಾಣದ ಪೇಟೆಂಟ್ ತೆಗೆದುಕೊಂಡವರಂತೆ ಪೋಸು ಕೊಡುವ ಸಿದ್ದರಾಮಯ್ಯ, ಕಾಂಗ್ರೆಸ್‌ನಲ್ಲಿರುವ ಮುಸ್ಲಿಂ ನಾಯಕರನ್ನು ರಾಜಕೀಯವಾಗಿ ಮುಗಿಸುತ್ತಿದ್ದಾರೆ. ಅವರೀಗ ಅಲ್ಪಸಂಖ್ಯಾತ ನಾಯಕತ್ವವನ್ನು ಕೊನೆಗಾಣಿಸುತ್ತಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಶನಿವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಅಹಿಂದ ಎಂದು ಜನರನ್ನು ಅಡ್ಡದಾರಿ ಹಿಡಿಸಿದ 'ಸಿದ್ಧಹಸ್ತ ಶೂರ'ರು ತಮ್ಮ ಪಕ್ಷದಲ್ಲೇ ಮುಸ್ಲಿಂ ನಾಯಕರನ್ನು ಒಬ್ಬೊಬ್ಬರನ್ನಾಗಿ ಗುರಿ ಇಟ್ಟು, ಮುಗಿಸಿದರು. ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡು, ನಂಬಿ ಅಧಿಕಾರ ಕೊಟ್ಟ ಪಕ್ಷದ ಕತ್ತನ್ನೇ ಕೊಯ್ಯುವ ಅವರ ಒಳ ರಾಜಕಾರಣಕ್ಕೆ ಬಲಿಯಾದ ಅಲ್ಪಸಂಖ್ಯಾತ ನಾಯಕರ ದೊಡ್ಡ ಪಟ್ಟಿಯೇ ಇದೆ. ಅಲ್ಪಸಂಖ್ಯಾತ ನಾಯಕತ್ವ ಕೊನೆಗಾಣಿಸಲು ಯಾರು ಕಾರಣ ಎಂಬುದು ಜನರಿಗೆ ಗೊತ್ತಾಗಲಿ' ಎಂದು ಹೇಳಿದ್ದಾರೆ.

2012ರ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಇಕ್ಬಾಲ್ ಅಹಮದ್ ಸರಡಗಿ ಅವರನ್ನು ಸೋಲಿಸಿ, ಪಕ್ಷೇತರರಾಗಿ ಸ್ಪರ್ಧಿಸಿದ ಬೈರತಿ ಸುರೇಶ್ ಗೆಲ್ಲಿಸಲು 'ಸಿದ್ದ ಸೂತ್ರ' ಹೆಣೆದಿದ್ದು ಯಾರು? 2016ರಲ್ಲಿ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಸಿ.ಕೆ. ಜಾಫರ್ ಷರೀಫ್ ಮೊಮ್ಮಗ ರೆಹಮಾನ್ ಷರೀಫ್ ಸೋಲಿಸಲಾಯಿತು. 2023ರ ಚುನಾವಣೆಯಲ್ಲೂ ಬೈರತಿ ಸುರೇಶ್‌ಗೆ ಕಾಂಗ್ರೆಸ್ ಟಿಕೆಟ್ ಖಚಿತ. ಷರೀಫ್ ಮೊಮ್ಮಗನ ಕತೆ ಏನು ಎಂದು ಪ್ರಶ್ನಿಸಿದ್ದಾರೆ. ಆರ್. ರೋಷನ್ ಬೇಗ್ ಕಾಂಗ್ರೆಸ್‌ನಿಂದ ದೂರಾಗುವುದಕ್ಕೂ ಸಿದ್ದರಾಮಯ್ಯ ಕಾರಣ. ಮೈಸೂರಿನಲ್ಲಿ ತನ್ವೀರ್ ಸೇಠ್ ವಿರುದ್ಧವೂ ಸೇಡಿನ ರಾಜಕಾರಣ ಮಾಡುತ್ತಿದ್ದಾರೆ. ಆಡಿಯೊ ಪ್ರಕರಣದಲ್ಲಿ ಮುಸ್ಲಿಂ ಮುಖಂಡ ಸಲೀಂ ಅವರನ್ನು ಬಲಿ ಕೊಡಲಾಗಿದೆ. ಸಲೀಂ ಮಾತುಗಳನ್ನು ಕೇಳಿಸಿಕೊಂಡು ಪುಕ್ಕಟೆ ಮನರಂಜನೆ ಪಡೆದ ಒಬ್ಬ ವ್ಯಕ್ತಿಯನ್ನು ರಕ್ಷಿಸಲಾಗಿದೆ. ಇದು ಯಾವ ಸೀಮೆ ನ್ಯಾಯ ಎಂದು ಕೇಳಿದ್ದಾರೆ.

'ತೊಟ್ಟಿಲನ್ನು ತೂಗುತ್ತಾ, ಮಗುವನ್ನೂ ಚಿವುಟುತ್ತಾ, ಸಾಧ್ಯವಾದರೆ ಮಗುವಿನ ಕತ್ತನ್ನೂ ಕುಯ್ಯುವ ನೀಚ ರಾಜಕಾರಣ ಮುಸ್ಲಿಂ ಬಾಂಧವರಿಗೆ ಈಗ ಗೊತ್ತಾಗಿದೆ. ಚಕ್ರ ತಿರುಗುತ್ತಿದೆ, ನಿಮ್ಮ ಅಂತ್ಯಕಾಲ ಆರಂಭವಾಗಿದೆ. ನಿಮ್ಮ ನಿಜಬಣ್ಣ ಅಲ್ಪಸಂಖ್ಯಾತರಿಗೆ ಗೊತ್ತಾಗಿದೆ. ನಿಮಗೆ ಪಾಠ ಕಲಿಸುವ ಜನತಾ ಪರ್ವ ಆರಂಭವಾಗಿದೆ. ಕಾದು ನೋಡಿ' ಎಂದು ಸಿದ್ದರಾಮಯ್ಯ ಅವರನ್ನುದ್ದೇಶಿಸಿ ಕುಮಾರಸ್ವಾಮಿ ಹೇಳಿದ್ದಾರೆ.

'ಮುಸ್ಲಿಮರಿಗೆ ಸಿ.ಎಂ ಸ್ಥಾನ ಕೊಡುವುದಾಗಿ ಎಚ್‌ಡಿಕೆ ಘೋಷಿಸಲಿ'

ಬೆಂಗಳೂರು: 'ಜೆಡಿಎಸ್ ಅಧಿಕಾರಕ್ಕೆ ಬಂದರೆ ಮುಸ್ಲಿಂ ನಾಯಕರೊಬ್ಬರನ್ನು ಮುಖ್ಯಮಂತ್ರಿ ಮಾಡುತ್ತೇವೆ ಎಂದು ಆ ಪಕ್ಷದ ವರಿಷ್ಠರಾದ ದೇವೇಗೌಡ ಮತ್ತು ಕುಮಾರಸ್ವಾಮಿ ಘೋಷಿಸಲಿ. ಆಗ ನಾವೆಲ್ಲರೂ (ಅಲ್ಪಸಂಖ್ಯಾತರು) ಜೆಡಿಎಸ್ ಬೆಂಬಲಿಸುವ ಬಗ್ಗೆ ಯೋಚನೆ ಮಾಡುತ್ತೇವೆ' ಎಂದು ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್‌ಖಾನ್ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ನಮ್ಮ ಸಮಾಜ ಸಿದ್ದರಾಮಯ್ಯ ಅವರ ಮಾತು ಮಾತ್ರ ಕೇಳುತ್ತದೆ. ಬೇರೆ ಯಾವ ನಾಯಕರ ಮಾತನ್ನೂ ಒಪ್ಪಲ್ಲ. ನನ್ನ ಮಾತನ್ನೂ ಕೇಳಲ್ಲ. ಇದನ್ನು ಕುಮಾರಸ್ವಾಮಿಗೆ ಸಹಿಸಲು ಆಗುತ್ತಿಲ್ಲ. ತಿಪ್ಪರಲಾಗ ಹಾಕಿದರೂ ಕುಮಾರಸ್ವಾಮಿ ಮಾತನ್ನು ನಮ್ಮ ಸಮುದಾಯದವರು ಕೇಳುವುದಿಲ್ಲ' ಎಂದರು.

'ಮುಖ್ಯಮಂತ್ರಿ ಆಗಿದ್ದಾಗ ಕುಮಾರಸ್ವಾಮಿ ಹಜ್ ಯಾತ್ರೆ ಉದ್ಘಾಟನೆಗೆ ಬರಲಿಲ್ಲ. ಯಡಿಯೂರಪ್ಪ, ಡಿ.ವಿ. ಸದಾನಂದಗೌಡ, ಜಗದೀಶ ಶೆಟ್ಟರ್, ಸಿದ್ದರಾಮಯ್ಯ ಬಂದಿದ್ದರು. ಬ್ಯಾಂಕ್ವೆಟ್ ಹಾಲ್‌ನಲ್ಲಿ ಟಿಪ್ಪು ಜಯಂತಿಯನ್ನು ಸಿದ್ದರಾಮಯ್ಯ ಮಾಡುತ್ತಿದ್ದರು. ಆದರೆ, ಕುಮಾರಸ್ವಾಮಿ ರವೀಂದ್ರ ಕಲಾಕ್ಷೇತ್ರದಲ್ಲಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಮುಸ್ಲಿಮರ ಮೇಲೆ ಪ್ರೀತಿ ಇದ್ದಿದ್ದರೆ ಹೀಗೆ ಮಾಡುತ್ತಿರಲಿಲ್ಲ' ಎಂದರು.



ಜಮೀರ್ ಅಹ್ಮದ್ ಖಾನ್

'ಜಾಫರ್ ಷರೀಫ್ ಅವರ ಮೊಮ್ಮಗ ಚುನಾವಣೆಗೆ ನಿಂತಾಗ ಅಬ್ದುಲ್ ಅಜೀಂ ಅವರನ್ನು ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದರು. ಸಿ.ಎಂ. ಇಬ್ರಾಹಿಂ ಅವರನ್ನು ರಾಜ್ಯಸಭೆ ಸದಸ್ಯರಾಗಿ ಮಾಡಿ ಎಂದು ಕುಮಾರಸ್ವಾಮಿ ಮತ್ತು ದೇವೇಗೌಡರ ಕಾಲು ಹಿಡಿದರೂ ಮಾಡಲಿಲ್ಲ. ಸೋಲುತ್ತೇವೆ ಎಂದು ಗೊತ್ತಾದಾಗ ಫಾರೂಕ್ ಅವರನ್ನು ನಿಲ್ಲಿಸಿದರು' ಎಂದ ಜಮೀರ್, 'ರಾಮನಗರ, ಚನ್ನಪಟ್ಟಣ, ಹಾಸನದಲ್ಲಿ ಅಲ್ಪಸಂಖ್ಯಾತರಿಗೆ ಯಾಕೆ ಟಿಕೆಟ್ ಕೊಡುವುದಿಲ್ಲ. ಬಿಜೆಪಿಗೆ ಸಹಾಯ ಮಾಡಲು ಉಪ ಚುನಾವಣೆಗಳಲ್ಲಿ ಅಲ್ಪಸಂಖ್ಯಾತರಿಗೆ ಟಿಕೆಟ್ ಕೊಟ್ಟಿದ್ದಾರೆ' ಎಂದು ದೂರಿದರು.

'ತಪಸ್': 9 ವಿದ್ಯಾರ್ಥಿಗಳು ಐಐಟಿಗೆ ಅರ್ಹತೆ

ಬೆಂಗಳೂರು: ಈ ಬಾರಿಯ ಜೆಇಇ ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್‌ನ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದು, ಒಂಬತ್ತು ವಿದ್ಯಾರ್ಥಿಗಳು ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಪ್ರವೇಶ ಪಡೆಯಲು ಅರ್ಹತೆ ಪಡೆದಿದ್ದಾರೆ.

ರಾಷ್ಟ್ರೋತ್ಥಾನ ಪರಿಷತ್ ಸ್ವಯಂ ಸೇವಾ ಸಂಸ್ಥೆಯಾಗಿದೆ. 'ತಪಸ್' ಯೋಜನೆ ಮೂಲಕ 10ನೇ ತರಗತಿ ಓದುತ್ತಿರುವ ಬಡ ಮತ್ತು ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳನ್ನು ಪ್ರವೇಶ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಿ ಎರಡು ವರ್ಷಗಳ ಪಿಯು ಶಿಕ್ಷಣದ ಜೊತೆ ಜತೆ ಐಐಟಿ-ಜೆಇಇ ಪ್ರವೇಶ ಪರೀಕ್ಷೆಗೆ ತರಬೇತಿ ನೀಡಲಾಗುತ್ತದೆ. ಈ ಯೋಜನೆ ಸಂಪೂರ್ಣ ಉಚಿತವಾಗಿದೆ.

ಒಟ್ಟು 32 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿತ್ತು. ವಿದ್ಯಾರ್ಥಿಗಳ ಕಠಿಣ ಪರಿಶ್ರಮ ಮತ್ತು ಬೇಸ್ ಸಂಸ್ಥೆ ಬೋಧಕರು ನೀಡುವ ಶಿಕ್ಷಣ ಪಡೆದು ಒಂಬತ್ತು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಸಾಧನೆ ಮಾಡಿರುವ ಈ ಎಲ್ಲ ವಿದ್ಯಾರ್ಥಿಗಳು ಗ್ರಾಮೀಣ ಭಾಗದವರಾಗಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

ಅಕ್ಷಯ್ ಗೌಡ ಡಿ.ಜೆ.

ಲೋಹಿತ್ ಪಿ. ತಳವಾರ್

ಸಾಗರ್ ಎಚ್‌ ಆರ್‌

ಯಶಸ್ ಆರ್‌ ಎಸ್‌

ಯಶವಂತ್ ಗೌಡ ಜಿ.ಎಸ್‌

ಶಶಾಂಕ್ ಜೆ. ಶೆಟ್ಟಿ

ಕಿರಣ್‌ಶ್ರೀಪಾದ್ ಹೆಗಡೆ

ರಾಘವೇಂದ್ರ

ವಿ. ಆದರ್ಶ

ಅಖಿಲ ಭಾರತ ಮಟ್ಟದಲ್ಲಿ ಯಶವಂತಗೌಡ ಜಿ.ಎಸ್. 4,429ನೇ ರ್‍ಯಾಂಕ್, ಲೋಹಿತ್ ಪಿ. ತಳವಾರ 9,493ನೇ ರ್‍ಯಾಂಕ್, ಯಶಸ್ ಆರ್. ಎಸ್. 16,111ನೇ ರ್‍ಯಾಂಕ್, ಅಕ್ಷಯ ಗೌಡ ಡಿ.ಜೆ. 24,965, ಶಶಾಂಕ ಜೆ. ಶೆಟ್ಟಿ 26,160ನೇ ರ್‍ಯಾಂಕ್, ಸಾಗರ್ ಎಚ್. ಆರ್ 28,542ನೇ ರ್‍ಯಾಂಕ್ ಗಳಿಸಿ ದ್ದಾರೆ.

ಪರಿಶಿಷ್ಟ ಪಂಗಡ ವಿಭಾಗದಲ್ಲಿ ಆದರ್ಶ ವಿ. 360ನೇ ರ್‍ಯಾಂಕ್, ಪರಿಶಿಷ್ಟ ಪಂಗಡ ವಿಭಾಗದಲ್ಲಿ ರಾಘವೇಂದ್ರ 931, ಆರ್ಥಿಕವಾಗಿ ಹಿಂದುಳಿದ ವರ್ಗ ವಿಭಾಗದಲ್ಲಿ ಕಿರಣ್ ಎಸ್ ಹೆಗಡೆ 4,615ನೇ ರ್‍ಯಾಂಕ್ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿ ಯಶವಂತಗೌಡ ರಾಮನಗರ ಜಿಲ್ಲೆಯ, ಕನಕಪುರ ತಾಲ್ಲೂಕಿನ ಗೂಗರೆದೊಡ್ಡಿಯ ಗ್ರಾಮದವರು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದರು. ತಾಯಿ ಧನಲಕ್ಷ್ಮಿ ಸಂಸ್ಥೆಯಲ್ಲಿ ಕ್ಲರ್ಕ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈತ ತನ್ನ ಪ್ರತಿಭೆ ಮತ್ತು ಕಠಿಣ ಶ್ರಮದಿಂದ ಈ ಸಾಧನೆ ಮಾಡಿದ್ದಾರೆ.

ಲೋಹಿತ್ ತಳವಾರ ಮೂಲತಃ ಹಾವೇರಿ ಜಿಲ್ಲೆಯವರು. ತಂದೆ ದರ್ಜಿ ಕೆಲಸ ಮಾಡುತ್ತಿದ್ದು, ತಾಯಿ ಬೇರೆಯವರ ಜಮೀನಿನಲ್ಲಿ ಕೂಲಿ ಕೆಲಸ ನಿರ್ವಹಿಸಿ ಜೀವನ ಸಾಗಿಸುತ್ತಿದ್ದಾರೆ. ಲೋಹಿತ್ ಅವರು ಧಾರವಾಡ ಜವಾಹರ ನವೋದಯ ವಿದ್ಯಾಲಯದಲ್ಲಿ ಕಲಿತು ನಂತರ ತಪಸ್‌ಗೆ ಆಯ್ಕೆಯಾಗಿದ್ದರು. ಸಾಗರ್ ಎಚ್.ಆರ್. ಅವರು ಮೂಲತಃ ತೀರ್ಥಹಳ್ಳಿ ತಾಲ್ಲೂಕಿನ ಹೊಸಕೇರಿ ಗ್ರಾಮದವರು. ತಂದೆ, ತಾಯಿ ಸಣ್ಣ ಕೃಷಿಕರು. 1ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಪಡೆದಿದ್ದರು. ಅಪಾರ ಪರಿಶ್ರಮದಿಂದ ಜೆಇಇ ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿದ್ದಾರೆ.

ಸಿಂಘು ಗಡಿ: ದಲಿತ ಕೃಷಿ ಕಾರ್ಮಿಕನ ಭೀಕರ ಹತ್ಯೆ ಪ್ರಕರಣ

ಉನ್ನತ ಮಟ್ಟದ ತನಿಖೆಗೆ ಆಗ್ರಹ

ತರ್ನ್ ತರನ್, ಪಂಜಾಬ್ (ಪಿಟಿಐ): ಸಿಂಘು ಗಡಿಯ ಬಳಿ ನಡೆದಿದ್ದ ದಲಿತ ಕೃಷಿ ಕಾರ್ಮಿಕ ಲಖ್‌ಬಿರ್ ಸಿಂಗ್ ಭೀಕರ ಹತ್ಯೆ ಪ್ರಕರಣ ಕುರಿತು ಉನ್ನತ ಮಟ್ಟದ ತನಿಖೆಗೆ ಅವರ ಕುಟುಂಬ ಸದಸ್ಯರು ಒತ್ತಾಯಿಸಿದ್ದಾರೆ.

ಸಿಖ್ ಧರ್ಮಗ್ರಂಥಕ್ಕೆ ಅಗೌರವ ತೋರಿದ್ದರು ಎಂದು ಆರೋಪಿಸಿ ಸಿಖ್ ಸಂಘಟನೆಯೊಂದರ ಸದಸ್ಯರು ಕೃಷಿ ಕಾರ್ಮಿಕನನ್ನು ಭೀಕರವಾಗಿ ಹತ್ಯೆ ಮಾಡಿದ್ದಾರೆ ಎಂದು ಹೇಳಲಾಗಿತ್ತು.

ಮೃತನ ಪತ್ನಿ ಜಸ್‌ಪ್ರೀತ್ ಕೌರ್, 12, 11 ಮತ್ತು 8 ವರ್ಷ ವಯಸ್ಸಿನ ಮೂವರು ಹೆಣ್ಣು ಮಕ್ಕಳು ತಾತ್ಕಾಲಿಕ ಗುಡಿಸಿಲಿನಲ್ಲಿ ಚೀಮಾ ಕಲನ್ ಗ್ರಾಮದಲ್ಲಿ ವಾಸವಿದ್ದರು. ಅವರ ಮಗ ಎರಡು ವರ್ಷದ ಹಿಂದೆ ತೀರಿಕೊಂಡಿದ್ದ.

35 ವರ್ಷದ ಲಖ್‌ಬಿರ್‌ನ ಶವವನ್ನು ತಿರುವುಮುರುವಾಗಿ ಪೊಲೀಸ್ ಬ್ಯಾರಿಕೇಡ್‌ಗೆ ಕಟ್ಟಲಾಗಿತ್ತು. ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ಪ್ರತಿಭಟಿಸುತ್ತಿದ್ದ ಸ್ಥಳದ ಸಮೀಪವೇ ಶವ ಪತ್ತೆಯಾಗಿದ್ದು, ಎಡಗೈಯನ್ನು ಕತ್ತರಿಸಲಾಗಿತ್ತು. ದೇಹದಲ್ಲಿ ಹಲವು ಗಾಯದ ಗುರುತುಗಳಿದ್ದವು.

ಸಿಖ್ ಧರ್ಮ ಗ್ರಂಥಕ್ಕೆ ಅಗೌರವ ತೋರಿದ್ದಕ್ಕಾಗಿ ತಾನೇ ಹತ್ಯೆ ಮಾಡಿದ್ದಾಗಿ ತದನಂತರ ಸರಬ್‌ಜಿತ್ ಸಿಂಗ್ ಎಂಬಾತ ಒಪ್ಪಿಕೊಂಡಿದ್ದ.

ಧರ್ಮಗ್ರಂಥಕ್ಕೆ ಅಗೌರವ ತೋರಿದ ಎಂಬ ಹೇಳಿಕೆಯನ್ನು ನಿರಾಕರಿಸಿರುವ ಜಸ್‌ಪ್ರೀತ್ ಕೌರ್ ಮತ್ತು ರಾಜ್ ಕೌರ್ ಅವರು, ಲಖ್‌ಬಿರ್‌ಗೆ ಧರ್ಮಗ್ರಂಥದ ಮೇಲೆ ಅಪಾರ ಗೌರವವಿತ್ತು. ಆತ ಗುರುದ್ವಾರಕ್ಕೆ ಭೇಟಿ ನೀಡಿದ್ದಾಗಲೆಲ್ಲಾ ಕುಟುಂಬ ಮತ್ತು ಸಮಾಜದ ಹಿತಕ್ಕಾಗಿ ಪ್ರಾರ್ಥಿಸುತ್ತಿದ್ದ ಎಂದು ಹೇಳಿದರು.

ಮಾಯಾವತಿ ತೀವ್ರ ಖಂಡನೆ (ಲಖನೌ ವರದಿ): ಕೃಷಿಕರು ಪ್ರತಿಭಟನೆ ನಡೆಸುತ್ತಿದ್ದ ದೆಹಲಿ,ಹರಿಯಾಣ ಗಡಿ ಭಾಗದಲ್ಲಿ ದಲಿತ ವ್ಯಕ್ತಿಯ ಭೀಕರ ಹತ್ಯೆ ಪ್ರಕರಣವು ನಾಚಿಕೆಗೇಡಿನದು ಎಂದು ಬಹುಜನ ಸಮಾಜ ಪಕ್ಷದ ಮುಖ್ಯಸ್ಥೆ ಮಾಯಾವತಿ ಹೇಳಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಮೃತನ ಕುಟುಂಬಕ್ಕೆ ₹ 50 ಲಕ್ಷ ಆರ್ಥಿಕ ನೆರವು, ಅವಲಂಬಿತರಿಗೆ ನೌಕರಿ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಆರೋಪಿ ಪೊಲೀಸ್ ವಶಕ್ಕೆ

ಸೋನಿಪತ್ (ಪಿಟಿಐ): ರೈತರು ಪ್ರತಿಭಟನೆ ನಡೆಸುತ್ತಿರುವ ಸಿಂಘು ಗಡಿಯಲ್ಲಿ ನಡೆದಿದ್ದ ಭೀಕರ ಹತ್ಯೆ ಪ್ರಕರಣದ ಆರೋಪಿ, ಸರಬ್ಜಿತ್ ಸಿಂಗ್‌ನನ್ನು 7 ದಿನಗಳ ಪೊಲೀಸ್ ವಶಕ್ಕೆ ಶನಿವಾರ ನೀಡಲಾಯಿತು.

ಪ್ರಕರಣಕ್ಕೆ ಸಂಬಂಧಿಸಿದ ಎರಡನೇ ಆರೋಪಿಯನ್ನು ಶನಿವಾರ ಬಂಧಿಸಲಾಗಿದೆ. ಸಿಖ್ ನಿಹಾಂಗ್ ಪಂಗಡಕ್ಕೆ ಸೇರಿರುವ ನರೈನ್ ಸಿಂಗ್ ಬಂಧಿಸಲ್ಪಟ್ಟಿರುವ ಎರಡನೇ ಆರೋಪಿ. ಅಮೃತಸರದ ಅಮರ್‌ಕೋಟ್ ಗ್ರಾಮದ ಬಳಿ ಆತನನ್ನು ಅಮೃತಸರ ಗ್ರಾಮೀಣ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರಬ್‌ಜಿತ್‌ನನ್ನು ವಶಕ್ಕೆ ತೆಗೆದುಕೊಳ್ಳುವ ಮೊದಲು, ಕೊಲೆ ಮಾಡುವ ವೇಳೆ ಆತ ಬಳಸಿದ್ದ ಶಸ್ತ್ರಗಳು, ಆತ ಧರಿಸಿದ್ದ ವಸ್ತ್ರಗಳು ಸೇರಿದಂತೆ, ಆತನಿಂದ ವಶಪಡಿಸಿಕೊಂಡಿದ್ದ ಕೆಲ ವಸ್ತುಗಳನ್ನು ನ್ಯಾಯಾಲಯಕ್ಕೆ ಒಪ್ಪಿಸಲಾಯಿತು. ಈ ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನು ನಾಲ್ವರು ಆರೋಪಿಗಳ ಹೆಸರನ್ನು ಆತ ಹೇಳಿದ್ದಾನೆ. ಪ್ರಕರಣದಲ್ಲಿ ಐದಕ್ಕಿಂತಲೂ ಹೆಚ್ಚು ಜನರು ಭಾಗಿಯಾಗಿರುವ ಸಾಧ್ಯತೆ ಇದೆ ಎಂದು ಸೋನಿಪತ್ ಹಿರಿಯ ಪೊಲೀಸ್ ಅಧಿಕಾರಿ ಹೇಳಿದ್ದಾರೆ.





ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಜೈಲಿನಿಂದ ಕರೆ ಮಾಡಿ ಜೀವ ಬೆದರಿಕೆ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಜೈಲು ಸೇರಿರುವ ನವೀನ್ ಕುಮಾರ್ ಎಂಬಾತ ನಗರದ ನಿವಾಸಿಯೊಬ್ಬರಿಗೆ ಮೊಬೈಲ್‌ನಿಂದ ಕರೆ ಮಾಡಿ ಜೀವ ಬೆದರಿಕೆಯೊಡ್ಡಿದ್ದು, ಈ ಸಂಬಂಧ ಬಾಣಸವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿ ಸುಶಾನ್ ಎಂಬುವರು ದೂರು ನೀಡಿದ್ದಾರೆ. ಜೀವ ಬೆದರಿಕೆ ಆರೋಪದಡಿ ನವೀನ್ ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಪರಾಧ ಪ್ರಕರಣವೊಂದಕ್ಕೆ ಸಂಬಂಧಪಟ್ಟಂತೆ ನವೀನ್ ಕುಮಾರ್ ವಿರುದ್ಧ ಸುಶಾನ್ ಇತ್ತೀಚೆಗೆ ದೂರು ನೀಡಿದ್ದರು. ಅದೇ ಪ್ರಕರಣದಲ್ಲಿ ನವೀನ್‌ನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಜೈಲಿನಿಂದಲೇ ಸುಶಾನ್ ಅವರಿಗೆ ಕರೆ ಮಾಡಿದ್ದ ಆರೋಪಿ, ದೂರು ಹಿಂಪಡೆಯುವಂತೆ ಒತ್ತಾಯಿಸಿದ್ದಾನೆ. ಇಲ್ಲದಿದ್ದರೆ, ಜೀವಂತ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

'ಸಾಹಿತ್ಯದಲ್ಲಿ ರಾಜಕೀಯ ಏಕಿರಬಾರದು?'

ಮೈಸೂರು: 'ಸಾಹಿತ್ಯದಲ್ಲಿ ರಾಜಕೀಯ ವಿಚಾರಗಳು, ಸಿದ್ಧಾಂತಗಳ ಪ್ರಸ್ತಾಪವಿರಬಾರದು ಎಂಬ ಧೋರಣೆ ಸರಿಯಲ್ಲ' ಎಂದು ಭಾರತೀಯ ಸಂಜಾತ ಅಮೆರಿಕ ಲೇಖಕರಾದ ನವಾಜ್ ಅಹ್ಮದ್ ಪ್ರತಿಪಾದಿಸಿದರು.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ ಜಂಟಿಯಾಗಿ ವರ್ಚುವಲ್ ವೇದಿಕೆಯಲ್ಲಿ ಶನಿವಾರದಿಂದ ಆಯೋಜಿಸಿರುವ 5ನೇ ವರ್ಷದ 'ಮೈಸೂರು ಸಾಹಿತ್ಯ ಉತ್ಸವ–2021'ರ ಉದ್ಘಾಟನೆ ಗೋಷ್ಠಿಯಲ್ಲಿ, ತಮ್ಮ ಕಾದಂಬರಿ 'ರೇಡಿಯಂಟ್ ಫ್ಯುಗಿಟಿವ್ಸ್' ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

'ರಾಜಕಾರಣವೇ ಜೀವನದ ಚಾಲಕ ಶಕ್ತಿ. ರಾಜಕಾರಣ ನಮಗೆ ಒಗ್ಗದ್ದು ಎಂಬುವವರೇ ಅದರ ಪ್ರಭಾವಕ್ಕೆ ಒಳಗಾಗಿರುತ್ತಾರೆ. ನನ್ನ ಕಾದಂಬರಿಯ ಪಾತ್ರಗಳಲ್ಲೂ ರಾಜಕಾರಣವನ್ನು ನೋಡಬಹುದು. ಅಮೆರಿಕದ ರಾಜಕಾರಣದಲ್ಲಿ ಭಾರತೀಯ ಅಮೆರಿಕನ್ನರ ಚಿತ್ರಣವನ್ನು ಸೀಮಾ ಪಾತ್ರ ಕಟ್ಟಿಕೊಡುತ್ತದೆ. ಅಮೆರಿಕದ ಅವಳಿ ಕಟ್ಟಡಗಳ ಕುಸಿತ, ಇರಾಕ್ ಯುದ್ಧ, ಅಫ್ಘಾನಿಸ್ತಾನದ ಯುದ್ಧಗಳು ರಾಜಕಾರಣದ ಭಾಗವೇ ಆಗಿವೆ' ಎಂದರು.

'2000ದ ನಂತರ ಅಮೆರಿಕದ ರಾಜಕಾರಣದಲ್ಲಿ ಭಾರತೀಯರ ಪ್ರಭಾವ ಹೆಚ್ಚಾಗಿದೆ. ಕಾದಂಬರಿಯ ಪಾತ್ರಗಳ ಮೂಲಕ ಅಮೆರಿಕದಲ್ಲಿ ಅಸ್ತಿತ್ವ ಕಂಡುಕೊಳ್ಳಲು ಹೋರಾಟ ನಡೆಸುತ್ತಿರುವ ಆಫ್ರಿಕಾ, ಭಾರತ ಉಪಖಂಡ, ಏಷ್ಯಾ ಮೂಲದವರ ಚಿತ್ರಣ ದಾಖಲಿಸಲಾಗಿದೆ. ಬರಾಕ್ ಒಬಾಮಾ ಅವರಿಗೆ ಅಧಿಕಾರವನ್ನು ಅಮೆರಿಕನ್ನರು ನೀಡಿದರೂ ಅದಕ್ಕೆ ಹಲವು ಮಿತಿಗಳನ್ನು ಹೇರಲಾಗಿತ್ತು' ಎಂದರು.

ಮೈಸೂರು ಸಾಹಿತ್ಯ ಉತ್ಸವದ ಗೋಷ್ಠಿಯಲ್ಲಿ ಲೇಖಕರಾದ ನವಾಜ್ ಅಹ್ಮದ್ ಮತ್ತು ಸೀತಾ ಭಾಸ್ಕರ್ ಸಂವಾದದಲ್ಲಿ ಪಾಲ್ಗೊಂಡಿದ್ದರು.

ದಕ್ಷಿಣ ಏಷ್ಯಾ ಎಲ್‌ಜಿಬಿಟಿ ಸಮುದಾಯದ ಪ್ರತಿನಿಧಿಯೆಂದು ಹೇಳಿದ ನವಾಜ್, 'ಅವಮಾನವನ್ನು ಮೀರಿದಾಗ ಮಾತ್ರ ಸಮುದಾಯ ಜೀವನವು ಸುಧಾರಣೆಯಾಗುತ್ತದೆ' ಎಂದರು.

'ಪ್ರೀತಿ ಹಾಗೂ ಧರ್ಮವು ವರ್ತಮಾನ ಹಾಗೂ ಭವಿಷ್ಯವನ್ನು ಪ್ರಭಾವಿಸುತ್ತದೆ. ಅದನ್ನು ಹೊರತಾದ ಜೀವನವನ್ನು ಕಲ್ಪಿಸಿಕೊಳ್ಳಲು ಆಗದು' ಎಂದು ಹೇಳಿದರು. ಭಾರತೀಯ ಸಂಜಾತ ಅಮೆರಿಕಾ ಲೇಖಕಿ ಸೀತಾ ಭಾಸ್ಕರ್ ಸಂವಾದ ನಡೆಸಿಕೊಟ್ಟರು. ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಇದ್ದರು.

ಅಧ್ಯಕ್ಷ, ಆಡಳಿತ ಮಂಡಳಿಯೇ ಭಾಗಿ ● ಬೇನಾಮಿ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಸಾಲ

ಸಂಸ್ಥೆಗಳ ಬೆನ್ನೆಲುಬು ಮುರಿದ ಅಕ್ರಮಗಳು

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಸ್ವಾವಲಂಬಿ, ಸ್ವಾಯತ್ತತೆ ಮತ್ತು ಆರ್ಥಿಕವಾಗಿ ಸಬಲರಾಗಲು ಸಮಾನ ಮನಸ್ಕರು ಕಟ್ಟಿಕೊಂಡ ಕೆಲ ಸಹಕಾರ ಸಂಸ್ಥೆಗಳು, 'ಅಕ್ರಮ'ದಲ್ಲಿ ಸಿಲುಕಿ ನಲುಗುತ್ತಿವೆ. ಕೋಟ್ಯಂತರ ರೂಪಾಯಿ ಠೇವಣಿ ಹಣವನ್ನು ಬೇನಾಮಿ ಹೆಸರಿನಲ್ಲಿ ಸಾಲ ನೀಡುತ್ತಿರುವ ಆಡಳಿತ ಮಂಡಳಿಯವರೇ ಅಕ್ರಮದಲ್ಲಿ ಭಾಗಿಯಾಗಿ ಸಂಸ್ಥೆಗಳ ಬೆನ್ನೆಲುಬು ಮುರಿಯುತ್ತಿದ್ದಾರೆ.

ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಾಗೂ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ – ಆಪರೇಟಿವ್ ಲಿಮಿಟೆಡ್, ಕಣ್ವ ಸಮೂಹ ಸಂಸ್ಥೆಯ ಶ್ರೀ ಕಣ್ವ ಸೌಹಾರ್ದ ಕೋ- ಆಪರೇಟಿವ್ ಸೊಸೈಟಿ ಹಾಗೂ ಶ್ರೀ ವಸಿಷ್ಠ ಕೋ- ಆಪರೇಟಿವ್ ಕ್ರೆಡಿಟ್ ಸೊಸೈಟಿ ಅಕ್ರಮಗಳು ಇತ್ತೀಚೆಗೆ ಹೆಚ್ಚು ಸುದ್ದಿ ಮಾಡಿವೆ. ಕಷ್ಟಕಾಲದಲ್ಲಿ ನೆರವಾಗಲೆಂದು ಠೇವಣಿ ಇರಿಸಿದ್ದ ಕೋಟ್ಯಂತರ ರೂಪಾಯಿ ವಂಚಕರ ಪಾಲಾಗಿದ್ದು, ಠೇವಣಿದಾರರು ಮಾತ್ರ ತಾವು ಇರಿಸಿದ್ದ ಠೇವಣಿಯ ಹಣಕ್ಕಾಗಿ ಕಾಯುತ್ತ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ.

ಅಕ್ರಮಗಳ ಬಗ್ಗೆ ಎಫ್‌ಐಆರ್‌ಗಳು ದಾಖಲಾಗಿದ್ದು, ತನಿಖೆ ಹೊಣೆಯನ್ನು ಸಿಐಡಿಗೆ ವಹಿಸಲಾಗಿದೆ. ಕೆಲ ಪ್ರಕರಣಗಳಲ್ಲಿ ಆರೋಪಿಗಳ ಬಂಧನವಾಗಿದ್ದು, ಬಹುತೇಕರು ಜಾಮೀನಿನ ಮೇಲೆ ಹೊರಬಂದಿದ್ದಾರೆ.

27 ಮಂದಿಗೆ ₹ 920.46 ಕೋಟಿ ಸಾಲ: 'ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಾಗೂ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ – ಆಪರೇಟಿವ್ ಲಿಮಿಟೆಡ್‌ನಲ್ಲಿ ನಡೆದಿರುವ ಅಕ್ರಮ ಅಗೆದಷ್ಟೂ ಆಳವಿದೆ. ಬ್ಯಾಂಕ್ ಅಧ್ಯಕ್ಷ ಕೆ. ರಾಮಕೃಷ್ಣ, ಅವರ ಪುತ್ರರಾದ ಉಪಾಧ್ಯಕ್ಷ ಕೆ.ಆರ್. ವೇಣುಗೋಪಾಲ್ ಸೇರಿದಂತೆ 26 ಮಂದಿ ಅಕ್ರಮದ ಆರೋಪಿಗಳು. ಇವರೆಲ್ಲರೂ ಸೇರಿ ಕೇವಲ 27 ಮಂದಿಗೆ ₹ 920.46 ಕೋಟಿ ಸಾಲ ಮಂಜೂರು ಮಾಡಿದ್ದು, ಈ ಹಣ ಮರು ಪಾವತಿಯಾಗಿಲ್ಲ' ಎಂದು ಸಿಐಡಿ ಮೂಲಗಳು ಹೇಳಿವೆ.

'ಸ್ವತಃ ರಾಮಕೃಷ್ಣ ₹ 78.08 ಕೋಟಿ ಸಾಲ ಪಡೆದು ವಾಪಸ್ ತುಂಬಿಲ್ಲ. 'ಹೆಬ್ಬುಲಿ' ನಿರ್ಮಾಪಕ ಜಿ. ರಘುನಾಥ್ ₹ 139.85 ಕೋಟಿ, ಬಿಜೆಪಿಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಶ್ವತ್ಥ-ನಾರಾಯಣ ಗೌಡ ₹ 12.12 ಕೋಟಿ ಸಾಲ ಪಡೆ-ದಿರುವುದಕ್ಕೆ ದಾಖಲೆಗಳು ಸಿಕ್ಕಿವೆ. ಅಕ್ರಮದಿಂದ ಗಳಿಸಿದ್ದ ₹ 1,000 ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಿ, ಜಪ್ತಿಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ' ಎಂದೂ ತಿಳಿಸಿವೆ.

ಕಣ್ವದಲ್ಲಿ ಸುಮಾರು ₹ 250 ಕೋಟಿ ವಂಚನೆ: 'ಕಣ್ವ ಸಮೂಹ ಸಂಸ್ಥೆ ಸಂಸ್ಥಾಪಕ ಎನ್. ನಂಜುಂಡಯ್ಯ, ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಸ್ಥಾಪಿಸಿದ್ದರು. ಅವರೇ ಗೌರವ ಅಧ್ಯಕ್ಷರೂ ಆಗಿದ್ದರು. ಗಾರ್ಮೆಂಟ್ಸ್, ರಿಯಲ್ ಎಸ್ಟೇಟ್, ಆರೋಗ್ಯ ಕ್ಷೇತ್ರದಲ್ಲೂ ನಂಜುಂಡಯ್ಯ ತೊಡಗಿಸಿಕೊಂಡಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

'ಠೇವಣಿ ಇರಿಸಿದ್ದ ಹಣ ವಾಪಸು ನೀಡದಿದ್ದರಿಂದ 80 ಠೇವಣಿದಾರರು ಪೊಲೀಸರಿಗೆ ದೂರು ನೀಡಿದ್ದರು. ನಂಜುಂಡಯ್ಯ ಅವರನ್ನು ಬಂಧಿಸಿದ್ದ ಸಿಐಡಿ, ವಿಚಾರಣೆ ನಡೆಸಿತ್ತು. ಸುಮಾರು ₹ 250 ಕೋಟಿಯಷ್ಟು ಅಕ್ರಮ ನಡೆದಿರುವ ಮಾಹಿತಿ ಇದ್ದು, ದಾಖಲೆಗಳ ಪರಿಶೀಲನೆ ಪ್ರಗತಿ-ಯಲ್ಲಿದೆ. ವಂಚನೆ ಮೊತ್ತ ಹೆಚ್ಚಾಗುವ ಸಾಧ್ಯತೆಯೂ ಇದೆ' ಎಂದೂ ಮೂಲಗಳು ತಿಳಿಸಿವೆ.

ಅಮಾನತ್‌ನಲ್ಲೂ ಸುಮಾರು ₹ 102.03 ಕೋಟಿ ಅವ್ಯವಹಾರ: ಶಿವಾಜಿನಗರದಲ್ಲಿದ್ದ ಅಮಾನತ್ ಸಹಕಾರ ಬ್ಯಾಂಕ್‌ನಲ್ಲೂ ಸುಮಾರು ₹ 102.03 ಕೋಟಿ ಅವ್ಯವಹಾರವಾಗಿತ್ತು. ಇದುವರೆಗೂ ಹಲವು ಠೇವಣಿದಾರರಿಗೆ ನ್ಯಾಯ ಸಿಕ್ಕಿಲ್ಲ ಎಂಬ ದೂರುಗಳಿವೆ.

ಬ್ಯಾಂಕ್‌ನಲ್ಲಾದ ಅವ್ಯವಹಾರದ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೂಚನೆಯಂತೆ, ಅಂದಿನ ಸಹಕಾರ ಇಲಾಖೆಯ ಉಪ ರಿಜಿಸ್ಟ್ರಾರ್ ಕೆ.ಎ.ಅಪ್ಪಣ್ಣ ನೇತೃತ್ವದ ತಂಡ ತನಿಖೆ ನಡೆಸಿತ್ತು. 2007ರಲ್ಲಿ 129 ಪುಟಗಳ ತನಿಖಾ ವರದಿ ಸಲ್ಲಿಸಿತ್ತು.

'₹102.03 ಕೋಟಿ ಅವ್ಯವಹಾರ ನಡೆದಿರುವುದಾಗಿ ತಂಡ ಹೇಳಿತ್ತು. ಬ್ಯಾಂಕ್‌ನ ಅಂದಿನ ಅಧ್ಯಕ್ಷ ಕೆ.ರೆಹಮಾನ್ ಖಾನ್, ನಿರ್ದೇಶಕರಾದ ಅಬ್ದುಲ್ ಗಫಾರ್ ಹಾಜಿ ಲತೀಫ್ (ಮೃತ), ಮೊಹಮ್ಮದ್ ಅಜಂ ಜಾನ್ (ಮೃತ), ಎಸ್.ಎಸ್.ಪೀರಾನ್, ಜಿಯಾವುಲ್ಲಾ ಷರೀಫ್, ಸಾದತ್ ಅಲಿ ಖಾನ್, ಅಜೀಜ್ ಮೊಹಮ್ಮದ್, ಅತೀಕ್ ಅಹಮ್ಮದ್, ಹೈದರ್ ಅಲಿ, ಜೀವಭಾಯಿ, ಜಮೀಲ್ ಖಲೀಲ್, ಅಂದಿನ ಪ್ರಧಾನ ವ್ಯವಸ್ಥಾಪಕ ಮೊಹಮ್ಮದ್ ಅಸಾದುಲ್ಲಾ ಮತ್ತು ಎನ್.ಆರ್.ರಸ್ತೆ ಶಾಖೆಯ ವ್ಯವಸ್ಥಾಪಕ ಎ. ಷಫಿವುಲ್ಲಾ ತಪ್ಪಿತಸ್ಥರು ಎಂಬುದಾಗಿಯೂ ವರದಿಯಲ್ಲಿ ಉಲ್ಲೇಖಿಸಲಾ-ಗಿತ್ತು' ಎಂದು ಬ್ಯಾಂಕ್‌ನ ಠೇವಣಿದಾರರೊಬ್ಬರು ಹೇಳಿದರು.

'ಕೆ.ಹಿದಾಯತ್ ಉಲ್ಲಾ, ಖೈರುನ್ನಿಯಾ, ನಸೀಮಾ ಬೇಗಂ, ಎಂ.ಎ.ರಾಜ್, ಸಾದಿಕ್ ಬೇಗಂ ಮತ್ತು ನೂರ್‌ಜಹಾನ್ ಬೇಗಂ ಎಂಬುವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಖಾತೆಗಳನ್ನು ತೆರೆದಿರುವುದು, ನಡಾವಳಿ ಪುಸ್ತಕವನ್ನು ತಿದ್ದಿರುವುದು, ಸಾಲ ಮಂಜೂರಾತಿ ದಾಖಲೆ ಸೃಷ್ಟಿಸಿರುವುದು ಮತ್ತಿತರ ಅಕ್ರಮಗಳಲ್ಲಿ ಭಾಗಿಯಾಗಿದ್ದರು ಎಂದು ವರದಿ ಹೇಳಿತ್ತು. ಎಲ್ಲರ ವಿರುದ್ಧವೂ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ಅಲ್ ಅಮೀನ್ ಚಾರಿಟಬಲ್ ಟ್ರಸ್ಟ್‌ನ ಖಾತೆಯನ್ನು ಬಳಸಿಕೊಂಡು ಅವ್ಯವಹಾರ ನಡೆಸಿದ್ದು ತನಿಖೆಯಿಂದ ಗೊತ್ತಾಗಿತ್ತು' ಎಂದೂ ಠೇವಣಿದಾರ ತಿಳಿಸಿದರು.

ಶ್ರೀವಸಿಷ್ಠ ಅಕ್ರಮದಲ್ಲಿ ಜಾಮೀನು: ಶ್ರೀವಸಿಷ್ಠ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯಲ್ಲಿ ಅಕ್ರಮ ನಡೆದ ಬಗ್ಗೆ ಹನುಮಂತನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಹಲವು ದಿನ ತಲೆಮರೆಸಿಕೊಂಡಿದ್ದ ಸೊಸೈಟಿ ಅಧ್ಯಕ್ಷ ವೆಂಕಟನಾರಾಯಣ ಹಾಗೂ ನಿರ್ದೇಶಕ ಕೃಷ್ಣಪ್ರಸಾದ್, ಠಾಣೆಗೆ ಹಾಜರಾಗಿ ವಿಚಾರಣೆ ಎದುರಿಸಿದ್ದರು. ಸದ್ಯ ಅವರಿಬ್ಬರೂ ಜಾಮೀನು ಮೇಲೆ ಹೊರಗಿದ್ದಾರೆ. ಸೊಸೈಟಿಯಲ್ಲೂ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿರುವ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ.

ನಗರದ ಬಸವನಗುಡಿಯಲ್ಲಿರುವ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಣ ವಂಚನೆ ಮಾಡಿರುವ ಹಿನ್ನೆಲೆಯಲ್ಲಿ ಎಸಿಬಿ ಸಿಬ್ಬಂದಿಗಳು ಪರಿಶೀಲನೆ ನಡೆಸುತ್ತಿರುವ ವೇಳೆ ಪೊಲೀಸ್ ಬಿಗಿ ಬಂದೋಬಸ್ತ್

'₹ 5 ಲಕ್ಷಕ್ಕಿಂತ ಹೆಚ್ಚು ಠೇವಣಿ ಇರಿಸಿದವರ ಗತಿಯೇನು?'

ಹಲವು ವರ್ಷಗಳ ನಂಬಿಕೆ ಹಾಗೂ ವಿಶ್ವಾಸದಿಂದ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿದ್ದೆ. ಆಡಳಿತ ಮಂಡಳಿಯವರೇ ಅಕ್ರಮ ಎಸಗಿ ಠೇವಣಿ ನುಂಗಿದ್ದಾರೆ. ಸಾವಿರಾರು ಠೇವಣಿದಾರರು ಬೀದಿಗೆ ಬಿದ್ದಿದ್ದಾರೆ. ₹ 5 ಲಕ್ಷದವರೆಗೆ ಠೇವಣಿ ಇರಿಸಿದವರಿಗೆ ವಿಮೆ ಹೆಸರಿನಲ್ಲಿ ಹಣ ವಾಪಸು ನೀಡಲು ಸರ್ಕಾರ ಕ್ರಮ ಕೈಗೊಂಡಿದೆ. ಆದರೆ, ₹ 5 ಲಕ್ಷಕ್ಕಿಂತ ಹೆಚ್ಚು ಠೇವಣಿ ಇರಿಸಿದ್ದವರ ಗತಿಯೇನು?

– **ವಿ.ಹರೀಶ್,** ಠೇವಣಿದಾರ

'ಚಿಂತೆಯಲ್ಲೇ ಪ್ರಾಣ ಬಿಟ್ಟ ಅತ್ತೆ'

ನನ್ನ ಅತ್ತೆ–ಮಾವ, 25 ವರ್ಷಗಳ ಹಿಂದೆಯೇ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಹಣ ಠೇವಣಿ ಇರಿಸಿದ್ದರು. ಬಡ್ಡಿ ನಂಬಿ ಜೀವನ ಸಾಗಿಸುತ್ತಿದ್ದರು. ಅಕ್ರಮದಿಂದ ಠೇವಣಿ ಎಲ್ಲ ಹೋಯಿತೆಂಬ ಸುದ್ದಿ ಕೇಳಿ ಹಾಸಿಗೆ ಹಿಡಿದಿದ್ದ ಅತ್ತೆ, ಚಿಂತೆಯಲ್ಲೇ ಪ್ರಾಣ ಬಿಟ್ಟರು. ಇದೇ ರೀತಿ ಇದುವರೆಗೂ 78 ಠೇವಣಿದಾರರು ತೀರಿಕೊಂಡಿದ್ದು, ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಆರೋಪಿಗಳಿಗೆ ತಕ್ಕ ಶಿಕ್ಷೆ ಆಗಬೇಕು. ಅಕ್ರಮ ಎಸಗಿರುವ ಆರೋಪಿಗಳು ಯಾರು ಎಂಬುದು ಗೊತ್ತಿದ್ದರೂ ಸರ್ಕಾರ ಮೌನವಾಗಿದೆ. ನೊಂದ ಠೇವಣಿದಾರರ ಪರ ನಿಲ್ಲಬೇಕಾದ ರಾಜಕಾರಣಿಗಳು, ಆರೋಪಿಗಳನ್ನು ಬಚಾವ್ ಮಾಡಲು ನಾನಾ ಕಸರತ್ತು ನಡೆಸುತ್ತಿದ್ದಾರೆ.

– **ಕೆ.ವಿ. ಬಾಲಸುಬ್ರಹ್ಮಣ್ಯ,** ಠೇವಣಿದಾರ

ಗುರು ರಾಘವೇಂದ್ರ ಬ್ಯಾಂಕ್ ಚಿತ್ರಣ

46,000 ಠೇವಣಿದಾರರು

22,000 ಠೇವಣಿ ಹಿಂಪಡೆದವರು

2,375 ಒಟ್ಟು ಠೇವಣಿ

ಸಾಲ ಪಡೆದ ಪ್ರಮುಖರು

ಸಾಲಗಾರರು	ಸಾಲ (₹ ಕೋಟಿಗಳಲ್ಲಿ)
ಜಿ. ರಘುನಾಥ್	139.85
ಜಶ್ವತ್ ರೆಡ್ಡಿ	153.50
ಕುಮಾರೇಶ್ ಬಾಬು	39.03
ಟಿ.ಎಚ್. ಆರಾಧ್ಯ	25.78
ಡಿ.ಪಿ. ಆರಾಧ್ಯ	91.23
ಎಂ.ಆರ್. ರಜತ್	26.10
ಎಸ್.ಪಿ. ಶ್ರೀಷಾ	10.05
ಬಿ.ಜಿ.ರಾಮಕೃಷ್ಣನ್	46.06
ವಿ.ಆರ್. ರಾಜೇಶ್	40.40
ಜಗನ್ನಾಥ್ ಹೆಗ್ಡೆ	55.30
ಜಿ. ಶ್ರೀನಿವಾಸನ್	56.5
ಅಶ್ವತ್ಥನಾರಾಯಣ	12.12
ರಾಜಸಿಂಹ	6.57
ಎನ್. ಸತ್ಯನಾರಾಯಣ	24.24
ಎಸ್.ವಿ. ರೆಡ್ಡಿ	8.08
ಆದಿ ನಾರಾಯಣ	6.06
ಹರಿಕೃಷ್ಣ	22.12
ಪ್ರಸನ್ನ ಕುಮಾರ್	6.06
ವೈ.ಪಿ. ಸಂತೋಷ್	6.06
ಲೋಕೇಶ್	7.07
ಮೋಡರಿಚ್ ಫರ್ನಿಚರ್	8.02
ವಿಜಯಸಿಂಹ	5
ಬಿ.ಎನ್. ವೆಂಕಟೇಶ್	5
ಎಸ್.ಎನ್. ಸುಯಮೀಂದ್ರ	10
ರಾಮಕೃಷ್ಣ	78.08
ಸತ್ಯನಾರಾಯಣ	24.04
ಮಯ್ಯ	8.08

ಮಂಜುನಾಥ ಗೌಡರ ಸುತ್ತ ಡಿಸಿಸಿ ಬ್ಯಾಂಕ್ ಹಗರಣ

● ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ ಡಿಸಿಸಿ ಬ್ಯಾಂಕ್

ಶಿವಮೊಗ್ಗ: ಡಿಸಿಸಿ ಬ್ಯಾಂಕ್ ಗಾಂಧಿಬಜಾರ್ ಶಾಖೆಯಲ್ಲಿ ನಕಲಿ ಚಿನ್ನ ಅಡವಿಟ್ಟುಕೊಂಡು ₹ 62.77 ಕೋಟಿ ವಂಚಿಸಿದ್ದ ಪ್ರಕರಣ 2014ರಲ್ಲಿ ಪತ್ತೆಯಾಗಿತ್ತು.

ಗಾಂಧಿ ಬಜಾರ್ ಶಾಖೆಯಲ್ಲಿ ಬ್ಯಾಂಕ್ ವ್ಯವಸ್ಥಾಪಕಿ, ಅಧಿಕಾರಿಗಳು ಹಾಗೂ ಮಧ್ಯವರ್ತಿಗಳು ಸೇರಿ ಹಣ ದೋಚಿದ್ದರು. ಪ್ರಕರಣ ಬೆಳಕಿಗೆ ಬಂದ ನಂತರ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರು ಬ್ಯಾಂಕ್ ಅಧ್ಯಕ್ಷ ಆರ್. ಎಂ.ಮಂಜುನಾಥಗೌಡ ಸೇರಿ 18 ಜನರ ವಿರುದ್ಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರಕರಣವನ್ನು ನಂತರ ಸಿಐಡಿಗೆ ವರ್ಗಾಯಿಸಲಾಗಿತ್ತು.

22 ವರ್ಷಗಳ ಕಾಲ ಡಿಸಿಸಿ ಬ್ಯಾಂಕ್‌ನ ಅವಿಭಾಜ್ಯ ಅಂಗವಾಗಿ ಬೆಳೆದಿದ್ದ, ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ಮಂಜುನಾಥ ಗೌಡರ ಹೆಸರು ಹಗರಣದಲ್ಲಿ ತಳುಕು ಹಾಕಿಕೊಂಡ ನಂತರ ಸಾಕಷ್ಟು ಕೋಲಾಹಲವಾಗಿತ್ತು. ಹಗರಣ ಬೆಳಕಿಗೆ ಬಂದ ಒಂದು ತಿಂಗಳಲ್ಲೇ ಸಾರ್ವಜನಿಕರು ₹ 200 ಕೋಟಿ ಠೇವಣಿ ಹಿಂದಕ್ಕೆ ಪಡೆದಿದ್ದರು. ಇದರಿಂದ ಬ್ಯಾಂಕ್ ಸಂಕಷ್ಟಕ್ಕೆ ಸಿಲುಕಿತ್ತು.

ತನಿಖೆ ನಡೆಸಿದ ಸಿಐಡಿ, ಹಗರಣದಲ್ಲಿ ಬ್ಯಾಂಕ್ ಅಧ್ಯಕ್ಷ ಆರ್. ಎಂ.ಮಂಜುನಾಥ ಗೌಡರ ಪಾತ್ರವಿಲ್ಲ ಎಂದು ಕ್ಲೀನ್‌ಚಿಟ್ ನೀಡಿತ್ತು. ಇತರೆ ಆರೋಪಿಗಳ ಆಸ್ತಿ ಮುಟ್ಟುಗೋಲಿಗೆ ಶಿಫಾರಸು ಮಾಡಿತ್ತು. ಸಿಐಡಿ ವರದಿಗೆ, ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು.

ಚಿ ನ್ನಾ ಭ ರ ಣ ಅಡಮಾನ ಸಾಲದ ಉಪ ಸಮಿತಿಗೆ 2004ರಿಂದ ಮಂಜುನಾಥ ಗೌಡರೇ ಮುಖ್ಯಸ್ಥರಾಗಿದ್ದಾರೆ. ದೋಷಾರೋಪ ಪಟ್ಟಿಯಿಂದ ಅವರ ಹೆಸರು ಕೈಬಿಟ್ಟಿರುವುದು ಸರಿಯಲ್ಲ ಎಂದು ಕಾಂಗ್ರೆಸ್ ಮುಖಂಡ ಕಿಮ್ಮನೆ ರತ್ನಾಕರ ಕಿಡಿಕಾರಿದ್ದರು. ಬ್ಯಾಂಕ್‌ನ ಅಧ್ಯಕ್ಷರನ್ನು ರಕ್ಷಿಸಲು ಅಂದಿನ ಕಾಂಗ್ರೆಸ್ ಸರ್ಕಾರ ಸಿಐಡಿಯನ್ನು ಬಳಸಿಕೊಂಡಿತ್ತು ಎಂದು ಇಂದಿನ ಗೃಹ ಸಚಿವ ಆರಗ ಜ್ಞಾನೇಂದ್ರ ಅಂದು ದೂರಿದ್ದರು.

ಈ ಮಧ್ಯೆ ಡಿಸಿಸಿ ಬ್ಯಾಂಕ್‌ಗೆ ನಡೆದ ಚುನಾವಣೆಯಲ್ಲಿ ಮಂಜುನಾಥ ಗೌಡರ ಬಣ ಜಯಗಳಿಸಿತ್ತು. ಮತ್ತೆ ಗೌಡರೇ ಅಧ್ಯಕ್ಷ ಗಾದಿಗೆ ಏರಿದ್ದರು. ಈ ಮಧ್ಯೆ ಸಹಕಾರ ಇಲಾಖೆ ಮಂಜುನಾಥ ಗೌಡರನ್ನು ನಿರ್ದೇಶಕ ಸ್ಥಾನದಿಂದ ವಜಾಗೊಳಿಸಿತ್ತು. ಕೋರ್ಟ್‌ನಿಂದ ತಡೆಯಾಜ್ಞೆ ತಂದರೂ, ಒತ್ತಡಕ್ಕೆ ಮಣಿದು ಗೌಡರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಬಿಜೆಪಿ ಬಣದ ಎಂ.ಬಿ. ಚನ್ನವೀರಪ್ಪ ಬ್ಯಾಂಕ್ ಅಧ್ಯಕ್ಷರಾದರು.

ಮಂಜುನಾಥ ಗೌಡ

ಈ ಮಧ್ಯೆ ಸರ್ಕಾರ ಹಗರಣದ ವಿಸ್ತೃತ ತನಿಖೆ ನಡೆಸುವಂತೆ ಸಿಐಡಿಗೆ ಸೂಚಿಸಿತ್ತು. ಮರು ತನಿಖೆ ನಡೆಸಿದ ಸಿಐಡಿ ಮಂಜುನಾಥ ಗೌಡರು ತಪ್ಪಿತಸ್ಥರು ಎಂದು ಪ್ರಸಕ್ತ ವರ್ಷದ ಸೆಪ್ಟೆಂಬರ್‌ನಲ್ಲಿ ವರದಿ ನೀಡಿದೆ. ಪುನಃ ಎಫ್‌ಐಆರ್ ದಾಖಲಿಸಿದೆ.

ರೈತರ ಖಾತೆಗೆ ಸೇರಬೇಕಾದ ಹಣ ವ್ಯವಸ್ಥಾಪಕರ ಖಾತೆಗೆ!

ಸಾಲಮನ್ನಾ ಯೋಜನೆಯ ದುರ್ಬಳಕೆ

ಪ್ರಜಾವಾಣಿ ವಾರ್ತೆ

ಮಂಡ್ಯ/ ಮೈಸೂರು: ಮಂಡ್ಯ ಸಿಟಿ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ನಡೆದ, ಸಾಲ ಮನ್ನಾ ಯೋಜನೆಯ ಹಣ ದುರುಪಯೋಗ ಪ್ರಕರಣ ರಾಷ್ಟ್ರದ ಗಮನ ಸೆಳೆದಿತ್ತು. ಬ್ಯಾಂಕ್ ಆಡಳಿತ ಮಂಡಳಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿದ್ದು, ವಿಚಾರಣಾ ಹಂತದಲ್ಲಿದೆ.

2009-10ನೇ ಸಾಲಿನಲ್ಲಿ ಆಗಿನ ಪ್ರಧಾನಿ ಮನಮೋಹನ್‌ಸಿಂಗ್ ಅವಧಿಯಲ್ಲಿ ಘೋಷಿಸಲಾಗಿದ್ದ ಸಾಲ ಮನ್ನಾ ಯೋಜನೆಯಲ್ಲಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ₹ 62 ಲಕ್ಷ ಪಡೆದಿತ್ತು. ಕೃಷಿ ಸಂಬಂಧಿತ ಉಪಕಸುಬುಗಳಿಗೆ ಸಾಲ ಪಡೆದವರ ಅನುಕೂಲಕ್ಕಾಗಿ ಯೋಜನೆಯನ್ನು ಜಾರಿಗೊಳಿಸಿತ್ತು. ವ್ಯಾಪಾರಿ, ಉದ್ಯಮಿ ಹಾಗೂ ನೌಕರರಿಗೆ ನೀಡಿದ್ದ ಸಾಲವನ್ನೇ ಕೃಷಿ ಸಂಬಂಧಿತ ಸಾಲ ಎಂದು ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್ ಆಡಳಿತ ಮಂಡಳಿಯು ಯೋಜನೆಯಡಿ ಹಣ ಪಡೆದಿತ್ತು.

ಬ್ಯಾಂಕ್ ವಿರುದ್ಧ ಪ್ರಕರಣ ದಾಖಲಾದ ನಂತರ ನಡೆದ ಸಿಐಡಿ ತನಿಖೆಯಲ್ಲಿ ಆರೋಪ ಸಾಬೀತಾಗಿತ್ತು. ಸಹಕಾರ ಇಲಾಖೆ ನಡೆಸಿದ ತನಿಖೆಯಲ್ಲೂ ಆರೋಪ ಸಾಬೀತಾಗಿ ಹಣವನ್ನು ವಾಪಸ್ ಕಟ್ಟಿಸುವಂತೆ ಆದೇಶ ನೀಡಿತ್ತು.

ಸಿಎಜಿ ವರದಿಯಲ್ಲೂ ಬ್ಯಾಂಕ್ ಅವ್ಯವಹಾರ ದಾಖಲಾಗಿತ್ತು. ಸಿಟಿ ಬ್ಯಾಂಕ್ ಸೇರಿ ಕರ್ನಾಟಕದ 3 ಸಹಕಾರ ಬ್ಯಾಂಕ್‌ಗಳಲ್ಲಿ ನಡೆದ ಅವ್ಯವಹಾರ ಲೋಕಸಭೆಯಲ್ಲೂ ಪ್ರತಿಧ್ವನಿಸಿತ್ತು.

ನಂತರ ಆಡಳಿತ ಮಂಡಳಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಯಿತು, ವಿಚಾರಣೆ ಬಾಕಿ ಉಳಿದಿದೆ. 'ಆರೋಪಿಗಳು ಸರಿಯಾಗಿ ಕೋರ್ಟ್‌ಗೆ ಹಾಜರಾಗದ ಕಾರಣ, ವಿಚಾರಣೆ ಕುಂಟುತ್ತಾ ಸಾಗಿದೆ' ಎಂದು ವಕೀಲರೊಬ್ಬರು ತಿಳಿಸಿದರು.

ವ್ಯವಸ್ಥಾಪಕರ ಖಾತೆಗೆ ಹಣ!: ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರಿ ಬ್ಯಾಂಕಿನ ಹುಣಸೂರು ಶಾಖೆಯಲ್ಲಿ ರೈತರಿಗೆ ಸೇರಬೇಕಾದ ₹ 40.52 ಕೋಟಿ ಹಣ ಹಿಂದಿನ ವ್ಯವಸ್ಥಾಪಕರಾಗಿದ್ದ ರಾಮಪ್ಪ ಪೂಜಾರಿ ಅವರ ಖಾತೆಗೆ ಜಮಾಗೊಂಡ ಪ್ರಕರಣ 2018ರಲ್ಲಿ ಬಹಿರಂಗವಾಗಿತ್ತು. ಪ್ರಕರಣವನ್ನು ಸಿಐಡಿ ತನಿಖೆಗೆ ವರ್ಗಾಯಿಸಲಾಗಿತ್ತು. ಆರೋಪಿ ರಾಮಪ್ಪ ಪೂಜಾರಿಯನ್ನು ಪೊಲೀಸರು ಬಂಧಿಸಿದ್ದರು. ಪ್ರಕರಣ ನ್ಯಾಯಾಲಯದಲ್ಲಿದೆ.

₹ 2 ಕೋಟಿ ದುರ್ಬಳಕೆ ಮಾಡಿಕೊಂಡಿದ್ದ ಕ್ಯಾಷಿಯರ್

ಕಲಬುರಗಿ: ಇಲ್ಲಿನ ಕಲಬುರಗಿ–ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಆಳಂದ ಶಾಖೆಯಲ್ಲಿ 2019-20ನೇ ಸಾಲಿನಲ್ಲಿ ₹ 2 ಕೋಟಿ ದುರ್ಬಳಕೆ ಮಾಡಿಕೊಂಡಿದ್ದ ಆರೋಪದ ಮೇರೆಗೆ ಶಾಖೆಯ ಕ್ಯಾಷಿಯರ್ ಒಬ್ಬರನ್ನು ಸೇವೆಯಿಂದ ಅಮಾನತುಗೊಳಿ-ಸಲಾಗಿದೆ. ಆರೋಪಗಳನ್ನು ಒಪ್ಪಿಕೊಂಡಿರುವ ನೌಕರ, ಅದರಲ್ಲಿ ಒಂದಷ್ಟು ಭಾಗವನ್ನು ಬ್ಯಾಂಕಿಗೆ ಮರು ಪಾವತಿಸಿದ್ದಾರೆ.

'ಅಮಾನತು ಮಾಡಿದರೆ ಸಾಲದು. ಇಡೀ ಪ್ರಕರಣದ ಸಮಗ್ರ ತನಿಖೆ ನಡೆಸಬೇಕು ಎಂದು ನಾವು ಆಡಳಿತ ಮಂಡಳಿ ಸಭೆಯಲ್ಲಿ ಒತ್ತಾಯಿಸಿದ್ದೆವು. ಅದರಂತೆ ತನಿಖೆ ಇನ್ನೂ ನಡೆಯುತ್ತಿದೆ' ಎನ್ನುತ್ತಾರೆ ಬ್ಯಾಂಕ್ ನಿರ್ದೇಶಕ ಸೋಮಶೇಖರ ಗೋನಾಯಕ.

ಸಹಕಾರದ ಒಳಗಿನ ವಿರೋಧಾಭಾಸ

● ಎಂ.ಎಸ್. ಶ್ರೀರಾಮ್

ಸಹಕಾರವು ಅತ್ಯಂತ ಜಟಿಲ ಕ್ಷೇತ್ರ. ಈ ಕ್ಷೇತ್ರದ ವಿನ್ಯಾಸದ ಒಳಗೆಯೇ ತೊಡಕುಗಳೂ ಇವೆ. ಹಾಗಾಗಿ, ಸಹಕಾರ ಕ್ಷೇತ್ರದಲ್ಲಿ ವೈಫಲ್ಯ ಕಾಣುವುದು ಸಹಜವೇ ಆಗಿದೆ.

ಬಂಡವಾಳವನ್ನು ದೂರ ಇಟ್ಟು ವ್ಯಾಪಾರ ಮಾಡುವ ಯೋಚನೆಯು ಸಹಕಾರ ಕ್ಷೇತ್ರದ ಉದಯಕ್ಕೆ ಕಾರಣ. ಬಂಡವಾಳ ಕೇಂದ್ರಿತ ವ್ಯಾಪಾರಕ್ಕೆ ವಿರುದ್ಧವಾಗಿ ಎರಡು ಪ್ರಯೋಗಗಳು ನಡೆದವು. ಅವೆಂದರೆ, ಉದ್ಯಮದ ಒಳಗೇ ಇದ್ದುಕೊಂಡು ಉದ್ಯಮವನ್ನು ತನಗೆ ಬೇಕಾದ ರೀತಿಯಲ್ಲಿ ಬಾಗಿಸಬಹುದಾದ ಕಾರ್ಮಿಕ ಸಂಘಟನೆಯ ಪ್ರಯೋಗ ಮತ್ತು ಎರಡನೆಯದು ಹೊರಗಿನಿಂದ ಬಂಡವಾಳ ಮೂಲಕ್ಕೆ ಸವಾಲೊಡ್ಡುವ ಸಹಕಾರ.

ಸಹಕಾರ ಕ್ಷೇತ್ರದಲ್ಲಿ ಹಲವು ವಿರೋಧಾಭಾಸಗಳಿವೆ. ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಬಂಡವಾಳವೂ ಬೇಕು ಹಾಗೂ ಉತ್ಪಾದಕರ ಹಾಲೂ ಬೇಕು. ಬಂಡವಾಳವನ್ನು ಹಾಲು ಉತ್ಪಾದಕರಿಂದ ಸಂಗ್ರಹಿಸುವುದು ಕಷ್ಟದ ಕೆಲಸ. ಅದೇ ಕಾಲಕ್ಕೆ ಹಾಲು ಉತ್ಪಾದನೆ ಮತ್ತು ಸರಬರಾಜು ಮಾಡುವ ರೈತರು ಸಂಘವನ್ನು ವ್ಯಾವಹಾರಿಕವಾಗಿ ನೋಡುತ್ತಾರೆ. ಸಂಘದಲ್ಲಿ ಸದಸ್ಯತ್ವ ಇದ್ದರೂ ಆ ಸಂಬಂಧವನ್ನು ದೀರ್ಘಕಾಲಿಕ ನಂಟಾಗಿ ಪರಿಗಣಿಸಲು ಗಟ್ಟಿ ಕಾರಣಗಳಿಲ್ಲ. ಬೇರೆಡೆ ಇನ್ನೂ ಹೆಚ್ಚಿನ ದರ ದೊರೆತರೆ ಹಾಲನ್ನು ಅಲ್ಲಿಗೆ ನೀಡಲು ಈ ಸದಸ್ಯರಿಗೆ ಹಿಂಜರಿಕೆಯಾಗದಿರುವುದು ಸಹಜ.

ಸಹಕಾರ ಒಂದು ವ್ಯಾಪಾರಿ ವ್ಯವಸ್ಥೆಯಾದರೂ ಅದರ ನಿರ್ವಹಣೆ ಸಹಕಾರ ತತ್ವದ ಪ್ರಕಾರ ಪ್ರಜಾತಾಂತ್ರಿಕವಾಗಿ ಇರಬೇಕು. ಆದರೆ ನಮ್ಮಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಅನುಸರಿಸಿ ವ್ಯಾಪಾರ ವ್ಯವಹಾರ ನಡೆಯುವುದಿಲ್ಲ. ಆ ವ್ಯವಸ್ಥೆಯನ್ನು ಪಾಲಿಸುವುದು ಕೇವಲ ರಾಜಕಾರಣಕ್ಕೆ ಸಂಬಂಧಿಸಿದ ಸಂಸ್ಥೆಗಳು ಮಾತ್ರ. ಹೀಗಿರುವಾಗ ವ್ಯಾಪಾರದ ಉದ್ದೇಶದ ಸಹಕಾರ ಸಂಘಟನೆಯು ಪ್ರಜಾತಾಂತ್ರಿಕವಾಗಿ ಇರಲು ಪ್ರಯತ್ನಿಸುವುದರಲ್ಲಿಯೇ ಒಂದು ವಿರೋಧಾಭಾಸವಿದೆ. ಇದರಲ್ಲಿ ರಾಜಕೀಯ ಪ್ರವೇಶಿಸಿದೆ ಎಂದು ಗೊಣಗುವುದರಲ್ಲಿ ಅರ್ಥವಿಲ್ಲ. ಇವುಗಳ ಸಂರಚನೆಯಲ್ಲಿಯೇ ರಾಜಕೀಯಕ್ಕೆ ಆಹ್ವಾನವನ್ನು ಒಡ್ಡಿದ್ದೇವೆ. ಸಹಕಾರ ಬ್ಯಾಂಕ್‌ಗಳಲ್ಲಿ ಸಹಕಾರಕ್ಕಿಂತ ಬ್ಯಾಂಕಿಂಗ್ ವ್ಯವಹಾರವೇ ಹೆಚ್ಚು ಶುದ್ಧ. ಸಹಕಾರ ಸಿದ್ಧಾಂತ ಮತ್ತು ವ್ಯಾಪಾರದ ನಡುವೆ ಸಮನ್ವಯವು ಕಷ್ಟ.

ಮುಖ್ಯವಾಹಿನಿಯ ವ್ಯಾಪಾರಕ್ಕೆ ಬಂಡವಾಳ ಮುಖ್ಯ ಹಾಗೂ ಲಾಭವೇ ಅದರ ಉದ್ದೇಶ. ಲಾಭ ಮಾಡಿಕೊಳ್ಳುವುದು ಬಂಡವಾಳ ಹೂಡಿದವನ ಮುಖ್ಯ ಗಮನ ಕೇಂದ್ರ. ಈ ಎಲ್ಲದರ ನಡುವೆ ಅತ್ಯುತ್ತಮ ಸಮನ್ವಯ ಸಾಧ್ಯ. ಆದರೆ, ಸಹಕಾರದಲ್ಲಿ ಇದು ಜಟಿಲವಾಗುತ್ತದೆ. ಸಹಕಾರಿ ಸಂಸ್ಥೆಯೊಂದು ಯಶಸ್ವಿ ಆಗುವುದು ಎಂದರೇನು? ಅಮುಲ್ ಸಂಸ್ಥೆಯನ್ನು ತೆಗೆದುಕೊಳ್ಳಿ. ಅದು ವ್ಯಾಪಾರದ ದೃಷ್ಟಿಯಿಂದ ಯಶಸ್ವಿಯಾಗಿದೆ. ಆದರೆ, ಸಹಕಾರದ ದೃಷ್ಟಿಯಿಂದ ಯಶಸ್ವಿ ಆಗಿದೆಯೇ? ಸಹಕಾರ ಸಂಸ್ಥೆಯ ವ್ಯಾಪಾರ ವೃದ್ಧಿಯಾದಂತೆ ವಿಸ್ತರಣೆ ಅಗತ್ಯವಾಗುತ್ತದೆ. ನಂದಿನಿಯ ವ್ಯಾಪಾರ ಹೆಚ್ಚಾಗಿ ಕರ್ನಾಟಕದಲ್ಲಿ ಲಭ್ಯವಿರುವ ಹಾಲು ಸಾಲದು ಎಂಬ ಪರಿಸ್ಥಿತಿ ಬಂದಾಗ ತಮಿಳುನಾಡಿನಿಂದಲೂ ಹಾಲು ಸಂಗ್ರಹಿಸಬಹುದು. ಆಗ, ಅದು ಉತ್ತಮ ವ್ಯಾಪಾರಿ ಸಂಸ್ಥೆಯಾದರೂ, ಸಹಕಾರ ಸಿದ್ಧಾಂತ ಉಳಿಯುತ್ತದೆಯೇ? ಹಾಗಂತ, ಬೆಳೆಯದೇ ಇರಲು ಸಾಧ್ಯವೇ? ಈ ವಿರೋಧಾಭಾಸಗಳಲ್ಲಿ ಸಹಕಾರ ಕ್ಷೇತ್ರವು ಸಿಲುಕಿದೆ.

ಹೀಗಾಗಿಯೇ ಸಹಕಾರ ಕ್ಷೇತ್ರದಲ್ಲಿನ ಯಶಸ್ಸನ್ನು ನಾವು ಅರ್ಥಮಾಡಿಕೊಳ್ಳಬೇಕೇ ಹೊರತು ವೈಫಲ್ಯದ ಗಾಯವನ್ನು ಬಿಡಿಸಿ ಹುಣ್ಣನ್ನು ಕೆರೆಯಬಾರದು.

(ಲೇಖಕರು ಸಹಕಾರಿ ತಜ್ಞ)

ಮುಳುವಾದ ಆಡಳಿತಾತ್ಮಕ ವೈಫಲ್ಯ

ಕೋಲಾರ: ಆಡಳಿತಾತ್ಮಕ ವೈಫಲ್ಯ ಹಾಗೂ ಹಣಕಾಸು ವ್ಯವಹಾರದಲ್ಲಿನ ಅಶಿಸ್ತಿನಿಂದಾಗಿ ಕೋಲಾರ– ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಡಿಸಿಸಿ), ಹಿಂದೆ ಆರ್ಥಿಕ ನಷ್ಟದ ಸುಳಿಗೆ ಸಿಲುಕಿ ದಿವಾಳಿಯಾಯಿತು.

ಬ್ಯಾಂಕ್‌ನ ಆಡಳಿತ ಮಂಡಳಿಯು ಸಾಲ ವಸೂಲಾತಿಯನ್ನು ಗಂಭೀರವಾಗಿ ಪರಿಗಣಿಸದ ಕಾರಣ, ಸಾಲ ವಸೂಲಾತಿ ಪ್ರಕ್ರಿಯೆ ಹಳಿ ತಪ್ಪಿತು. ದಿನದಿಂದ ದಿನಕ್ಕೆ ಸಾಲದ ಪ್ರಮಾಣ ಹೆಚ್ಚುತ್ತಲೇ ಸಾಗಿ ಠೇವಣಿದಾರರಿಗೆ ಠೇವಣಿ ಹಣವನ್ನೂ ಹಿಂದಿರುಗಿಸಲು ಸಾಧ್ಯವಾಗಲಿಲ್ಲ. ಇದರಿಂದ ಬ್ಯಾಂಕ್‌ನ ಮೇಲೆ ನಂಬಿಕೆ ಕಳೆದುಕೊಂಡ ಠೇವಣಿದಾರರು ಹಣ ಹೂಡಿಕೆಗೆ ಹಿಂದೇಟು ಹಾಕಿದರು. ಹೀಗಾಗಿ ಬ್ಯಾಂಕ್‌ಗೆ ಹಣದ ಹರಿವು ಕಡಿಮೆಯಾಯಿತು.

ದುರ್ಬಲ ಆಡಳಿತ ಮಂಡಳಿಗೆ ಸಿಬ್ಬಂದಿ ಮೇಲೆ ಹಿಡಿತವಿರಲಿಲ್ಲ. ಪರಿಸ್ಥಿತಿಯ ಲಾಭ ಪಡೆದ ಸಿಬ್ಬಂದಿ, ಬ್ಯಾಂಕ್‌ನ ಹಣ ದುರ್ಬಳಕೆ ಮಾಡಿಕೊಂಡರು. ಸಿಬ್ಬಂದಿಯ ಕಪಿಮುಷ್ಟಿಯಲ್ಲಿದ್ದ ಆಡಳಿತ ಮಂಡಳಿಯು ಸ್ವತಂತ್ರವಾಗಿ ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳದೆ ಎಡವಿದ್ದು ಬ್ಯಾಂಕನ್ನು ಮುಳುಗಿಸಿತು. ರಾಜಕೀಯ ಮರ್ಜಿಗೆ ಮಣಿದು ನೀಡಿದ ದೊಡ್ಡ ಮಟ್ಟದ ಸಾಲಗಳು ವಸೂಲಾಗದೆ ಅನುತ್ಪಾದಕ ಸಾಲ (ಎನ್‌ಪಿಎ) ಹೆಚ್ಚಿತು.

ಸಂಪೂರ್ಣ ದಿವಾಳಿಯಾದ ಬ್ಯಾಂಕನ್ನು ಬೆಂಗಳೂರು ನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಜತೆ ವಿಲೀನಗೊಳಿಸುವ ಪ್ರಯತ್ನ ನಡೆದಿತ್ತು. ಆದರೆ, 2014ರಲ್ಲಿ ಹೊಸ ಆಡಳಿತ ಮಂಡಳಿ ಅಧಿಕಾರಕ್ಕೆ ಬಂದ ನಂತರ ಬ್ಯಾಂಕ್‌ನ ನಸೀಬು ಬದಲಾಗಿ ಲಾಭ ಗಳಿಕೆ ಹಾದಿಯಲ್ಲಿ ದಾಪುಗಾಲಿಟ್ಟಿದೆ.

ಬಿಡಿಸಿಸಿ ಬೆನ್ನಿಗಂಟಿದ ಹಗರಣಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಪದೇ ಪದೇ ಹಗರಣಗಳಿಂದಾಗಿ ಸಂಕಷ್ಟಕ್ಕೆ ಸಿಲುಕುತ್ತಿದೆ.

1991ರಿಂದ 1999ರ ಅವಧಿಯಲ್ಲಿ ₹ 5.95 ಕೋಟಿ ಮೊತ್ತದ ಸಾಲ ವಿತರಣೆಯಲ್ಲಿ ಅಕ್ರಮ ನಡೆದಿತ್ತು. ಬ್ಯಾಂಕ್‌ನ ಆಗಿನ ಅಧ್ಯಕ್ಷ ನಾರಾಯಣ ಗೌಡ, ನಿರ್ದೇಶಕ ನರಸೇಗೌಡ, ಜವಾಹರ್ ಗೃಹ ನಿರ್ಮಾಣ ಸಹಕಾರ ಸಂಘದ ಖಜಾಂಚಿಯಾಗಿದ್ದ ಚಂದ್ರಶೇಖರ್, ಎಂ.ಬಿ. ಅರುಣ್ ಕುಮಾರ್ ಮತ್ತು ಬೆಟ್ಟಸ್ವಾಮಿ ಗೌಡ ವಿರುದ್ಧ ಸಿಬಿಐ ತನಿಖೆ ನಡೆಸಿತ್ತು.

ಈ ಪ್ರಕರಣದ ವಿಚಾರಣೆ ಕಳೆದ ವಾರವಷ್ಟೇ ನಿರ್ಣಾಯಕ ಹಂತ ತಲುಪಿದೆ. ಎಲ್ಲ ಆರೋಪಿಗಳ ವಿರುದ್ಧ ಅಕ್ಟೋಬರ್ 4ರಂದು ಆರೋಪ ನಿಗದಿ ಮಾಡಿರುವ ಸಿಬಿಐ ವಿಶೇಷ ನ್ಯಾಯಾಲಯ, ವಿಚಾರಣೆಯ ಅಂತಿಮ ಹಂತದ ಪ್ರಕ್ರಿಯೆ ಆರಂಭಿಸಿದೆ.

2015ರಲ್ಲಿ ಬಿಡಿಸಿಸಿ ಬ್ಯಾಂಕ್‌ನ ರೇಷ್ಮೆ ವಿನಿಮಯ ಕೇಂದ್ರದ ನೌಕರ ಕೃಷ್ಣಮೂರ್ತಿ ತನ್ನ ಪತ್ನಿಯ ಖಾತೆಗೆ ಬ್ಯಾಂಕ್‌ನ ₹ 11.47 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವುದು ಪತ್ತೆಯಾಗಿತ್ತು. ಈ ಪ್ರಕರಣವೂ ನ್ಯಾಯಾಲಯದಲ್ಲಿದೆ.

ಕಪ್ಪುಹಣದ ವಹಿವಾಟಿಗೂ ಬಳಕೆ

ರಾಜ್ಯದ ಹಲವು ಪ್ರಮುಖ ಸಹಕಾರ ಬ್ಯಾಂಕ್‌ಗಳು ಕಪ್ಪುಹಣದ ಅಕ್ರಮ ಚಲಾವಣೆ ಮತ್ತು ಸಕ್ರಮಗೊಳಿಸುವ ಕೆಲಸಕ್ಕೆ ಬಳಕೆಯಾಗುತ್ತಿವೆ. 2016ರಲ್ಲಿ ನೋಟುಗಳನ್ನು ಅಮಾನ್ಯ ಮಾಡಿದ ಸಂದರ್ಭದಲ್ಲಿ ದಕ್ಷಿಣ ಕನ್ನಡ, ಬೆಳಗಾವಿ, ತುಮಕೂರು ಸೇರಿದಂತೆ ಹಲವು ಜಿಲ್ಲೆಗಳ ಬೃಹತ್ ಸಹಕಾರ ಬ್ಯಾಂಕ್‌ಗಳಲ್ಲಿ ಸಂಶಯಾಸ್ಪದ ರೀತಿಯಲ್ಲಿ ನೂರಾರು ಕೋಟಿ ರೂಪಾಯಿ ಜಮೆಯಾಗಿತ್ತು.

ಸಹಕಾರ ಬ್ಯಾಂಕ್‌ಗಳನ್ನು ಕಪ್ಪು ಹಣದ ಅಕ್ರಮ ವಹಿವಾಟಿಗೆ ಬಳಸುತ್ತಿರುವ ಶಂಕೆಯ ಮೇಲೆ 2016ರಲ್ಲಿ ಆದಾಯ ತೆರಿಗೆ ಇಲಾಖೆ ಮತ್ತು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತನಿಖೆ ನಡೆಸಿದ್ದರು. ಹಲವು ಬ್ಯಾಂಕ್‌ಗಳು ಈಗಲೂ ಗ್ರಾಹಕರ ಸಮಗ್ರ ದಾಖಲೆಗಳನ್ನು ಬಹಿರಂಗಪಡಿಸದೇ ಬೃಹತ್ ಪ್ರಮಾಣದ ವಹಿವಾಟು ನಡೆಸುತ್ತಿರುವ ದೂರುಗಳೂ ಇವೆ.

ಬಲಾಢ್ಯರದ್ದೇ ಸವಾರಿ

ಒಂದನೇ ಪುಟದಿಂದ

ಸಾಲು ಸಾಲು ಹಗರಣ: ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಲ್ಲಿ ಬಹುತೇಕ ಸಂಸ್ಥೆಗಳು ಹಗರಣಗಳ ಸುಳಿಗೆ ಸಿಲುಕಿ ನಿಶ್ಶಕ್ತವಾಗಿವೆ. ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿದ್ದವರೇ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿದ್ದಾಗ ಹತ್ತಾರು ಕೋಟಿ ರೂಪಾಯಿಗಳ ಅಕ್ರಮ ಎಸಗಿ, ಈ ಸಂಸ್ಥೆಗಳನ್ನು ಆರ್ಥಿಕ ಬಿಕ್ಕಟ್ಟಿಗೆ ತಳ್ಳಿರುವ ಉದಾಹರಣೆಗಳಿವೆ. ಶಿವಮೊಗ್ಗ ಡಿಸಿಸಿ ಬ್ಯಾಂಕ್‌ನಲ್ಲಿ ಅಂದಿನ ಅಧ್ಯಕ್ಷ ಆರ್.ಎಂ. ಮಂಜುನಾಥ ಗೌಡ ಭಾಗಿಯಾಗಿದ್ದ ₹ 62 ಕೋಟಿ ಮೊತ್ತದ ಚಿನ್ನದ ಅಡಮಾನ ಸಾಲದ ಹಗರಣ, ಕೋಲಾರ– ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ಹಗರಣ, ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಗರಣ, ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಗರಣ ಹೀಗೆ ಸಾಲು, ಸಾಲು ಅಕ್ರಮಗಳಿಗೆ ಡಿಸಿಸಿ ಬ್ಯಾಂಕ್‌ಗಳ ಅಧಿಕಾರದ ಚುಕ್ಕಾಣಿ ಹಿಡಿದವರೇ ಕಾರಣರಾಗಿದ್ದಾರೆ. ಕೃಷಿ ಸಾಲ ಮನ್ನಾ ಯೋಜನೆ ಅನುಷ್ಠಾನದಲ್ಲೂ ಡಿಸಿಸಿ ಬ್ಯಾಂಕ್‌ಗಳಲ್ಲಿ ಭಾರಿ ಅಕ್ರಮ ನಡೆಯುತ್ತಿರುವ ಆರೋಪಗಳಿವೆ. ತುಮಕೂರು, ಮೈಸೂರು– ಚಾಮರಾಜನಗರ, ಮಂಡ್ಯ ಸೇರಿದಂತೆ ಹಲವು ಡಿಸಿಸಿಗಳಲ್ಲಿ ಇಂತಹ ಅಕ್ರಮ ನಡೆದಿವೆ. ಕೃಷಿ ಸಾಲದ ಹೆಸರಿನ ಅಕ್ರಮ, ಅಪೆಕ್ಸ್ ಬ್ಯಾಂಕ್‌ನಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳವರೆಗೂ ವ್ಯಾಪಿಸಿಕೊಂಡಿದೆ. ರಾಜ್ಯದ ನೂರಾರು ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರ ಹೆಸರಿನಲ್ಲಿ ಸಾಲ ಮಂಜೂರು ಮಾಡಿ, ವಂಚಿಸಿರುವ ಪ್ರಕರಣಗಳಿವೆ. ಸಂಘದ ಮೇಲೆ ರೈತರು ಇರಿಸಿರುವ ನಂಬಿಕೆಯನ್ನು 'ಬಂಡವಾಳ' ಮಾಡಿಕೊಂಡು ವಂಚಿಸುವ 'ಕಲೆ' ಸಹಕಾರ ಕ್ಷೇತ್ರವನ್ನು ವ್ಯಾಪಿಸುತ್ತಿದೆ.

ಸೌಹಾರ್ದದ ಹೆಸರಿನಲ್ಲಿ ಗುಳುಂ: ರಾಜ್ಯದಲ್ಲಿ 262 ಸೌಹಾರ್ದ ಸಹಕಾರಿ ಬ್ಯಾಂಕ್‌ಗಳು ಇವೆ. 5,355 ಸೌಹಾರ್ದ ಸಹಕಾರಿಗಳಿವೆ. ಈ ಸಂಸ್ಥೆಗಳ ಆಡಳಿತದ ಮೇಲೆ ಸರ್ಕಾರಕ್ಕೆ ಹೆಚ್ಚು ಹಿಡಿತವಿಲ್ಲ. ಅದನ್ನೇ ಅಸ್ತ್ರ ಮಾಡಿಕೊಂಡ ಕೆಲವರು, ಸೌಹಾರ್ದ ಸಹಕಾರಿ ಸಂಸ್ಥೆಗಳ ಹೆಸರಿನಲ್ಲಿ ಜನರಿಂದ ಹಣ ಸಂಗ್ರಹಿಸಿ ವಂಚಿಸುವುದು ಹೆಚ್ಚುತ್ತಿದೆ. ಇತ್ತೀಚಿನ ದಿನಗಳಲ್ಲಿ ನಗರ ಸಹಕಾರಿ ಬ್ಯಾಂಕ್‌ಗಳೂ ಅಕ್ರಮ, ವಂಚನೆಯ ತಾಣಗಳಾಗುತ್ತಿವೆ. ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಹಗರಣ ಇದಕ್ಕೆ ತಾಜಾ ಉದಾಹರಣೆ. ರಾಜ್ಯದ ಉದ್ದಗಲಕ್ಕೆ ಇಂತಹ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇವೆ. ಆದರೆ, ಬಹುತೇಕ ಪ್ರಕರಣಗಳಲ್ಲಿ ಬಹುತೇಕ ಬಲಾಢ್ಯರೇ ಸೂತ್ರಧಾರಿಗಳಾಗಿರುವುದರಿಂದ ಸಹಕಾರಿ ಸಂಸ್ಥೆಗಳನ್ನು ಹಗರಣ ಮುಕ್ತಗೊಳಿಸುವುದು ಮರೀಚಿಕೆಯಾಗಿ ಕಾಣುತ್ತಿದೆ.

ಕೋಟಿಗಟ್ಟಲೇ ಸಾಲ ಪಡೆದವರು

ಸಕ್ಕರೆ ಕಾರ್ಖಾನೆ	ಪಾಲುದಾರರು	ಸಾಲದ ಮೊತ್ತ (₹ಕೋಟಿಗಳಲ್ಲಿ)
ಜಮಖಂಡಿ ಶುಗರ್ಸ್, ಬಾಗಲಕೋಟೆ	ಶಾಸಕ ಆನಂದ್ ನ್ಯಾಮಗೌಡ	85
ಸಂಗಮನಾಥ ಶುಗರ್ಸ್, ವಿಜಯಪುರ	ಮಂಜುನಾಥ ಆರ್. ಕಬಾಡಿ	85
ಇಂಡಿಯನ್ ಶುಗರ್ಸ್, ವಿಜಯಪುರ	ರಂಜಿತ್ ಬಾಬನ್ ರಾವ್	60
ಮೆಲ್‌ಬ್ರೋ ಶುಗರ್ಸ್, ಬಾಗಲಕೋಟೆ	ಸಂತೋಷ್ ಎಂ.	36.30
ಅಥಣಿ ಶುಗರ್ಸ್, ಬೆಳಗಾವಿ	ಶಾಸಕ ಶ್ರೀಮಂತ ಬಿ. ಪಾಟೀಲ	35
ಶಾಮನೂರು ಶುಗರ್ಸ್	ಶಾಸಕ ಶಾಮನೂರು ಶಿವಶಂಕರಪ್ಪ	30
ಮನಾಲಿ ಶುಗರ್ಸ್, ವಿಜಯಪುರ	ಮಾಜಿ ಶಾಸಕ ಜೆ.ಟಿ. ಪಾಟೀಲ	30
ಶಿವಶಕ್ತಿ ಶುಗರ್ ಮಿಲ್, ಬೀದರ್	ಸುನೀಲ್ ಅಗರ್‌ವಾಲ್	19.50
ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್, ವಿಜಯಪುರ	ಸುಧೀರ್ ಗುರುಗೌಡ ಬಿರಾದಾರ	10
ಜೆಮ್ ಶುಗರ್ಸ್, ಬಾಗಲಕೋಟೆ	ಆರ್. ಶೇಖರ್	5.50
ಭವಾನಿ ಖಂಡಸಾರಿ, ಬೀದರ್	ಜೆಡಿಎಸ್ ಶಾಸಕ ಬಂಡೆಪ್ಪ ಕಾಶೆಂಪೂರ	5

ವಸೂಲಾಗದ ಸಾಲ ಶೇ 6.42

ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ₹ 24,608.80 ಕೋಟಿ ಸಾಲ ನೀಡಿವೆ. ಈ ಪೈಕಿ ಶೇಕ 6.42ರಷ್ಟು ವಸೂಲಾಗದ ಸಾಲ (ಎನ್‌ಪಿಎ) ಇದೆ ಎಂಬುದು ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಅಂಕಿಅಂಶಗಳಲ್ಲಿದೆ.

ಕಲಬುರ್ಗಿ ಡಿಸಿಸಿ ಬ್ಯಾಂಕ್ ಅತ್ಯಧಿಕ ಶೇ 22.61ರಷ್ಟು ಎನ್‌ಪಿಎ ಹೊಂದಿದೆ. ದಕ್ಷಿಣ ಕನ್ನಡ ಡಿಸಿಸಿ ಶೇ 9.57, ತುಮಕೂರು ಡಿಸಿಸಿ ಶೇ 8.93, ಧಾರವಾಡ ಡಿಸಿಸಿ ಶೇ 8.56 ಎನ್‌ಪಿಎ ಹೊಂದಿವೆ. ರಾಯಚೂರು ಡಿಸಿಸಿ ಅತಿ ಕಡಿಮೆ (ಶೇ 2.36) ಎನ್‌ಪಿಎ ಹೊಂದಿದೆ.

ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಿಂದ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ ಸಾಲ

ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ, ಬೆಳಗಾವಿ	₹ 90 ಕೋಟಿ
ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ಬಾಗಲಕೋಟೆ	₹ 104 ಕೋಟಿ
ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ, ಬೀದರ್	₹ 15 ಕೋಟಿ
ಸೋಮಶೇಖರ ಸಹಕಾರಿ ಸಕ್ಕರೆ ಕಾರ್ಖಾನೆ, ಬೆಳಗಾವಿ	₹ 35 ಕೋಟಿ
ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ, ವಿಜಯಪುರ	₹ 197.62 ಕೋಟಿ
ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ, ಬೆಳಗಾವಿ	₹ 86.18 ಕೋಟಿ
ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ, ಖಾನಾಪುರ	₹ 25 ಕೋಟಿ
ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದೊಡ್ಡಭಾತಿ	₹ 13 ಕೋಟಿ
ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ, ಗೋಕಾಕ	₹ 12.12 ಕೋಟಿ
ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ	₹ 40 ಕೋಟಿ

ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಸದ್ಯದ ಸ್ಥಿತಿ

ಷೇರು ಬಂಡವಾಳ	₹ 845.89 ಕೋಟಿ
ದುಡಿಯುವ ಬಂಡವಾಳ	₹ 24,746.82 ಕೋಟಿ
ಠೇವಣಿ	₹ 11,868.73 ಕೋಟಿ
ಸಾಲ	₹ 10,543.04 ಕೋಟಿ
ಹೂಡಿಕೆ	₹ 5,491.20 ಕೋಟಿ
ಸಾಲ ವಿತರಣೆ	₹ 17,838.42 ಕೋಟಿ
ಲಾಭ	₹ 60 ಕೋಟಿ
ಅನುತ್ಪಾದಕ ಆಸ್ತಿ	ಶೇ 4.53

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶೀಘ್ರವೇ ಕೋವಿಡ್ ನಿಯಮ ಸರಳೀಕರಣ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕೋವಿಡ್ ನಿಯಂತ್ರಣದಲ್ಲಿ ಇರುವುದರಿಂದ ಕೋವಿಡ್ ನಿಯಮಗಳನ್ನು ಶೀಘ್ರದಲ್ಲೇ ಸರಳೀಕರಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹೊನ್ನಾಳಿ ತಾಲ್ಲೂಕಿನ ಎಚ್. ಕಡದಕಟ್ಟೆಯ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರ ಜತೆಗೆ ಅವರು ಮಾತನಾಡಿದರು.

ಎರಡು ದಿನಗಳಲ್ಲಿ ತಜ್ಞರ ಜೊತೆ ಈ ಬಗ್ಗೆ ಚರ್ಚಿಸಲಾಗುವುದು. ಶಾಲೆ ಸೇರಿ ವಿವಿಧ ವಿಚಾರಗಳ ಬಗ್ಗೆ ಚಿಂತನೆ ಮಾಡಿ ನಿಯಮ ಸರಳೀಕರಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

‘ಬಿ.ಎಸ್. ಯಡಿಯೂರಪ್ಪ ಅವರು ಸಿಂದಗಿ ಮತ್ತು ಹಾನಗಲ್ ಉಪಚುನಾವಣೆಯ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ. ಅದಕ್ಕೆ ದಿನಾಂಕ ಕೂಡ ನಿಗದಿಯಾಗಿದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಮುಖ್ಯಮಂತ್ರಿ ಬದಲಾಗಲಿದ್ದಾರೆ ಎಂದು ಸಿ.ಎಂ. ಇಬ್ರಾಹಿಂಗೆ ಎಲ್ಲಿ ಜ್ಞಾನೋದಯವಾಯಿತು ಎಂಬುದು ಗೊತ್ತಿಲ್ಲ’ ಎಂದು ಬಸವರಾಜ ಬೊಮ್ಮಾಯಿ ಅವರು ಇಬ್ರಾಹಿಂ ಹೇಳಿಕೆಗೆ ಪ್ರತಿಕ್ರಿಯಿಸಿದರು.

ಕೋವಿಡ್: 16 ತಿಂಗಳಲ್ಲಿ ಕನಿಷ್ಠ ಪ್ರಕರಣ ದಾಖಲು

ಬೆಂಗಳೂರು: ರಾಜ್ಯದಲ್ಲಿ ಶನಿವಾರ 264 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. 16 ತಿಂಗಳಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳು ಇವಾಗಿವೆ.

ಕಳೆದ ವರ್ಷ ಜೂನ್ ತಿಂಗಳಲ್ಲಿ ಇದಕ್ಕಿಂತ ಕಡಿಮೆ ಪ್ರಕರಣಗಳು 24 ಗಂಟೆಗಳ ಅವಧಿಯಲ್ಲಿ ದೃಢಪಟ್ಟಿದ್ದವು. ಬಳಿಕ ಪ್ರಕರಣಗಳ ಸಂಖ್ಯೆ ಏರಿಳಿತ ಕಂಡಿದ್ದವು.

ಹೊಸದಾಗಿ 26 ಡೆಲ್ಟಾ (ಬಿ.1617.2) ಪ್ರಕರಣಗಳು ದೃಢಪಟ್ಟಿವೆ. ಈ ತಳಿಯ ವೈರಾಣು ಹೊಂದಿದವರ ಸಂಖ್ಯೆ 1,679ಕ್ಕೆ ಏರಿಕೆಯಾಗಿದೆ. ಅದೇ ರೀತಿ, ಡೆಲ್ಟಾ ಎ.ವೈ.4 ತಳಿಯ ವೈರಾಣು 54 ಮಂದಿಯಲ್ಲಿ ಖಚಿತಪಟ್ಟಿದೆ. ಈ ಪ್ರಕರಣಗಳ ಸಂಖ್ಯೆ 256ಕ್ಕೆ ತಲುಪಿದೆ. ಕೆಲದಿನಗಳ ಹಿಂದೆ ಕೋವಿಡ್ ಪೀಡಿತರಾದವರಲ್ಲಿ ಕೆಲವರ ಮಾದರಿಗಳನ್ನು ಅನುಕ್ರಮಣಿಕೆ (ಜಿನೋಮಿಕ್ ಸಿಕ್ವೆನ್ಸಿಸ್) ಪರೀಕ್ಷೆಗೆ ಪ್ರಯೋಗಾಯಲಕ್ಕೆ ಕಳುಹಿಸಲಾಗಿತ್ತು. ಅವುಗಳ ವರದಿ ಈಗ ಬಂದಿದ್ದು, ಸೋಂಕಿತರಾದವರಲ್ಲಿ ಬಹುತೇಕರು ಚೇತರಿಸಿಕೊಂಡಿದ್ದಾರೆ.

‘ಬೆಲೆ ಏರಿಕೆಗೆ ಲೂಟಿ, ನೀತಿಯೇ ಕಾರಣ’

ಪ್ರಜಾವಾಣಿ ಸಂವಾದ

ಬೆಂಗಳೂರು: ‘ಮಧ್ಯವರ್ತಿಗಳು, ಕಾರ್ಪೊರೇಟ್ ಕಂಪನಿಗಳು ಲೂಟಿ ಮಾಡುತ್ತಿರುವುದೇ ಬೆಲೆ ಏರಿಕೆಗೆ ಕಾರಣ’ ಎಂದು ಕಾಂಗ್ರೆಸ್, ಜನವಾದಿ ಸಂಘಟನೆಗಳ ಪ್ರತಿನಿಧಿಗಳು ಪ್ರತಿಪಾದಿಸಿದರೆ, ‘ಬೆಲೆ ಏರಿಕೆಗೆ ಹಿಂದಿನ ಕಾಂಗ್ರೆಸ್ ಸರ್ಕಾರವೇ ಕಾರಣ. 2024ರ ವೇಳೆಗೆ ಪರಿಸ್ಥಿತಿ ಸುಧಾರಿಸಲಿದೆ’ ಎಂದು ಬಿಜೆಪಿ ಪ್ರತಿನಿಧಿ ಆಶಾಭಾವನೆ ವ್ಯಕ್ತಪಡಿಸಿದರು.

‘ಪ್ರಜಾವಾಣಿ’ ಶನಿವಾರ ಹಮ್ಮಿಕೊಂಡಿದ್ದ ‘ಬೆಲೆ ಏರಿಕೆ ನಿಯಂತ್ರಿಸಲು ಏಕೆ ಸಾಧ್ಯವಾಗುತ್ತಿಲ್ಲ?’ ಎಂಬ ವಿಷಯ ಕುರಿತ ಸಂವಾದದಲ್ಲಿ ಈ ರೀತಿಯ ಅಭಿಪ್ರಾಯಗಳು ವ್ಯಕ್ತವಾದವು.

ಪೂರ್ಣ ಸಂವಾದ ವೀಕ್ಷಿಸಲು:
facebook.com/prajavani.net

ಪೂರ್ಣ ಸಂವಾದ ವೀಕ್ಷಿಸಲು
- https://youtu.be/sRKX3d8qvkM

‘ಬಂಡವಾಳಶಾಹಿಪರ ನೀತಿ ಕಾರಣ’

ಆರ್ಥಿಕ ನೀತಿ, ಬಂಡವಾಳಶಾಹಿ ಪರ ನೀತಿಯಿಂದ ಬೆಲೆ ಏರಿಕೆ ನಿಯಂತ್ರಣ ಆಗುತ್ತಿಲ್ಲ. ಸರ್ಕಾರ ಉದ್ದೇಶಪೂರ್ವವಾಗಿ ಮಧ್ಯವರ್ತಿಗಳು, ಏಜೆನ್ಸಿಗಳು, ಕಾರ್ಪೊರೇಟ್‌ಗಳಿಗೆ ಲಾಭ ಮಾಡಲು ಹೊರಟಿದೆ. ಹಸಿವಿನ ಸೂಚ್ಯಂಕದಲ್ಲಿ ಭಾರತ ಕುಸಿಯಲು ಇದೇ ಕಾರಣ. ಆಹಾರ ಉತ್ಪಾದನೆಯನ್ನು ನೇರವಾಗಿ ತಲುಪಿಸುವ ವ್ಯವಸ್ಥೆ ಇಲ್ಲ. ಬಂಡವಾಳಶಾಹಿಗಳ ಮುಖ್ಯ ಉದ್ದೇಶವೇ ಲಾಭಗಳಿಕೆ. ಬೆಲೆ ಏರಿಸದಿದ್ದರೆ ಲಾಭ ಹೇಗೆ ಸಾಧ್ಯ? 1990ರವರೆಗೆ ತೈಲ ನೀತಿ ಇತ್ತು. ಈಗ ಮಾತೆತ್ತಿದರೆ ಕೋವಿಡ್, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಏರಿಕೆ ಕಾರಣ ಎಂದು ಸರ್ಕಾರ ಕಾರಣ ನೀಡುತ್ತಿದೆ. ಬೆಲೆ ಏರಿಕೆ ನಿಯಂತ್ರಣ ಆಗಬೇಕಾದರೆ ಸರ್ಕಾರ ತನ್ನ ನೀತಿಯನ್ನು ಬದಲಾಯಿಸಬೇಕು. ಉದ್ಯೋಗ ಸೃಷ್ಟಿ ಮಾಡಬೇಕು. ಕೊಳ್ಳುವ ಶಕ್ತಿ ಹೆಚ್ಚಿಸಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು ನಗರಕ್ಕೆ ವಿಸ್ತರಿಸಬೇಕು. ರೈತ ವಿರೋಧಿ ಕಾಯ್ದೆಗಳನ್ನು ವಾಪಸು ಪಡೆಯಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು.

ಕೆ.ನೀಲಾ, ರಾಜ್ಯ ಉಪಾಧ್ಯಕ್ಷೆ, ಜನವಾದಿ ಮಹಿಳಾ ಸಂಘಟನೆ

‘ಇ– ಕಾಮರ್ಸ್‌ನಿಂದ ಸಂಕಷ್ಟ’

ಉತ್ಪನ್ನಗಳ ಉತ್ಪಾದನೆ ಕಡಿಮೆ ಆಗಿದೆ. ವಿದ್ಯುತ್ ದರ, ತೈಲ ಬೆಲೆ ಹೆಚ್ಚಳವಾಗಿದೆ. ಬೆಲೆ ಏರಿಕೆಗೆ ಇದೂ ಕಾರಣವಾಗಿದೆ. 2019–20ಕ್ಕೆ ಹೋಲಿಸಿದರೆ, ಅಗತ್ಯ ವಸ್ತುಗಳ ಬೆಲೆ ಕಡಿಮೆಯೇ ಇದೆ. ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ ರಾಜ್ಯಗಳಲ್ಲಿ ಬೆಳೆ ಇಲ್ಲ. ಉತ್ಪಾದನೆ ಹೆಚ್ಚಳವಾದರೆ ಬೆಲೆ ಕಡಿಮೆ ಆಗುತ್ತದೆ. ಎಪಿಎಂಸಿಯಲ್ಲಿ ಯಾರ್ಡ್ ಒಳಗೆ ವ್ಯಾಪಾರ ಮಾಡುವವರು ಸೆಸ್ ನೀಡಬೇಕಾಗಿದೆ. ಆದರೆ, ಯಾರ್ಡ್ ಹೊರಗೆ ಮಾರಾಟ ಮಾಡುವವರಿಂದ ಸೆಸ್ ಸಂಗ್ರಹಿಸಲಾಗುತ್ತಿದೆ. ಇದರಿಂದ ವ್ಯಾಪಾರಿಗಳಿಗೆ ನಷ್ಟವಾಗುತ್ತಿದೆ. ಇ– ಕಾಮರ್ಸ್ ಭರಾಟೆ ಚಿಲ್ಲರೆ ವರ್ತಕರ ಮೇಲೆ ಭಾರಿ ಪರಿಣಾಮ ಬೀರಿದೆ. ಬಹುರಾಷ್ಟ್ರೀಯ ಕಂಪನಿಗಳು ಹೊಲಗಳಿಗೇ ಹೋಗಿ ಉತ್ಪನ್ನಗಳನ್ನು ಖರೀದಿಸುತ್ತಿವೆ. ಕಾರ್ಪೊರೇಟ್, ಎಂಎನ್‌ಸಿ ಕಂಪನಿಗಳು, ಇ– ಕಾಮರ್ಸ್‌ಗಳಿಗೆ ರಾಜ್ಯ– ಕೇಂದ್ರ ಸರ್ಕಾರಗಳು ರತ್ನ ಕಂಬಳಿ ಹಾಸಿದೆ. ದೊಡ್ಡಮಟ್ಟದಲ್ಲಿ ವ್ಯವಹಾರ ಮಾಡುವ ಇಂಥ ಕಂಪನಿಗಳನ್ನು ನಿಯಂತ್ರಿಸಬೇಕಿದೆ. ಅವು ಅವೈಜ್ಞಾನಿಕವಾಗಿ ಬೆಲೆ ಪೈಪೋಟಿಗಿಳಿಯುತ್ತಿವೆ. ಇದರಿಂದ ಗುಲಾಮಗಿರಿಗೆ ಒಳಗಾಗುವ ಸ್ಥಿತಿ ನಿರ್ಮಾಣ ಆಗಿದೆ.

ಎಂ. ರಮೇಶ್, ಜಂಟಿ ಕಾರ್ಯದರ್ಶಿ, ಧಾನ್ಯ ವರ್ತಕರ ಸಂಘ

‘ಸರ್ಕಾರ ನೈತಿಕ ಹೊಣೆ ಹೊರಬೇಕು’

ಹಸಿವಿನ ಸೂಚ್ಯಂಕದಲ್ಲಿ ಭಾರತ ಇನ್ನಷ್ಟು ಕುಸಿದಿದೆ. ಇದರ ಹೊಣೆಯನ್ನು ಸರ್ಕಾರ ಹೊತ್ತುಕೊಳ್ಳಬೇಕು. ಕೇಂದ್ರ ಸರ್ಕಾರದ ನೀತಿ, ನಿಯಮ, ಆಡಳಿತ ವೈಫಲ್ಯಗಳಿಂದ ದಿನಬಳಕೆ ವಸ್ತುಗಳ ಬೆಲೆ ಹೆಚ್ಚಿದೆ. ಆದಾಯದ ಮೂಲ ಕಡಿಮೆಯಾಗಿ, ಕೊಳ್ಳುವ ಶಕ್ತಿಯೂ ಕಡಿಮೆಯಾದಾಗ ಜೀವನ ದುರ್ಬರ ಆಗುತ್ತದೆ. ಆಹಾರ ಭದ್ರತಾ ಕಾಯ್ದೆಯಡಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಹಾದಿ ತಪ್ಪಿದೆ. ಉದ್ದೇಶಿತ ರೈತ ಕಾಯ್ದೆಗಳು, ಬಹುರಾಷ್ಟ್ರೀಯ ಕಂಪನಿಗಳಿಗೆ ನೆರವು, ಖಾಸಗೀಕರಣದ ಪಿತೂರಿಯಿಂದ ಸಣ್ಣ ರೈತರು ಸಂಕಷ್ಟದಲ್ಲಿದ್ದಾರೆ. ಅಧಿಕಾರದಲ್ಲಿರುವ ಸರ್ಕಾರಕ್ಕೆ ನೈತಿಕ ಹೊಣೆ ಇರುತ್ತದೆ. ಕಚ್ಚಾ ತೈಲ ಬೆಲೆಯಲ್ಲಿ ಕಡಿಮೆಯಾದರೂ ಅದರ ಲಾಭ ಗ್ರಾಹಕರಿಗೆ ಸಿಗುತ್ತಿಲ್ಲ. ಸರ್ಕಾರದ ತಪ್ಪುಗಳಿಂದ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿದೆ. ಆದರೆ, ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ಬಿಜೆಪಿಯವರು ಕೋವಿಡ್ ಕಾರಣ ಹೇಳುತ್ತಾರೆ.

ರಮೇಶ್ ಬಾಬು, ರಾಜ್ಯ ಕಾಂಗ್ರೆಸ್ ವಕ್ತಾರ

‘ಭಾರತಕ್ಕೆ ಮಾತ್ರ ಸೀಮಿತ ಆಗಿಲ್ಲ’

ಬೆಲೆ ಏರಿಕೆ ಭಾರತಕ್ಕೆ ಮಾತ್ರ ಸೀಮಿತ ಆಗಿಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಆಗಿದೆ. ನಮ್ಮಲ್ಲಿಯೇ ಉತ್ಪನ್ನಗಳನ್ನು ಬೆಳೆದರೆ ಬೆಲೆಯಲ್ಲಿ ಸಂಪೂರ್ಣ ಹತೋಟಿ ಸಾಧ್ಯ. ಹಸಿವು ಸೂಚ್ಯಂಕದಲ್ಲಿ ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶಗಳು 2014ರಲ್ಲಿಯೂ ನಮಗಿಂತ ಮೇಲೆ ಇದ್ದವು. ಆಹಾರ ಭದ್ರತಾ ಕಾಯ್ದೆ 2014ರಲ್ಲಿ ಕೇವಲ 11 ರಾಜ್ಯಗಳಲ್ಲಿ ಮಾತ್ರ ಇತ್ತು. ಬಿಜೆಪಿ ಸರ್ಕಾರ ಅದನ್ನು 29 ರಾಜ್ಯಗಳು 8 ಕೇಂದ್ರಾಡಳಿತ ಪ್ರದೇಶಗಳಿಗೆ ವಿಸ್ತರಿಸಿದೆ. ಯುಪಿಎ ಸರ್ಕಾರ ಅವಧಿಯಲ್ಲಿಯೂ ಬೆಲೆ ಏರಿಕೆ ಆಗಿದೆ. ಬೆಲೆ ಏರಿಕೆಗೆ ಮೋದಿ ಸರ್ಕಾರ ಕಾರಣ ಎಂದು ಗೂಬೆ ಕೂರಿಸುವುದು ಸರಿಯಲ್ಲ. ಅಗತ್ಯ ವಸ್ತುಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯಾದರೆ ಮಾತ್ರ ಬೆಲೆ ನಿಯಂತ್ರಣ ಸಾಧ್ಯ. ಕೇಂದ್ರದಲ್ಲಿ ಮೋದಿ ಸರ್ಕಾರ ಬಂದ ಬಳಿಕ ಹಲವು ಅಭಿವೃದ್ಧಿ ಕೆಲಸಗಳು ಆಗಿವೆ. ತೆರಿಗೆ ಸೋರಿಕೆಗೆ ಕಡಿವಾಣ ಬಿದ್ದಿದೆ. ಅಗತ್ಯ ವಸ್ತುಗಳು ಮೇಲಿನ ನಿಯಂತ್ರಣ ಮುಂದೆಯೂ ಸರ್ಕಾರದ ಹಿಡಿತದಲ್ಲೇ ಇರಲಿದೆ. ಮುಂದಿನ ದಿನಗಳಲ್ಲಿ ಬೆಲೆ ಏರಿಕೆ ನಿಯಂತ್ರಣ ಖಚಿತ.

ವಿಶ್ವನಾಥ ಭಟ್, ರಾಜ್ಯ ಬಿಜೆಪಿ ಆರ್ಥಿಕ ಪ್ರಕೋಷ್ಠದ ಸದಸ್ಯ

‘ಕುರ್ಚಿ ಉಳಿವಿಗಾಗಿ ಆರ್‌ಎಸ್‌ಎಸ್ ಹೊಗಳಿದ ಬೊಮ್ಮಾಯಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳಲು ಆರ್‌ಎಸ್‌ಎಸ್ ಹೊಗಳುತ್ತಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಶನಿವಾರ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಸವರಾಜ ಬೊಮ್ಮಾಯಿ ಮೂಲತಃ ಆರ್‌ಎಸ್‌ಎಸ್ ಅಲ್ಲ. ಸಿಎಂ ಸ್ಥಾನ ಉಳಿಸಿಕೊಳ್ಳಬೇಕೆಂದರೆ, ಆರ್‌ಎಸ್‌ಎಸ್ ಹೊಗಳಬೇಕಾದ ಅನಿವಾರ್ಯತೆಯಿದೆ’ ಎಂದರು.

‘ಸಿ.ಎಂ. ಇಬ್ರಾಹಿಂ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದ್ದು ಕಾಂಗ್ರೆಸ್. ಹೀಗಿದ್ದಾಗ ಅವರು ಕಾಂಗ್ರೆಸ್ಸಿನಲ್ಲಿ ಅಲ್ಪಸಂಖ್ಯಾತರಿಗೆ ಅಧಿಕಾರ ಸಿಗುತ್ತಿಲ್ಲ ಎನ್ನುವುದರಲ್ಲಿ ಅರ್ಥವಿಲ್ಲ’ ಎಂದು ಹೇಳಿದರು

‘ದೇಶ ಉದ್ಧಾರ ಮಾಡುತ್ತೇವೆ ಎನ್ನುತ್ತಿದ್ದ ಬಿಜೆಪಿಯವರು ಬಡತನ ಕೊಡುಗೆಯಾಗಿ ನೀಡಿದ್ದಾರೆ. ಹಸಿವಿನ ಸೂಚ್ಯಂಕದಲ್ಲಿ ಭಾರತ 2020 ರಲ್ಲಿ 94ನೇ ಸ್ಥಾನದಲ್ಲಿತ್ತು. ಇದೀಗ 101ನೇ ಸ್ಥಾನಕ್ಕೆ ಬಂದಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆ’ ಎಂದು ವ್ಯಂಗ್ಯವಾಡಿದರು.

‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಹೈಕಮಾಂಡ್ ಯಾರನ್ನು ಮುಖ್ಯಮಂತ್ರಿ ಮಾಡುತ್ತದೆ ಎಂದು ನೋಡೋಣ. ಮುಸ್ಲಿಮರನ್ನೇ ಮಾಡಲಿ, ಪರಿಶಿಷ್ಟ ವರ್ಗದವರನ್ನೇ ಮಾಡಲಿ. ಅದಕ್ಕೆ ನನ್ನ ವಿರೋಧವೇನೂ ಇಲ್ಲ. ಶಾಸಕರ ತೀರ್ಮಾನ ಅಂತಿಮವಾಗಿದೆ’ ಎಂದು ಅವರು ಹೇಳಿದರು.

ಆರ್‌ಎಸ್‌ಎಸ್ ಕಾರ್ಯಕರ್ತರಿಂದ ಹಣ ವಸೂಲಿ: ಆರೋಪ

ರಾಮನಗರ: ಸರ್ಕಾರವು ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಸಿಂಡಿಕೇಟ್ ಸದಸ್ಯರನ್ನಾಗಿ ನೇಮಿಸಿದ್ದು, ಯಾವುದೇ ಕೆಲಸ ಆಗಬೇಕಾದರೂ ₹ 1 ಲಕ್ಷದಿಂದ ₹ 2 ಲಕ್ಷಕ್ಕೆ ಬೇಡಿಕೆ ಇಡಲಾಗುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಶನಿವಾರ ಚನ್ನಪಟ್ಟಣದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘40 ವರ್ಷದ ಹಿಂದಿನ ಆರ್‌ಎಸ್‌ಎಸ್ ಬೇರೆ, ಈಗಿನ ಸಂಘಟನೆಯೇ ಬೇರೆ. ನಾವೇನು ಇವರಿಗೆ ದೇಶ ಒಡೆಯಲು ಗುತ್ತಿಗೆ ಕೊಟ್ಟಿಲ್ಲ’ ಎಂದರು.

‘ಎಲ್ಲ ಹಿಂದೂ ದೇಗುಲಗಳನ್ನು ನಮ್ಮ ಸುಪರ್ದಿಗೆ ಕೊಡಿ ಎಂದು ಮೋಹನ್ ಭಾಗವತ್ ಕೇಳಿದ್ದಾರೆ. ಆದರೆ, ಹಿಂದೆ ಹಿಂದೂ ಹೆಸರಿನಲ್ಲಿ ಸಂಗ್ರಹವಾದ ದೇಣಿಗೆಗಳ ಲೆಕ್ಕ ಮಾತ್ರ ಕೊಡುತ್ತಿಲ್ಲ. 1989–1991ರ ನಡುವೆ ಅಡ್ವಾಣಿಯವರು ರಥಯಾತ್ರೆ ಮಾಡಿ ಸಂಗ್ರಹಿಸಿದ ಹಣ ಏನಾಯಿತು. ಆ ಹಣ ಎಲ್ಲಿದೆ. ಈಚೆಗೆ ಸಂಗ್ರಹಿಸಿದ ಹಣದ ಲೆಕ್ಕ ಎಲ್ಲಿ’ ಎಂದು ಪ್ರಶ್ನಿಸಿದರು.

ಹಾನಗಲ್ ತಾಲ್ಲೂಕು ಮಲಗುಂದ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಪರ ಶನಿವಾರ ಏರ್ಪಡಿಸಿದ್ದ ಪ್ರಚಾರ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು

ಮೈಸೂರು ಅರಮನೆ ಆವರಣದೊಳಗೆ ಶುಕ್ರವಾರ ನಡೆದ ಜಂಬೂಸವಾರಿ ಕಣ್ತುಂಬಿಕೊಳ್ಳುವ ತವಕದಲ್ಲಿ ಚಾಮರಾಜೇಂದ್ರ ವೃತ್ತದಲ್ಲಿ ನೂಕುನುಗ್ಗಲು ಉಂಟಾಗಿ ಪ್ರತಿಮೆಗೆ ಹಾನಿಯಾಗಿದ್ದು, ಕೈಯಲ್ಲಿದ್ದ ಕತ್ತಿಯೇ ತುಂಡಾಗಿದೆ

–ಪ್ರಜಾವಾಣಿ ಚಿತ್ರ

‘ರಾಮಮಂದಿರಕ್ಕೆ ಎಚ್‌ಡಿಕೆ ಕೊಟ್ಟಿರುವ ಹಣವೆಷ್ಟು ತಿಳಿಸಲಿ’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಎಚ್.ಡಿ.ಕುಮಾರಸ್ವಾಮಿ ಅವರು ರಾಮಮಂದಿರಕ್ಕೆ ಎಷ್ಟು ಹಣ ಕೊಟ್ಟಿದ್ದಾರೆ ಎಂಬುದನ್ನು ಮೊದಲು ತಿಳಿಸಿ, ನಂತರ ಲೆಕ್ಕ ಕೇಳಲಿ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರತಿಕ್ರಿಯಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕುಮಾರಸ್ವಾಮಿ ಅವರ ಮಾತು ‘ತಾನು ಕಳ್ಳ ಪರರ ನಂಬ’ ಗಾದೆ ನೆನಪಿಸುವಂತಿದೆ. ರಾಮಮಂದಿರ ಚಳವಳಿಯಲ್ಲಿ ಅವರ ಪಾತ್ರ ಏನು’ ಎಂದು ಅವರು ಪ್ರಶ್ನಿಸಿದರು.

‘ರಾಮ ಮಂದಿರಕ್ಕೆ ಹಣ ಕೊಟ್ಟವರು ಲೆಕ್ಕ ಕೇಳಲು ಅಧಿಕಾರ ಇದೆ. ಹಣ ದುರುಪಯೋಗ ಮಾಡಿಕೊಳ್ಳಲು ಅಲ್ಲಿ ‘ಫ್ಯಾಮಿಲಿ ಖಾಂದಾನ್’ ಇಲ್ಲ’ ಎಂದು ಲೇವಡಿ ಮಾಡಿದರು.

‘ಅಲ್ಪಸಂಖ್ಯಾತರ ಮತಗಳಿಕೆಗೆ ಆರ್‌ಎಸ್‌ಎಸ್ ವಿರುದ್ಧ ಟೀಕೆ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಅಲ್ಪಸಂಖ್ಯಾತರ ಮತ ಪಡೆಯಲು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಆರ್‌ಎಸ್‌ಎಸ್ ವಿರುದ್ಧ ಟೀಕೆ ಮಾಡುತ್ತಾರೆ. ಆದರೆ ನಾವು ಮುಸ್ಲಿಂ ಸೇರಿದಂತೆ ಯಾವುದೇ ಸಮುದಾಯದ ವಿರೋಧಿಗಳಲ್ಲ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಸಾಂದ್ರಕ ಘಟಕಕ್ಕೆ ಶನಿವಾರ ಚಾಲನೆ ನೀಡಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಮುಗ್ಧ ಮುಸ್ಲಿಮರ ಮತಕ್ಕಾಗಿ ಆರ್‌ಎಸ್‌ಎಸ್ ಹಾಗೂ ಬಿಜೆಪಿಯನ್ನು ಭೂತದಂತೆ ಇವರು ತೋರಿಸುತ್ತಿದ್ದಾರೆ. ಇವರ ಎಲ್ಲಾ ಮತ ಬ್ಯಾಂಕುಗಳು ಕಡಿಮೆಯಾಗುತ್ತಿರುವುದರಿಂದ ಈ ತಂತ್ರ ಹೂಡಿದ್ದಾರೆ’ ಎಂದು ಟೀಕಿಸಿದರು.

ಕುಮಾರಸ್ವಾಮಿಗೆ ಆರ್‌ಎಸ್‌ಎಸ್ ಗಂಧಗಾಳಿ ಗೊತ್ತಿಲ್ಲ: ಸಚಿವ ಅಶೋಕ

ದಾವಣಗೆರೆ: ‘ಆರ್.ಎಸ್.ಎಸ್ ಬಗ್ಗೆ ಗಂಧಗಾಳಿಯೂ ಗೊತ್ತಿಲ್ಲದ ಎಚ್.ಡಿ. ಕುಮಾರಸ್ವಾಮಿ ಯಾವುದೋ ಪುಸ್ತಕ ಓದಿ, ಅದೇ ಸತ್ಯ ಅಂದುಕೊಂಡಿದ್ದಾರೆ. ಇದು ಕುರುಡ ಆನೆಯ ಬಾಲ ಹಿಡಿದು, ಅದೇ ಆನೆ ಸೊಂಡಿಲು ಅಂದುಕೊಂಡಂತೆ ಆಗಿದೆ’ ಎಂದು ಸಚಿವ ಆರ್.ಅಶೋಕ ಅವರು ನ್ಯಾಮತಿ ತಾಲ್ಲೂಕಿನ ಸುರಹೊನ್ನೆ ಗ್ರಾಮದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

30, 31ರಂದು ಕುಪ್ಪಳಿಯಲ್ಲಿ ಅಧ್ಯಯನ ಶಿಬಿರ

ಶಿವಮೊಗ್ಗ: ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಅ.30 ಹಾಗೂ 31ರಂದು ಕುಪ್ಪಳಿಯಲ್ಲಿ ‘ಪರ್ಯಾಯ ಜೀವನ ಪದ್ಧತಿ’ ವಿಷಯ ಕುರಿತು ಅಧ್ಯಯನ ಶಿಬಿರ ಆಯೋಜಿಸಿದೆ.

ಶಿಬಿರದ ವಿವಿಧ ಗೋಷ್ಠಿಗಳಲ್ಲಿ ವಿಷಯ ಪರಿಣತರು ತಮ್ಮ ಅನುಭವ–ವಿಚಾರಗಳನ್ನು ಹಂಚಿಕೊಳ್ಳಲಿದ್ದಾರೆ. ಸಂಜೆ ಚಲನಚಿತ್ರ ಪ್ರದರ್ಶನವೂ ನಡೆಯಲಿದೆ. ಆಸಕ್ತರು ಶಿಬಿರಾರ್ಥಿಗಳಾಗಿ ಹೆಸರು ನೋಂದಾಯಿಸಿಕೊಳ್ಳಬಹುದು. ಯುವಜನರಿಗೆ, ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. ಶಿಬಿರ ಶುಲ್ಕ ₹ 300 ನಿಗದಿಪಡಿಸಲಾಗಿದೆ. ವಿದ್ಯಾರ್ಥಿಗಳಿಗೆ ₹ 200 ನಿಗದಿಪಡಿಸಲಾಗಿದೆ.

ನೋಂದಣಿಗೆ 9731929731, 9844518866, 9480141984 ಸಂಪರ್ಕಿಸಬಹುದು ಎಂದು ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ತಿಳಿಸಿದ್ದಾರೆ.

‘ಶುಗರ್ ಫ್ಯಾಕ್ಟರಿ ನುಂಗಿ ನೀರು ಕುಡಿದವರಿಗೆ ಮತ ಹಾಕ್ತೀರಾ?’

ಬಿಜೆಪಿ ಅಭ್ಯರ್ಥಿ ಸಜ್ಜನರ ವಿರುದ್ಧ ಸಿದ್ದರಾಮಯ್ಯ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ 2021

ಹಾವೇರಿ: ‘ಸಂಗೂರಿನ ಸಕ್ಕರೆ ಕಾರ್ಖಾನೆಗೆ ಅಧ್ಯಕ್ಷರಾಗಿದ್ದ ಸಿ.ಎಂ. ಉದಾಸಿ ಮತ್ತು ಉಪಾಧ್ಯಕ್ಷರಾಗಿದ್ದ ಶಿವರಾಜ ಸಜ್ಜನರ ಇಬ್ಬರೂ ಸೇರಿಕೊಂಡು ಶುಗರ್ ಫ್ಯಾಕ್ಟರಿ ನುಂಗಿ ನೀರು ಕುಡಿದ್ರು. ಖಾಲಿ ಚೀಲವನ್ನೂ ಬಿಡದೆ ಮಾರಿಕೊಂಡ ಸಜ್ಜನರಿಗೆ ಚುನಾವಣೆಯಲ್ಲಿ ಖಾಲಿ ಚೀಲ ಕೊಟ್ಟು ಮನೆಗೆ ಕಳುಹಿಸಿ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಬಿಜೆಪಿ ಅಭ್ಯರ್ಥಿ ವಿರುದ್ಧ ನೇರವಾಗಿ ವಾಗ್ದಾಳಿ ನಡೆಸಿದರು.

ಹಾನಗಲ್ ತಾಲ್ಲೂಕು ಮಲಗುಂದ ಗ್ರಾಮದಲ್ಲಿ ಶನಿವಾರ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಪರ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

‘ಶುಗರ್ ಫ್ಯಾಕ್ಟರಿ ಹಾಳಾಗೋಕೆ ಸಜ್ಜನರೇ ಕಾರಣ. ಹಾವೇರಿ ತಾಲ್ಲೂಕು ಗೌರಾಪುರದಲ್ಲಿ 21 ಎಕರೆ ಸರ್ಕಾರಿ ಜಾಗವನ್ನು ಕಡಿಮೆ ದರಕ್ಕೆ ಖರೀದಿಸಿ ಸರ್ಕಾರದ ಬೊಕ್ಕಸಕ್ಕೆ ಅಪಾರ ನಷ್ಟ ಉಂಟು ಮಾಡಿದ್ದಾರೆ. ಆತ ತಿಂದಿರೋದೆಲ್ಲಾ ಕಕ್ಕಿಸಬೇಕು. ಆತ ಸಜ್ಜನ ಅಲ್ಲ ದುರ್ಜನ’ ಎಂದು ಟೀಕಿಸಿದರು.

ಈ ಉಪಚುನಾವಣೆಯನ್ನು ನಾವು ಬಯಸಿರಲಿಲ್ಲ. ಸಿ.ಎಂ. ಉದಾಸಿ 2023ರವರೆಗೆ ಶಾಸಕರಾಗಿರಲಿ ಎಂದು ಬಯಸಿದ್ದೆವು. ಆದರೆ ದುರ್ದೈವ ಅವರು ನಮ್ಮನ್ನು ಅಗಲಿದ್ದಾರೆ. 2018ರ ಚುನಾವಣೆಯಲ್ಲಿ ಮಾನೆ ಅವರು 6000 ಮತಗಳಿಂದ ಸೋತರು. ಆದರೂ ಕ್ಷೇತ್ರವನ್ನು ಬಿಡದೆ, ಕೋವಿಡ್ ಸಂದರ್ಭ ಮತದಾರರಿಗೆ ಕೈಲಾದಷ್ಟು ಸಹಾಯ ಮಾಡಿದ್ದಾರೆ. ಸಿ.ಎಂ. ಉದಾಸಿ ಅವರು ಕಾಯಿಲೆಯಿಂದ ಹಾಸಿಗೆ ಹಿಡಿದ್ರೂ, ಸಂಸದ ಶಿವಕುಮಾರ ಉದಾಸಿ ಕ್ಷೇತ್ರದ ಕಡೆ ತಲೆ ಹಾಕಲಿಲ್ಲ ಎಂದು ಜರಿದರು.

ನಮ್ಮ ಶಾಸಕರನ್ನು ತೆಗೆದುಕೊಂಡು ಮುಖ್ಯಮಂತ್ರಿಯಾದ ಬಿ.ಎಸ್. ಯಡಿಯೂರಪ್ಪ ಅವರು ಇಂದು ಅಧಿಕಾರದಲ್ಲಿದ್ದಾರಾ? ಬಸವರಾಜ ಬೊಮ್ಮಾಯಿ ಅವರು ಯಡಿಯೂರಪ್ಪ ಬಳಿ ಗೋಗರೆದಿದ್ದಾರೆ. ಹೀಗಾಗಿ, ಅವರೆಲ್ಲ ನಾಳೆ ಕ್ಷೇತ್ರಕ್ಕೆ ಮತ ಕೇಳೋಕೆ ಬರಬಹುದು ಎಂದು ವ್ಯಂಗ್ಯವಾಡಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 17-10-1996

● **ಉತ್ತರಪ್ರದೇಶ: ಅತಂತ್ರ ಸ್ಥಿತಿ**

ನವದೆಹಲಿ, ಅ. 16 (ಯುಎನ್‌ಐ)– ಉತ್ತರಪ್ರದೇಶದಲ್ಲಿ ಬಿಜೆಪಿಯು ಸರ್ಕಾರ ರಚನೆ ಮಾಡಲು ತಮ್ಮ ಪಕ್ಷ ಬೆಂಬಲ ನೀಡುವುದಿಲ್ಲ ಎಂದು ಬಿಎಸ್‌ಪಿಯ ಪ್ರಧಾನ ಕಾರ್ಯದರ್ಶಿ ಮಾಯಾವತಿ ಅವರು ರಾಜ್ಯಪಾಲರಿಗೆ ತಿಳಿಸಿರುವುದರಿಂದ ಉತ್ತೇಜಿತರಾಗಿರುವ ಪ್ರಧಾನಿ ಹಾಗೂ ಸಂಯುಕ್ತ ರಂಗದ ನಾಯಕ ಎಚ್.ಡಿ. ದೇವೇಗೌಡರು ಆ ರಾಜ್ಯದಲ್ಲಿ ಜನಪ್ರಿಯ ಸರ್ಕಾರ ರಚನೆಗೆ ಕೊನೆಗಳಿಗೆ ಪ್ರಯತ್ನಕ್ಕೆ ಕೈ ಹಾಕಿದ್ದಾರೆ.

ಬಿಜೆಪಿಗೆ ಬೆಂಬಲ ನೀಡುವುದಿಲ್ಲ ಎಂದು ಬಿಎಸ್‌ಪಿ ಹೇಳುವ ಮೂಲಕ ಸಂಯುಕ್ತ ರಂಗದ ಷರತ್ತನ್ನು ಈಡೇರಿಸಿರುವುದರಿಂದ ರಂಗ ಈಗ ತೀವ್ರ ಚಟುವಟಿಕೆಯಲ್ಲಿ ತೊಡಗಿದೆ.

50 ವರ್ಷಗಳ ಹಿಂದೆ

ಭಾನುವಾರ, 17-10-1971

● **ಸ್ವದೇಶಕ್ಕೆ ಯಹ್ಯಾರ ಹಠಾತ್ ವಾಪಸು: ದೆಹಲಿಯ ಕಳವಳ**

ನವದೆಹಲಿ, ಅ. 16– ಭಾರತದ ಗಡಿಗಳಲ್ಲಿ ಪಾಕಿಸ್ತಾನಿ ಸೈನ್ಯದ ಭಾರಿ ಜಮಾವಣೆ ಜೊತೆಗೆ ಯಹ್ಯಾ ಖಾನರು ತಮ್ಮ ಟೆಹರಾನ್ ಭೇಟಿಯನ್ನು ಒಂದು ದಿನ ಮೊಟಕುಗೊಳಿಸಿ ಇಸ್ಲಾಮಾಬಾದಿಗೆ ಹಿಂದಿರುಗಿರುವುದು ಪಾಕಿಸ್ತಾನಿ ಉದ್ದೇಶಗಳ ಬಗೆಗೆ ಇಲ್ಲಿ ತೀವ್ರ ಕಳವಳಕ್ಕೆ ಎಡೆಕೊಟ್ಟಿದೆ.

ಕಳೆದ ಕೆಲವು ವಾರಗಳಿಂದ ಪಾಕಿಸ್ತಾನದ ಸೈನ್ಯ ಜಮಾಯಿಸುತ್ತಿದೆ. ಯಹ್ಯಾ ಖಾನರೇ ಯುದ್ಧೋನ್ಮಾದ ಪ್ರಚೋದಿಸುತ್ತಿದ್ದಾರೆ ಗಡಿ ಗ್ರಾಮಗಳಲ್ಲಿ ನಾಗರಿಕರನ್ನು ಸ್ಥಳಾಂತರಿಸಿ ಕಾಶ್ಮೀರದಿಂದ ರಾಜಸ್ಥಾನದವರೆಗೆ ಕಂದಕಗಳನ್ನು ತೋಡಲಾಗಿದೆ.

ದಿನ ಭವಿಷ್ಯ

ಭಾನುವಾರ ಅಕ್ಟೋಬರ್ 17, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಚಿತ್ತಾ ದ್ವಾದಶೀ ಗಂ. 29-51 (ಸಾ. 6-12) ಭಾನುವಾರ ನಿತ್ಯ ನಕ್ಷತ್ರ ಶತಭಿಷ ಗಂ. 13-18 (ಹ. 11-35) ವೃದ್ಧಿ ನಾಮ ಯೋಗ ಗಂ. 44-14 ಬವ ಕರಣ ಗಂ. 0-46 ಉಪರಿ ಬಾಲವ ಕರಣ ಗಂ. 29-5 ವಿಷ ಗಂ. 29-29 ಅಮೃತ ಗಂ 49-14 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-13 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 3 7

ಮೇಷ: ಮಾಡಿದ ಕೃತ್ಯದ ಬಗ್ಗೆ ಅವಲೋಕನ ಒಳಿತು. ಮಹತ್ವದ ಸಭೆ ಸಮಾರಂಭಗಳಲ್ಲಿ ಭಾಗವಹಿಸಲಿದ್ದೀರಿ. ತೀರ್ಥಕ್ಷೇತ್ರ ಯಾತ್ರೆ ಸಂಭವ. ಅಪರೂಪದ ಹಳೆಯ ಮೆಲುಕನ್ನು ಹಾಕಲಿದ್ದೀರಿ. ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ.

ವೃಷಭ: ಕ್ರೀಡಾಪಟುಗಳಿಗೆ ಸರ್ಕಾರದಿಂದ ಆಹ್ವಾನ ಸಾಧ್ಯತೆ. ಹಣಕಾಸು ಸಂಸ್ಥೆಗಳಲ್ಲಿ ಸಹೋದ್ಯೋಗಿಗಳಿಂದ ಸಹಕಾರ. ಹಲವಾರು ಬಗೆಯ ಅನುಕೂಲತೆಗಳು ಈ ದಿನ ಒದಗಿಬರಲಿದೆ.

ಮಿಥುನ: ಹಣಕಾಸಿನ ಅಡಚಣೆ ಕಂಡುಬಂದರೂ ಸಂಬಂಧಿಗಳ ಸಕಾಲಿನ ನೆರವಿನಿಂದಾಗಿ ತಾಪತ್ರಯ ದೂರವಾಗಲಿದೆ. ಅತಿಯಾದ ಮಾತಿನಿಂದಾಗಿ ತೊಂದರೆಗಳನ್ನು ತಂದುಕೊಳ್ಳುವ ಸಾಧ್ಯತೆ ಇದ್ದು ಮಾತಿನ ಮೇಲೆ ಹಿಡಿತವಿರಲಿ.

ಕರ್ಕಾಟಕ: ದೇವತಾನುಗ್ರದಿಂದ ಏರುಪೇರಾದ ಕೆಲಸ ಕಾರ್ಯಗಳು ನಿರಾಳವಾಗಲಿದೆ. ಸಮಯೋಚಿತ ನಿರ್ಧಾರವನ್ನು ಕೈಗೊಳ್ಳುವುದು ಉತ್ತಮ. ಖಾಸಗಿ ನೌಕರರಿಗೆ ಉತ್ತಮ ಪ್ರಗತಿ. ಮನೆಯಲ್ಲಿ ಅನುಕೂಲಕರ ವಾತಾವರಣ.

ಸಿಂಹ: ಉತ್ತಮ ಆದಾಯ ಗಳಿಸಿದ ನೆಮ್ಮದಿ ನಿಮ್ಮದಾಗಲಿದೆ. ದೂರ ಪ್ರಯಾಣದಿಂದ ದೇಹಾಯಾಸ, ಆಲಸ್ಯ ಸಾಧ್ಯತೆ. ಅರಸಿ ಬಂದ ಕಾರ್ಯವನ್ನು ಮುಂದೂಡುವುದು ಬೇಡ.

ಕನ್ಯಾ: ನಿಮ್ಮ ಕಲಾತ್ಮಕವಾದ ಜೀವನವನ್ನು ರೂಢಿಸಿಕೊಳ್ಳಲು ಉತ್ತಮ ಕಾಲ. ಕೃಷಿಕರಿಗೆ ಅಧಿಕ ಧನಪ್ರಾಪ್ತಿ. ಪತ್ರಿಕಾ ಪ್ರತಿನಿಧಿಗಳಿಗೆ ಉತ್ತಮ ಪ್ರತಿಕ್ರಿಯೆ. ವಿದೇಶದ ಬಂಧುಗಳಿಂದ ಧನಸಹಾಯ.

ತುಲಾ: ನಿರ್ಧಾರಗಳನ್ನು ಕೈಗೊಳ್ಳುವಾಗ ಮತ್ತೊಮ್ಮೆ ಯೋಚಿಸುವುದು ಉತ್ತಮ. ಉದರ ಸಂಬಂಧಿ ಕಿರುಕುಳ ಅನುಭವಿಸುವ ಸಾಧ್ಯತೆ. ವಾಹನಗಳ ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ವೃಶ್ಚಿಕ: ವಿಹಾರದ ಸ್ಥಳಕ್ಕೆ ಹೋಗಲಿದ್ದೀರಿ. ಸ್ನೇಹಿತರೊಂದಿಗೆ ಹಂಚಿಕೊಂಡ ವಿಚಾರಗಳು ಶುಭ ಫಲವನ್ನು ಕೊಡಲಿವೆ. ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತಿಯಾಗುವ ಸಾಧ್ಯತೆ. ಎಚ್ಚರಿಕೆಯಿಂದ ಪ್ರಯಾಣ ಮಾಡುವುದು ಉತ್ತಮ.

ಧನು: ವ್ಯವಹರದ ಎಲ್ಲಾ ತಂತ್ರಗಳೂ ಅನುಕೂಲಕರವಾಗಿ ಪರಿಣಮಿಸಲಿವೆ. ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಲಾಭ. ಅಜಾಗರೂಕತೆ ವರ್ತನೆ ಬೇಡ. ಪಾಲುದಾರಿಕೆ ವ್ಯವಹಾರಗಳಲ್ಲಿ ತೊಡಗದಿರುವುದು ಲೇಸು.

ಮಕರ: ದಿನದ ಆರಂಭ ಸಂತೋಷದಾಯಕವಾಗುವ ನಿರೀಕ್ಷೆ. ಬರಬೇಕಾದ ಹಣ ಹಿಂದಿರುಗಿ ಬರಲಿದೆ. ಹೆಣ್ಣುಮಕ್ಕಳಿಗೆ ತವರುಮನೆಯ ಉಡುಗೊರೆ ಸಾಧ್ಯತೆ. ಬಂಧುಗಳಿಂದ ಸಹಕಾರ ನಿರೀಕ್ಷೆ.

ಕುಂಭ: ಪ್ರೇಮಿಗಳು ವಂಚನೆ ಒಳಗಾಗುವ ಸಾಧ್ಯತೆ. ಹಿರಿಯರ ಮಾತನ್ನು ಧಿಕ್ಕರಿಸಬೇಡಿ. ವಿದ್ಯಾಭ್ಯಾಸದಲ್ಲಿ ಏಕಾಗ್ರತೆ ಭಂಗವಾಗಲಿದೆ. ಲಾಭದಾಯಕವಾದ ಅನೇಕ ನಿರೀಕ್ಷೆಗಳಿಗೆ ಶೀಘ್ರದಲ್ಲೇ ಉತ್ತರ ದೊರೆಯಲಿದೆ.

ಮೀನ: ಕೋರ್ಟ್ ಮತ್ತು ನ್ಯಾಯಾಲಯ ವ್ಯವಹಾರದಲ್ಲಿ ಜಯ ಕಾಣುವಿರಿ. ಕಳೆದುಕೊಂಡ ಸಂಪತ್ತು ಪುನಃ ದೊರಕುವ ಸಾಧ್ಯತೆ. ಗುರುವಿನ ಆರಾಧನೆಯಿಂದ ಅನುಕೂಲ.

ನಿಮ್ಮ ಜನ್ಮದಿನ 17-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ತಂತ್ರಜ್ಞರಿಗೆ ತಾವು ಸಂಶೋಧಿಸಿದ ಆವಿಷ್ಕಾರಗಳಿಗೆ ಮನ್ನಣೆ ದೊರೆಯಲಿದೆ. ಅಪರಿಚಿತರ ಸಹಕಾರದಿಂದ ಕೆಲಸಕಾರ್ಯಗಳು ಯಶಸ್ವಿಯಾಗಲಿದೆ. ಮನಸ್ಸಿನ ಭಾವನೆಗೆ ಅನುಕೂಲಕರ ವಾತಾವರಣ ನಿರ್ಮಾಣವಾಗಿ ಸಂತಸ ಪಡಲಿದ್ದೀರಿ.

ಪದಬಂಧ 4750 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಭಾವಚಿತ್ರವನ್ನು ತೆಗೆಯುವವನು (4)
3.ಈ ಪರಿ ಎಲ್ಲವನ್ನೂ ಬಿಟ್ಟುಬಿಡುವಿಕೆ (4)
5.ಕಾರಿನಲ್ಲಿ ಕುಳಿತು ಆಡಿದ ಬೇಟೆ! (3)
6.ಈತ ದಾಯಾದಿ (2)
7.ನೆನಪಲ್ಲೇ ಇರುವ ಕಾರಣ (2)
9.ಈತ ನರಕಾಧಿಪತಿ (2)
11.ಏಳು ದಿನಗಳ ಅವಧಿ (2)
12.ಮಾವನಲ್ಲಿರುವ ಕೋಮಲತೆ ಕಾಣುತ್ತಿದೆಯೇ? (3)
14.ಒಳ್ಳೆಯ ಶಿಕ್ಷಣಪಡೆದವನು (4)
15.ಅದೇ ತಾನೆ ಹುಟ್ಟಿದುದು (4)

ಮೇಲಿಂದ ಕೆಳಕ್ಕೆ
1.ಅಚ್ಚು ಮಾಡುವ ಸ್ಥಳ (4)
2.ಹಿತಚಿಂತಕ ಇಲ್ಲಿದ್ದಾನೆ (3)
3.ಈ ಪರಿ ಓಡಿ ಹೋಗುವಿಕೆ! (3)
4.ಗರ ಬಡಿದಂತಿರುವ ಪತಿವ್ರತೆ! (3)
6.ಗ್ರಹಣ ಶಕ್ತಿಯನ್ನುಳ್ಳ ಇಂದ್ರಿಯ (4)
8.ಕರ ಕೊನೆಗಿಟ್ಟಾಗ ಕಾಣಿಸಿದ ಸಾಮಾನು (4)
10.ಮತದೊಳಗಿರುವ ಅಭಿಪ್ರಾಯ ಕಾಣುತ್ತಿದೆಯೇ? (4)
11.ವಾರದ ಪ್ರಾರಂಭಕ್ಕೆ ದೊರೆತ ಒಡೆತನ (3)
12.ವಿಕ್ರಯಿಸು ಎಂದಾಗ ಬೀಸಿದ ಗಾಳಿ! (3)
13.ವನದಲ್ಲಿರುವ ಉಡುಗೆ (3)



4749ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಂದೇಹ 3.ಮಾಸ 5.ವಿಷ 6.ಖಡ್ಗಧಾರೆ 7.ನದೀಮುಖಜಭೂಮಿ 10.ತಪರಾಕು 11.ಜನ 13.ಮದೆ 14.ಘಲುಮೆ

ಮೇಲಿಂದ ಕೆಳಕ್ಕೆ: 1.ಸಂಜ್ಞೆ 2.ಹರುಷ 4.ಸಕ್ಕರೆ 5.ವಿಮಾನ 6.ಖನಿಜ 8.ಮುಸುಕು 9.ಮಿಥುನ 10.ತರ್ಜುಮೆ 11.ಜಹಜು 12.ಆಮೆ

ಸುಡೊಕು 5136

	8			9		5		3
6	7	5						
			1		5		7	6
		4					5	
	5					1		9
2				5	9		6	
1			9					
	3					6	4	1
8		6		3			9	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5135 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಕೇರಳದಲ್ಲಿ ಉಕ್ಕಿ ಹರಿದ ನದಿಗಳು; ಪ್ರವಾಹ, ಭೂಕುಸಿತಕ್ಕೆ 10 ಸಾವು

ಭಾರಿ ಮಳೆ, 5 ಜಿಲ್ಲೆಗಳಲ್ಲಿ ರೆಡ್ ಅಲರ್ಟ್

ತಿರುವನಂತಪುರಂ (ಪಿಟಿಐ): ಕೇರಳದಲ್ಲಿ ಭಾರಿ ಮಳೆಯಾಗುತ್ತಿದ್ದು, ಐದು ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಮಳೆ ಸಂಬಂಧಿತ ಅವಘಡದಲ್ಲಿ 10 ಜನರು ಮೃತಪಟ್ಟಿದ್ದು, ಹಲವರು ಕಾಣೆಯಾಗಿದ್ದಾರೆ.

ರಾಜ್ಯದ ದಕ್ಷಿಣ ಮತ್ತು ಮಧ್ಯ ಭಾಗದ ಹಲವಾರು ಪ್ರದೇಶಗಳು ಶನಿವಾರ ಜಲಾವೃತವಾಗಿವೆ. ಹಲವು ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಪಟ್ಟಣಂತಿಟ್ಟ, ಕೋಟಯಂ, ಎರ್ನಾಕುಲಂ, ಇಡುಕ್ಕಿ ಮತ್ತು ತ್ರಿಶೂರ್ ಜಿಲ್ಲೆಗಳಲ್ಲಿ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ.

ತಿರುವನಂತಪುರಂ, ಕೊಲ್ಲಂ, ಅಲಪ್ಪುಳ, ಪಾಲಕ್ಕಾಡು, ಮಲಪ್ಪುರಂ, ಕೋಯಿಕೋಡ್ ಮತ್ತು ವಯನಾಡು ಜಿಲ್ಲೆಗಳಲ್ಲೂ ಭಾರಿ ಮಳೆಯಾಗುತ್ತಿದ್ದು, ಆ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಆಗ್ನೇಯ ಅರಬ್ಬೀ ಸಮುದ್ರದಲ್ಲಿ ವಾಯುಭಾರ ಕುಸಿತದಿಂದಾಗಿ ಭಾರಿ ಮಳೆಯಾಗುತ್ತಿದ್ದು, ಮುಂದಿನ 24 ಗಂಟೆಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ. ಅ.18ರಿಂದ ಭಾರಿ ಮಳೆ ಸುರಿಯಲಿದ್ದು, ಅ.19ರ ಬೆಳಿಗ್ಗೆ ಮಳೆಯ ಪ್ರಮಾಣ ತಗ್ಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ನದಿ ಪಾತ್ರದಲ್ಲಿರುವ ಜನರು ಎಚ್ಚರಿಕೆಯಿಂದ ಇರುವಂತೆ ಹೇಳಿರುವ

ಕೋಟಯಂನಲ್ಲಿ ಪ್ರಯಾಣಿಕರಿದ್ದ ಬಸ್ಸೊಂದು ನೀರಿನಲ್ಲಿ ಭಾಗಶಃ ಮುಳುಗಿತ್ತು (ಪಿಟಿಐ ಚಿತ್ರ)

ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಅಧಿಕಾರಿಗಳು ನೀಡುವ ಸೂಚನೆಗಳನ್ನು ಪಾಲಿಸುವಂತೆ ಮನವಿ ಮಾಡಿದ್ದಾರೆ

ನೆಯ್ಯಾರ್ ಹಾಗೂ ಅರುವಿಕ್ಕರ ಅಣೆಕಟ್ಟೆಗಳ ಗೇಟ್ ತೆರೆಯಲಾಗಿದೆ. ಕೊಲ್ಲಂ, ಕೋಟಯಂ ಸೇರಿ ಹಲವಾರು ಪ್ರದೇಶಗಳಲ್ಲಿ ರಸ್ತೆಗಳು ಹಾನಿಗೀಡಾಗಿರುವ ಬಗ್ಗೆ ವರದಿಯಾಗಿದೆ. ಕುತ್ತನಾಡು ಪ್ರದೇಶ ಮತ್ತು ಇಡುಕ್ಕಿ ಜಿಲ್ಲೆಯಲ್ಲಿ ಅಲ್ಲಲ್ಲಿ ಭಾರಿ ನೀರು ನಿಂತಿರುವುದರಿಂದ ಜನಜೀವನ ಅಸ್ತವ್ಯಸ್ತವಾಗಿದೆ. ತ್ರಿಶೂರಿನ ತಗ್ಗು ಪ್ರದೇಶದ ನಿವಾಸಿಗಳಿಗೆ ಸುರಕ್ಷಿತ ಸ್ಥಳಗಳಿಗೆ ತೆರಳಲು ಸೂಚಿಸಲಾಗಿದೆ. ಮೀನುಗಾರ ದೋಣಿಗಳಿಗೆ ಸಮುದ್ರಕ್ಕಿಳಿಯಲು ಅನುವು ಮಾಡಿಲ್ಲ.

ಮಕ್ಕಳು ಪಾರು: ತಿರುವನಂತಪುರಂ ಬಳಿಯ ಚಂಪಕಮಂಗಳಂ ಎಂಬಲ್ಲಿ ಮಳೆಯಿಂದ ಮನೆಯೊಂದರ ಒಂದು ಭಾಗ ಶುಕ್ರವಾರ ಕುಸಿದಿದ್ದು, ಗೋಡೆಯಡಿ ಸಿಲುಕಿದ ಇಬ್ಬರು ಮಕ್ಕಳು ಸಣ್ಣಪುಟ್ಟ ಗಾಯಗಳೊಂದಿಗೆ ಆಶ್ಚರ್ಯಕರ ರೀತಿಯಲ್ಲಿ ಪಾರಾಗಿದ್ದಾರೆ.

ಇಡುಕ್ಕಿ ಜಿಲ್ಲೆಯ ತೋಡುಪುಳದಲ್ಲಿ ಕಾರೊಂದು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದು, ಅದರಲ್ಲಿದ್ದ ಮಹಿಳೆ ಮೃತಪಟ್ಟಿದ್ದಾಗಿ ತಿಳಿದುಬಂದಿದೆ. ಕಾರಿನಲ್ಲಿದ್ದ ಮತ್ತೊಬ್ಬ ವ್ಯಕ್ತಿ ನಾಪತ್ತೆಯಾಗಿದ್ದಾರೆ.

ಪ್ರವಾಸಿಸ್ಥಳಗಳಿಗೆ, ನದಿ, ಜಲಮೂಲಗಳ ಬಳಿ ತೆರಳದಂತೆ ತಿರುವನಂತಪುರಂ ಜಿಲ್ಲಾಧಿಕಾರಿ ನವಜೋತ್ ಖೋಸ್ ಸೂಚನೆ ನೀಡಿದ್ದಾರೆ.

ಜಲಾವೃತವಾದ, ತಿರುವನಂತಪುರಂನ ವೇಲಾಯನಿ ಕಾಕ್ಕಮೂಲ ರಸ್ತೆಯಲ್ಲಿ ವ್ಯಕ್ತಿಯೊಬ್ಬರು ತಮ್ಮ ನಾಯಿಯನ್ನು ಹೊತ್ತುಕೊಂಡು ರಸ್ತೆ ದಾಟುತ್ತಿರುವ ದೃಶ್ಯ

ಕೋಟಯಂ: ಬಸ್ ಪ್ರಯಾಣಿಕರ ರಕ್ಷಣೆ

ತಿರುವನಂತಪುರಂ: ಕೋಟಯಂ ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಸಂಭವಿಸಿದ ಭೂಕುಸಿತದಲ್ಲಿ ಮಹಿಳೆ, ಮಕ್ಕಳು ಸೇರಿ ಆರು ಜನರು ಮೃತಪಟ್ಟಿದ್ದು, ಐದು ಜನರು ಕಾಣೆಯಾಗಿದ್ದಾರೆ ಎಂದು ತಿಳಿದುಬಂದಿದೆ. ಜಿಲ್ಲೆಯ ಪೂರ್ವ ಭಾಗದ ಕೂಟ್ಟಿಕ್ಕಲ್ ಪ್ರದೇಶದಲ್ಲಿ ಈ ಘಟನೆ ನಡೆದಿದೆ.

ಜಿಲ್ಲೆಯ ಇತರ ಪ್ರದೇಶಗಳಾದ ಕಂಜಿರಾಪಳ್ಳಿ ಮತ್ತು ಪೂಂಜಾರ್‌ನಲ್ಲಿ ಪ್ರವಾಹ ಪರಿಸ್ಥಿತಿ ಏರ್ಪಟ್ಟಿದೆ. ನದಿ ನೀರಿನ ಮಟ್ಟದಲ್ಲಿ ಏರಿಕೆ ಆಗುತ್ತಿರುವ ಕಾರಣ ಜಿಲ್ಲೆಯ ಪ್ರಮುಖ ಪಟ್ಟಣ ಪಾಲದಲ್ಲಿ ಪ್ರವಾಹ ಭೀತಿ ಉಂಟಾಗಿದೆ.

ಕೋಟಯಂನಲ್ಲಿ ಪ್ರಯಾಣಿಕರಿದ್ದ ಬಸ್ಸೊಂದು ನೀರಿನಲ್ಲಿ ಸಿಲುಕಿತ್ತು. ಸ್ಥಳೀಯರು ಪ್ರಯಾಣಿಕರನ್ನು ರಕ್ಷಿಸಿದ್ದಾರೆ. ಇಲ್ಲಿ ಹಲವು ಮನೆಗಳು ಜಲಾವೃತಗೊಂಡಿವೆ. ಹಲವಾರು ವಾಹನಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿವೆ. ಇಡುಕ್ಕಿ ಜಿಲ್ಲೆಯ ಕೊಕ್ಕಯಾರ್ ಎಂಬ ಗ್ರಾಮದಲ್ಲಿ ಸಂಭವಿಸಿದ ಭೂಕುಸಿತದಿಂದ ಎಂಟು ಜನರು ಕಾಣೆಯಾಗಿದ್ದಾರೆ. ಅವರಲ್ಲಿ ಐವರು ಮಕ್ಕಳು ಇದ್ದಾರೆ. ರಕ್ಷಣಾ ಕಾರ್ಯಕರ್ತರಿಗೆ ಆ ಸ್ಥಳವನ್ನು ತಲುಪಲು ಸಾಧ್ಯವಾಗುತ್ತಿಲ್ಲ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಕ್ಲಬ್ ಹೌಸ್
ಹೀಗೊಂದು ಜಿಜ್ಞಾಸೆ
ಮಾತು ಕತೆ...
ಹೆಣ್ಣೇ ಏಕೆ ಹಾಸ್ಯದ ಸರಕು?
ವೈ.ವಿ.ಗುಂಡೂರಾವ್
ಭುವನೇಶ್ವರಿ ಹೆಗಡೆ
ಎನ್. ರಾಮನಾಥ್
ಡಾ.ಕೆ.ಎಸ್.ಪವಿತ್ರ
ಇಂದುಮತಿ ಸಾಲಿಮಠ
ಪ್ರಜಾವಾಣಿ ಆಲದಮರ
10.30 ರಿಂದ 12.30
ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಕಥಾಸಾಗರ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ಸಂಜೆ 4: ವೈದ್ಯಮಿತ್ರ, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್
ಪ್ರಜಾವಾಣಿ ಕನ್ನಡ ಧ್ವನಿ

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ಸ್ಮಾರಕ ಸ್ಥಳಕ್ಕೆ ಶನಿವಾರ ಭೇಟಿ ನೀಡಿದ್ದ ಅವರ ಸುದೀರ್ಘ ಕಾಲದ ಗೆಳತಿ ವಿ.ಕೆ.ಶಶಿಕಲಾ ಪುಷ್ಪಗುಚ್ಛ ಇರಿಸಿ ನಮಿಸಿದರು

ಜಯಲಲಿತಾ ಸ್ಮಾರಕಕ್ಕೆ ವಿ.ಕೆ.ಶಶಿಕಲಾ ಭೇಟಿ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಸ್ಮಾರಕಕ್ಕೆ, ಅವರ ಸುದೀರ್ಘ ಅವಧಿಯ ಗೆಳತಿ ವಿ.ಕೆ.ಶಶಿಕಲಾ ನಾಲ್ಕೂವರೆ ವರ್ಷಗಳ ತರುವಾಯ ಶನಿವಾರ ಭೇಟಿ ನೀಡಿದ್ದರು.

ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಪದಚ್ಯುತರಾಗಿರುವ ಅವರು, ಮರಳಿ ಸಕ್ರಿಯ ರಾಜಕಾರಣ ಪ್ರವೇಶಿಸಲು ಪ್ರಯತ್ನ ನಡೆಸಿದ್ದರು. ಹೀಗಾಗಿ ಈ ಭೇಟಿ ಮತ್ತಷ್ಟು ಕುತೂಹಲ ಮೂಡಿಸಿದೆ.

ಶಶಿಕಲಾ ಈ ಹಿಂದೆ ಫೆಬ್ರುವರಿ 15, 2017ರಲ್ಲಿ, ಬೆಂಗಳೂರಿನಲ್ಲಿ ಪರಪ್ಪನ ಅಗ್ರಹಾರದ ಕಾರಾಗೃಹದ ಅಧಿಕಾರಿಗಳ ಎದುರು ಶರಣಾಗಲು ತೆರಳುವ ಮೊದಲು, ಈ ಸ್ಮಾರಕ ಸ್ಥಳಕ್ಕೆ ಭೇಟಿ ನೀಡಿದ್ದರು.

ಎಐಎಡಿಎಂಕೆ ಪಕ್ಷದ 50ನೇ ವರ್ಷಾಚರಣೆಯ ಒಂದು ದಿನ ಮೊದಲು ಅವರು ಭೇಟಿ ನೀಡಿರುವುದು ಗಮನಾರ್ಹವಾಗಿದೆ.

ಬೆಂಗಳೂರಿನ ಜೈಲಿನಿಂದ ಬಿಡುಗಡೆಯಾದ ಕೂಡಲೇ ಸ್ಮಾರಕ ಸ್ಥಳಕ್ಕೆ ಭೇಟಿ ನೀಡಲು ಅವರು ಬಯಸಿದ್ದರು. ಆದರೆ, ಆಗ ಸ್ಮಾರಕ ಸ್ಥಳದ ನಿರ್ವಹಣೆ ಮತ್ತು ನಿರ್ಮಾಣ ಚಟುವಟಿಕೆಯ ನೆಪ ಹೇಳಿದ್ದ ಆಗಿನ ಮುಖ್ಯಮಂತ್ರಿ, ಒಂದು ಕಾಲದ ಅವರ ಆಪ್ತ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು ಸ್ಮಾರಕಕ್ಕೆ ಪ್ರವೇಶ ನಿರ್ಬಂಧಿಸಿದ್ದರು.

ಟಿ.ನಗರದ ನಿವಾಸದಿಂದ ಬೆಳಿಗ್ಗೆ 10.30ಕ್ಕೆ, 'ಅಶುಭ' ಎಂದೇ ಭಾವಿಸುವ ರಾಹುಕಾಲದಲ್ಲಿ ನಿರ್ಗಮಿಸಿದ್ದ ಶಶಿಕಲಾ ಅವರು ಸ್ಮಾರಕದ ಸ್ಥಳಕ್ಕೆ ಬರುತ್ತಿದ್ದಂತೆ ಅಸಂಖ್ಯ ಬೆಂಬಲಿಗರು ಬರಮಾಡಿಕೊಂಡರು.

ಸ್ಮಾರಕ ಸ್ಥಳಕ್ಕೆ ಬರುತ್ತಿದ್ದಂತೆ ಭಾವುಕರಾದ ಶಶಿಕಲಾ, ಸ್ಮಾರಕಕ್ಕೆ ಪುಷ್ಪಗುಚ್ಛ ಇರಿಸುವ ವೇಳೆ ಕಣ್ಣೀರು ಒರೆಸಿಕೊಂಡರು.

ಸುಧಾಕರನ್ ಬಿಡುಗಡೆ

ಬೆಂಗಳೂರು: ಅಕ್ರಮ ಹಣಗಳಿಕೆ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜಯಲಲಿತಾ ಅವರ ದತ್ತು ಮಗ ಸುಧಾಕರನ್ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಶನಿವಾರ ಬಿಡುಗಡೆಯಾದರು.

ಪ್ರಕರಣದಲ್ಲಿ ಶಿಕ್ಷೆ ಅನುಭವಿಸಿದ್ದ ಎಐಎಡಿಎಂಕೆ ಪಕ್ಷದ ಪ್ರಮುಖರಾದ ವಿ.ಕೆ. ಶಶಿಕಲಾ ನಟರಾಜನ್ ಜ. 27ರಂದು ಬಿಡುಗಡೆ ಆಗಿದ್ದರು. ದಂಡ ಪಾವತಿ ವಿಳಂಬ ಹಾಗೂ ಕೆಲ ಕಾನೂನು ಪ್ರಕ್ರಿಯೆಗಳು ಬಾಕಿ ಇದ್ದಿದ್ದರಿಂದ ಸುಧಾಕರನ್ ಬಿಡುಗಡೆ ಆಗಿರಲಿಲ್ಲ.

ಪಕ್ಷದ ಬಂಡಾಯ ನಾಯಕರಿಗೆ ಸಿಡಬ್ಲ್ಯುಸಿ ಸಭೆಯಲ್ಲಿ ಸ್ಪಷ್ಟ ಉತ್ತರ

ನಾನೇ ಪಕ್ಷದ ನಾಯಕಿ: ಸೋನಿಯಾ ಗಾಂಧಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷದ ನಾಯಕತ್ವದಲ್ಲಿ ತುರ್ತಾಗಿ ಬದಲಾವಣೆ ಆಗಬೇಕು ಎಂದು ಪಟ್ಟು ಹಿಡಿದಿರುವ ಜಿ–23 ಬಣಕ್ಕೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ಸ್ಪಷ್ಟ ಉತ್ತರ ನೀಡಿದ್ದಾರೆ. ತಾವು ಪಕ್ಷದ ಪೂರ್ಣಕಾಲಿಕ ಮುಖ್ಯಸ್ಥೆ ಎಂದು ತಿಳಿಸಿದ್ದು, ಮಾಧ್ಯಮಗಳ ಮೂಲಕ ತಮಗೆ ಸಂದೇಶ ಕಳುಹಿಸುವ ಅಗತ್ಯವಿಲ್ಲ ಎಂದು ಕುಟುಕಿದ್ದಾರೆ.

2019ರ ಲೋಕಸಭಾ ಚುನಾವಣೆ ಸೋಲಿನ ನೈತಿಕ ಹೊಣೆ ಹೊತ್ತು ರಾಹುಲ್ ಗಾಂಧಿ ಅವರು ಪಕ್ಷದ ಅಧ್ಯಕ್ಷ ಹುದ್ದೆ ತ್ಯಜಿಸಿದ್ದರು. ಹೀಗಾಗಿ ಮಧ್ಯಂತರ ಅಧ್ಯಕ್ಷರಾಗಿ ಸೋನಿಯಾ ಅಧಿಕಾರ ವಹಿಸಿಕೊಂಡಿದ್ದರು. ಆದರೆ, ಅನಾರೋಗ್ಯದ ಕಾರಣ ಸೋನಿಯಾ ಅವರನ್ನು ಅಧ್ಯಕ್ಷ ಸ್ಥಾನದಿಂದ ಬಿಡುಗಡೆ ಮಾಡುವಂತೆ ಜಿ–23 ನಾಯಕರು ಒತ್ತಾಯಿಸಿದ್ದರು. ಹಿರಿಯ ಸಂಸದ ಕಪಿಲ್ ಸಿಬಲ್ ಅವರು ಪತ್ರಿಕಾಗೋಷ್ಠಿ ನಡೆಸಿ, ಪಕ್ಷದಲ್ಲಿ ಯಾರು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದು ಯಾರಿಗೂ ತಿಳಿದಿಲ್ಲ ಎಂದು ಟೀಕಿಸಿದ್ದರು.

ನಾಯಕತ್ವ ಬದಲಾವಣೆಗೆ ಒತ್ತಾಯಿಸುತ್ತಿರುವ ಪಕ್ಷದ ಮುಖಂಡರ ಪೈಕಿ ಯಾರ ಹೆಸರನ್ನೂ ಸೋನಿಯಾ ನೇರವಾಗಿ ಪ್ರಸ್ತಾಪಿಸಲಿಲ್ಲ.

'ಈ ವರ್ಷದ ಜೂನ್ 30ರೊಳಗೆ ಪೂರ್ಣಕಾಲಿಕ ಅಧ್ಯಕ್ಷರನ್ನು ಆಯ್ಕೆ ಮಾಡಲು ಸಿಡಬ್ಲ್ಯುಸಿ ಒಂದು ಮಾರ್ಗಸೂಚಿಯನ್ನು ಅಂತಿಮಗೊಳಿಸಿತ್ತು. ಆದರೆ ಕೋವಿಡ್ ಎರಡನೇ ಅಲೆಯ ಕಾರಣ ಈ ಯೋಜನೆಗಳನ್ನು ಮುಂದೂಡಬೇಕಾಯಿತು. ಆದರೆ ಈಗ ಪೂರ್ಣ ಪ್ರಮಾಣದ ಸಾಂಸ್ಥಿಕ ಚುನಾವಣೆಗಳ ವೇಳಾಪಟ್ಟಿ ಸಭೆಯ ಮುಂದಿದೆ' ಎಂದು ಸೋನಿಯಾ ವಿವರಿಸಿದರು.

'ಮುಖಂಡರು, ಅದರಲ್ಲೂ ವಿಶೇಷವಾಗಿ ಯುವಕರು ಪಕ್ಷದ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವಲ್ಲಿ ನಾಯಕತ್ವದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ರೈತರ ಆಂದೋಲನ, ಕೋವಿಡ್ ಸಮಯದಲ್ಲಿ ಪರಿಹಾರ ಒದಗಿಸುವುದು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳು, ಬೆಲೆ ಏರಿಕೆ ಮೊದಲಾದ ಸಮಸ್ಯೆಗಳನ್ನು ಎತ್ತಿ ತೋರಿಸುವ ಕೆಲಸವನ್ನು ಅವರು ಮಾಡಿದ್ದಾರೆ' ಎಂದು ಶ್ಲಾಘಿಸಿದರು.

'ಈ ವಿಷಯಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಜೊತೆ ಚರ್ಚಿಸಿದ್ದೇನೆ. ಸಮಾನಮನಸ್ಕ ರಾಜಕೀಯ ಪಕ್ಷಗಳೊಂದಿಗೆ ನಿಯಮಿತವಾಗಿ ಸಂವಹನ ನಡೆಸುತ್ತಿದ್ದೇನೆ' ಎಂದರು.

'ನಾನು ಯಾವಾಗಲೂ ಮುಕ್ತ ಮಾತುಗಳನ್ನು ಮೆಚ್ಚಿದ್ದೇನೆ. ಮಾಧ್ಯಮಗಳ ಮೂಲಕ ನನ್ನೊಂದಿಗೆ ಮಾತನಾಡುವ ಅಗತ್ಯವಿಲ್ಲ. ನಾವೆಲ್ಲರೂ ಮುಕ್ತ ಮತ್ತು ಪ್ರಾಮಾಣಿಕ ಚರ್ಚೆಯನ್ನು ಮಾಡೋಣ. ಆದರೆ ಈ ಕೊಠಡಿಯ ನಾಲ್ಕು ಗೋಡೆಗಳ ಹೊರಗೆ ಏನು ಸಂವಹನ ನಡೆಸಬೇಕು ಎಂಬುದು ಕಾರ್ಯಕಾರಿ ಸಮಿತಿಯ ಸಾಮೂಹಿಕ ನಿರ್ಧಾರವಾಗಿರುತ್ತದೆ' ಎಂದು ಸೋನಿಯಾ ತೀಕ್ಷ್ಣವಾಗಿ ಹೇಳಿದ್ದಾರೆ.

'ಮುಂಬರುವ ವಿಧಾನಸಭಾ ಚುನಾವಣೆಗಳಿಗಾಗಿ ಪಕ್ಷವು ಸಿದ್ಧತೆ ಆರಂಭಿಸಿದೆ. ನಮಗೆ ಅನೇಕ ಸವಾಲುಗಳು ಎದುರಾಗುವುದು ನಿಶ್ಚಿತ. ಆದರೆ ನಾವು ಒಗ್ಗಟ್ಟಾಗಿದ್ದರೆ, ಶಿಸ್ತುಬದ್ಧವಾಗಿದ್ದರೆ ಮತ್ತು ಪಕ್ಷದ ಹಿತಾಸಕ್ತಿಗಳ ಮೇಲೆ ಮಾತ್ರ ಗಮನ ಹರಿಸಿದರೆ ಮಾತ್ರ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯ' ಎಂದು ಅವರು ವಿಶ್ವಾಸವ್ಯಕ್ತಪಡಿಸಿದರು.

ಸೋನಿಯಾ ಅವರು ತಮ್ಮ ಭಾಷಣದಲ್ಲಿ ರೈತರ ಪ್ರತಿಭಟನೆಯನ್ನು ಉಲ್ಲೇಖಿಸಿದರು. ಇತ್ತೀಚೆಗೆ ಲಖಿಂಪುರ ಖೇರಿಯಲ್ಲಿ ನಡೆದ ಆಘಾತಕಾರಿ ಘಟನೆಗಳು ಬಿಜೆಪಿಯ ಮನಸ್ಥಿತಿಯನ್ನು ಬಿಂಬಿಸುತ್ತವೆ ಎಂದು ಟೀಕಿಸಿದ ಅವರು, ದೇಶದ ಆರ್ಥಿಕತೆಯು ಕಳವಳಕಾರಿ ವಿಚಾರ ಎಂದರು.

ಕೇಂದ್ರ ಸರ್ಕಾರದ ಬಂಡವಾಳ ಹಿಂತೆಗೆತ ಅಭಿಯಾನವನ್ನು ಟೀಕಿಸಿದ ಅವರು, 'ನಮಗೆಲ್ಲ ತಿಳಿದಿರುವಂತೆ ದೇಶದ ಆರ್ಥಿಕ ಚೇತರಿಕೆಗೆ ಸರ್ಕಾರದ ಬಳಿ ಇರುವ ಏಕೈಕ ಅಸ್ತ್ರವೆಂದರೆ, ದಶಕಗಳಿಂದ ಕಟ್ಟಿದ ಸ್ವತ್ತುಗಳನ್ನು ಮಾರಾಟ ಮಾಡುವುದು. ಸಾಮಾಜಿಕ ಗುರಿಗಳೊಂದಿಗೆ ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಕಟ್ಟಲಾಗಿತ್ತು. ಆದರೆ ನರೇಂದ್ರ ಮೋದಿ ಸರ್ಕಾರವು ಎಲ್ಲವನ್ನೂ ಕೇವಲ 'ಮಾರಾಟ'ದ ದೃಷ್ಟಿಕೋನದಲ್ಲಿ ನೋಡುತ್ತಿದೆ' ಎಂದು ಆರೋಪಿಸಿದರು.

ದೆಹಲಿಯ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ನಡೆದ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸೋನಿಯಾ ಗಾಂಧಿ ಸೇರಿದಂತೆ ಪಕ್ಷದ ಮುಖಂಡರು ಭಾಗಿಯಾಗಿದ್ದರು –ಪಿಟಿಐ ಚಿತ್ರ

> **ಪಕ್ಷದ ಪ್ರತಿಯೊಬ್ಬ ಸದಸ್ಯರು ಕಾಂಗ್ರೆಸ್‌ನ ಪುನರುಜ್ಜೀವ ಬಯಸುತ್ತಾರೆ. ಆದರೆ ಅದಕ್ಕೆ ಒಗ್ಗಟ್ಟು, ಪಕ್ಷದ ಹಿತಾಸಕ್ತಿ, ಸ್ವಯಂ ನಿಯಂತ್ರಣ ಮತ್ತು ಶಿಸ್ತು ಅಗತ್ಯ**
> **ಸೋನಿಯಾ ಗಾಂಧಿ,** ಕಾಂಗ್ರೆಸ್ ನಾಯಕಿ

> **ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಲ್ಲ, ಅದು 'ಪರಿವಾರ್ ಬಚಾವೋ' ಕಾರ್ಯಕಾರಿ ಸಮಿತಿ. ಸುಳ್ಳು ಮತ್ತು ಗೊಂದಲಗಳನ್ನು ಕಾಂಗ್ರೆಸ್ ಸೃಷ್ಟಿಸುತ್ತಿದೆ**
> **ಗೌರವ್ ಭಾಟಿಯಾ,** ಬಿಜೆಪಿ ವಕ್ತಾರ

ಮುಂದಿನ ಸೆಪ್ಟೆಂಬರ್‌ನಲ್ಲಿ ಚುನಾವಣೆ

ಮುಂದಿನ ವರ್ಷ ಆಗಸ್ಟ್ 21 ಹಾಗೂ ಸೆಪ್ಟೆಂಬರ್ 29ರ ನಡುವೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಿರ್ಧರಿಸಿದೆ. ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಈ ಸಮಿತಿಯು ಸುದೀರ್ಘ ಐದು ಗಂಟೆಗಳ ಸಭೆ ನಡೆಸಿದ ಬಳಿಕ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ವೇಳಾಪಟ್ಟಿ ಪ್ರಕಟಿಸಿದರು.

2021 ನವೆಂಬರ್ 1ರಿಂದ 2022 ಮಾರ್ಚ್ 31ರವರೆಗೆ ಬೃಹತ್ ಸದಸ್ಯತ್ವ ಅಭಿಯಾನ ನಡೆಯಲಿದೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಗಳು ಮೊದಲಾದ ಹುದ್ದೆಗಳಿಗೆ 2022ರ ಜುಲೈ 21ರಿಂದ ಆಗಸ್ಟ್ 20 ನಡುವೆ ಚುನಾವಣೆ ನಡೆಯಲಿದೆ ಎಂದರು.

ಅಧ್ಯಕ್ಷ ಸ್ಥಾನ ಪರಿಗಣನೆ: ರಾಹುಲ್

ರಾಹುಲ್ ಗಾಂಧಿ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ನೇಮಿಸುವಂತೆ ಸಭೆಯಲ್ಲಿ ಒತ್ತಾಯ ಕೇಳಿಬಂದಿತು. ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳಾದ ಅಶೋಕ್ ಗೆಹಲೋತ್, ಭೂಪೇಶ್ ಬಘೇಲ್, ಚರಣಜಿತ್ ಸಿಂಗ್ ಚನ್ನಿ ಸೇರಿದಂತೆ ವಿವಿಧ ನಾಯಕರು ಈ ಒತ್ತಾಯ ಮಂಡಿಸಿದರು.

ಮತ್ತೊಮ್ಮೆ ರಾಹುಲ್ ಗಾಂಧಿ ಪರವಾದ ಧ್ವನಿ ಸಭೆಯಲ್ಲಿ ಪ್ರತಿಧ್ವನಿಸಿತು. ಜಿ–23 ನಾಯಕರೂ ಸಹ ಬೆಂಬಲ ಸೂಚಿಸಿ ಕೈ ಎತ್ತಿದರು. ನವೆಂಬರ್ 14ರಿಂದ 29ರವರೆಗೆ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ, ಸಾಂಸ್ಥಿಕ ಚುನಾವಣೆ ದಿನಾಂಕ ನಿಗದಿ, ಪಕ್ಷದ ಕಾರ್ಯಕರ್ತರಿಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುವ ನಿರ್ಧಾರಗಳಿಗೆ ರಾಹುಲ್ ಗಾಂಧಿ ಅವರು ಅನುಮೋದನೆ ನೀಡಿದರು. ಇದು ಅವರ ಸಾರಥ್ಯಕ್ಕೆ ಕೇಂದ್ರ ನಾಯಕತ್ವ ಮುದ್ರೆಯೊತ್ತಿದಂತೆ ಬಿಂಬಿತವಾಯಿತು.

ತಮ್ಮ ಮೇಲೆ ನಂಬಿಕೆ ಇಟ್ಟಿದ್ದಕ್ಕಾಗಿ ಎಲ್ಲ ನಾಯಕರಿಗೂ ರಾಹುಲ್ ಗಾಂಧಿ ಧನ್ಯವಾದ ಹೇಳಿದರು. ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವ ಕುರಿತು ಎಲ್ಲರ ಒತ್ತಾಯವನ್ನು ಪರಿಗಣಿಸುವುದಾಗಿ ಅವರು ಭರವಸೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಪಕ್ಷದ ಮಾಜಿ ಅಧ್ಯಕ್ಷರೊಬ್ಬರು ಮತ್ತೊಮ್ಮೆ ಸಾರಥಿ ಸ್ಥಾನವನ್ನು ಒಪ್ಪಿಕೊಳ್ಳಲು ತಮ್ಮ ಇಚ್ಛೆಯನ್ನು ಸೂಚಿಸಿದ್ದು ಇದೇ ಮೊದಲು.

ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಮೂವರು ಮುಖ್ಯಮಂತ್ರಿಗಳು, ಇತರರು ಸಭೆಯಲ್ಲಿ ಭಾಗವಹಿಸಿದ್ದರು. ದೆಹಲಿಯ ಕಾಂಗ್ರೆಸ್ ಪ್ರಧಾನ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿ-23 ನಾಯಕರಾದ ಗುಲಾಂ ನಬಿ ಆಜಾದ್ ಮತ್ತು ಆನಂದ್ ಶರ್ಮಾ ಸಹ ಇದ್ದರು. ಕೋವಿಡ್ ನಂತರ ನಡೆದ ಮೊದಲ ಸಿಡಬ್ಲ್ಯುಸಿ ಭೌತಿಕ ಸಭೆ ಇದಾಗಿತ್ತು.

ಅಭ್ಯರ್ಥಿ ಘೋಷಣೆಗೆ ಪ್ರಿಯಾಂಕಾ ಒತ್ತಾಯ

ಮುಂಬರುವ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಎಲ್ಲರಿಗಿಂತ ಮುಂಚಿತವಾಗಿ ಪಕ್ಷದ ಅಭ್ಯರ್ಥಿಗಳನ್ನು ಘೋಷಿಸುವಂತೆ ಪ್ರಿಯಾಂಕಾ ಗಾಂಧಿ ಅವರು ಸಭೆಯಲ್ಲಿ ಒತ್ತಾಯಿಸಿದರು. ಕೊನೆ ನಿಮಿಷದಲ್ಲಿ ಪಟ್ಟಿ ಅಂತಿಮಗೊಳಿಸುವ ಬದಲು, ಸಾಕಷ್ಟು ಮೊದಲೇ ಅಭ್ಯರ್ಥಿಗಳ ಹೆಸರು ಪ್ರಕಟಿಸುವುದರಿಂದ ಅಭ್ಯರ್ಥಿಗಳ ಸಾಮೂಹಿಕ ವಲಸೆಯನ್ನು ತಡೆಯಬಹುದು ಎಂದು ಅವರು ಹೇಳಿದ್ದಾರೆ. ಟಿಕೆಟ್ ಸಿಗದಿರುವ ಬೇಸರದಿಂದ ಕೆಲವರು ಕೊನೆ ಕ್ಷಣದಲ್ಲಿ ಪಕ್ಷ ತೊರೆಯುವ ಅಪಾಯವನ್ನೂ ತಡೆಯಬಹುದು ಎಂದಿದ್ದಾರೆ.

ಮನಮೋಹನ್ ಸಿಂಗ್‌ಗೆ ಡೆಂಗಿ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಡೆಂಗಿ ಇರುವುದು ದೃಢಪಟ್ಟಿದ್ದು, ಅವರ ಆರೋಗ್ಯ ಸ್ಥಿತಿ ಸುಧಾರಿಸುತ್ತಿದೆ ಎಂದು ಏಮ್ಸ್ (ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ) ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

89 ವರ್ಷದ ಕಾಂಗ್ರೆಸ್ ನಾಯಕನಿಗೆ ಬುಧವಾರ ಸಂಜೆ ಜ್ವರ ಮತ್ತು ಆಯಾಸ ಕಾಣಿಸಿಕೊಂಡಿದ್ದರಿಂದ ಏಮ್ಸ್‌ಗೆ ದಾಖಲಿಸಲಾಗಿತ್ತು.

ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಶೇ 18ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಶೇ 18ರಷ್ಟು ಹೆಚ್ಚಾಗಿದ್ದು ₹ 9,096 ಕೋಟಿಗಳಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ₹ 7,703 ಕೋಟಿಗಳಷ್ಟಿತ್ತು.

ತ್ರೈಮಾಸಿಕದಲ್ಲಿ ಒಟ್ಟು ವರಮಾನವು ₹ ₹ 38,438 ಕೋಟಿಗಳಿಂದ ₹ 41,436 ಕೋಟಿಗಳಿಗೆ ಏರಿಕೆ ಆಗಿದೆ ಎಂದು ಬ್ಯಾಂಕ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಬ್ಯಾಂಕ್‌ನ ವಸೂಲಾಗದ ಸರಾಸರಿ ಸಾಲವು (ಎನ್‌ಪಿಎ) ಶೇ 1.08ರಿಂದ ಶೇ 1.35ಕ್ಕೆ ಏರಿಕೆ ಆಗಿದೆ. ಮೌಲ್ಯದ ಲೆಕ್ಕದಲ್ಲಿ ₹ 11,304 ಕೋಟಿಗಳಿಂದ ₹ 16,346 ಕೋಟಿಗಳಿಗೆ ಏರಿಕೆ ಆಗಿದೆ.

ಕೇರಳದ 'ಡ್ರೆಸ್ ಬ್ಯಾಂಕ್' ● ವಿನೂತನ, ಉಚಿತ ಸೇವೆ ● ದುಬಾರಿ ಉಡುಗೆಗಳ ಸಂಗ್ರಹ

ವಧುವಿನ ಉಡುಗೆ ಸಂಭ್ರಮ ಹಿಗ್ಗಿಸುವ 'ಬ್ಯಾಂಕ್'!

ಪ್ರಜಾವಾಣಿ ವಾರ್ತೆ

ತಿರುವನಂತಪುರ: ವಿವಾಹದ ದಿನ ಆಕರ್ಷಕ ವಿನ್ಯಾಸದ, ಗಮನಸೆಳೆವ ಉಡುಪಿನಲ್ಲಿ ಕಂಗೊಳಿಸುವುದು ವಧುಗಳ ಕನಸು. ಆದರೆ, ಕುಟುಂಬದ ಆರ್ಥಿಕ ಸ್ಥಿತಿಯ ಕಾರಣ ಹಲವರ ಈ ಕನಸು ನನಸಾಗುವುದಿಲ್ಲ. ಇಂಥ ವಧುಗಳ ಕನಸು ಸಾಕಾರಗೊಳಿಸಲು ಇಲ್ಲೊಂದು 'ಬ್ಯಾಂಕ್' ಕಾರ್ಯನಿರ್ವಹಿಸುತ್ತಿದೆ. ಅದು 'ಡ್ರೆಸ್ ಬ್ಯಾಂಕ್!'

ವಧುವಿನ ಮದುವೆ ದಿನದ ಉಡುಗೆ ಎಂದರೆ ಅದು ಒಂದು ದಿನದ ಸಂಭ್ರಮ. ಹೆಚ್ಚಿನ ಸಂದರ್ಭಗಳಲ್ಲಿ ಆ ಉಡುಗೆಯನ್ನು ಮತ್ತೊಮ್ಮೆ ತೊಡುವ ಸಾಧ್ಯತೆಗಳು ವಿರಳಾತಿವಿರಳ. ಈಗ 'ಡ್ರೆಸ್ ಬ್ಯಾಂಕ್' ಮೂಲಕ ವಧುವಿನ ಇಂತಹ ಮರುಬಳಕೆಯಾಗದ ಉಡುಗೆಗಳು, ನವ ವಧುಗಳ ಕಂಗಳ ಹೊಳಪು ಹೆಚ್ಚಿಸಲು ಬಳಕೆ ಆಗುತ್ತಿವೆ.

ಮಲಪ್ಪುರಂ ಜಿಲ್ಲೆಯ ಪೆರಿಂತಾಲಮಣ್ಣದ ನಿವಾಸಿ ನಸರ್ ಥೂತಾ ಅವರ ಕಲ್ಪನೆಯ ಕೂಸು ಈ 'ಡ್ರೆಸ್ ಬ್ಯಾಂಕ್'. 2020ರ ಮಾರ್ಚ್ ತಿಂಗಳು ಅಸ್ತಿತ್ವಕ್ಕೆ ಬಂದ ಈ ಬ್ಯಾಂಕ್‌ನಿಂದಾಗಿ, ಆರ್ಥಿಕವಾಗಿ ದುರ್ಬಲರಾದ ಅನೇಕ ಕುಟುಂಬಗಳ ಯುವತಿಯರು, ಮದುವೆಯ ದಿನ ನವ ವಿನ್ಯಾಸದ, ಆಕರ್ಷಕ ಉಡುಗೆ ತೊಟ್ಟು ಸಂಭ್ರಮಿಸಿದ್ದಾರೆ.

ಕೇರಳವಷ್ಟೇ ಅಲ್ಲದೆ ನೆರೆಯ ಕರ್ನಾಟಕ, ತಮಿಳುನಾಡು ರಾಜ್ಯಗಳ ಹಲವು ಕುಟುಂಬಗಳೂ ಈ ಡ್ರೆಸ್ ಬ್ಯಾಂಕ್‌ನ ಸೇವೆಯನ್ನು ಪಡೆದಿವೆ.

ಕೇರಳದ ವಿನೂತನ 'ಡ್ರೆಸ್ ಬ್ಯಾಂಕ್'ನಲ್ಲಿರುವ ವಧುವಿನ ಉಡುಗೆಗಳ ಸಂಗ್ರಹ

ಪ್ರಸ್ತುತ, ಈ ಬ್ಯಾಂಕ್‌ನಲ್ಲಿ ಸಾವಿರಾರು ಸಂಖ್ಯೆಯಲ್ಲಿ ದುಬಾರಿ ಬೆಲೆಯ ಉಡುಗೆಗಳು ಲಭ್ಯವಿವೆ. ಈ ಎಲ್ಲವನ್ನು ಮದುವೆ ದಿನ ಬಳಸಲು ಬಡ ಕುಟುಂಬಗಳ ವಧುವಿಗೆ ಉಚಿತವಾಗಿ ನೀಡಲಾಗುತ್ತದೆ.

ಎಂಟು ವರ್ಷದ ಹಿಂದೆ ದೇಶಕ್ಕೆ ಮರಳಿದ 44 ವರ್ಷದ ಈ ಮಾಜಿ ಎನ್‌ಆರ್‌ಐ ಈ ಮೂಲಕ ವಿಭಿನ್ನ ರೀತಿಯ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮದುವೆಗಾಗಿ ಮಾಡಬೇಕಾದ ದುಬಾರಿ ವೆಚ್ಚದ ಜೊತೆಗೇ ವಧುವಿನ ಉಡುಗೆಗಾಗಿ ದುಬಾರಿ ಮೊತ್ತ ವ್ಯಯಿಸಬೇಕಾಗಿರುವ ಬಡ ಕುಟುಂಬಗಳ ತುಮುಲವನ್ನು ಕಂಡ ಅವರು ಅದಕ್ಕೆ ಪರಿಹಾರದ ಹುಡುಕಾಟ ಆರಂಭಿಸಿದರು. ಅದರ ಫಲವೇ ಈ ಡ್ರೆಸ್ ಬ್ಯಾಂಕ್.

ಕುಟುಂಬದ ಸದಸ್ಯರು, ಗೆಳೆಯರ ಬೆಂಬಲದೊಂದಿಗೆ ನಸರ್ ಅವರು ಆರಂಭದಲ್ಲಿ, ಉಳ್ಳವರ ಕುಟುಂಬದ ವಧು ಒಮ್ಮೆ ಬಳಸಿದ ಉಡುಗೆಗಳನ್ನು ಸಂಗ್ರಹಿಸಿದರು. ಅದನ್ನೇ ಆಸುಪಾಸಿನ ಬಡ ಕುಟುಂಬದ ವಧುಗಳಿಗೆ ನೆರವು ನೀಡಿದರು. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಸಾಮಾಜಿಕ ಜಾಲತಾಣಗಳ ಮೂಲಕ ಮನೆಮಾತಾಯಿತು. ಕೇರಳವಲ್ಲದೆ, ನೆರೆ ರಾಜ್ಯಗಳಿಂದಲೂ ನಸರ್ ಅವರಿಗೆ ಉಡುಗೆಯ ಕೊಡುಗೆಗಳು ಬರಲಾರಂಭಿಸಿದವು.

ಮುಸಲ್ಮಾನ, ಕ್ರೈಸ್ತರು, ಹಿಂದೂ ವಧುಗಳ ಆಶಯ, ಸಂಪ್ರದಾಯಗಳಿಗೆ ಹೊಂದಿಕೆ ಆಗುವಂತೆ ಪ್ರಸ್ತುತ ಈ ಬ್ಯಾಂಕ್‌ನಲ್ಲಿ ಸುಮಾರು 1,000 ಸಾಂಪ್ರದಾಯಿಕ ಉಡುಗೆಗಳಿವೆ. ಇವುಗಳ ಮಾರುಕಟ್ಟೆ ದರ ₹ 5,000 ರಿಂದ ₹ 50,000ವರೆಗೆ ಇದೆ.

ಅನಿವಾಸಿ ಭಾರತೀಯರೂ ಕೊಡುಗೆ ನೀಡಿದ್ದಾರೆ. ಬ್ಯಾಂಕ್‌ನ ಉಡುಗೆಗಳ ನೆರವು ಪಡೆಯಲು ಕರ್ನಾಟಕ, ತಮಿಳುನಾಡಿನ ಕೆಲ ಕುಟುಂಬಗಳು ಕೂಡಾ ಸಂಪರ್ಕಿಸಿವೆ ಎನ್ನುತ್ತಾರೆ ನಸರ್.

ಬಹುತೇಕ ಎಲ್ಲ ಉಡುಗೆಗಳು ಒಮ್ಮೆ ಮಾತ್ರ, ಕೆಲವೇ ಗಂಟೆಗಳ ಅವಧಿಗೆ ಧರಿಸಿರುವಂತಹವು. ಬಹುತೇಕ ಉಡುಗೆಗಳು ಹೊಚ್ಚ ಹೊಸತಾಗಿಯೇ ಇವೆ. ಆದರೂ, ಬಳಕೆಗೆ ನೀಡುವ ಮುನ್ನ ಅವುಗಳನ್ನು ಒಗೆದು, ಇಸ್ತ್ರಿ ಮಾಡಿಸಿ ಶುಭ್ರವಾಗಿ ನೀಡಲಾಗುತ್ತದೆ. ಫಲಾನುಭವಿ ವಧುವಿನ ಕುಟುಂಬಗಳಿಂದ ಒಂದು ಪೈಸೆಯನ್ನೂ ಪಡೆಯುವುದಿಲ್ಲ.

ನಸರ್ ವೃತ್ತಿಯಿಂದ ಟ್ಯಾಕ್ಸಿ ಚಾಲಕ. ಆರಂಭದಲ್ಲಿ ಮನೆಯಿಂದಲೇ 'ಡ್ರೆಸ್ ಬ್ಯಾಂಕ್' ಕಾರ್ಯಭಾರ ನಿಭಾಯಿಸುತ್ತಿದ್ದರು. ಕೆಲ ಕಾಲಾನಂತರ ಗೆಳೆಯರೊಬ್ಬರು ಈ ಉದ್ದೇಶಕ್ಕಾಗಿ ಒಂದು ಕೊಠಡಿ ಒದಗಿಸಿದರು. ಟ್ಯಾಕ್ಸಿ ಚಾಲಕ ವೃತ್ತಿಯ ಕಾರಣ ಸಾಮಾನ್ಯವಾಗಿ ಮಂಗಳವಾರ ಮತ್ತು ಭಾನುವಾರ 'ಡ್ರೆಸ್ ಬ್ಯಾಂಕ್' ಅನ್ನು ತೆರೆಯುತ್ತಾರೆ. ಇವರ ಈ ವಿನೂತನ ಸಮಾಜ ಸೇವೆಗೆ ಅವರ ಪತ್ನಿ ಮತ್ತು ಮಕ್ಕಳ ಒತ್ತಾಸೆ, ಬೆಂಬಲವೂ ಇದೆ.

ಆದರೆ, ಈ ಬ್ಯಾಂಕ್‌ನಲ್ಲಿ ವರನ ಉಡುಗೆಗಳು ಲಭ್ಯವಿಲ್ಲ. 'ವರನ ಉಡುಗೆಗಾಗಿ ಹೆಚ್ಚಿನ ಬೇಡಿಕೆಯೇ ಬರುವುದಿಲ್ಲ. ಹೀಗಾಗಿ, ಅವುಗಳ ಸಂಗ್ರಹ ನನ್ನಲ್ಲಿಲ್ಲ' ಎಂದು ನಸರ್ ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸುತ್ತಾರೆ.

ರತ್ನ, ಚಿನ್ನಾಭರಣ ರಫ್ತು ಶೇ 29ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ರತ್ನಗಳು ಮತ್ತು ಚಿನ್ನಾಭರಣಗಳ ರಫ್ತು ಪ್ರಮಾಣ 2020ರ ಸೆಪ್ಟೆಂಬರ್‌ಗೆ ಹೋಲಿಸಿದರೆ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 29ರಷ್ಟು ಏರಿಕೆ ಕಂಡಿದೆ. ಮೌಲ್ಯದ ಲೆಕ್ಕದಲ್ಲಿ ₹ 17,937 ಕೋಟಿಗಳಿಂದ ₹ 23,260 ಕೋಟಿಗಳಿಗೆ ಏರಿಕೆ ಆಗಿದೆ ಎಂದು ರತ್ನಗಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ಶನಿವಾರ ತಿಳಿಸಿದೆ.

2020ರ ಏಪ್ರಿಲ್–ಸೆಪ್ಟೆಂಬರ್ ಅವಧಿಗೆ ಹೋಲಿಸಿದರೆ ಈ ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ರಫ್ತು ಶೇ 134ರಷ್ಟು ಹೆಚ್ಚಾಗಿದ್ದು ₹ 1.40 ಲಕ್ಷ ಕೋಟಿಗಳಿಗೆ ತಲುಪಿದೆ. ಈ ಮೂಲಕ ಕೇಂದ್ರ ಸರ್ಕಾರವು ನಿಗದಿ ಮಾಡಿರುವ ರಫ್ತು ಗುರಿಯ ಶೇ 46ರಷ್ಟು ಸಾಧನೆ ಆಗಿದೆ ಎಂದು ಅದು ಹೇಳಿದೆ. ಒಟ್ಟಾರೆ ₹ 3.08 ಲಕ್ಷ ಕೋಟಿ ರಫ್ತು ಗುರಿಯನ್ನು ಸರ್ಕಾರ ಹೊಂದಿದೆ.

ಎಲ್‌ಇಟಿ ಕಮಾಂಡರ್ ಹತ್ಯೆ

ಶ್ರೀನಗರ: ಫೆಬ್ರವರಿಯಲ್ಲಿ ಇಬ್ಬರು ಪೊಲೀಸರ ಹತ್ಯೆಯಲ್ಲಿ ಭಾಗಿಯಾಗಿದ್ದ ಲಷ್ಕರ್-ಇ-ತಯಬಾ (ಎಲ್‌ಇಟಿ) ಕಮಾಂಡರ್ ಉಮರ್ ಮುಷ್ತಾಕ್ ಖಾಂಡೆಯನ್ನು ಅವನ ಸಹಚರರೊಂದಿಗೆ ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯ ಪಂಪೋರ್ ಪ್ರದೇಶದಲ್ಲಿ ಭದ್ರತಾ ಪಡೆಗಳು ಶನಿವಾರ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿವೆ.

ದೇಶದಾದ್ಯಂತ ಪೆಟ್ರೋಲ್, ಡೀಸೆಲ್ ದರ 35 ಪೈಸೆ ಹೆಚ್ಚಳ

ಬೆಂಗಳೂರಿನಲ್ಲಿ ₹100ರ ಸಮೀಪಕ್ಕೆ ಡೀಸೆಲ್ ದರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯ ತೈಲ ಮಾರಾಟ ಕಂಪನಿಗಳು ಶನಿವಾರ ದೇಶದಾದ್ಯಂತ ಪೆಟ್ರೋಲ್, ಡೀಸೆಲ್ ದರವನ್ನು ಪ್ರತಿ ಲೀಟರಿಗೆ 35 ಪೈಸೆಗಳಷ್ಟು ಹೆಚ್ಚಿಸಿವೆ. ಇದರಿಂದಾಗಿ ಬೆಂಗಳೂರು, ಗೋವಾದಲ್ಲಿ ಡೀಸೆಲ್ ದರವು ಲೀಟರಿಗೆ ₹ 100ರ ಸನಿಹಕ್ಕೆ ಬಂದಿದೆ.

ಸತತ ಮೂರನೇ ಬಾರಿಗೆ ಇಂಧನ ದರ ಹೆಚ್ಚಿಸಲಾಗಿದೆ. ಅಕ್ಟೋಬರ್ 12 ಮತ್ತು 13ರಂದು ಬೆಲೆಯಲ್ಲಿ ವ್ಯತ್ಯಾಸ ಆಗಿರಲಿಲ್ಲ. ಶನಿವಾರದ ದರ ಏರಿಕೆಯಿಂದ ಡೀಸೆಲ್ ದರವು ಪ್ರತಿ ಲೀಟರಿಗೆ ₹ 99.97ಕ್ಕೆ ತಲುಪಿದೆ. ಪೆಟ್ರೋಲ್ ದರ ಲೀಟರಿಗೆ ₹ 109.12ಕ್ಕೆ ತಲುಪಿದೆ.

ಪಣಜಿಯಲ್ಲಿ ಡೀಸೆಲ್ ದರ ₹ 99.56ಕ್ಕೆ ಏರಿಕೆ ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 105.49 ಮತ್ತು ಡೀಸೆಲ್ ದರ ಲೀಟರಿಗೆ ₹ 94.22ಕ್ಕೆ ತಲುಪಿದೆ. ಮುಂಬೈನಲ್ಲಿ ಪೆಟ್ರೋಲ್ ದರ ₹ 111.43 ಮತ್ತು ಡೀಸೆಲ್ ದರ ₹ 102.15ಕ್ಕೆ ಏರಿಕೆ ಆಗಿದೆ. ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ಇಂಧನ ದರವು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸ ಆಗುತ್ತದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಗೆ ಅನುಗುಣವಾಗಿ ದೇಶದಲ್ಲಿ ಇಂಧನ ದರ ಹೆಚ್ಚಿಸಲಾಗಿದೆ. ಸೆಪ್ಟೆಂಬರ್‌ನಿಂದ ಈವರೆಗೆ ಪೆಟ್ರೋಲ್ ದರವನ್ನು 15 ಬಾರಿ ಮತ್ತು ಡೀಸೆಲ್ ದರವನ್ನು 18 ಬಾರಿ ಹೆಚ್ಚಿಸಲಾಗಿದೆ. ಈ ಅವಧಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 4.30 ಮತ್ತು ಡೀಸೆಲ್ ದರ ಲೀಟರಿಗೆ ₹ 5.6ರಷ್ಟು ಹೆಚ್ಚಾಗಿದೆ.

ದೇಶದ ಹಲವು ಭಾಗಗಳಲ್ಲಿ ಪೆಟ್ರೋಲ್ ದರವು ಈಗಾಗಲೇ ಲೀಟರಿಗೆ ₹ 100ನ್ನು ದಾಟಿ ಮಾರಾಟವಾಗುತ್ತಿದೆ. ಕರ್ನಾಟಕ, ಮಧ್ಯ ಪ್ರದೇಶ, ರಾಜಸ್ಥಾನ, ಒಡಿಶಾ, ಆಂಧ್ರಪ್ರದೇಶ, ತೆಲಂಗಾಣ, ಗುಜರಾತ್, ಮಹಾರಾಷ್ಟ್ರ, ಛತ್ತೀಸಗಢ, ಬಿಹಾರ, ಕೇರಳ ಮತ್ತು ಲಡಾಖ್‌ನಲ್ಲಿ ಸಹ ಡೀಸೆಲ್ ದರ ಲೀಟರಿಗೆ ₹ 100ರ ಗಡಿ ದಾಟಿದೆ.



ಮುಂಬೈ ಧಾರಣೆ

ಶೇಂಗಾ

16-10-2021

ಜಾವಾ 70/80(ಹೊಸ)	10400-10450
ಜಾವಾ 80/90(ಹೊಸ)	10100-10150
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡೆಲಿವರಿ	1445 (1445)
ಸೋಯಾ ಕಚ್ಚಾ	1230 (1230)
ಪಾಮ್ ವಾರದ ಡೆಲಿವರಿ	1198 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,300 (47,550)
ಬೆಳ್ಳಿ ಕೆ.ಜಿ 63,200 (63,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹440
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1440 (1440)
ಸೋಯಾ (ರಿಫೈನ್ಡ್)	₹1290 (1290)
ಸೂರ್ಯಕಾಂತಿ (ರಿಫೈನ್ಡ್)	₹1350(1325)
ಪಾಮೋಲಿನ್	₹1200 (1205)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ

ಕೋಕ	10000-25000
ಹೊಸತು	25000-50000

ಚಿತ್ರದುರ್ಗ

ಆಪಿ	44829-45269
ಬೆಟ್ಟೆ	38719-39189
ಕೆಂಪುಗೋಟು	29710-30149
ರಾಶಿ	44349-44779

ಕುಂದಾಪುರ

ಹಳೆಚಾಲಿ	46000-49500
ಹೊಸಚಾಲಿ	30000-37000

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	13650
ಎಸಿ	6325
ಆರ್‌ಪಿ	6150
ಆರ್‌ಸಿ	3560

ಪುತ್ತೂರು

ಕೋಕ	10500-26000
ಹೊಸತು	35500-50000

ಸಿದ್ದಾಪುರ

ಬಿಳಿಗೋಟು	34809-40029
ಚಾಲಿ	43208-46899
ಕೋಕ	21199-39100
ಕೆಂಪುಗೋಟು	21999-30099
ರಾಶಿ	38109-45099
ತಟ್ಟಿಬೆಟ್ಟೆ	34699-44599

ಶಿರಸಿ

ಬೆಟ್ಟೆ	41009-41009
ಬಿಳಿಗೋಟು	24899-41789
ಚಾಲಿ	44508-46689
ರಾಶಿ	43399-45609

ಟ್ವೆಂಟಿ–20 ವಿಶ್ವಕಪ್ ಪ್ರಾಥಮಿಕ ಹಂತದ ಪಂದ್ಯಗಳು ಇಂದಿನಿಂದ

ಬಾಂಗ್ಲಾದೇಶಕ್ಕೆ ಸ್ಕಾಟ್ಲೆಂಡ್ ಸವಾಲು

ಅಲ್ ಅಮೆರತ್, ಒಮನ್ (ಪಿಟಿಐ): ಟ್ವೆಂಟಿ-20 ವಿಶ್ವಕಪ್ ಟೂರ್ನಿಯ ಸೂಪರ್ 12 ರ ಸುತ್ತಿಗೆ ಪ್ರವೇಶಿಸುವ ಛಲದೊಂದಿಗೆ ಭಾನುವಾರ ಬಾಂಗ್ಲಾದೇಶ ಮತ್ತು ಸ್ಕಾಟ್ಲೆಂಡ್ ತಂಡಗಳು ಬಿ ಗುಂಪಿನ ಅರ್ಹತಾ ಸುತ್ತಿನಲ್ಲಿ ಮುಖಾಮುಖಿಯಾಗಲಿವೆ.

ಇದೇ 23ರಿಂದ ಪ್ರಮುಖ ಸುತ್ತಿನ ಪಂದ್ಯಗಳು ನಡೆಯಲಿವೆ. ಬಿ ಗುಂಪಿನಲ್ಲಿ ಬಾಂಗ್ಲಾದೇಶ, ಸ್ಕಾಟ್ಲೆಂಡ್, ಒಮನ್ ಮತ್ತು ಪಪುವಾ ನ್ಯೂಗಿನಿ ಸ್ಪರ್ಧಿಸುತ್ತಿವೆ. ಈ ಎಲ್ಲ ತಂಡಗಳಿಗಿಂತಲೂ ಹೆಚ್ಚು ಅನುಭವ ಮತ್ತು ಬಲಿಷ್ಠವಾಗಿರುವ ತಂಡವೆಂದರೆ ಬಾಂಗ್ಲಾದೇಶವಾಗಿದೆ. ಆದ್ದರಿಂದ ಈ ಗುಂಪಿನಿಂದ ಸೂಪರ್ 12 ಸುತ್ತಿಗೆ ಪ್ರವೇಶಿಸುವ ನೆಚ್ಚಿನ ತಂಡವೂ ಆಗಿದೆ.

ಕಳೆದೊಂದು ವರ್ಷದ ಅವಧಿಯಲ್ಲಿ ಬಾಂಗ್ಲಾ ತಂಡವು ಒಂಬತ್ತು ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಜಯಿಸಿದೆ. ಹೋದ ಮಾರ್ಚ್‌ನಲ್ಲಿ ಬಾಂಗ್ಲಾ ತಂಡವು ನ್ಯೂಜಿಲೆಂಡ್ ವಿರುದ್ಧ ಸೋತಿತ್ತು. ಅದರ ನಂತರ ಜಿಂಬಾಬ್ವೆ (2-1), ಆಸ್ಟ್ರೇಲಿಯಾ (4-1) ಮತ್ತು ನ್ಯೂಜಿಲೆಂಡ್ (3-2) ತಂಡಗಳ ವಿರುದ್ಧ ಗೆಲುವು ಸಾಧಿಸಿತ್ತು.

ಬಾಂಗ್ಲಾ ತಂಡವು ಇಲ್ಲಿ ಅರ್ಹತೆ ಗಿಟ್ಟಿಸಿದರೆ ಭಾರತ, ಅಫ್ಗಾನಿಸ್ತಾನ, ನ್ಯೂಜಿಲೆಂಡ್, ಪಾಕಿಸ್ತಾನ ತಂಡಗಳಿರುವ ಗುಂಪನ್ನು ಪ್ರವೇಶಿಸುವುದು.

2007ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಬಾಂಗ್ಲಾ ತಂಡವು ಸೂಪರ್ 8ಕ್ಕೆ ಪ್ರವೇಶಿಸಿತ್ತು. ಆದರೆ, 2009, 2010 ಮತ್ತು 2012ರಲ್ಲಿ ನಿರಾಶೆ ಅನುಭವಿಸಿತ್ತು. 2016ರಲ್ಲಿ ಪುಟದೆದ್ದ ತಂಡವು ಸೂಪರ್ 10ರ ಗುಂಪಿಗೆ ಪ್ರವೇಶಿಸಿತ್ತು. ಆದರೆ, ಭಾರತದ ವಿರುದ್ಧ ನಿರ್ಣಾಯಕ ಪಂದ್ಯದಲ್ಲಿ ಸೋತು ಹೊರಬಿದ್ದಿತ್ತು. ನಾಯಕ ಮಹಮುದುಲ್ಲಾ, ಐಪಿಎಲ್ ಟೂರ್ನಿಯ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಆಡಿರುವ ಶಕೀಬ್ ಅಲ್ ಹಸನ್, ಸೌಮ್ಯ ಸರ್ಕಾರ, ಮುಸ್ತಫಿಜುರ್ ರೆಹಮಾನ್ ಅವರು ತಂಡದ ಪ್ರಮುಖ ಆಟಗಾರರಾಗಿದ್ದಾರೆ.

ನಾಲ್ಕನೇ ಬಾರಿಗೆ ಟಿ20 ವಿಶ್ವಕಪ್ ಪ್ರಾಥಮಿಕ ಹಂತಕ್ಕೆ ಪ್ರವೇಶಿಸಿರುವ ಸ್ಕಾಟ್ಲೆಂಡ್ ತಂಡದಲ್ಲಿ ನಾಯಕ ಕೈಲ್ ಕೋಜೆರ್, ಜಾರ್ಜ್ ಮುನ್ಸಿ ಉತ್ತಮ ಲಯದಲ್ಲಿದ್ದಾರೆ.

ಮೆಹಮುದುಲ್ಲಾ ಮತ್ತು ಮುಸ್ತಫಿಜುರ್ ರೆಹಮಾನ್

ತಂಡಗಳು: ಬಾಂಗ್ಲಾದೇಶ: ಮಹಮುದುಲ್ಲಾ (ನಾಯಕ), ಲಿಟನ್ ದಾಸ್, ಮೊಹಮ್ಮದ್ ನೈಮ್, ಮೆಹದಿ ಹಸನ್, ಶಕೀಬ್ ಅಲ್ ಹಸನ್, ಸೌಮ್ಯ ಸರ್ಕಾರ್, ಮುಷ್ಫಿಕರ್ ರಹೀಂ, ನೂರುಲ್ ಹಸನ್ (ವಿಕೆಟ್‌ಕೀಪರ್), ಅಫಿಫ್ ಹುಸೇನ್, ನಸುಮ್ ಅಹಮದ್, ತಸ್ಕಿನ್ ಅಹಮದ್, ಶಮೀಮ್ ಹೊಸೈನ್, ಮುಸ್ತಫಿಜುರ್ ರೆಹಮಾನ್, ಮೊಹಮ್ಮದ್ ಸೈಫುದ್ದೀನ್.
ಸ್ಕಾಟ್ಲೆಂಡ್: ಕೈಲ್ ಕೋಜರ್ (ನಾಯಕ), ರಿಚರ್ಡ್ ಬ್ಯಾರಿಂಗ್ಟನ್, ಡೈಲನ್ ಬಜ್, ಮ್ಯಾಥ್ಯೂ ಕ್ರಾಸ್ (ವಿಕೆಟ್‌ಕೀಪರ್), ಜೋಶ್ ಡೇವಿ, ಅಲ್ಲೈ ಇವಾನ್ಸ್, ಕ್ರಿಸ್ ಗ್ರೀವ್ಸ್, ಮೈಕೆಲ್ ಲೀಸ್ಕ್, ಕೆಲಮ್ ಮೆಕಾಲ್ಡ್, ಜಾರ್ಜ್ ಮುನ್ಸೆ, ಸಫ್ಯನ್ ಶರೀಫ್, ಹಮ್ಜಾ ತಾಹೀರ್, ಕ್ರೇತ್ ವಾಲೆಸ್, ಮಾರ್ಕ್ ವ್ಯಾಟ್, ಬ್ರಾಡ್ ವೀಲ್.

ಐಪಿಎಲ್ ಭಾರತದಲ್ಲಿ: ಗಂಗೂಲಿ ಭರವಸೆ

ನವದೆಹಲಿ (ರಾಯಿಟರ್ಸ್): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಮುಂದಿನ ಆವೃತ್ತಿಯ ಪಂದ್ಯಗಳನ್ನು ಭಾರತದಲ್ಲೇ ನಡೆಸಲು ಸಾಧ್ಯವಾಗುವಂಥ ವಾತಾವರಣ ನಿರ್ಮಾಣವಾಗಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ಸೌರವ್ ಗಂಗೂಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶುಕ್ರವಾರ ಮುಕ್ತಾಯಗೊಂಡ 14ನೇ ಆವೃತ್ತಿಯನ್ನು ಭಾರತದಲ್ಲಿ ಆರಂಭಿಸಲಾಗಿತ್ತು. ಆದರೆ ಬಯೊಬಬಲ್‌ನಲ್ಲಿದ್ದ ಆಟಗಾರರ ಪೈಕಿ ಕೆಲವರಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಕಾರಣ ಸ್ಥಗಿತಗೊಳಿಸಿ ಯುಎಇಗೆ ಸ್ಥಳಾಂತರಿಸಲಾಗಿತ್ತು. ದುಬೈನಲ್ಲಿ ನಡೆದ ಫೈನಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಮಣಿಸಿ ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ಪ್ರಶಸ್ತಿ ಗೆದ್ದುಕೊಂಡಿತ್ತು.

ಈ ಬಾರಿ ಎಂಟು ತಂಡಗಳು ಸೆಣಸಿದ್ದವು.

ಐಪಿಎಲ್ ಪ್ರಶಸ್ತಿ ಗೆದ್ದ ಸಿಎಸ್‌ಕೆ ಕೋಚ್ ಫ್ಲೆಮಿಂಗ್ ಹೇಳಿಕೆ

‘ಶಕ್ತಿಯಲ್ಲಿ ನಂಬಿಕೆ ಗೆಲುವಿನ ಮಂತ್ರ’

ದುಬೈ (ಪಿಟಿಐ): ತಂಡದ ಶಕ್ತಿಯಲ್ಲಿ ಬಲವಾದ ನಂಬಿಕೆ ಮತ್ತು ಪರಸ್ಪರ ಉತ್ತಮ ಸಂಬಂಧ ಬೆಳೆಸಿಕೊಂಡಿರುವುದೇ ಯಶಸ್ಸಿಗೆ ಕಾರಣ ಎಂದು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಕೋಚ್ ಸ್ಟೀಫನ್ ಫ್ಲೆಮಿಂಗ್ ಅಭಿಪ್ರಾಯಪಟ್ಟಿದ್ದಾರೆ.

ಶುಕ್ರವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು 27 ರನ್‌ಗಳಿಂದ ಮಣಿಸಿ ಚೆನ್ನೈ ಸೂಪರ್ ಕಿಂಗ್ಸ್ ನಾಲ್ಕನೇ ಬಾರಿ ಪ್ರಶಸ್ತಿ ಗೆದ್ದುಕೊಂಡಿತ್ತು.

‘ವಿಶ್ಲೇಷಣೆ ಮತ್ತು ಸಂಖ್ಯೆಗಳ ಆಧಾರದ ಲೆಕ್ಕಾಚಾರಗಳನ್ನು ತಂಡ ಮಾಡುವುದಿಲ್ಲ. ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯಕ್ಕೆ ಸಜ್ಜಾಗುವ ವಿಧಾನವೇ ಬೇರೆ. ನಮ್ಮ ತಂಡದಲ್ಲಿರುವವರ ಪ್ರಾಯದ ಬಗ್ಗೆ ಕೆಲವು ಕಡೆಯಿಂದ ಟೀಕೆಗಳು ಕೇಳಿಬಂದಿವೆ. ಆದರೆ ಆಟಗಾರರ ಪ್ರಾಯವೇ ತಂಡಕ್ಕೆ ಈಗ ವರವಾಗಿ ಪರಿಣಮಿಸಿದೆ’ ಎಂದು 40 ವರ್ಷದ ಮಹೇಂದ್ರ ಸಿಂಗ್ ಧೋನಿ ನಾಯಕರಾಗಿರುವ ತಂಡದ ಕೋಚ್ ಹೇಳಿದರು.

‘ಯಾವುದೇ ಕ್ಷೇತ್ರದಲ್ಲಿ ಅನುಭವ ಕೈ ಹಿಡಿಯುತ್ತದೆ. ಸಿಎಸ್‌ಕೆ ವಿಷಯದಲ್ಲಿ ಇದು ಅನೇಕ ಬಾರಿ ಸಾಬೀತಾಗಿದೆ. ಈ ಹಿಂದಿನ ಮೂರು ಪ್ರಶಸ್ತಿಗಳು ಕೂಡ ಪ್ರಮುಖವಾಗಿದ್ದವು. ಆದರೆ ಈ ಬಾರಿಯ ಗೆಲುವು ಹೆಚ್ಚು ಖುಷಿ ತಂದಿದೆ. ಯಾಕೆಂದರೆ ಟೂರ್ನಿಯ ಆರಂಭದಲ್ಲಿ ಈ ತಂಡವನ್ನು ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳ ಪಟ್ಟಿಯಿಂದ ಎಲ್ಲರೂ ಹೊರಗಿಟ್ಟಿದ್ದರು’ ಎಂದು ಫ್ಲೆಮಿಂಗ್ ತಿಳಿಸಿದರು.

ಸ್ಟೀಫನ್ ಫ್ಲೆಮಿಂಗ್ –ಎಎಫ್‌ಪಿ ಚಿತ್ರ

ನ್ಯೂಜಿಲೆಂಡ್ ಬಳಗ ಸೇರಿದ ಸ್ಟೀಫನ್

ಸ್ಟೀಫನ್ ಫ್ಲೆಮಿಂಗ್ ಅವರು ಶನಿವಾರ ನ್ಯೂಜಿಲೆಂಡ್ ತಂಡವನ್ನು ಸೇರಿಕೊಂಡಿದ್ದಾರೆ. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಸಜ್ಜಾಗುತ್ತಿರುವ ರಾಷ್ಟ್ರೀಯ ತಂಡಕ್ಕೆ ಸಲಹೆಗಳನ್ನು ನೀಡಲು ಅವರನ್ನು ಕರೆಸಿಕೊಳ್ಳಲಾಗಿದೆ.

‘ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸಿದ ಸ್ಟೀಫನ್ ಫ್ಲೆಮಿಂಗ್ ಅವರು ನಮ್ಮ ತಂಡವನ್ನು ಸೇರಿಕೊಂಡಿದ್ದು ಕೆಲವು ದಿನ ನಮ್ಮೊಂದಿಗೆ ಇರುವರು’ ಎಂದು ‘ಬ್ಲ್ಯಾಕ್ ಕ್ಯಾಪ್ಸ್’ ಟ್ವೀಟ್ ಮಾಡಿದೆ.

ನ್ಯೂಜಿಲೆಂಡ್ ತಂಡ ಸೂಪರ್ 12 ಹಂತದ ತನ್ನ ಮೊದಲ ಪಂದ್ಯದಲ್ಲಿ ಪಾಕಿಸ್ತಾನವನ್ನು ಎದುರಿಸಲಿದೆ.

ಕುಸ್ತಿ: ಕಿರಣ್, ಶುಭಂ ‘ಚಿನ್ಮೂಲಾದ್ರಿ ಕೇಸರಿ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ಮುರುಘಾ ಮಠದಲ್ಲಿ ಶನಿವಾರ ನಡೆದ ‘ರಾಷ್ಟ್ರಮಟ್ಟದ ಜಯದೇವ ಜಂಗೀಕುಸ್ತಿ’ಯಲ್ಲಿ ಭದ್ರಾವತಿಯ ಕಿರಣ್ ಹಾಗೂ ಕೊಲ್ಲಾಪುರದ ಶುಭಂ ಸಮಬಲದ ಹೋರಾಟ ನಡೆಸಿ ‘ಚಿನ್ಮೂಲಾದ್ರಿ ಕೇಸರಿ’ ಪ್ರಶಸ್ತಿಯನ್ನು ಹಂಚಿಕೊಂಡರು.

ಪ್ರಶಸ್ತಿ ತಲಾ ₹ 20 ಸಾವಿರ ನಗದು, ಪ್ರಶಸ್ತಿ ಪತ್ರ, ಪದಕ ಹಾಗೂ ಬೆಳ್ಳಿ ಗದೆ ಒಳಗೊಂಡಿದೆ. ‘ಕರ್ನಾಟಕ ಕೇಸರಿ’ ಖ್ಯಾತಿಯ ಕಿರಣ್ ಮತ್ತು ‘ಭಾರತ ಕೇಸರಿ’ ಖ್ಯಾತಿಯ ಶುಭಂ ನಡುವೆ ನಡೆದ ಹಣಾಹಣಿಯಲ್ಲಿ ಇಬ್ಬರೂ ಪ್ರಬಲ ಪಟ್ಟುಗಳ ಮೂಲಕ ಮಿಂಚಿದರು.

ಭದ್ರಾವತಿಯ ಕಿರಣ್ ಮತ್ತು ಕೊಲ್ಲಾಪುರದ ಶುಭಂ ನಡುವಿನ ಕಾದಾಟ

ಬಾಹ್ಯಾಕಾಶ ನಿಲ್ದಾಣ ಪ್ರವೇಶ ಮಾಡಿದ ಗಗನಯಾತ್ರಿಗಳು

ಬೀಜಿಂಗ್ (ಪಿಟಿಐ): ಬಾಹ್ಯಾಕಾಶ ನೌಕೆ ‘ಶೆನ್‌ಶಾವ್–13’ನ ಯಶಸ್ವಿ ಉಡಾವಣೆಯ ಗಂಟೆಗಳ ನಂತರ ಮಹಿಳೆ ಸೇರಿ ಮೂವರು ಗಗನಯಾತ್ರಿಗಳು ಶನಿವಾರ ಬಾಹ್ಯಾಕಾಶ ನಿಲ್ದಾಣ ‘ಟಿಯಾನ್ಹೆ’ ಪ್ರವೇಶಿಸಿದ್ದಾರೆ ಎಂದು ಚೀನಾ ಬಾಹ್ಯಾಕಾಶ ಸಂಸ್ಥೆ ಹೇಳಿದೆ.

ಗಗನಯಾತ್ರಿಗಳಾದ ಝೈ ಝಿಗಾಂಗ್, ವಾಂಗ್ ಯಾಪಿಂಗ್ ಮತ್ತು ಯೆ ಗುವಾಂಗ್ಫು ಅವರು ನಿರ್ಮಾಣ ಹಂತದಲ್ಲಿರುವ ಬಾಹ್ಯಾಕಾಶ ನಿಲ್ದಾಣದ ರೇಡಿಯಲ್ ಪೋರ್ಟಲ್ ಅನ್ನು ಯಶಸ್ವಿಯಾಗಿ ಜೋಡಿಸಿದರು ಎಂದೂ ಸಂಸ್ಥೆ ಹೇಳಿದೆ.

ಬಾಹ್ಯಾಕಾಶ ನಿಲ್ದಾಣದ ನಿರ್ಮಾಣವನ್ನು ಪೂರ್ಣಗೊಳಿಸಲು ಗಗನಯಾತ್ರಿಗಳು ಆರು ತಿಂಗಳ ಕಾಲ ಅಲ್ಲಿ ಉಳಿಯಲಿದ್ದಾರೆ. ಚೀನಾ ಇತಿಹಾಸದಲ್ಲೇ ಇದು ಸುದೀರ್ಘ ಅವಧಿಯ ಮಾನವಸಹಿತ ಯೋಜನೆಯಾಗಿದೆ. ವಾಂಗ್ ಅವರು ಚೀನಾ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಮೊದಲ ಚೀನಿ ಮಹಿಳಾ ಗಗನಯಾತ್ರಿ ಎನಿಸಿಕೊಂಡಿದ್ದಾರೆ. ಶನಿವಾರ ನಸುಕಿನ ಜಾವ ಉಡಾ ವಣೆಗೊಂಡ ಬಾಹ್ಯಾಕಾಶ ನೌಕೆಯು ‘ಟಿಯಾನ್ಹೆ’ ಬಾಹ್ಯಾಕಾಶ ನಿಲ್ದಾಣದಲ್ಲಿ ಇಳಿಯಿತು.

ಇಡೀ ಪ್ರಕ್ರಿಯೆಯು ಸುಮಾರು 6.50 ಗಂಟೆ ಸಮಯ ತೆಗೆದುಕೊಂಡಿತು ಎಂದು ಚೀನಾ ಮಾನವ ಸಹಿತ ಬಾಹ್ಯಾಕಾಶ ಸಂಸ್ಥೆ (ಸಿಎಂಸಿಎ) ಹೇಳಿದೆ.

ಬಾಹ್ಯಾಕಾಶ ನಿಲ್ದಾಣವು ಮುಂದಿನ ವರ್ಷದ ವೇಳೆಗೆ ಸಿದ್ಧಗೊಳ್ಳುವ ನಿರೀಕ್ಷೆಯಿದೆ.

‘ಬಾಹ್ಯಾಕಾಶ ನಿಲ್ದಾಣದ ನಿರ್ಮಾಣವು ಚೀನಾದ ಬಾಹ್ಯಾಕಾಶ ಉದ್ಯಮದಲ್ಲಿ ಒಂದು ಮೈಲಿಗಲ್ಲು. ಇದು ಮಾನವೀಯತೆಯಿಂದ ಬಾಹ್ಯಾಕಾಶವನ್ನು ಶಾಂತಿಯುತವಾಗಿ ಬಳಸಲು ಮಹತ್ವದ ಕೊಡುಗೆಗಳನ್ನು ನೀಡಲಿದೆ’ ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೇಳಿದ್ದಾರೆ.

ಅಧ್ಯಯನಕ್ಕೆ ನಾಸಾದ ಲೂಸಿ

ವಾಷಿಂಗ್ಟನ್ (ಎಎಫ್‌ಪಿ): ಸೌರ ಮಂಡಲದ ಅನ್ವೇಷಣೆ ಹಾಗೂ ಗುರುಗ್ರಹದ ಟ್ರೋಜನ್ ಕ್ಷುದ್ರಗ್ರಹಗಳ ಅಧ್ಯಯನಕ್ಕಾಗಿ ಅಮೆರಿಕದ ಬಾಹ್ಯಾಕಾಶ ಸಂಸ್ಥೆ (ನಾಸಾ) ಶನಿವಾರ ಲೂಸಿ ಎಂಬ ನೌಕೆಯನ್ನು ಕಳಿಸಿದೆ. ಈ ನೌಕೆ ಸೌರಮಂಡಲದಲ್ಲಿ 12 ವರ್ಷಗಳ ಕಾಲ ಕಾರ್ಯಾಚರಣೆ ನಡೆಸಲಿದೆ.

ಲೂಸಿ ನೌಕೆಯನ್ನು ಹೊತ್ತ ಅಟ್ಲಾಸ್ 5 ರಾಕೆಟ್ ಫ್ಲಾರಿಡಾದ ಕೇಪ್ ಕ್ಯಾನವೆರಲ್ ಉಡಾವಣಾ ನೆಲೆಯಿಂದ ಶನಿವಾರ ಮುಂಜಾನೆ ಸ್ಥಳೀಯ ಕಾಲ 5.34ಕ್ಕೆ (0934 ಜಿಎಂಟಿ) ನಭಕ್ಕೆ ಚಿಮ್ಮಿತು.

ಲೂಸಿ 2025ರಲ್ಲಿ ಮೊದಲ ಬಾರಿಗೆ ಮಂಗಳ ಹಾಗೂ ಗುರುವಿನ ನಡುವಿನ ವಲಯದಲ್ಲಿರುವ ಡೊನಾಲ್ಡ್ ಜೋಹಾನ್ಸನ್ ಎಂಬ ಟ್ರೋಜನ್ ಕ್ಷುದ್ರಗ್ರಹವನ್ನು ಭೇಟಿಯಾಗಲಿದೆ. 2027 ರಿಂದ 2033ರವರೆಗೆ ಲೂಸಿ ಒಟ್ಟು 7 ಟ್ರೋಜನ್ ಕ್ಷುದ್ರಗ್ರಗಳನ್ನು ಅಧ್ಯಯನ ಮಾಡಲಿದೆ ಎಂದಿದ್ದಾರೆ ಥಾಮಸ್.

ಒಂದೊಂದು ಕ್ಷುದ್ರಗ್ರಹಗಳನ್ನು ತಲುಪಿದಾಗ ಲೂಸಿಯು ಸುಮಾರು 400 ಕಿಲೋ ಮೀಟರ್ ಮೇಲ್ಮೈನಲ್ಲಿ ಅವುಗಳ ಬಗ್ಗೆ ಅಧ್ಯಯನ ನಡೆಸಲಿದೆ. ಶನಿ, ಯುರೇನಸ್, ನೆಪ್ಚೂನ್ ರಚನೆಯಿಂದ ಉಳಿದಿರುವ ಕಚ್ಚಾವಸ್ತುಗಳೇ ಈ ಕ್ಷುದ್ರಗ್ರಹಗಳು ಎಂದು ನಂಬಲಾಗಿದೆ. ಗುರು ಗ್ರಹಕ್ಕೆ ಅಂಟಿಕೊಂಡು ಸುಮಾರು 7000 ಟ್ರೋಜನ್ ಕುದ್ರಗ್ರಹಗಳಿವೆ ಎಂದು ಅಂದಾಜಿಸಲಾಗಿದೆ.

1974 ರಲ್ಲಿ ಇಥಿಯೋಪಿಯಾದಲ್ಲಿ ಆದಿಮಾನವನ ಪಳಿಯುಳಿಕೆ ದೊರಕಿತ್ತು. ಅದು ಮಾನವನ ವಿಕಾಸದ ಮೇಲೆ ಬೆಳಕು ಚೆಲ್ಲಲು ಪ್ರಮುಖ ಮೂಲವಾಗಿತ್ತು. ಅದಕ್ಕೆ ಲೂಸಿ ಎಂದು ಹೆಸರಿಡಲಾಗಿತ್ತು. ಇದರ ಸ್ಮರಣಾರ್ಥವೇ ಇದೀಗ ಕ್ಷುದ್ರಗ್ರಹಗಳ ಅಧ್ಯಯನಕ್ಕೆ ಹೊರಟ ನೌಕೆಗೆ ನಾಸಾ ಲೂಸಿ ಎಂಬ ಹೆಸರಿಟ್ಟಿದೆ.

ಸಿಗರೇಟಿನ ಹಣ ಕೇಳಿದ್ದಕ್ಕೆ ಕೊಲೆ!

ಶಹದೋಲ್, ಮಧ್ಯಪ್ರದೇಶ (ಪಿಟಿಐ): ಸಿಗರೇಟ್ ಖರೀದಿಸಿದ ಬಳಿಕ ಹಣ ಪಾವತಿಸುವಂತೆ ಕೇಳಿದ್ದಕ್ಕೆ ಅಂಗಡಿ ಮಾಲೀಕನನ್ನು ನಾಲ್ವರು ಥಳಿಸಿ ಕೊಂದ ಘಟನೆ ಶಹದೋಲ್‌ನಲ್ಲಿ ನಡೆದಿದೆ.

ಜಿಲ್ಲಾ ಕೇಂದ್ರದಿಂದ 90 ಕಿಲೋಮೀಟರ್ ದೂರದಲ್ಲಿರುವ ಡಿಯೋಲಂಡ್ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೋನು ಖಾನ್, ಪಂಕಜ್ ಸಿಂಗ್, ವಿರಾಟ್ ಸಿಂಗ್ ಹಾಗೂ ಸಂದೀಪ್ ಸಿಂಗ್ ಆರೋಪಿಗಳು. ಈ ಪೈಕಿ ಮೂವರನ್ನು ಬಂಧಿಸಲಾಗಿದೆ. ಪರಾರಿಯಾಗಿರುವ ಇನ್ನೊಬ್ಬ ಆರೋಪಿಯನ್ನು ಬಂಧಿಸಲು ಜಾಲ ಬೀಸಲಾಗಿದೆ ಎಂದು ಬೆಹರಿಯ ಪೊಲೀಸ್ ಅಧಿಕಾರಿ ಭವಿಷ್ಯ ಭಾಸ್ಕರ್ ತಿಳಿಸಿದರು.

ಬಾಲಕಿ ಮೇಲೆ ಅತ್ಯಾಚಾರ: ಎಸ್‌ಪಿ, ಬಿಎಸ್‌ಪಿ ಜಿಲ್ಲಾಧ್ಯಕ್ಷರ ಬಂಧನ

ಲಲಿತಪುರ, ಉತ್ತರಪ್ರದೇಶ (ಪಿಟಿಐ): 17 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ ಮತ್ತು ಬಹುಜನ ಸಮಾಜ ಪಕ್ಷದ ಜಿಲ್ಲಾ ಅಧ್ಯಕ್ಷರು ಸೇರಿ ಏಳು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಅ.12 ರಂದು ಸದರ್ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತೆಯ ತಂದೆ ಮತ್ತು ಚಿಕ್ಕಪ್ಪ ಹಾಗೂ ಮೂವರು ಅಪರಿಚಿತ ವ್ಯಕ್ತಿಗಳು ಸೇರಿ 25 ಜನರ ವಿರುದ್ಧ ಪ್ರಕರಣ ದಾಖಲಾಗಿತ್ತು.

ನಗರದ ವಿವಿಧ ಭಾಗಗಳಲ್ಲಿ ತನ್ನ ಮೇಲೆ ಐದು ವರ್ಷಗಳ ಕಾಲ ಅತ್ಯಾಚಾರ ಮಾಡಿರುವುದಾಗಿ ಬಾಲಕಿ ಮೂವರು ಅಪರಿಚಿತರು ಸೇರಿ 25 ವ್ಯಕ್ತಿಗಳ ಹೆಸರು ಹೇಳಿದ್ದಾಳೆ. ಬಾಲಕಿಯ ದೂರಿನ ಆಧಾರದ ಮೇಲೆ ಬಂಧಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಪಾಠಕ್ ಹೇಳಿದ್ದಾರೆ.

ಮಿರ್ಜಾಪುರ ಜಿಲ್ಲೆಯ ಹೋಟೆಲ್ ಮೇಲೆ ಶುಕ್ರವಾರ ದಾಳಿ ನಡೆಸಲಾಗಿದ್ದು, ಅಲ್ಲಿಂದ ಲಲಿತ್‌ಪುರದ ಸಮಾಜವಾದಿ ಪಕ್ಷದ ಜಿಲ್ಲಾ ಅಧ್ಯಕ್ಷ ತಿಲಕ್ ಯಾದವ್ ಮತ್ತು ಬಿಎಸ್‌ಪಿ ಜಿಲ್ಲಾ ಅಧ್ಯಕ್ಷ ದೀಪಕ್ ಅಹಿರ್ವಾರ್ ಹಾಗೂ ಎಂಜಿನಿಯರ್ ಮಹೇಂದ್ರ ದುಬೆ ಎಂಬುವವರನ್ನು ಬಂಧಿಸಲಾಗಿದೆ. ಮೂವರನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮೊದಲು ನಾಲ್ಕು ಮಂದಿಯನ್ನು ಬಂಧಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ವಂಶಿತಾ ಪಠಾಣಿಯ ಮತ್ತು ರಿಷಿ ರೆಡ್ಡಿ –ಪ್ರಜಾವಾಣಿ ಚಿತ್ರ

ರಿಷಿ ರೆಡ್ಡಿ, ವಂಶಿತಾಗೆ ಚಾಂಪಿಯನ್ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ರಿಷಿ ರೆಡ್ಡಿ ಮತ್ತು ವಂಶಿತಾ ಪಠಾಣಿಯ ಅವರು ಕೆಎಸ್‌ಎಲ್‌ಟಿಎ-ಏಐಟಿಎ ಪ್ರೊ ಸರ್ಕೀಟ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಪುರುಷರ ವಿಭಾಗದ ಫೈನಲ್‌ನಲ್ಲಿ ರಿಷಿ 6-0, 6-2ರಲ್ಲಿ ಪಶ್ಚಿಮ ಬಂಗಾಳದ ಇಶಾಕ್ ಇಕ್ಬಾಲ್ ವಿರುದ್ಧ ಜಯ ಗಳಿಸಿದರು. ವಂಶಿತಾ 6-0, 6-1ರಲ್ಲಿ ತೆಲಂಗಾಣದ ಆವಿಷ್ಕಾ ಗುಪ್ತಾ ಎದುರು ಗೆದ್ದರು.

ಕ್ಷಿತಿಜ್, ಗುರ್ಲೀನ್‌ಗೆ ಪ್ರಶಸ್ತಿ ಸಂಭ್ರಮ: ಕ್ಷಿತಿಜ್ ಆರಾಧ್ಯ ಮತ್ತು ಗುರ್ಲೀನ್ ಕೌರ್ 14 ವರ್ಷದೊಳಗಿನವರಿಗಾಗಿ ನಡೆದ ಎಫ್‌ಎಸ್‌ಎ-ಏಐಟಿಎ ಸಿಎಸ್–7 ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಚಾಂಪಿಯನ್ ಆದರು.

ಫೈನಲ್‌ನಲ್ಲಿ ಕ್ಷಿತಿಜ್ 6-2, 7-5ರಲ್ಲಿ ಅಬ್ರದೀಪ್ ಭಟ್ಟಾಚಾರ್ಯ ವಿರುದ್ಧ ಜಯ ಗಳಿಸಿದರು. ಗುರ್ಲೀನ್ 7-5, 2-6, 7-5ರಲ್ಲಿ ಧರಣಿ ಧನ್ಯತಾ ಶ್ರೀನಿವಾಸ ಎದುರು ಗೆಲುವು ದಾಖಲಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ಕಬ್ಬಡಿ ಜಿ.ಆರ್. ಕೃಷ್ಣಪ್ಪ (ಹೆಚ್.ಎ.ಎಲ್)
ಗುಂಜೂರು, ವರ್ತೂರು ಹೋಬಳಿ, ಬೆಂಗಳೂರು-87
ಇವರು ದಿನಾಂಕ: 9.10.2021ನೇ ಶನಿವಾರ ಬೆಳಿಗ್ಗೆ 11:45. ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಹಾಗೂ ವೈಕುಂಠ ಸಮಾರಾಧನೆಯನ್ನು ದಿನಾಂಕ: 19/10/2021 ಮಂಗಳವಾರ ಬೆಳಿಗ್ಗೆ 10:30 ರಿಂದ 11:30 ಗಂಟೆಗೆ ತಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತರು : ಪತ್ನಿಯವರಾದ ಕನಕಮ್ಮ ಮಕ್ಕಳು ಹಾಗೂ ಕುಟುಂಬಸ್ಥರು
9741280788, 9902537999

ವೈಕುಂಠ ಸಮಾರಾಧನೆ
17/10/2021, ಭಾನುವಾರ

ಚನ್ನವೀರ ಬಿ (ಮರಣ: 07/10/2021)
Gone from our lives one so dear, but in our hearts forever near
ದುಃಖತಪ್ತರು: ಶ್ರೀಮತಿ ಮಹಾದೇವಮ್ಮ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗು ಬಂಧು ಮಿತ್ರರು
ಮೊ.ನಂ. 94484 81195

ಮೊದಲನೆ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಸುನಂದ ನಾಗರಾಜು
ಜನನ : 09.11.1950 | ಮರಣ : 18.10.2020
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರು, ನಿಮ್ಮ ಆದರ್ಶ ಜೀವನ ನಮಗೆ ಎಂದಿಗೂ ಮಾರ್ಗದರ್ಶನ. ನಿಮ್ಮ ನೆನಪು ಸದಾ ಹಸಿರು ಮತ್ತು ಸ್ಫೂರ್ತಿದಾಯಕ
ಸದಾ ನಿಮ್ಮ ಸ್ಮರಣೆಯಲ್ಲಿ
ಮಗಳು ಡಾ. ಎನ್.ವಿನುತ ರಾಜೇಂದ್ರ ಕುಮಾರ್, ಅಳಿಯ, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರೆಂಟಲ್ ಪ್ರಾಪರ್ಟೀಸ್
Accommodation Available
Paying Guest
26 ROOMS building opposite Main gate sambram college available for rent suitable for PG 9844123984

ಬಿಲ್ಡರ್ ಎಸೆನ್ಷಿಯಲ್
Water Proofing Materials
ಲೀಕೇಜ್.. ಲೀಕೇಜ್.. ನಿಮ್ಮ ಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Mysore
GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

ಉದ್ಯೋಗಾವಕಾಶ
Marketing & Sales
WANTED SALES Executives with Good Industrial Knowledge. Bike Must, Jain Bearings 09986781877, 09741966767.

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

MARKETING EXECUTIVES needed for Pvt Ltd Co near Nelamanagala to promote Thermal Insulation products. Ct 9480056374

Multiple Vacancy
ADMINISTRATION & Commercial assistant needed for Pvt Ltd Co near Nelamanagala. Ct 9480056374

ಬೆಂಗಳೂರಿನ ಹತ್ತಿರ ಹೊಸೂರು ರಸ್ತೆಯಲ್ಲಿರುವ ವೃದ್ಧಾಶ್ರಮಕ್ಕೆ ಸೆಕ್ಯೂರಿಟೀ, ಅಡುಗೆ ಸಹಾಯಕರು ಮತ್ತು ಗಾರ್ಡನರ್ ಬೇಕಾಗಿದ್ದಾರೆ. ವಸತಿ, ಊಟ ಉಚಿತ. ಸೂಕ್ತ ಸಂಬಳ. ಮೊಬೈಲ್: 9880855005 (ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ)

Wanted
FMCG ಮಾರುಕಟ್ಟೆ ಸಮೀಕ್ಷೆ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ. ಪಾರ್ಟ್ಟೈಮ್/ ಫುಲ್ ಟೈಮ್ನಲ್ಲಿ ಮಾಡಬಹುದು. ದಿನಕ್ಕೆ ರೂ 500- 900/- ಗಳಿಸುವ ಅವಕಾಶ. ಆಸಕ್ತ ಅಭ್ಯರ್ಥಿಗಳು ಕರೆ ಮಾಡಿ 9947213331

ಬೆಂಗಳೂರಿನಲ್ಲಿ ಅಡುಗೆ ಮಾಡಲು ಕೆಲಸದವರು ಬೇಕಾಗಿದ್ದಾರೆ ಊಟ ವಸತಿ ಉಚಿತ. ಸಂಪರ್ಕಿಸಿ: 7349251309/ 8884521234

General
TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC, Degree,ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 7829215432, 9538804499

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ Salary+OT 16,800-45000/-.9902839010, 9980295449

EDUCATION SPECIAL
We are coming out with special offer for Admission Notice, Education Success Congratulation Ads
DH DECCAN HERALD Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ವಾಹನ
Four Wheelers Selling
Tractors / Heavy Vehicles
FOR SALE AL 6 Wheeler Truck 2008 Model In Good Running Condition Near Hosakote. Ph- 9591997014

ಭವಿಷ್ಯ
Astrology
★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

★॥ಶ್ರೀಅಂಭಾಬವಾನಿ॥★ ಆರಾಧನೆಯಿಂದ ಪ್ರೀತಿಪ್ರೇಮ, ಸಾಲದಬಾದೆ, ಕಲಹಸಮಸ್ಯೆ, ಆಸ್ತಿ ಸಮಸ್ಯೆ, ಸ್ತ್ರೀಪುರುಷ ವಶಿಕರಣ ಇನ್ನಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನಮೂಲಕ ಪರಿಹಾರ.ಪಂ.ರಾಮ್. 9980988841

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವೈವಾಹಿಕ
Brides Wanted
Hindu
21 ವರ್ಷ, ಡಿಗ್ರಿ, ನಾಯಕ ಜನಾಂಗದ ವಧುವಿಗೆ ವರ ಬೇಕಾಗಿದ್ದಾರೆ. 50 ವರ್ಷದ ನಾಯಕ, ಉದ್ಯಮಿ ವರನಿಗೆ, ಉದ್ಯಮಿ ವಧು ಬೇಕಾಗಿದ್ದಾರೆ, ಜಾತಿಯ ಅಭ್ಯಂತರವಿಲ್ಲ, ವಿಧವೆ,ವಿಚ್ಛೇದಿತರು. 6366197165.

ಸಮಾಜಸೇವೆ
Old Age Home
ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂರ್ಪಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ
Travel
ವಿಜಯವಾಡ ಭದ್ರಾಚಲಂ, ಅನ್ನಾವರಂ, ವಿಶಾಖಪಟ್ಟಣಂ, ಬುರ್ರಾಗುಹೆಗಳು, ಶ್ರೀಕಾಕುಳಂ ಶ್ರಿವಾಸವಿಪೆನುಗೊಂಡ, 24.12.2021, 10 ದಿನಗಳು. ನೈಮಿಶಾರಣ್ಯ ಅಯೋಧ್ಯ, ಅಲಹಾಬಾದ್, ಕಾಶಿ,ಗಯಾ 19.01.2022, 10 ದಿನಗಳು ಉಜ್ಜಯಿನಿ, ಓಂಕಾರೇಶ್ವರ, ಜೈಪುರ್, ಪುಷ್ಕರ್, ಬಿಕಾನೇರ್ ಕಾರಣೀಮಾತ,ಜೈಸಲ್‌ಮೇರ್, ಜ್ಯೋದ್‌ಪುರ್, ಮೌಂಟ್‌ಅಬು, ಉದಯಪುರ್, 01.01.2022, 15 ದಿನಗಳು ಸಂಪರ್ಕಿಸಿ: ವಿಷ್ಣನ್ ಟೂರ್ಸ್ ಅಂಡ್ ಟ್ರಾವಲ್ಸ್ 9342287551, 8050629305

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 17 ಅಕ್ಟೋಬರ್ 2021

ಅಪರೂಪದ ಹೊಳೆ ಜೋರ್ದಾನ್ 11

ಪದಯಾನದ ಪರಯಾನ 13

ಪ್ರೀತಿಯ ಬೆಸುಗೆಗೆ ಕಾದಿದೆ ಕಾಶ್ಮೀರ

ಕಾಶ್ಮೀರದ ಆಡಳಿತದ ಚಹರೆಯನ್ನಷ್ಟೇ ಬದಲಾಯಿಸಿ ಈ ಕಣಿವೆ ನಾಡು ಈಗ ಬದಲಾಗಿದೆ ಎಂದರೆ ಸಾಕೇ? ಭಯ, ಅಪನಂಬಿಕೆಗಳೆಲ್ಲ ಈಗಲೂ ಹಿಮಪರ್ವತಗಳಂತೆ ಗಟ್ಟಿಯಾಗಿ ನಿಂತಿವೆಯಲ್ಲ?

ರವೀಂದ್ರ ಭಟ್ಟ

ಹಾಸ್ಯನಟ ದೊಡ್ಡಣ್ಣ ಅಭಿನಯದ ಕನ್ನಡದ ಸಿನಿಮಾವೊಂದರ ಸನ್ನಿವೇಶ ಹೀಗಿದೆ. ಅದರಲ್ಲಿ ಒಬ್ಬ ವ್ಯಕ್ತಿ ಬಂದು ದೊಡ್ಡಣ್ಣ ಅವರಿಗೆ ಪತ್ರ ಬರೆದುಕೊಡಲು ಹೇಳುತ್ತಾನೆ. ಪತ್ರದ ಆರಂಭ ಹೀಗಾಗುತ್ತದೆ. 'ಯಕೋ, ನಾವೆಲ್ಲಾ ಇಲ್ಲಿ ಸುಖವಾಗಿ, ಸಂತೋಷವಾಗಿ ನೆಮ್ಮದಿಯಿಂದ ಇದ್ದೇವೆ. ಅಪ್ಪ ಹೊಲದಲ್ಲಿ ಉಳುವಾಗ ಜಾರಿ ಬಿದ್ದು ಸೊಂಟ ಮುರಿದುಕೊಂಡಿದ್ದಾನೆ. ಅವನನ್ನು ಆಸ್ಪತ್ರೆಯ ಮೂರನೇ ಹಾಸಿಗೆಯಲ್ಲಿ ಮಲಗಿಸಿದ್ದೇನೆ. ಅವ್ವ ಅಪ್ಪನಿಗೆ ಬಿಸಿ ನೀರು ಕಾಯಿಸುವಾಗ ಸೀರೆಗೆ ಬೆಂಕಿ ತಗುಲಿ ಅರ್ಧ ಮೈಸುಟ್ಟು ಹೋಗಿದೆ. ಅವಳನ್ನು ನಾಲ್ಕನೇ ಹಾಸಿಗೆಯಲ್ಲಿ ಮಲಗಿಸಿದ್ದೇನೆ. ಮಗಳು ನೇಣು ಹಾಕಿಕೊಳ್ಳಲು ಹೋಗಿದ್ದಳು. ಅವಳನ್ನು ಇಳಿಸಿ 5ನೇ ಹಾಸಿಗೆಯಲ್ಲಿ ಮಲಗಿಸಿದ್ದೇನೆ' ಎಂದು ಪತ್ರ ಬರೆಸಲು ಬಂದವನು ಹೇಳಿದಾಗ ದೊಡ್ಡಣ್ಣ 'ಮೊದಲು ಅದೇನೋ ನಾವೆಲ್ಲಾ ಸುಖವಾಗಿ, ಸಂತೋಷದಿಂದ ನೆಮ್ಮದಿಯಿಂದ ಇದ್ದೇವೆ ಎಂದು ಹೇಳಿದೆಯಲ್ಲ, ಅದನ್ನು ಅಳಿಸುತ್ತೇನೆ' ಎನ್ನುತ್ತಾರೆ. ಅಲ್ಲದೆ ದೊಡ್ಡಣ್ಣ ಪತ್ರ ಹರಿದು ಹಾಕಿ 'ಇದೆಲ್ಲಾ ಸಾಕಾಗಲ್ಲ. Whole family serious, start immediatley ಎಂದು ಟೆಲಿಗ್ರಾಂ ಕೊಡು' ಎನ್ನುತ್ತಾರೆ.

ಸೆಪ್ಟೆಂಬರ್ ಕೊನೆಯ ವಾರದಲ್ಲಿ ನಾನು ಕಾಶ್ಮೀರಕ್ಕೆ ಭೇಟಿ ನೀಡಿ ಕೆಲವು ಕಡೆ ಸುತ್ತಾಡಿದಾಗ ನನ್ನ ಮನಸ್ಸಿನಲ್ಲಿ ಬಂದ ಚಿತ್ರ ಇದು. ಸದ್ಯಕ್ಕೆ ಕಾಶ್ಮೀರದ ಪರಿಸ್ಥಿತಿ ಕೂಡ ಹಾಗೆಯೇ ಇದೆ. ಅಲ್ಲಿ 370ನೇ ವಿಧಿಯನ್ನು ರದ್ದು ಮಾಡಿ ರಾಜ್ಯದ ಸ್ಥಾನಮಾನವನ್ನು ಕಿತ್ತು ಹಾಕಿ ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿದ ನಂತರ ಅಭಿವೃದ್ಧಿ ಪರ್ವ ಶುರುವಾಗಿದೆ. ಕಾಮಗಾರಿಗಳು ನಡೆಯುತ್ತಿವೆ. ಹೆದ್ದಾರಿಗಳು, ಸೇತುವೆಗಳು, ಸುರಂಗಗಳು, ವಿಶ್ವವಿದ್ಯಾಲಯಗಳ ಕಟ್ಟಡಗಳ ಕಾಮಗಾರಿಗಳು ಜೋರಾಗಿ ಸಾಗಿವೆ. ಶ್ರೀನಗರ, ಸೋನಾಮಾರ್ಗ ಮುಂತಾದ ಪ್ರದೇಶಗಳಲ್ಲಿ ಈಗ ಭತ್ತದ ಕೊಯಿಲು ಜೋರಾಗಿದೆ. ಸೇಬು ಹಣ್ಣು ಕೀಳುವ, ಸಾಗಿಸುವ ಕಾರ್ಯವೂ ನಡೆಯುತ್ತಿದೆ. ಆಫ್ರಿಕಾಟ್ ಒಣಗಿಸಿ ಸಂಸ್ಕರಿಸುವ ಸಡಗರ ಹೆಚ್ಚಾಗಿದೆ. ಕೋವಿಡ್ ಕಾಲದ ನಂತರ ಕಾಶ್ಮೀರಕ್ಕೆ ಮತ್ತೆ ಪ್ರವಾಸಿಗರು ಬರಲು ಆರಂಭಿಸಿದ್ದಾರೆ. ಅವರಿಗೆ ಶಾಲು ಮಾರುವ, ಕೇಸರಿ ಖರೀದಿಸುವಂತೆ ಅವರನ್ನು ಉತ್ತೇಜಿಸುವ ಕಾರ್ಯದಲ್ಲಿ ಯುವಕರು ತೊಡಗಿದ್ದಾರೆ. ಮೇಲ್ನೋಟಕ್ಕೆ ಎಲ್ಲರೂ ಸುಖವಾಗಿ ಸಂತೋಷದಿಂದ ನೆಮ್ಮದಿಯಿಂದ ಇದ್ದಾರೆ ಎನಿಸುತ್ತದೆ. ಆದರೆ ಒಳಗೆ ದುಃಖ ಹೆಪ್ಪುಗಟ್ಟಿ ನಿಂತಿದೆ. ಅಲ್ಲಿ ಎಲ್ಲವೂ ಬಂದೂಕಿನ ನಳಿಕೆಯ ಕಾವಲಿನಲ್ಲಿಯೇ ನಡೆಯುತ್ತದೆ. ಪರಸ್ಪರ ಅಪನಂಬಿಕೆ, ಭಯ, ಅವಿಶ್ವಾಸ ಎಲ್ಲವೂ ಹೆಚ್ಚಾಗಿರುವ ಭಾವ. ಅಲ್ಲಿ ಇನ್ನೂ ಚಳಿ ಆರಂಭವಾಗಿಲ್ಲ. ಆದರೆ ದೂರದಲ್ಲಿ ಹಿಮದ ಪರ್ವತಗಳು ಕಾಣುತ್ತವೆ. ಜನರ ಜೊತೆ ಮಾತನಾಡಿದಾಗ ಅವರ ಹೃದಯದಲ್ಲಿಯೂ ಹಿಮಗಡ್ಡೆಗಳು ಪರ್ವತದಂತೆ ಕುಳಿತಿರುವ ಅನುಭವ.

ಹಿಮಗಡ್ಡೆಗಳು, ಹಿಮ ಪರ್ವತಗಳು ದೂರದಿಂದ ನೋಡಲು ಚೆಂದ. ಆದರೆ ಹಿಮಪಾತವಾದಾಗ ಅದು ಭೀಕರ. ಕಾಶ್ಮೀರದಲ್ಲಿ ಈಗ ಆಗಿರುವುದೂ ಅದೇ. ವಾತಾವರಣ ತಿಳಿಯಾಗಿ ಎಲ್ಲ ಸರಿಹೋಯ್ತು ಅನ್ನುವ ಹಾಗೆಯೇ ಎಲ್ಲೋ ಒಂದು ಕಡೆ ಉಗ್ರರ ದಾಳಿ ನಡೆಯುತ್ತದೆ. ಸೈನಿಕರು ಸಾಯುತ್ತಾರೆ. ಇಲ್ಲ ನಾಗರಿಕರ ಮೇಲೆಯೇ ದಾಳಿ ನಡೆಯುತ್ತದೆ. ಮತ್ತೆ ಇಡೀ ಕಾಶ್ಮೀರ ಪ್ರಕ್ಷುಬ್ಧವಾಗುತ್ತದೆ. ಆಗ ಇಡೀ ಪ್ರದೇಶ ಸೇನೆಯಿಂದ ಆವೃತವಾಗುತ್ತದೆ. ಕೆಲ ಕಾಲ ಎಲ್ಲ ಶಾಂತ. ಮತ್ತೆ ಹಿಮ ಸ್ಫೋಟ. ಒಟ್ಟಿನಲ್ಲಿ ಒಡಲಲ್ಲಿ ಕೆಂಡ ಇಟ್ಟುಕೊಂಡ ಅನುಭವ.

ಶ್ರೀನಗರದಿಂದ ಸೋನಾಮಾರ್ಗ ರಸ್ತೆಯಲ್ಲಿ ಗುಲಾನಬಿ ಪಾರೇಖ್ ಅವರ ಸೇಬು ತೋಟಕ್ಕೆ ಲಗ್ಗೆ ಇಟ್ಟಾಗ ಅವರ ಸಂಭ್ರಮ ಹೇಳತೀರದು. ದೂರದ ಕರ್ನಾಟಕದಿಂದ ಬಂದಿದ್ದೇವೆಂದು ತಿಳಿದು ಹಣ್ಣನ್ನು ಕಿತ್ತುಕೊಳ್ಳಲು ಹೇಳಿದರು. ಮನಸ್ಸಿಗೆ ಬಂದಷ್ಟು ತಿನ್ನಲೂ ಕೊಟ್ಟರು. ಹಣ ಕೊಡಲು ಹೋದರೆ 'ನೀವು ನಮ್ಮ ಅತಿಥಿಗಳು' ಎಂದು ಸತ್ಕರಿಸಿದರು. ದಾರಿಯಲ್ಲಿ ಸಿಕ್ಕ ಚಿಕ್ಕ ಚಿಕ್ಕ ಮಕ್ಕಳನ್ನು ಮಾತನಾಡಿಸಿದರೂ ಕೈಯಲ್ಲಿ ಇದ್ದ ಹಣ್ಣುಗಳನ್ನು ಕೊಟ್ಟು ಸ್ನೇಹದ ಹಸ್ತ ಚಾಚಿದರು. ಭಾಷೆ ಬಾರದಿದ್ದರೂ ಆತ್ಮೀಯತೆಯ ನಗುವಿಗೆ ಬರ ಇರಲಿಲ್ಲ. ಒಂದು ಆತ್ಮೀಯ ಆಲಿಂಗನಕ್ಕೆ, ಪ್ರೀತಿಯ ಬೆಸುಗೆಗೆ ಅವರು ಕಾದಿದ್ದಂತೆ ಕಂಡಿತು.


ಗುಲಾನಬಿ ಪಾರೇಖ್

ಬೆಂಗಳೂರಿಗೂ ಶ್ರೀನಗರಕ್ಕೂ ಏನು ವ್ಯತ್ಯಾಸ? ಮೇಲ್ನೋಟಕ್ಕೆ ಏನೂ ಅನ್ನಿಸುವುದಿಲ್ಲ. ನಮ್ಮ ವೃತ್ತಗಳಲ್ಲಿ ಟ್ರಾಫಿಕ್ ಪೊಲೀಸರು ನಿಂತಿರುತ್ತಾರೆ. ಅಲ್ಲಿ ಮಿಲಿಟರಿಯವರು ನಿಂತಿರುತ್ತಾರೆ. ನಮ್ಮ ಮಾರುಕಟ್ಟೆಗಳಲ್ಲಿ ಪೊಲೀಸರ ಕಾವಲು. ಅಲ್ಲಿ ಸಿಆರ್‌ಪಿಎಫ್ ಕಾವಲು. ನಮ್ಮ ನಗರಗಳಲ್ಲಿ ಹೊಯ್ಸಳ ವಾಹನ ತಿರುಗುತ್ತದೆ. ಅಲ್ಲಿ ಮಿಲಿಟರಿ ವಾಹನಗಳು ಓಡಾಡುತ್ತವೆ. ನಮ್ಮ ಹೆದ್ದಾರಿಗಳಲ್ಲಿ ಹೆದ್ದಾರಿ ಕಾವಲು ಪಡೆಗಳು ಓಡಾಡುತ್ತವೆ. ಅಲ್ಲಿ ಸೈನಿಕರು ಕೈಯಲ್ಲಿ ಎಕೆ-47 ಹಿಡಿದು ಓಡಾಡುತ್ತಾರೆ. ಅವರ ಹದ್ದಿನಕಣ್ಣು ಎಲ್ಲ ಕಡೆ ನಿಗಾ ಇರುತ್ತದೆ. ನಮ್ಮ ಹೊಲ ಗದ್ದೆಗಳಲ್ಲಿ ರೈತರು ಅವರ ಪಾಡಿಗೆ ಅವರ ಕೆಲಸ ಮಾಡುತ್ತಿರುತ್ತಾರೆ. ಅಲ್ಲಿ ಹೊಲಗಳಲ್ಲಿಯೂ ಸೈನಿಕರು ಕಾವಲು ನಿಂತಿರುತ್ತಾರೆ. ಅವರ ಪಾಡಿಗೆ ಅವರು. ಇವರ ಪಾಡಿಗೆ ಇವರು. ಮೇಲ್ನೋಟಕ್ಕೆ ಎಲ್ಲವೂ ಶಾಂತ. ಆದರೆ ಅದು ಗಂಭೀರ ಶಾಂತ. ಯಾವಾಗ ಸ್ಫೋಟವಾಗುತ್ತದೋ ಹೇಳಲು ಆಗುವುದಿಲ್ಲ. ಪುಲ್ವಾಮಾ ಘಟನೆಯನ್ನು ನಾವು ಮರೆತಿಲ್ಲ. ಶ್ರೀನಗರ-ಜಮ್ಮು ಹೆದ್ದಾರಿಯಲ್ಲಿ ಶ್ರೀನಗರಕ್ಕೆ ಅತ್ಯಂತ ಸಮೀಪದಲ್ಲಿಯೇ ಇರುವ ಪುಲ್ವಾಮಾಕ್ಕೆ ಈಗ ಹೋದರೆ ಎಲ್ಲವೂ ಮಾಮೂಲು. ಆದರೂ ಸೆರಗಲ್ಲಿ ಕೆಂಡ ಕಟ್ಟಿಕೊಂಡ ಅನುಭವ. ಈ ಹೆದ್ದಾರಿಯಲ್ಲಿ ಸಾಗುತ್ತಿದ್ದರೆ ಒಂದು ವಿಚಿತ್ರ ಅನುಭವ. ದಾರಿಯುದ್ದಕ್ಕೂ ಬೇರೆ ಬೇರೆ ಮಾರುಕಟ್ಟೆಗಳು. ಒಂದಿಷ್ಟು ಕಿ.ಮೀ ಸಾಗಿದರೆ ಆ ಊರಲ್ಲಿ ಎಲ್ಲ ಅಂಗಡಿಗಳಲ್ಲೂ ಕೇಸರಿ ಮಾರುತ್ತಾರೆ. ಸುತ್ತಲೂ ಕೇಸರಿಯ ಗದ್ದೆಗಳು. ಕೊಂಚ ದೂರ ಹೋದರೆ ಎಲ್ಲ ಮನೆಗಳ ಮೇಲೂ ಕ್ರಿಕೆಟ್ ಬ್ಯಾಟುಗಳು. ದೇಶಕ್ಕೆ ಅತ್ಯಂತ ಹೆಚ್ಚು ಕ್ರಿಕೆಟ್ ಬ್ಯಾಟುಗಳನ್ನು ಸರಬರಾಜು ಮಾಡುವ ಸಂಗಮ ಅದು. ಕ್ರಿಕೆಟ್ ಬ್ಯಾಟ್ ತಯಾರಿಸುವ ಸಂತೆ ಅದು. ಅಲ್ಲಿ ಎಲ್ಲ ಅಂಗಡಿ, ಮನೆಗಳಲ್ಲೂ ಕ್ರಿಕೆಟ್ ಬ್ಯಾಟ್ ಮಾರಾಟ. ಇನ್ನೂ ಸ್ವಲ್ಪ ದೂರ ಹೋದರೆ ಸೇಬು ತೋಟ. ಸೇಬು ಅಂಗಡಿ. ಸೇಬು ಉಪ್ಪಿನಕಾಯಿ, ಚಟ್ನಿಯಿಂದ ಹಿಡಿದು ವಿನೆಗರ್‌ವರೆಗೆ ಎಲ್ಲವೂ ಅಲ್ಲಿ ಲಭ್ಯ. ಇನ್ನೊಂದಿಷ್ಟು ಮುಂದೆ ಸಾಗಿದರೆ ಆಫ್ರಿಕಾಟ್ ಸಾಮ್ರಾಜ್ಯ. ಎಲ್ಲ ಕಡೆಯೂ ಸ್ನೇಹಮಯಿ ವ್ಯಾಪಾರಿಗಳು. ಚೌಕಾಶಿ ಮಾಡುತ್ತಾರೆ. ಜೊತೆಗೆ ತಮ್ಮ ಬದುಕಿನ ಅನಿವಾರ್ಯತೆಯನ್ನೂ ಹೇಳಿಕೊಳ್ಳುತ್ತಾರೆ.

ಹೀಗೆ ಶ್ರೀನಗರದಲ್ಲಿ ಯುವಕನೊಬ್ಬ ಸಿಕ್ಕ. ಆತನೊಬ್ಬ ಈಗಷ್ಟೇ ಪದವಿ ಪಡೆದ ವೈದ್ಯ. ಎಂ.ಡಿ ಮಾಡಿದ್ದಾನೆ. ಲೋಕಸೇವಾ ಆಯೋಗದ ಸಂದರ್ಶನಕ್ಕೆ ತೆರಳಿ ಬಂದಿದ್ದಾನೆ.

13ನೇ ಪುಟಕ್ಕೆ...

ನಾನು ಲೇಡೀಸ್ ಕಣ್ರೀ...

'ನಾನು ಅವನಲ್ಲ ಅವಳು', 'ಸೂಪರ್ ಡೀಲಕ್ಸ್' ನಂಥ ಸಿನಿಮಾಗಳ ಮೂಲಕ ಎಲ್‌ಜಿಬಿಟಿಕ್ಯು ಸಮುದಾಯದ ಕುರಿತು ಭಿನ್ನ ನೋಟ ಹರಿಸಿರುವ ದಕ್ಷಿಣ ಭಾರತೀಯ ಚಿತ್ರರಂಗ ಬದಲಾದ ಸಿನಿಮಾ ಮೌಲ್ಯಗಳಿಗೆ ತನ್ನನ್ನು ಒಗ್ಗಿಸಿಕೊಳ್ಳುತ್ತಿದೆ. ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸಿರುವ ನಾವು ಇಂಥ ಸಮುದಾಯವನ್ನು ನೋಡುವ ನೋಟದಲ್ಲೂ ಪ್ರಗತಿ ಸಾಧಿಸಿದ್ದೇವೆಯೇ ಎನ್ನುವುದು ನಿರ್ದೇಶಕಿ ಶೈಲಜಾ ಪಡಿಂದಲ ಅವರ ಪ್ರಶ್ನೆ. ಅವರೊಂದಿಗೆ ನಡೆಸಿದ ಮಾತುಕತೆಯ ಸಾರ ಇದಕ್ಕೆ ಉತ್ತರವೆಂಬಂತಿದೆ...

ಶೈಲಜಾ ಪಡಿಂದಲ

ಮಂಜುಶ್ರೀ ಎಂ. ಕಡಕೋಳ

ಸೃಷ್ಟಿಯಲ್ಲಿ ಹೆಣ್ಣು- ಗಂಡಿನ ನಡುವೆಯಷ್ಟೇ ಪ್ರೇಮದ ಕೊಡುಕೊಳ್ಳುವಿಕೆ ನಡೆಯೋದು ಅಂದುಕೊಂಡವರೇ ಹೆಚ್ಚು. ಹೆಣ್ಣಿನಲ್ಲಿ ಹೆಣ್ಣು, ಗಂಡಿನಲ್ಲಿ ಗಂಡು ಪರಸ್ಪರ ಪ್ರೇಮದ ರುಚಿ ಕಂಡುಕೊಳ್ಳುವವರು ವಿರಳ. ಸೃಷ್ಟಿಯೇ ರೂಪಿಸಿರುವ ಇಂಥ ಪ್ರೇಮದ ಹಿಂದಿರುವುದು ಜೈವಿಕ ಕರಾಮತ್ತೋ ಅಥವಾ ಪ್ರಕೃತಿಯೋ ನಿಗೂಢತೆಯೋ ಎಂಬುದನ್ನು ಅರಿತವರೂ ವಿರಳ. ಅರ್ಧನಾರೀಶ್ವರನ ಪರಿಕಲ್ಪನೆಯನ್ನು ಒಪ್ಪುವ ಸಮಾಜವು ಸಲಿಂಗಿಗಳ ಪ್ರೇಮವನ್ನು ನಿರಾಕರಿಸಲು ಉತ್ಸಾಹ ತೋರುತ್ತದೆ.

'ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿಯೂ ಇಂಥ ಪ್ರೇಮದ ಹೂಗಳು ಅರಳುವುದನ್ನು ತಡೆಯುವುದು ಅಸಾಧ್ಯ' ಎನ್ನುತ್ತಾರೆ ಕನ್ನಡದಲ್ಲಿ ಲೆಸ್ಬಿಯನ್‌ಗಳಿಗೆ (ಸ್ತ್ರೀ ಸಲಿಂಗಕಾಮ) ಸಂಬಂಧಿಸಿದಂತೆ ಪೂರ್ಣಪ್ರಮಾಣದಲ್ಲಿ ಪ್ರಥಮ ಚಿತ್ರ ನಿರ್ದೇಶಿಸಿರುವ ನಿರ್ದೇಶಕಿ ಶೈಲಜಾ ಪಡಿಂದಲ.

ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ಶೈಲಜಾ ಅವರು ಪೇಂಟಿಂಗ್ ಮತ್ತು ಶಿಲ್ಪಕಲೆಯ ಪದವೀಧರೆ. ಚಿತ್ರಕಲಾ ಪರಿಷತ್ತಿನಲ್ಲಿ ಓದುವಾಗಲೇ ಸಿನಿಮಾದ ಮೋಹ. ಅದು ಚೆನ್ನೈನ ಎಲ್.ವಿ. ಪ್ರಸಾದ್ ಸಿನಿಮಾ ಮತ್ತು ಟಿ.ವಿ ಅಕಾಡೆಮಿಯಲ್ಲಿ ಸಿನಿಮಾಟೋಗ್ರಫಿ (ಕ್ಯಾಮೆರಾ) ವಿಷಯದಲ್ಲಿ ಸ್ನಾತಕೋತ್ತರ ಪದವಿ ತನಕ ಕರೆದೊಯ್ಯಿತು.

ಕೆಲ ಕಾಲ ತಮಿಳಿನ ಖ್ಯಾತ ನಿರ್ದೇಶಕ ಕೆ. ಬಾಲಚಂದರ್ ಅವರ ಪುತ್ರ ಬಾಲಕೈಲಾಸಂ ಅವರ 'ಪುದಿಯತಲೈಮರ್' ಪತ್ರಿಕೆಯಲ್ಲಿ ಕ್ಯಾಮೆರಾವುಮನ್ ಆಗಿ ಕೆಲಸ ಮಾಡಿದ ಅನುಭವ. ಸುದ್ದಿಮಾಧ್ಯಮದಲ್ಲಿ ಹೇಳಲಾಗದ್ದನ್ನು ಸಿನಿಮಾದಲ್ಲಿ ಹೇಳುವ ತುಡಿತ ಹೆಚ್ಚಾದಾಗ ಅವರ ಮನಸು ಹೊರಳಿದ್ದು ನಿರ್ದೇಶನದತ್ತ. ಅದರಲ್ಲೂ ಗ್ಲ್ಯಾಮರ್ ವ್ಯಾಕರಣ ಮೀರಿ ನಿಜಜೀವನದ ಚಿತ್ರಕಥೆ ಮಾಡಬೇಕೆಂಬ ಆಸೆ ಮೊಳೆತಾಗ ಒಡಮೂಡಿದ್ದು 'ಮೆಮೊರೀಸ್ ಆಫ್ ಮಷೀನ್' ಚಿತ್ರಕಥೆ. ಸ್ಕ್ರಿಪ್ಟ್ ತಯಾರಾಗಿ ಎರಡು ವರ್ಷದ ನಂತರ ಅದು ಕಿರುಚಿತ್ರವಾಗಿ ಬಿಡುಗಡೆ ಕಂಡಿತು. ನಂತರ ಅವರನ್ನು ಕಾಡಿದ್ದು ಲೆಸ್ಬಿಯನ್‌ಗಳ ಪ್ರೇಮಕಥೆ. ಈಚೆಗಷ್ಟೇ 'ತಸ್ವೀರ್' ದಕ್ಷಿಣ ಏಷ್ಯಾ ಚಿತ್ರೋತ್ಸವದಲ್ಲಿ ಮೆಚ್ಚುಗೆ ಪಡೆದಿರುವ 'ನಾನು ಲೇಡೀಸ್' ಸಿನಿಮಾ ಕನ್ನಡದಲ್ಲಿ ಲೆಸ್ಬಿಯನ್‌ಗಳಿಗೆ ಸಂಬಂಧಿಸಿದ ಮೊದಲ ಸಿನಿಮಾ. 'ಕ್ವೀರ್' ವುಮನ್ (ಒಂದು ಹೆಣ್ಣು ಮತ್ತೊಂದು ಹೆಣ್ಣಿನ ಪ್ರೀತಿ ಬಯಸುವ) ಪಾತ್ರಗಳ ನಡುವಣದ ಪ್ರೇಮಕಥನವಿದು.

'ಸಮಾಜದ ಸಿದ್ಧಮಾದರಿಯ ಚೌಕಟ್ಟಿನಲ್ಲಿ ಇರದೇ ಇರುವಂಥ ಮನಃಸ್ಥಿತಿಯವರನ್ನು ಕ್ವೀರ್ ಅಂತ ಕರೆಯಬಹುದು. ಅಂದರೆ ಹೆಣ್ಣೆಂದರೆ ಸೀರೆ ಉಡಬೇಕು, ಕುಂಕುಮ ಇಟ್ಟುಕೊಳ್ಳಬೇಕು, ಜಡೆ ಹಾಕಿಕೊಳ್ಳಬೇಕು... ಇಂಥ ಸಂಗತಿಗಳನ್ನು ಬಿಟ್ಟು ತನಗಿಷ್ಟ ಬಂದಹಾಗೆ ಇರುವ ಹೆಣ್ಣು ಮತ್ತೊಬ್ಬ ಹೆಣ್ಣಿನೊಂದಿಗೆ ಸಾಂಗತ್ಯ ಬಯಸುವ ಕಥೆಯನ್ನು 'ನಾನು ಲೇಡೀಸ್'ನಲ್ಲಿ ತಂದಿದ್ದೇನೆ ಎನ್ನುತ್ತಾರೆ ಶೈಲಜಾ ಪಡಿಂದಲ.

11ನೇ ಪುಟಕ್ಕೆ...

'ನಾನು ಲೇಡೀಸ್' ಸಿನಿಮಾದ ದೃಶ್ಯ


ಪಂಡಿತ್ ರವಿಶಂಕರ್


ಅಲಿ ಅಕ್ಬರ್ ಖಾನ್

ಸಂಗೀತದ ಸೀಮೋಲ್ಲಂಘನ

ಶ್ರೀಮತಿ ದೇವಿ

ಸಂಗೀತವೆಂಬುದು ವಿಶ್ವವ್ಯಾಪಿಯಾದುದು, ಸೀಮಾತೀತವಾದದ್ದು, ದೇಶ-ಗಡಿಗಳನ್ನು ಮೀರಿದ್ದು, ಯಾರನ್ನೂ ತಲುಪಬಲ್ಲದು ಎಂಬಂತಹ ಮಾತುಗಳನ್ನೆಲ್ಲಾ ಕೇಳುತ್ತಿರುತ್ತೇವೆ. ಆದರೆ ಒಂದು ಪ್ರದೇಶದಲ್ಲಿ ಅಲ್ಲಿನ ಸಂಸ್ಕೃತಿ-ಸ್ವಭಾವಗಳನ್ನು ಅನುಸರಿಸಿಕೊಂಡು ರೂಪುಗೊಂಡ ಸಂಗೀತ ತೀರಾ ವಿಭಿನ್ನವಾದ, ಎಷ್ಟೋ ಬಾರಿ ವೈರುಧ್ಯ ಎನಿಸಬಹುದಾದ ಸಾಮಾಜಿಕ ಸನ್ನಿವೇಶದಲ್ಲಿ ಒಡಮೂಡುವುದನ್ನು ನೋಡಿದಾಗ ಅಚ್ಚರಿಯಾಗುತ್ತದೆ ಮಾತ್ರವಲ್ಲ ಇದರ ಹಿಂದಿನ ಸಂದರ್ಭ, ಆಸಕ್ತಿ, ಪರಿಶ್ರಮ ಇವುಗಳೆಡೆ ಗಮನ ಸಾಗುತ್ತದೆ. ಬದಲಾದ ಈಗಿನ ಸಂದರ್ಭದಲ್ಲಿ ಬೇರೆ ದೇಶಗಳಿಗೆ ಪ್ರಯಾಣ ಮಾಡುವುದು, ಪ್ರಪಂಚದ ಯಾವುದೋ ತುದಿಯಲ್ಲಿರುವವರು ಮತ್ತೆಲ್ಲೋ ಇರುವವರ ಬಳಿ ಆನ್‌ಲೈನ್‌ನಲ್ಲಿ ಸಂಗೀತ ಕಲಿಯುವುದು, ಸಹ ಕಲಾವಿದರೊಂದಿಗೆ ಆನ್‌ಲೈನ್ ಕಾರ್ಯಕ್ರಮಗಳನ್ನು ಕೊಡುವುದು, ಬೇರೆ ಬೇರೆ ಕಡೆ ಇರುವವರು ಜೊತೆ ಸೇರಿ ವಿಡಿಯೋಗಳನ್ನು ಸೇರಿಸಿ, ವಿಧವಿಧದಲ್ಲಿ ಎಡಿಟಿಂಗ್ ಮಾಡಿ ಹೊಸತನ್ನು ಮಾಡುವುದು ಇವೆಲ್ಲಾ ಸಹಜ ಎಂಬಷ್ಟರ ಮಟ್ಟಿಗೆ ಆಗಿವೆ.

ಜಾಕಿರ್ ಹುಸೇನ್

ಇಂದು ಹಿಂದೂಸ್ತಾನಿ-ಕರ್ನಾಟಕಿ ಎರಡೂ ಪದ್ಧತಿಗಳಲ್ಲಿ ಕಲಿಯುತ್ತಿರುವ ವಿದೇಶದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಅಚ್ಚರಿ ಮೂಡಿಸುವಷ್ಟಿದೆ. ಚೆನ್ನೈನಲ್ಲಿ ಡಿಸೆಂಬರ್ ತಿಂಗಳಿನ 'ಮ್ಯೂಸಿಕ್ ಸೀಸನ್'ನಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಹಾಡುವ/ನುಡಿಸುವ ಬಾಲ ಮತ್ತು ಯುವ ಕಲಾವಿದರಲ್ಲಿ ಅಗ್ರಪಾಲು ಎನ್‌ಆರ್‌ಐಗಳದ್ದೇ ಆಗಿರುತ್ತದೆ. ನಮ್ಮ ದೇಶದ ಪ್ರಸಿದ್ಧ, ಹಿರಿಯ ಸಂಗೀತಗಾರರೆಲ್ಲರೂ ನಿಯಮಿತವಾಗಿ ಅಮೆರಿಕ ಹಾಗೂ ಇತರ ಯುರೋಪ್ ದೇಶಗಳಿಗೆ ಕಾರ್ಯಕ್ರಮ ನೀಡಲು ಪ್ರಯಾಣ ಮಾಡುತ್ತಾರೆ. ಕಾರ್ಯಕ್ರಮಗಳೊಂದಿಗೆ ನಡೆಯುವ ಅನೇಕ ಕಾರ್ಯಾಗಾರಗಳು, ಉಪನ್ಯಾಸ, ಚರ್ಚೆಗಳು ಅಲ್ಲಿನ ಅಭ್ಯಾಸಿಗಳಿಗಿರುವ ಆಸಕ್ತಿಯನ್ನು ತಿಳಿಸುತ್ತವೆ. ಕ್ಲೀವ್‌ಲಾಂಡ್‌ನಲ್ಲಿ ನಡೆಯುವ ತ್ಯಾಗರಾಜ ಆರಾಧನಾ ಸಂಗೀತ ಕಾರ್ಯಕ್ರಮ, ಲಂಡನ್‌ನ ದರಬಾರ್ ಫೆಸ್ಟಿವಲ್ ಮುಂತಾದ ವೈಭವೋಪೇತವಾದ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಕಲಾವಿದರು ಹೆಚ್ಚಿನ ಗೌರವವನ್ನು ಪಡೆದುಕೊಳ್ಳುತ್ತಾರೆ. ಈ ಎಲ್ಲಾ ಬದಲಾವಣೆಯ ಹಿಂದಿನ ಪರಿಶ್ರಮ, ಸಾಗಿಬಂದ ದಾರಿ ಕುತೂಹಲಕರವಾದದ್ದು.

12ನೇ ಪುಟಕ್ಕೆ...

ಜೋರ್ದಾನ್ ಹೊಳೆಯಲ್ಲಿ ಸಂತ ಜಾನ್‌ಬ್ಯಾಪ್ಟಿಸ್ಟನು ಏಸುವಿಗೆ ದೀಕ್ಷಾಸ್ನಾನ ಮಾಡಿಸಿದ ಸ್ಥಳದಲ್ಲಿ ಕ್ರೈಸ್ತ ಯಾತ್ರಾರ್ಥಿಗಳು ಮುಳುಗೇಳುತ್ತಿರುವುದು. ಜೋರ್ದಾನ್ ಕಡೆಯಿಂದ ಇಸ್ರೇಲ್ ಕಾಣುವಂತೆ ಚಿತ್ರವನ್ನು ಸೆರೆಹಿಡಿಯಲಾಗಿದೆ.

ಅಪರೂಪದ ಹೊಳೆ ಜೋರ್ದಾನ್

ಒಂದು ಹೊಳೆ ಜಗತ್ತಿನ ಮೂರು ಧರ್ಮಗಳ ಆಚರಣೆ ಹಾಗೂ ಕಥನಗಳಲ್ಲಿ ಸೇರಿಹೋದ ಬಗೆಯೇ ಅನನ್ಯ. ಅದರ ಗಾತ್ರ ನೋಡಿದಾಗ ಶತಮಾನಗಳ ಕಾಲ ಆಸುಪಾಸಿನ ದೇಶಗಳನ್ನು ಜಲಕಲಹಕ್ಕೆ ಹಚ್ಚಿದ ಪವಿತ್ರ ಹೊಳೆ ಇದೆಯೇನು ಎಂಬ ಅನುಮಾನ ಕಾಡದಿರದು.

ರಹಮತ್ ತರೀಕೆರೆ

ಪ್ಯಾಲೆಸ್ಟೀನ್-ಇಸ್ರೇಲ್‌ಗೆ ಪ್ರವೇಶಿಸಲು ನೆಲಮಾರ್ಗದಲ್ಲಿ ಕೆಲವೇ ಹಾದಿಗಳಿವೆ. ಅವುಗಳಲ್ಲಿ ಜೋರ್ದಾನ್ ದೇಶದಿಂದ ಶೇಕ್‌ಹುಸೇನ್ ಸೇತುವೆಯನ್ನು ದಾಟುವುದೂ ಒಂದು. ಸದರಿ ಸೇತುವೆಯನ್ನು ಎರಡೂ ದೇಶಕ್ಕೆ ಗಡಿಯಾಗಿರುವ ಜೋರ್ದಾನ್ ಹೊಳೆಗೆ ಅಡ್ಡಲಾಗಿ ಕಟ್ಟಲಾಗಿದೆ. ಹೊಳೆ ದಾಟುವಾಗ ಸಂಭ್ರಮ-ಕಾತರಗಳಿಂದ ನೋಡಿದೆ. ಸೀಮೋಲ್ಲಂಘನ ಪಿಚ್ಚೆನಿಸಿತು. ಹೊಳೆ, ಮಳೆಗಾಲದಲ್ಲಿ ಹೊಲಗದ್ದೆಗಳ ನಡುವೆ ಹರಿವ ಹಳ್ಳದಂತಿತ್ತು. ಮೇಲ್ಭಾಗದಲ್ಲಿ ಬಿದ್ದ ಮಳೆಯ ದೆಸೆಯಿಂದಲೋ ಕಿನಾರೆಯ ಊರುಗಳಿಂದ ಸೇರಿದ ಕೊಳಚೆಯಿಂದಲೋ ನೀರು ಬಗ್ಗಡವಾಗಿತ್ತು. ಬಹುಶಃ ಆಳ ಅಬ್ಬಬ್ಬೆಂದರೆ ಹೆಚ್ಚಿಲ್ಲ. ಹರಹು ಮೆಕ ದಾಟುವಷ್ಟು. ದಡದಲ್ಲಿ ಆನೆಹುಲ್ಲು, ಗಿಡಪೊದೆ ಬೆಳೆದು ಬಾಗಿ ನೀರನ್ನಾವರಿಸಿದ್ದವು. ಬಂಡೆಗಳಿಂದ ಕೂಡಿದ ಕಿರಿಯಾಳದ ಹೊಳೆಗಳ ನಾಡಿನಿಂದ ಹೋಗಿದ್ದ ನನಗೆ ಉತ್ತರ ಇಂಡಿಯಾದ ಹಡಗು ಸಂಚರಿಸುವ ಹೊಳೆಗಳನ್ನು ಕಂಡು ಸೋಜಿಗವಾಗಿತ್ತು. ಆದರೆ ಜೋರ್ದಾನ್ ನಮ್ಮ ಗದಗಿನ ಬೆಣ್ಣೆಹಳ್ಳಕ್ಕಿಂತ ಬಳ್ಳಾರಿಯ ಹಗರಿಗಿಂತ ಚಿಕ್ಕದು. ಶತಮಾನಗಳ ಕಾಲ ಆಸುಪಾಸಿನ ದೇಶಗಳನ್ನು ಜಲಕಲಹಕ್ಕೆ ಹಚ್ಚಿದ ಪವಿತ್ರ ಹೊಳೆ ಇದೆಯೇನು?

ಪ್ಯಾಲೆಸ್ಟೀನ್-ಇಸ್ರೇಲ್ ಪ್ರವಾಸದಲ್ಲಿ ಜೋರ್ದಾನ್ ಹೊಳೆಯನ್ನು ಹಲವೆಡೆ ಭೇಟಿಯಾಗುವ ಅವಕಾಶ ಸಿಕ್ಕಿತು. ಇದರ ಪ್ರಥಮ ದರ್ಶನ ಜೋರ್ದಾನ್ ದೇಶದ ನೆಬೊ ಪರ್ವತದ ಮೇಲಿಂದ ಆಯಿತು. ಇಲ್ಲಿಂದಲೇ ಯಹೂದಿಗಳ ದೇವರಾದ ಯಹ್ವಾ ಪ್ರವಾದಿ ಮೋಸೆಸನಿಗೆ 'ಇದೋ ನಿನ್ನ ಸಂತಾನಕ್ಕೆ ನಾನು ಕೊಡುತ್ತಿರುವ ಭರವಸೆಯ ನೆಲವಿದು' ಎಂದು ಹೊಳೆಯನ್ನೂ ದಡದ ಜಮೀನನ್ನೂ ತೋರಿಸಿದ್ದಂತೆ. ಇಲ್ಲಿಂದ ಪರ್ವತದ ಶಿಖರದಿಂದ ಬೆಳ್ಳಿಗೆರೆಯಾಗಿ ಕಾಣುವ ಜೋರ್ದಾನ್, ನೆಲಕ್ಕೆ ಕನ್ನಡಿಯಿಟ್ಟಂತೆ ಫಳಫಳಿಸುವ ಮೃತಸಮುದ್ರವನ್ನು ಸೇರುವ ದೃಶ್ಯ ಕಾಣುವುದು. ಹೊಳೆಯಾಚೆ 'ಪಶ್ಚಿಮದಂಡೆ' ಎಂದು ಕರೆಯಲಾಗುವ ಪ್ಯಾಲೆಸ್ಟೀನ್, ಅದರೊಳಗೆ ಜಗತ್ತಿನ ಪ್ರಾಚೀನ ಪಟ್ಟಣವಾದ ಜೆರಿಕೊ ಹಾಗೂ ದಿಟ್ಟಿಸಿದರೆ ದಿಗಂತದಲ್ಲಿ ಮಸುಕಾಗಿ ಜೆರುಸಲೆಮ್ ಗೋಚರಿಸುವುವು.

ನಾವು ಜೋರ್ದಾನ್ ಹೊಳೆಯ ಜಲಸ್ಪರ್ಶ ಮಾಡಿದ್ದು ಖಸ್ರ್ ಅಲ್ ಯಹೂದ್ ಎಂಬಲ್ಲಿ. 'ಮರಳಿನಲ್ಲಿ ಹುಗಿದ ನೆಲಬಾಂಬುಗಳಿವೆ ಎಚ್ಚರಿಕೆ' ಎಂಬ ಬೋರ್ಡುಗಳಿರುವ ಮರುಭೂಮಿಯ ಒಳಗಿಂದ ಹಾದು ಈ ಸ್ಥಳಕ್ಕೆ ಹೋದೆವು. ಇಲ್ಲಿರುವ ಹೊಳೆಕಡವಿನಲ್ಲಿ, ಜಶೋವಾ ಎಂಬ ಯಹೂದಿ ಬುಡಕಟ್ಟು ನಾಯಕ ತನ್ನ ತಂಡದೊಂದಿಗೆ 40 ವರ್ಷಗಳ ಕಾಲ ಮರಳುಗಾಡನ್ನು ಅಲೆಯುತ್ತ ದಣಿದಿರುವಾಗ್ಗೆ, ಮೋಸೆಸನ ಅಪ್ಪಣೆಯಂತೆ ದಾಟಿ ಪ್ರಾಮಿಸ್ಡ್ ಲ್ಯಾಂಡಿಗೆ ಪ್ರವೇಶಿಸಿದನಂತೆ. ಈ ನದಿದಾಟೋಣವು ಚಿತ್ರಪಟಗಳಿಗೂ ಶಿಲ್ಪಗಳಿಗೂ ವಸ್ತುವಾಯಿತು. ಈಜಿಪ್ಟಿಯನ್ನರ ಗುಲಾಮಗಿರಿಯಿಂದ ತಪ್ಪಿಸಿಕೊಂಡು ಜಶೋವಾ ಹೊಳೆದಾಟಿ ಸ್ವತಂತ್ರನಾದ ಆ ದಿನವನ್ನು ಯಹೂದಿಗಳು ರಾಷ್ಟ್ರೀಯ ದಿನವಾಗಿ ಆಚರಿಸುವರು. ಮುಂದೆ ಇದೇ ಸ್ಥಳದಲ್ಲಿ ಸಂತ ಜಾನ್‌ಬ್ಯಾಪ್ಟಿಸ್ಟನು ಏಸುವಿಗೆ ದೀಕ್ಷಾಸ್ನಾನ ಮಾಡಿಸಿದನು. ಬಳಿಕ ದೇವದೂತರು ಪಾರಿವಾಳ ರೂಪದಲ್ಲಿ ಇಳಿದು 'ಇದೋ, ಈತ ನನ್ನ ಪ್ರೀತಿಯ ಮಗ. ಲೋಕದ ಜನರ ಉದ್ಧಾರಕ್ಕೆ ಕಳಿಸಿರುವೆ' ಎಂದು ದೇವರ ಸಂದೇಶವನ್ನು ಕೊಟ್ಟರಂತೆ. ಈ ಘಟನೆಯನ್ನು ಆಧರಿಸಿ ನೂರಾರು ಗೀತೆಗಳು ಹುಟ್ಟಿದವು. ಒಂದು ಹೊಳೆ ಜಗತ್ತಿನ ಮೂರು ಧರ್ಮಗಳ ಆಚರಣೆ ಮತ್ತು ಕಥನಗಳಲ್ಲಿ ಸೇರಿಹೋದ ಬಗೆ ವಿಶೇಷವಾಗಿದೆ.

ನಾವು ದಡಕ್ಕೆ ಹೋದಾಗ ದೇಶವಿದೇಶಗಳಿಂದ ಬಂದ ಕ್ರೈಸ್ತ ಯಾತ್ರಾರ್ಥಿಗಳು ಮುಳುಗೇಳುತ್ತಿದ್ದರು. ಪಾದ್ರಿಗಳು ಅವರ ತಲೆಯ ಮೇಲೆ ಮಂತ್ರೋಕ್ತ ನೀರನ್ನು ಪ್ರೋಕ್ಷಿಸುತ್ತಿದ್ದರು. ದಡದ ಮಂಟಪಗಳಲ್ಲಿ ಜಗತ್ತಿನ ನಾನಾ ಭಾಷೆಯಲ್ಲಿ ಧಾರ್ಮಿಕ ಪ್ರವಚನಗಳು ನಡೆಯುತ್ತಿದ್ದವು. ಜಲ ಕಂಡಲ್ಲಿ ಮುಳುಗುವ ಸ್ವಭಾವದ ನನಗೆ ಇಲ್ಲಿ ಮುಳುಗಲು ಧೈರ್ಯ ಸಾಲಲಿಲ್ಲ. ನೀರು ಕದಡಿತ್ತು. ಆದರೂ ಇಳಿದು ಕೈಕಾಲು ಮುಖ ತೊಳೆದುಕೊಂಡೆ.

ಜೋರ್ದಾನ್ ದೇಶಕ್ಕೆ ಸೇರಿದ ಆಚೆ ದಡದಲ್ಲೂ ಪವಿತ್ರಸ್ನಾನ ನಡೆಯುತ್ತಿತ್ತು. ಎರಡೂ ದೇಶಗಳ ಸೈನಿಕರು ಅಟ್ಟಣಿಗೆಗಳಲ್ಲಿ ತುಪಾಕಿಧಾರಿಗಳಾಗಿ ನಿಂತು ಸಿಗರೇಟು ಸೇದುತ್ತ, ಹರಟುತ್ತ, ಮುಳುಗುವವರನ್ನು ತೀಕ್ಷ್ಣವಾಗಿ ಗಮನಿಸುತ್ತ ಕಾವಲು ಕಾಯುತ್ತಿದ್ದರು. ನದಿಯ ಅರ್ಧಭಾಗವನ್ನು ಸೀಳಿದಂತೆ, ತೇಲುವ ಚೆಂಡುಗಳನ್ನು ಪೋಣಿಸಿದ ಸರವಿ ಕಟ್ಟಲಾಗಿತ್ತು. ಆದರೆ ನೀರು ಸರವಿಯ ಅಸ್ತಿತ್ವ ಮೀರಿಕೆಳಗೆ ತೆರತೆರೆಯಾಗಿ ಹರಿದು ಹಾಯುತ್ತಿತ್ತು. ಹೊಳೆಯನ್ನು ಅಂತರರಾಷ್ಟ್ರೀಯ ಗಡಿ ಮಾಡಿಕೊಂಡ ದೇಶಗಳು ನೀರಿನ ನಡುವೆ ಕಂಬ ನೆಟ್ಟು ಗುರುತು ಮಾಡಿಕೊಳ್ಳುವುದು ಪದ್ಧತಿ. ಇದನ್ನು ಭಾರತ-ನೇಪಾಳದ ಗಡಿಯ ಮೇಚಿ ಹೊಳೆಯಲ್ಲಿ ಕಂಡಿದ್ದೆ. ನನಗೆ ನೀರಿನಮೇಲೆ ಗಡಿ ಕೊರೆಯುವುದು ಅಸಂಗತವಾಗಿ ಕಾಣುತ್ತದೆ. ನೆಲದಲ್ಲಿರುವ ಗೆರೆಯಂತೆ ಇಲ್ಲಿ ಖಚಿತವಾಗಿ ತೋರುವುದಿಲ್ಲ. ಒಳಗಿನ ಜಲಚರಗಳಿಗೆ ಮೇಲೆ ಹಾರುವ ಪಕ್ಷಿಗಳಿಗೆ, ಹಕ್ಕಿಗಳಿಗೆ, ಗಾಳಿ ಬೀಸುವಿಕೆಗೆ ಗಡಿಯ ಪರಿಭಾಷೆ ಅರ್ಥವಾಗುವುದಿಲ್ಲ. ಆದರೆ ಇಂತಹ ಕೃತಕ ವಿಭಜನೆಗಳಿಲ್ಲದೆ ದೇಶ, ರಾಜ್ಯ, ಜಿಲ್ಲೆಗಳ ಗಡಿ ರೂಪುಗೊಳ್ಳುವುದಿಲ್ಲ.

ಜೋರ್ದಾನ್ ಹೊಳೆಯ ಮೇಲಕ್ಕೆ ಐವತ್ತು ಕಿ.ಮೀ. ಹೋದರೆ ಸಿಗುವ ಗಲಿಲಿಯಲ್ಲಿ ಜೋರ್ದಾನ್ ನೀರು ಸ್ಥಿರವಾಗಿದೆ. ಜೋರ್ದಾನ್ ಇದನ್ನು ಹೊಕ್ಕು ಹೊರ ಹರಿಯುತ್ತದೆ. ಸಮುದ್ರೋಪಾದಿಯಾಗಿರುವ ಗಲಿಲಿಯಲ್ಲಿ ನಾವು ನೌಕಾ ವಿಹಾರ ಮಾಡಿದೆವು. ಇದು ಏಸು ನೀರಿನ ಮೇಲೆ ನಡೆವ ಪವಾಡ ಮಾಡಿದ ಮತ್ತು ಸಂತ ಪೀಟರನಿಗೆ ಮೀನು ಹಿಡಿಯಲು ಹೇಳಿದ ಜಾಗವಾಗಿ ಹೆಸರಾಗಿದೆ. ಇಲ್ಲಿಗೆ ಬರುವ ಯಾತ್ರಿಗಳು ತಪ್ಪದೇ ಪೀಟರ್ ಮೀನನ್ನು ಸೇವಿಸುತ್ತಾರೆ. ಯಾತ್ರಿಗಳ ಸಂಖ್ಯೆ ಹೆಚ್ಚಾಗಿ ಒಮ್ಮೆ ಪೀಟರ್ ಮೀನಿನ ಸಂತತಿಯೇ ಅಳಿವ ಹಂತವೂ ಮುಟ್ಟಿತ್ತು. ಆದರೆ ನಾವು ಹೋದಾಗ ಯಥೇಚ್ಛ ಮೀನಿತ್ತು. ದಡದ ಮೇಲಿನ ಹೋಟೆಲೊಂದರಲ್ಲಿ ತಟ್ಟೆಯ ತುಂಬ ಹರಡಿಕೊಂಡು ಬಂದ ಪೀಟರ್ ಮೀನನ್ನು ಸವಿದೆವು. ಈ ಹೋಟೆಲುಗಳಲ್ಲಿ ಅರಬರೂ ಯಹೂದಿಗಳೂ ವಿಹಾರಕ್ಕೆ ಬಂದು ವಸ್ತಿ ಮಾಡಿದ್ದರು. ಮುದುಕಿಯರು ಹೊಗೆಬತ್ತಿ ಎಳೆಯುತ್ತ ತುಳುಕಾಡುವ ಜಲದರ್ಶನ ಮಾಡುತ್ತಿದ್ದರು. ಕೆಲವರು ಸರೋವರದಲ್ಲಿ ಗಾಳಹಾಕಿ ಮೀನು ಹಿಡಿಯುತ್ತಿದ್ದರು. ಸರೋವರದ ಆಚೆ ದಡದಲ್ಲಿ ಗೋರಿಗಳ ಹಾಗೆ ಕಾಣುವ ಬೆಟ್ಟಶ್ರೇಣಿಯಿದೆ. ಅದರಾಚೆ ಸಿರಿಯಾ, ಲೆಬನಾನ್ ದೇಶಗಳಿವೆ.

ಕ್ರೈಸ್ತ ಯಾತ್ರಾರ್ಥಿಗಳ ಮೇಲೆ ಪಾದ್ರಿಯಿಂದ ಮಂತ್ರೋಕ್ತ ನೀರಿನ ಪ್ರೋಕ್ಷಣೆ

ಪೀಟರ್ ಮೀನಿನ ಖಾದ್ಯ

ಇಸ್ರೇಲ್, ಸಿರಿಯಾ, ಲೆಬನಾನ್ ದೇಶಗಳ ಗಡಿಗಳು ಕೂಡುವ ಹೆರಾನ್ ಪರ್ವತದಲ್ಲಿ ಜೋರ್ದಾನ್ ಹುಟ್ಟುತ್ತದೆ. ಸುಡುಬಿಸಿಲಿನ ಮರುಭೂಮಿಯ ನಡುವಣ ಹಿಮಪರ್ವತವಿದು. ಅದರ ಮೈಯ ದಶದಿಕ್ಕುಗಳಿಂದ ಹುಟ್ಟುವ ಝರಿಗಳೆಲ್ಲ ಕೂಡಿ ಜೋರ್ದಾನ್ ಹೊಳೆ ರೂಪುಗೊಳ್ಳುತ್ತದೆ. ನಮಗೆ ನದಿಯ ಉಗಮಸ್ಥಾನ ನೋಡಲು ಸಾಧ್ಯವಾಗಲಿಲ್ಲ. ಆದರೆ ಅದು ತನ್ನ ಯಾನ ಮುಗಿಸುವ ಅಳಿವೆಯನ್ನು ಕಂಡೆವು. ಆ ಅಳಿವೆಯೇ ಮೃತಸಮುದ್ರ. ಸಿಹಿನೀರಿನ ಜೀವಂತ ಹೊಳೆಗಳು ಉಪ್ಪು ಸಮುದ್ರವನ್ನು ಕೂಡಿ ತಮ್ಮನ್ನು ಕಳೆದುಕೊಳ್ಳುವುದು ಒಂದು ಬಗೆಯಲ್ಲಿ ಮೃತ್ಯುವೆನಿಸುತ್ತದೆ. ಆದರೆ ಅವು ಉಪ್ಪಿನ ಅಂಶದಿಂದ ಉಸಿರುಗಟ್ಟುವ ಕಡಲನ್ನು, ಜೀವಚರಗಳು ಬದುಕಲು ಬೇಕಾದ ಜೀವಜಲವಾಗಿ ಬದಲಿಸುತ್ತವೆ. ಪಾಪ! ಜೋರ್ದಾನಿಗೆ ಇದನ್ನೂ ಮಾಡುವುದಾಗಲಿಲ್ಲ.

ಜಲವಿಜ್ಞಾನಿಗಳ ಪ್ರಕಾರ, ಲಕ್ಷಾಂತರ ವರ್ಷಗಳ ಹಿಂದೆ ಆಫ್ರಿಕಾ ಮತ್ತು ಅರಬಸ್ಥಾನದ ಕೆಳಗಿನ ನೆಲಹಾಳೆಗಳು ಸರಿದಾಡಿದಾಗ, ಸಮುದ್ರಮಟ್ಟಕ್ಕಿಂತ ಒಂದೂವರೆ ಸಾವಿರ ಅಡಿ ಕೆಳಗಿರುವ ಮಹಾತಗ್ಗೊಂದು ನಿರ್ಮಾಣಗೊಂಡಿತು. ಅದರೊಳಗೆ ಸಮುದ್ರದ ನೀರು ಬಂಧನಕ್ಕೊಳಗಾಯಿತು. ಹೀಗಾಗಿ ಜಗತ್ತಿನಲ್ಲೇ ಸಮುದ್ರಮಟ್ಟಕ್ಕಿಂತ ಕೆಳಗಿರುವ ಹೊಳೆ ಜೋರ್ದಾನಾದರೆ, ಸರೋವರ ಮೃತಸಮುದ್ರವಾಯಿತು. 50 ಕಿ.ಮೀ. ಉದ್ದ, 15 ಕಿ.ಮೀ. ಅಗಲವಿರುವ ಮೃತಸಮುದ್ರದ ನೀರು ಯಾವ ಜಲಚರವೂ ಬದುಕದಂತೆ ಲವಣಸಾಂದ್ರವಾಗಿದೆ. ಅದರ ಮೇಲೆ ನಾವು ಮೃತದೇಹಿಗಳಂತೆ ತೇಲಿದೆವು. ತನ್ನ ಹರಿವಿನ 200 ಕಿ.ಮೀ. ಫಾಸಲೆಯುದ್ದಕ್ಕೂ ಮರುಭೂಮಿಯ ಜನರಿಗೆ ಜೀವಜಲ ಉಣಿಸುತ್ತ, ಪವಿತ್ರ ಸ್ನಾನ ಮಾಡಿಸುತ್ತ ಬಂದ ಜೋರ್ದಾನ್, ಮೃತಕಡಲನ್ನು ಸೇರಿ ತನ್ನ ಯಾನ ಮುಗಿಸುವುದು ನೈಸರ್ಗಿಕ ವಿಷಾದದಂತೆ ಭಾಸವಾಗುತ್ತದೆ.

ಹೊಳೆಯೊಂದಕ್ಕೆ ಮಹತ್ವ ಸಿಗುವುದು ಆಳ-ಅಗಲಗಳಿಂದಲ್ಲ. ಅದು ಹರಿವ ಸ್ಥಳ ಮತ್ತು ಕಾಲದಿಂದ. ಮರುಭೂಮಿಗಳಲ್ಲಂತೂ ಮಳೆ ಮತ್ತು ಹೊಳೆಗಳು ದೇವರೇ. ಹೀಬ್ರೂ ಬೈಬಲ್ಲಿನಲ್ಲಿ ಜೋರ್ದಾನನ್ನು ಸ್ವರ್ಗದ ಉದ್ಯಾನದ ಝರಿಯೆಂದು ಬಣ್ಣಿಸಲಾಗಿದೆ. ಹೊಳೆಗಳ ಲೌಕಿಕ ಪ್ರಯೋಜನವೇ ಧರ್ಮಗಳು ಪವಿತ್ರೀಕರಿಸಲು ಕಾರಣ. ಯುದ್ಧಗಳಾಗುವುದೂ ಹೊಳೆದಡದ ಫಲವತ್ತಾದ ಬಯಲಿಗಾಗಿಯೇ. ಕೃಷ್ಣಾ-ತುಂಗಭದ್ರಾ ನಡುವಣ ದೋಆಬ್ ಪ್ರದೇಶವನ್ನು ಹಿಡಿಯಲು ನಡೆದ ಯುದ್ಧಗಳು ನೂರಾರು. ಮರುಭೂಮಿಯಲ್ಲಿ ನದಿಗಳು ಸಾಯುವವರನ್ನು ಬದುಕಿಸುವ ಸಂಜೀವಿನಿಗಳು. ಪ್ಯಾಲೆಸ್ಟೀನ್-ಜೋರ್ಡಾನ್-ಇಸ್ರೇಲ್-ಲೆಬನಾನ್-ಸಿರಿಯಾ ದೇಶಗಳ ಚರಿತ್ರೆ, ಪುರಾಣ ಹಾಗೂ ಜಾನಪದಗಳಲ್ಲಿ ಜೋರ್ದಾನ್ ಒಂದು ಪಾತ್ರ. ಇವುಗಳಲ್ಲಿ ಒಂದು ದೇಶವಂತೂ ಹೊಳೆಯ ಹೆಸರನ್ನೇ ಇರಿಸಿಕೊಂಡಿದೆ.

ಚರಿತ್ರೆಯಲ್ಲಿ ಐದು ದೇಶಗಳನ್ನು ಬೆಸೆದಿಟ್ಟಿದ್ದ ಹೊಳೆಯೇ ಈಗ ಅವನ್ನು ಬೇರ್ಪಡಿಸುವ ಗಡಿಯಾಗಿದೆ. ತಮ್ಮ ಪಾಲಿನ ಹನಿ ನೀರನ್ನೂ ಬಳಸುವ ಹಟದಿಂದ ಈ ದೇಶಗಳಲ್ಲಿ ಯುದ್ಧ ಮತ್ತು ಒಪ್ಪಂದಗಳಾಗಿವೆ; ಅಂತರರಾಷ್ಟ್ರೀಯ ಕೋರ್ಟ್‌ಗಳಲ್ಲಿ ಮೊಕದ್ದಮೆಗಳು ನಡೆಯುತ್ತಿವೆ. ಜಲಕಲಹ ನಾಗರಿಕತೆಗೆ ಹೊಸತಲ್ಲ. ಗೌತಮನು ಮನೆಬಿಟ್ಟು ಹೊರಟುಹೋಗಿದ್ದು ಎರಡು ಕುಲಗಳ ನಡುವಣ ಜಲಯುದ್ಧ ನಿವಾರಿಸಲೆಂದು ತಾನೇ? ಕೃಷ್ಣ ಕಾಳಿಂಗಮರ್ದನಗೈದು ಯಮುನೆಯ ನೀರನ್ನು ಪಶುಗಳಿಗೆ ಬಿಡುಗಡೆ ಮಾಡಿದ್ದು ಕೂಡ ಜಲಯುದ್ಧವೇ. ನೆಲಜಲವನ್ನು ತಾಳ್ಮೆಯಿಂದ ಹಂಚಿಕೊಂಡು ಬಾಳಲಾಗದ ಜನರ ನಡುವೆ, ಪೈರಿಗೆ, ಜಳಕಕ್ಕೆ ಬಾಯಾರಿಕೆಗೆ ಒದಗುತ್ತ ಮೈಕೆಡಿಸಿಕೊಂಡು ಬಳಲಿ ಬೆಂಡಾಗಿ ಮೃತಸಮುದ್ರ ಸೇರುವ ಜೋರ್ದಾನ್ ಅವಸ್ಥೆ ಕಂಡು ಮರುಕವಾಯಿತು. ಹಿಂದೆ ಚರ್ಮರೋಗ ಬಂದವರು ಇದರಲ್ಲಿ ಮಿಂದು ಗುಣವಾಗುತ್ತಿದ್ದ ಪುರಾಣಕತೆಗಳಿವೆ. ಈಗಿದು ಜಗತ್ತಿನ ಕಲುಷಿತ ಹೊಳೆಗಳಲ್ಲಿ ಒಂದಾಗಿದೆ. ಹೀಬ್ರೂದಲ್ಲಿ ಜೋರ್ದಾನ್ ಎಂದರೆ ಕೆಳಗಿಳಿಯುವುದು ಅರ್ಥಾತ್ ಗಂಗಾವತರಣ. ಆದರೆ ಜೋರ್ದಾನ್ ಮಾಲಿನ್ಯದಲ್ಲಿ ಕೆಳಗಿಳಿದಿದೆ. ಇದರ ದೆಸೆಯಿಂದ ಮೃತಸಮುದ್ರವೂ ಕುಗ್ಗುತ್ತಿದೆ. ವ್ಯಂಗ್ಯವೆಂದರೆ, ಮೃತಸಮುದ್ರದ ಕೆಸರನ್ನು ಬಳಿದುಕೊಂಡು ಜನ ಜಳಕ ಮಾಡುವುದು. ಮೃತಸಮುದ್ರದ ಕೆಸರನ್ನು ತೆಗೆದು ಸೌಂದರ್ಯವರ್ಧಕವಾಗಿ ಮಾರುವುದು. ನನಗೆ ಮೃತಸಮುದ್ರದ ತೇಲುವಿಕೆ ಖುಷಿಕೊಟ್ಟಿತು. ಆದರೆ ಪಂಕಸ್ನಾನ ಕಿರಿಕಿರಿ ತಂದಿತು.

ಜೋರ್ದಾನಿನ ಈ ವಿಷಾದ ಕಥನದಲ್ಲಿ ಭರವಸೆಯ ಒಂದು ಸಣ್ಣ ಎಳೆಯಿದೆ. ಅದು ಜೋರ್ದಾನಿಗೂ ಮೃತಸಮುದ್ರಕ್ಕೂ ಹತ್ತಿರುವ ಬತ್ತುರೋಗ ಗುಣಪಡಿಸಲು, ಐದೂ ದೇಶಗಳ ಪರಿಸರ ತಜ್ಞರು ಒಂದಾಗಿರುವುದು. ಹೊಳೆ-ಉಪಹೊಳೆಗಳಿಗೆ ಅಣೆಕಟ್ಟಿ ಅದರ ಸಹಜ ಹರಿವನ್ನು ಮುರಿದಿರುವ ಬಗ್ಗೆ ಆಕ್ರೋಶಿತರಾಗಿರುವ ಈ ತಜ್ಞರು, ಪ್ರಭುತ್ವಗಳ ಅಂತಃಕಲಹಗಳ ನಡುವೆ, ಗಡಿಮೀರಿ ಹೊಳೆ-ಕಡಲಿನ ಹದುಳ ಕಾಯಲು ಒಂದಾಗಿದ್ದಾರೆ. ಆದರೆ ಧರ್ಮಕ್ಕಾಗಿ ಯುದ್ಧ ಮಾಡಿದ ನಾಡಲ್ಲಿ, ಜಲರಕ್ಷಣೆಗಾಗಿ ಯೋಧರಾದ ಇವರ ಹಾದಿ ಸುಲಭವಾಗಿಲ್ಲ. ❖

ಸ್ಫಟಿಕದಂತೆ ಹೊಳೆಯುವ ಗಲಿಲಿ ಸರೋವರದ ನೀರು

ನಾನು ಲೇಡೀಸ್ ಕಣ್ರೇ...

10ನೇ ಪುಟದಿಂದ...

'ಹುಡುಗನ ಚಹರೆಯಲ್ಲಿರುವ ಹೆಣ್ಣೊಬ್ಬಳು ತಾನೂ ಹೆಣ್ಣು ಅನ್ನುವುದನ್ನು ಬಿಡಿಸಿ ಹೇಳಿದರೂ ಒಪ್ಪಿಕೊಳ್ಳದ ಸಮಾಜ ಆಕೆಯನ್ನು ಅಪಾರ್ಥ ಮಾಡಿಕೊಂಡು ಭಿನ್ನವಾಗಿ ನೋಡುವಂಥ ಸನ್ನಿವೇಶಗಳು ಸಿನಿಮಾದಲ್ಲಿವೆ. ಮೇಲ್ನೋಟಕ್ಕೆ ತಮಾಷೆಯಾಗಿ ಸಿನಿಮಾದಲ್ಲಿ ತೋರಿಸಿದ್ದರೂ ಆಂತರ್ಯದಲ್ಲಿ ಅವಳೊಳಗಿನ ತಳಮಳಗಳೇನು ಎಂಬುದನ್ನು ಚಿತ್ರದಲ್ಲಿ ಮನಗಾಣಿಸಲು ಯತ್ನಿಸಿದ್ದೇನೆ' ಎನ್ನುವ ಶೈಲಜಾ ಅವರ ಮನದಲ್ಲಿ ಈಗಾಗಲೇ ಮತ್ತೆರಡು ಚಿತ್ರಗಳ ಕಥೆಗಳು ಹರಳುಗಟ್ಟತೊಡಗಿವೆ.

'ಕ್ವೀರ್', ಎಲ್‌ಜಿಬಿಟಿಕ್ಯು ಸಮುದಾಯದ ಸಂವೇದನೆಗಳನ್ನು ಈ ಹಿಂದೆ ಭಾರತೀಯ ಸಿನಿಮಾಗಳಲ್ಲಿ ತಪ್ಪಾಗಿ ಅರ್ಥೈಸಿರುವುದೇ ಹೆಚ್ಚು. 'ಫೈರ್' ಸಿನಿಮಾ ತೆರೆಗೆ ಬಂದಾಗ ಈ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿತ್ತು. ಕಾಲಾಂತರದಲ್ಲಿ ಸಿನಿಮಾದ ಸಾಂಸ್ಕೃತಿಕ ಮೌಲ್ಯಗಳು ಬದಲಾದಂತೆ ಈ ಸಮುದಾಯವನ್ನು ನೋಡುವ ಬಗೆಯಲ್ಲೂ ಬದಲಾವಣೆ ಆಗಿದೆ. ಅದರಲ್ಲೂ ದಕ್ಷಿಣ ಭಾರತದ ಸಿನಿಮಾ ರಂಗ ಇಂಥ ವಿಷಯಗಳನ್ನು 'ನಾನು ಅವನಲ್ಲ ಅವಳು', 'ಸೂಪರ್ ಡೀಲಕ್ಸ್'ನಂಥ ಸಿನಿಮಾಗಳಲ್ಲಿ ಮನಗಾಣಿಸಿರುವ ಬಗೆ ಅನನ್ಯ ಎನ್ನುವ ಶೈಲಜಾ ಅವರಿಗೆ ಎಲ್‌ಜಿಬಿಟಿಕ್ಯು ಸಮುದಾಯದ ನೈಜ ಸಂವೇದನೆಗಳನ್ನು ರಿಯಲಿಸ್ಟಿಕ್ ಶೈಲಿಯಲ್ಲಿ ಹೇಳಬೇಕೆಂಬ ತುಡಿತವಿದೆ.

'ಕ್ವೀರ್ ಅಂದಾಕ್ಷಣ ತೃತೀಯಲಿಂಗಿಗಳು ಅಂತ ಪರಿಭಾವಿಸುವವರೇ ಹೆಚ್ಚು. ಆದರೆ, ಅದು ಹಾಗಲ್ಲ. ಎಲ್‌ಜಿಬಿಟಿಕ್ಯು ಸಮುದಾಯದ ಹರವು ಬಹು ವಿಸ್ತಾರವಾದದ್ದು. ಒಂದೊಂದು ಸಂವೇದನೆಗೂ ಪ್ರತ್ಯೇಕ ಭಾವಲೋಕವಿದೆ. ಅದನ್ನು ಸಿನಿಮಾದಲ್ಲಿ ಅನಾವರಣಗೊಳಿಸುವ ಅಗತ್ಯವಿದೆ. ಆ ನಿಟ್ಟಿನಲ್ಲಿ ಕನ್ನಡದಲ್ಲಿ 'ನಾನು ಲೇಡೀಸ್' ಮೂಲಕ ಪ್ರಯತ್ನಿಸಿದ್ದೇನೆ. ದಕ್ಷಿಣ ಭಾರತೀಯ ಸಿನಿರಂಗದಲ್ಲಿ ಇಂಥ ಪ್ರಯೋಗಗಳು ಆಗುತ್ತಿರುವುದು ನನ್ನಂಥವರಿಗೆ ಸ್ಫೂರ್ತಿ. 'ನಾನು ಲೇಡೀಸ್' ಬರೀ ರೊಮಾನ್ಸ್, ಲವ್ ಅಲ್ಲ. ಮಧ್ಯಮವರ್ಗದ ಕುಟುಂಬವೊಂದರ ಸಾಂಸ್ಕೃತಿಕ ಮೌಲ್ಯಗಳ ನಡುವೆ ಕ್ವೀರ್ ಜೋಡಿ ಎದುರಿಸುವ ತಳಮಳಗಳೇನು ಅನ್ನುವಂಥದ್ದು ಸಿನಿಮಾದ ಹೂರಣ. ಈಗಾಗಲೇ ಸಿನಿಮಾಕ್ಕೆ 'ತಸ್ವೀರ್' ಚಿತ್ರೋತ್ಸವದಲ್ಲಿ ಉತ್ತಮ ಪ್ರತಿಕ್ರಿಯೆ ಬಂದಿರುವುದು ಸಂತಸ ತಂದಿದೆ' ಎಂದು ಹರ್ಷಿಸುತ್ತಾರೆ ಅವರು.

'ಇಂಥದ್ದೊಂದು ಸಿನಿಮಾವನ್ನು ಕನ್ನಡ ಚಿತ್ರರಂಗ ಹೇಗೆ ಸ್ವೀಕರಿಸುತ್ತದೆಯೋ ಗೊತ್ತಿಲ್ಲ. ತಂತ್ರಜ್ಞಾನದೊಂದಿಗೆ ನಮ್ಮ ಮೌಲ್ಯಗಳೂ ಪ್ರಗತಿಯೆಡೆಗೆ ಸಾಗುತ್ತಿವೆ. ಹಾಗಾಗಿ, ಇಂಥ ವಿಷಯದ ಸಿನಿಮಾವನ್ನು ಕನ್ನಡ ಚಿತ್ರರಂಗ ಮತ್ತು ಪ್ರೇಕ್ಷಕರು ಆರೋಗ್ಯಕರವಾಗಿ ಸ್ವೀಕರಿಸಬಹುದು' ಅನ್ನುವ ನಂಬಿಕೆ ಅವರದ್ದು.

'ಭಾರತೀಯ ಸಂಜಾತೆ ಲಂಡನ್‌ನಲ್ಲಿ ನೆಲೆಸಿರುವ ಹರಿಣಿ ದಡ್ಡಲ್ ಸಿನಿಮಾದ ನಿರ್ಮಾಪಕಿ. ಸ್ತ್ರೀವಾದದಲ್ಲಿ ನಂಬಿಕೆಯಿರುವ ಅವರಿಂದಾಗಿ ಚಿತ್ರ ತೆರೆಗೆ ಬರಲು ಸಾಧ್ಯವಾಯಿತು. ಸಿನಿಮಾದಲ್ಲಿ ನನ್ನೊಂದಿಗೆ ಮುಖ್ಯಪಾತ್ರದಲ್ಲಿ ಅಭಿನಯಿಸಿರುವ ರಂಗ ಕಲಾವಿದೆ ಮೇದಿನಿ ಕೆಳಮನೆ ಅವರ ಸಹಕಾರ ಮಹತ್ವದ್ದು. ಅಂತೆಯೇ ಕ್ಯಾಮೆರಾ ವುಮನ್‌ಗಳಾದ ಚೆಹಕ್ ಬಿಲ್ಗಿ, ಕೋಮಲ್ ಕಿಯಾನಿ ಹಾಗೂ ತಂಡದ ಇತರ ತಂತ್ರಜ್ಞರು ಸಿನಿಮಾವನ್ನು ಚೆಂದಗಾಣಿಸಿದ್ದಾರೆ. ಶೀಘ್ರದಲ್ಲೇ ಸಿನಿಮಾ ಚಿತ್ರಮಂದಿರ ಹಾಗೂ ಒಟಿಟಿಯಲ್ಲಿ ಬಿಡುಗಡೆಯಾಗಲಿದೆ' ಎಂದು ಮಾತಿಗೆ ವಿರಾಮ ಹಾಕಿದರು ಶೈಲಜಾ.

ಸಿನಿಮಾ ಟ್ರೇಲರ್ ವೀಕ್ಷಿಸಲು: https://youtu.be/GFPXd8S29i0 ❖

ಮುನ್ನೋಟ 17-10-2021 ರಿಂದ 23-10-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹೋಟೆಲ್ ಉದ್ಯಮದವರು ನಿಧಾನಗತಿಯ ಚೇತರಿಕೆಯನ್ನು ಕಾಣಬಹುದು. ಕೆಲವು ಕಲಾವಿದರುಗಳಿಗೆ ಬಾಕಿ ಸಂಭಾವನೆಯ ಹಣ ಈಗ ಬರುತ್ತದೆ. ಸಿನಿಮಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಸಹಕಲಾವಿದರುಗಳಿಗೆ ಕೆಲಸಗಳು ಬರಲಾರಂಭಿಸುತ್ತವೆ. ಮಹಿಳೆಯರು ನಡೆಸುವ ಹಣಕಾಸಿನ ವ್ಯವಹಾರಗಳಲ್ಲಿ ಅಲ್ಪ ನಷ್ಟದ ಸಾಧ್ಯತೆ ಇದೆ. ವೃತ್ತಿಯಲ್ಲಿ ಹೆಚ್ಚಿನ ಆದಾಯ ಬರಲಿದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಿದೇಶಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಹೆಚ್ಚಿನ ಸವಲತ್ತು ದೊರೆಯುವ ಸಾಧ್ಯತೆಗಳಿವೆ. ದೊಡ್ಡ ಮಟ್ಟದ ಗುತ್ತಿಗೆದಾರರಿಗೆ ವಿದೇಶಿ ಗುತ್ತಿಗೆಗಳು ಸಿಗುವ ಎಲ್ಲಾ ಲಕ್ಷಣಗಳಿವೆ. ಮೋಟಾರು ವಾಹನಗಳ ಬಿಡಿ ಭಾಗಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತಾರಗೊಳ್ಳುತ್ತದೆ. ವಾಹನ ದುರಸ್ತಿ ಮಾಡುವವರು ಹೆಚ್ಚಿನ ಆದಾಯವನ್ನು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವ್ಯವಹಾರದಲ್ಲಿ ಒಂದು ರೀತಿಯ ವಿಶಿಷ್ಟ ತಿರುವು ಪಡೆದು ವ್ಯವಹಾರ ವೃದ್ಧಿ ಆಗುತ್ತದೆ. ಆತ್ಮವಿಶ್ವಾಸದಿಂದ ವ್ಯವಹಾರವನ್ನು ಮುನ್ನಡೆಸುವ ಯೋಗವಿದೆ. ಕೆಲವರಿಗೆ ಬಿಡುವಿಲ್ಲದ ಕೆಲಸಗಳಿಂದಾಗಿ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಯವಾಗಬಹುದು. ಬಂಧುಗಳ ಮನೆಗಳಲ್ಲಿನ ಸಂತಸದ ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶವಿದೆ. ದಿನಸಿ ವ್ಯಾಪಾರಿಗಳಿಗೆ ಆದಾಯದಲ್ಲಿ ಹೆಚ್ಚಳವಾಗುವ ಸಾಧ್ಯತೆ ಇದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ತರಕಾರಿ, ಹಣ್ಣುಗಳಿಗೆ ಬೇಡಿಕೆ ಹೆಚ್ಚಾಗಿ ಬೆಳೆಯುವವರಿಗೆ ಮತ್ತು ಮಾರಾಟ ಮಾಡುವವರಿಗೆ ಹೆಚ್ಚಿನ ಹಣ ದೊರೆಯುತ್ತದೆ. ಪತ್ನಿಯ ವರ್ಗದವರ ಕಡೆಯಿಂದ ಧನಸಹಾಯ ಹರಿದುಬರುತ್ತದೆ. ಕೃಷಿ ಭೂಮಿ ಕೊಳ್ಳಲು ಆಸಕ್ತಿ ತೋರುವಿರಿ. ವೃತ್ತಿಯಲ್ಲಿ ನಿಮ್ಮ ಕಾರ್ಯತಂತ್ರಗಳನ್ನು ತಡಮಾಡದೆ ಜಾರಿಗೊಳಿಸಿ. ಇದರಿಂದ ನಿಮಗೆ ಯಶಸ್ಸು ಸಿಗುತ್ತದೆ. ಹಿರಿಯರ ಆರೋಗ್ಯಕ್ಕಾಗಿ ಹಣ ಖರ್ಚು ಮಾಡಬೇಕಾಗಬಹುದು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸಾಮಾಜಿಕ ರಂಗದಲ್ಲಿ ಕೆಲಸ ಮಾಡುವವರಿಗೆ ಜನಾನುರಾಗದ ಜೊತೆಗೆ ಸ್ಥಾನಮಾನ ದೊರೆಯುವ ಸಾಧ್ಯತೆಗಳಿವೆ. ತೈಲ ಉದ್ಯಮದಲ್ಲಿ ತೊಡಗಿಸಿಕೊಂಡಿರುವವರಿಗೆ ಉತ್ತಮ ಲಾಭವಿರುತ್ತದೆ. ಉದ್ಯೋಗ ಕ್ಷೇತ್ರದಲ್ಲಿ ಮೇಲಧಿಕಾರಿಗಳ ಪ್ರಶಂಸೆಗೆ ಪಾತ್ರರಾಗುವಿರಿ. ನಿಮ್ಮ ಕೆಲಸ ಕಾರ್ಯಗಳಿಗೆ ಸಹೋದ್ಯೋಗಿಗಳ ಸಹಕಾರ ದೊರೆಯುತ್ತದೆ. ನಿಮ್ಮ ಸ್ನೇಹ ಸಂಬಂಧಗಳು ಗಟ್ಟಿಗೊಳ್ಳುತ್ತವೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಅತಿಯಾದ ಆತ್ಮಗೌರವ ನಿಮ್ಮನ್ನು ಕಾಡಬಹುದು. ಮಹಿಳೆಯರು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಕೀರ್ತಿಪತಾಕೆಯನ್ನು ಹಾರಿಸುವರು. ವ್ಯಾಪಾರಿಗಳಿಗೆ ವ್ಯಾಪಾರದಲ್ಲಿ ಲಾಭ ಹೆಚ್ಚು ಮಾಡಿಕೊಳ್ಳುವ ಕಲೆ ತಿಳಿದುಬರುತ್ತದೆ. ವಾಹನ ಚಾಲನೆ ವೇಳೆ ಎಚ್ಚರ ಇರಲಿ. ಗೃಹ ನಿರ್ಮಾಣ ಕಾರ್ಯಗಳನ್ನು ಮಾಡಬಹುದು. ವಿದ್ಯಾರ್ಥಿಗಳಿಗೆ ಕಲಿಕೆಗೆ ಬೇಕಾದ ಸೌಲಭ್ಯಗಳು ದೊರೆಯುತ್ತವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವಿರಿ. ನಿವೇಶನ ಖರೀದಿ ವಿಚಾರವಾಗಿ ಚರ್ಚೆ ಮಾಡುವಿರಿ. ಆದಾಯದಲ್ಲಿ ಸಾಮಾನ್ಯ ಹೆಚ್ಚಳವನ್ನು ಕಾಣಬಹುದು. ಹಿರಿಯರ ಆರೋಗ್ಯದಲ್ಲಿ ಸುಧಾರಣೆಗಳು ಕಾಣಬಹುದು. ಅಪೂರ್ಣವಾಗಿದ್ದ ಪಾಲುದಾರಿಕೆಯ ವ್ಯವಹಾರದ ಕರಾರುಗಳು ಈಗ ಪೂರ್ಣಗೊಳ್ಳುತ್ತವೆ. ಸ್ತ್ರೀಯರು ನಡೆಸುವ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಕಾರ್ಯಕ್ಷೇತ್ರಗಳಲ್ಲಿ ಸುಸೂತ್ರವಾಗಿ ಕೆಲಸಗಳು ನಡೆದು ನಿಮ್ಮ ವರ್ಚಸ್ಸು ಹೆಚ್ಚುತ್ತದೆ. ಸೂಕ್ತ ವ್ಯಕ್ತಿಗಳಿಂದ ಸಕಾಲದಲ್ಲಿ ಸಲಹೆ ಮತ್ತು ಸಹಾಯ ಒದಗಿ ನಿಮ್ಮ ಕೆಲಸಗಳು ಹಗುರಾಗುತ್ತವೆ. ಉದ್ಯೋಗವನ್ನು ಅರಸುತ್ತಿರುವವರ ಬುದ್ಧಿಮತ್ತೆ ಹಾಗೂ ತೀಕ್ಷ್ಣತೆ ಸಂಬಂಧಪಟ್ಟವರ ಗಮನವನ್ನು ಸೆಳೆಯುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಸ್ವಲ್ಪ ಕಾನೂನು ತೊಂದರೆಗಳು ಬರಬಹುದು. ನಿಮ್ಮ ಶತ್ರುಬಾಧೆಗಳು ನಿವಾರಣೆಯಾಗುವ ಲಕ್ಷಣಗಳು ಕಾಣುತ್ತಿವೆ. ಸಂಗಾತಿಯಿಂದ ದೊರೆಯುವ ಸಲಹೆಗಳನ್ನು ಪರಿಶೀಲಿಸಿ ನಡೆಯುವುದು ಉತ್ತಮ. ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವತ್ತ ತಿರುಗುತ್ತದೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಶಿಸ್ತುಬದ್ಧ ಜೀವನದಿಂದಾಗಿ ಎಲ್ಲರ ಗಮನ ಸೆಳೆಯುವಿರಿ. ಸಕಾರಾತ್ಮಕ ಚಿಂತನೆಗಳಿಂದ, ಬಂದಿದ್ದ ಸಮಸ್ಯೆಗಳು ಕರಗಿ ಹೋಗುವವು. ಆಪ್ತ ಸ್ನೇಹಿತರ ಸಲಹೆಗಳು ನಿಮಗೆ ಉಪಯೋಗಕ್ಕೆ ಬರುತ್ತವೆ. ಹೊಸ ಅವಕಾಶಗಳು ತೆರೆಯುವುದರಿಂದ ನಿಯೋಜಿತ ಕೆಲಸಗಳನ್ನು ಒಪ್ಪಿ ಮಾಡುವಿರಿ. ಇದರಿಂದ ನಿಮ್ಮ ಆತ್ಮವಿಶ್ವಾಸ ಹೆಚ್ಚಾಗುವುದು. ಹಣಕಾಸಿನ ಸ್ಥಿತಿಯು ನಿಮ್ಮ ಅಗತ್ಯವನ್ನು ಪೂರೈಸುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಿದ್ಯಾರ್ಥಿಗಳಿಗೆ ವಿಶೇಷ ರೀತಿಯ ಸೌಲಭ್ಯಗಳು ದೊರಕುವ ಸಾಧ್ಯತೆ ಇದೆ. ಕೃಷಿಕ್ಷೇತ್ರದಲ್ಲಿ ದುಡಿಯುವವರಿಗೆ ಉತ್ತಮ ಆದಾಯ ಇರುತ್ತದೆ. ದರ್ಜಿಗಳಿಗೆ ಬೇಡಿಕೆ ಹೆಚ್ಚುತ್ತದೆ. ವ್ಯವಹಾರಗಳಲ್ಲಿ ಅತಿಯಾದ ಬದಲಾವಣೆ ಅಸಾಧ್ಯ. ಇರುವುದರಲ್ಲಿಯೇ ಹೊಂದಿಸಿಕೊಂಡು ದುಡಿಯುವುದು ಉತ್ತಮ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಸ್ವತಂತ್ರ ವೃತ್ತಿಯವರಿಗೆ ಆದಾಯ ಹೆಚ್ಚಿದರೂ ಅನಗತ್ಯ ಖರ್ಚುವೆಚ್ಚಗಳ ವಿಚಾರದಲ್ಲಿ ಜಾಗರೂಕತೆ ಅಗತ್ಯ. ಪೀಠೋಪಕರಣಗಳನ್ನು ತಯಾರಿಸಿ ಮಾರುವವರಿಗೆ ವ್ಯವಹಾರ ವಿಸ್ತರಿಸುತ್ತದೆ. ಮನೆಗೆ ಅಲಂಕಾರಿಕ ವಸ್ತುಗಳನ್ನು ಖರೀದಿಸುವ ಸಾಧ್ಯತೆ ಇದೆ.

ಪದಬಂಧ 2709



ಮೇಲಿನಿಂದ ಕೆಳಕ್ಕೆ

1. ತೀರಾ ಹೀನ ಪರಿಸ್ಥಿತಿಯಲ್ಲಿರುವ ಸೇವಕ 4
2. ರಾಜನಿಂದ ಬಂದ ಓಲೆ 3
4. ಮರ್ಯಾದೆಯಿಂದ ಇಳಿದು ಬರುವ ಮನುಷ್ಯ 3
5. ಆರು ಮೊಗದ ಕಾರ್ತಿಕೇಯ 4
6. ನಿಗದಿ ಪಡಿಸಿದ ರೇಟು 2
7. ಕಡಲ ತೀರದಲ್ಲಿ ಮೀನು ಹಿಡುಯುವವ 3
8. ಕೆಳಗಿನಿಂದ ಮೇಲೆ ಸುತ್ತುತ್ತಿರುವ ನೀರು 2
10. ಮೈಸೂರು ದಸರೆಯ ದಿಬ್ಬಣದ ಒಂಭತ್ತನೆ ವಿಶೇಷ ದಿನ 5
12. ಮನಸ್ಸಿಗೆ ಆಹ್ಲಾದ ಕೊಡುವ ಸವಿ ನೆನಪು 5
13. ಆಕಾಶಕ್ಕೆ ಬಟ್ಟೆಯನ್ನು ತೊರಿಸಿ ಎತ್ತಿ ಒಗೆಯುವವ 3
14. ಒಳ್ಳೆಯ ಸ್ವರ್ಗ 3
18. ಸೊಗಸಿನ ಪ್ರಾಚೀನ ವಿದ್ಯಾಪೀಠ 3
19. ತಾನಾಡುವ ನುಡಿಯ ಮೇಲೆ ಅತಿಯಾದ ಪ್ರೀತಿಯುಳ್ಳವ 4
20. ಇದು ದಿಟ 2
21. ಒತ್ತು ಕಳೆದು ಕೊಂಡ ಪುಕ್ಕ 2
22. ಮತ್ತೆ ಮತ್ತೆ ಕೆರೆದು ಕೊಳ್ಳುವಂತೆ ಮಾಡುವ ತುರಿಕೆ ಮತ್ತೆ ಮತ್ತೆ ಹೇಳುವಂತೆ ಮಾಡುತ್ತದೆ 4
24. ಮಿತವಾಗಿ ನಮಸ್ಕಾರ ಮಾಡುವವ 3
25. ಟೊಳ್ಳು ಕೊಂಬಿನ ಆಡು ಜಾತಿ ಪ್ರಾಣಿ 3

ಎಡದಿಂದ ಬಲಕ್ಕೆ

1. ಹಣತೆಗಳನ್ನು ಬೆಳಗುವ ಹಾಡಿನ ವಿಲಾಸ 5
3. ಎಲ್ಲಾ ನಾಶವಾಗಿ ಅಳಿದುಳಿದ ಹೆಸರು 5
6. ಆಶ್ವಯುಜ ಕಾರ್ತಿಕಗಳಲ್ಲಿ ಒಂದರ ಹಿಂದೆ ಒಂದು ದೊಡ್ಡ ಹಬ್ಬಗಳು 7
9. ಸೈನ್ಯಗಳೆರಡೂ ಸಮನಾಗಿ ನಿಂತು ಮಾಡುವ ಯುದ್ಧ 3
11. ಒಳ್ಳೆಯ ಮನಸ್ಸಿನ ಹೂವಿನಂತಹ ಹುಡುಗಿ 3
13. ಮೈಸೂರಿನ ರಾಜ ಮನೆತನ 3
15. ಒಂಭತ್ತು ಸುಂದರ ಬಣ್ಣಗಳ ವೇದಿಕೆ 4
16. ಹಾವುಗಳ ಊರು, ಇಲ್ಲಿ ಕಿತ್ತಳೆ ಪ್ರಸಿದ್ಧಿ 4
17. ಬ್ರಹ್ಮ ಪುತ್ರರಲ್ಲಿ ಜೇಷ್ಠ- ಪುರಾಣಗಳಿಗೆ ಸಾಕ್ಷಿಯಾದವ 3
19. ಸುಂದರ ಸ್ತ್ರೀಯಂತಿರುವ ಸುಂದರ ಷಟ್ಪದಿ 3
21. ಗೊಕುಲ ನಿರ್ಗಮನದ ಕರ್ತೃ 3
23. ಜನವಾಹಿನಿಯಿಂದ ಬಂದ ರಂಗ ಪ್ರದರ್ಶನ 7
26. ಸದಾ ಸ್ನೇಹ ಮತ್ತು ಸ್ನೇಹಿತರ ಕುರಿತು ಆಲೋಚಿಸುವವ 5
27. ಪುನರ್ ವಿವಾಹಕ್ಕೆ ಅಪ್ಪಟ ಕನ್ನಡ ಪದ 5

ಪದಬಂಧ ಉತ್ತರ -2708

ಮೇಲಿಂದ ಕೆಳಕ್ಕೆ

1.ಸುಕುಮಾರ 2.ಕಸಿವಿಸಿ 3.ಅಂಜನಾ 5.ತುತ್ತೂರಿ 7.ಕಲಿಪ್ರಭಾವ 8.ಕವಿನಮನ 9.ಹರಸಾಹಸ 10.ಸಿರಿಸುಗಂಧ 15.ಪ್ರಸಾದ 16.ಮಾಳವಿಕಾ 18. ಮಾಸ್ತಿಗಲ್ಲು 19.ನೆನಪು

ಎಡದಿಂದ ಬಲಕ್ಕೆ

1. ಸುಖಕಾರಕ 3.ಅಂಕುಡೊಂಕು 4.ಸಿಹಿಮಾತು 6.ನಾಕನರಕ 9.ಹಸಿರುಸಿರಿ 11.ವಿಧುರ 12.ಪ್ರಹಸನ 13.ಸಾವರಿಸು 14.ಮಕೀಹ 15.ಪ್ರವರ್ಧಮಾನ 17.ಸಮಾರಾಧನೆ 20.ದಪ್ಪಕಿವಿ 21.ಗಜಗುಂಪು 22.ಕಾಮನಬಿಲ್ಲು

ಮತ್ತಷ್ಟು ಹಿಗ್ಗಿದ ಕನ್ನಡ ಜಗದ್ವಲಯ

ಎನ್‌.ಎಸ್‌. ಗುಂಡೂರ

ಕನ್ನಡ ಜಗದ್ವಲಯವು ರೂಪುಗೊಳ್ಳುವಲ್ಲಿ ಅನುವಾದವೆಂಬ ವಿದ್ಯಮಾನ ವಿಶಾಲ ಅರ್ಥದಲ್ಲಿ, ಮಹತ್ವದ ಪಾತ್ರ ವಹಿಸಿದೆ. ಹೊರ ಜಗತ್ತಿನಿಂದ ಪಡೆದುಕೊಳ್ಳುವ, ಹೊರ ಜಗತ್ತಿಗೆ ತನ್ನನ್ನು ತಾನು ಪರಿಚಯಿಸಿಕೊಳ್ಳುವ, ಈ ಸಾಂಸ್ಕೃತಿಕ ಕೊಡು-ಕೊಳ್ಳುವಿಕೆ ಕವಿರಾಜಮಾರ್ಗಕಾರನ ಕಾಲದಿಂದಲೂ ಕನ್ನಡದಲ್ಲಿ ನಡೆದುಕೊಂಡು ಬಂದಿದೆ. ಆಧುನಿಕ ಯುಗದಲ್ಲಿ ಪಶ್ಚಿಮದ ಪಠ್ಯಗಳನ್ನು, ಸಾಹಿತ್ಯ ಪ್ರಕಾರಗಳನ್ನು ನಾವು ಕನ್ನಡೀಕರಿಸಿದ್ದಕ್ಕೆ ಚಾರಿತ್ರಿಕ ಹಾಗೂ ರಾಜಕೀಯ ಒತ್ತಾಸೆಗಳಿದ್ದವು. ಪಶ್ಚಿಮದ ವಿದ್ವಾಂಸರು ಭಾರತೀಯ ಪಠ್ಯಗಳನ್ನು ಅನುವಾದಿಸಿದ್ದು ಸಾಂಸ್ಕೃತಿಕ ಯಾಜಮಾನ್ಯವನ್ನು ಸಾಧಿಸಲು ಎಂಬುದು ಈಗ ಸಾಮಾನ್ಯ ತಿಳಿವಳಿಕೆ ಆಗಿಬಿಟ್ಟಿದೆ. ಪ್ರಸ್ತುತ ವಸಾಹತೋತ್ತರ ಕಾಲಘಟ್ಟದಲ್ಲಿ ಭಾರತೀಯ ಪಠ್ಯಗಳನ್ನು, ವಿಶೇಷವಾಗಿ ಅಭಿಜಾತ ಪಠ್ಯಗಳನ್ನು ನಾವು ಇಂಗ್ಲಿಷ್‌ಗೆ ಅನುವಾದಿಸುತ್ತಿರುವುದು ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಿದೆ.

ಆಧುನಿಕಪೂರ್ವ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ, ಹೇರಳವಾಗಿ ಅನುವಾದಗೊಂಡ ಪ್ರಕಾರವೆಂದರೆ ವಚನ ಸಾಹಿತ್ಯ. ಎಸ್‌.ಸಿ. ನಂದಿಮಠ, ಮನೇಜಿಸ್‌ ಮುಂತಾದವರು ಸಂಗ್ರಹಿಸಿ, ಅನುವಾದಿಸಿದ ಶೂನ್ಯ ಸಂಪಾದನೆ ಮತ್ತು ಎ.ಕೆ. ರಾಮಾನುಜನ್‌, ಎಚ್‌.ಎಸ್‌. ಶಿವಪ್ರಕಾಶ ಹಾಗೂ ಓ.ಎಲ್‌. ನಾಗಭೂಷಣಸ್ವಾಮಿಯವರು ಮಾಡಿದ ವಚನಗಳ ಅನುವಾದಗಳು ವಿಶಿಷ್ಟವಾದ ಮಾರ್ಗವನ್ನೇ ಸೃಷ್ಟಿಸಿವೆ. ನಂತರ ಆರ್‌.ವಿ.ಎಸ್‌ ಸುಂದರಮ್‌ ಹಾಗೂ ದೇವೇನ್‌ ಎಂ. ಪಟೇಲ್‌ ಅವರುಗಳ ಕವಿರಾಜಮಾರ್ಗದ ಅನುವಾದ, ವನಮಾಲಾ ವಿಶ್ವನಾಥ ಅವರ ಹರಿಶ್ಚಂದ್ರ ಕಾವ್ಯದ ಅನುವಾದ ನಮಗೆ ಸ್ಫೂರ್ತಿ ನೀಡುವ ಪ್ರಯತ್ನಗಳಾಗಿವೆ. ವನಮಾಲಾ ಅವರಂತೂ ಭಾಷಾಂತರದ ಪ್ರಮಾಣಗಳ ಮಟ್ಟವನ್ನು ಮೇಲಕ್ಕೇರಿಸಿದ್ದಾರೆ.

ಎಚ್‌.ಎಸ್‌. ಶಿವಪ್ರಕಾಶ ಮತ್ತು ಕೆ.ಎಸ್‌. ರಾಧಾಕೃಷ್ಣ ಅವರ ‘ಎಸ್ಟ್ರಿಂಗ್‌ ಆಫ್‌ ಪರ್ಲ್ಸ್‌’ (1990) ಪಂಪನಿಂದ ಹಿಡಿದು 20ನೇ ಶತಮಾನದವರೆಗಿನ ಆಯ್ದ ಕನ್ನಡ ಕಾವ್ಯದ ಅನುವಾದ ಸಂಗ್ರಹವಾಗಿದೆ. ಟಿ.ಆರ್‌.ಎಸ್‌.ಶರ್ಮಾ ಅವರು ಸಂಪಾದಿಸಿದ ‘ಎನ್ಷಿಯಂಟ್‌ ಇಂಡಿಯನ್‌ ಲಿಟರೇಚರ್ಸ್‌’ನ (2000) ಮೂರನೇ ಸಂಪುಟವನ್ನೊಳಗೊಂಡಂತೆ, ಸಿ.ಎನ್‌.ರಾಮಚಂದ್ರನ್‌ ಸಂಪಾದಿಸಿದ ಕನ್ನಡ ಮಹಾಕಾವ್ಯಗಳ ಆಯ್ದ ಭಾಗಗಳ ಅನುವಾದವಾದ ‘ಸ್ಟ್ರಿಂಗ್ಸ್‌ ಆ್ಯಂಡ್‌ ಸಿಂಬಲ್ಸ್‌’ (2007) ಮತ್ತು ರಾಮಚಂದ್ರನ್‌ ಅವರು ವಿವೇಕ ರೈ ಅವರ ಜೊತೆಗೂಡಿ ಅನುವಾದಿಸಿ, ಸಂಪಾದಿಸಿದ ‘ಕ್ಲಾಸಿಕಲ್‌ ಕನ್ನಡ ಪೊಯಿಟ್ರಿ ಆ್ಯಂಡ್‌ ಪ್ರೋಸ್‌: ಎ ರೀಡರ್‌’ (2015) ಕೃತಿಗಳು ಹಳಗನ್ನಡ ಸಾಹಿತ್ಯದ ವಿವಿಧ ಘಟ್ಟಗಳನ್ನು ಪರಿಚಯಿಸುವ ಪ್ರಾತಿನಿಧಿಕ ಪಠ್ಯಗಳ ಅನುವಾದಗಳನ್ನು ಒಳಗೊಂಡಿವೆ. ಇದೇ ಜಾಯಮಾನಕ್ಕೆ ಸೇರುವ ರವಿಚಂದ್ರ ಪಿ. ಚಿಟ್ಟಂಪಳ್ಳಿ ಹಾಗೂ ಎಂ.ಜಿ. ಹೆಗಡೆ ಅವರು ಅನುವಾದಿಸಿ, ಸಂಪಾದಿಸಿದ ಪ್ರಸ್ತುತ ಸಂಕಲನವು ರಾಮಚಂದ್ರನ್‌ ಮತ್ತು ರೈ ಅವರ ಕೆಲಸದ ಮುಂದುವರೆದ ಭಾಗವಾಗಿದೆ.



ಪು: 255 ₹450

ಕನ್ನಡ ಲಿಟರೇಚರ್ – ಎ ರೀಡರ್

ಲೇ: ರವಿಚಂದ್ರ ಪಿ. ಚಿಟ್ಟಂಪಳ್ಳಿ, ಎಂ.ಜಿ. ಹೆಗಡೆ

ಪ್ರ: ಸಾಹಿತ್ಯ ಅಕಾಡೆಮಿ, ಸೆಂಟರ್‌ ಫಾರ್‌ ಟ್ರಾನ್ಸ್‌ಲೇಷನ್‌, ಬೆಂಗಳೂರು.

ಮಧ್ಯಯುಗದ ಕನ್ನಡ ಸಾಹಿತ್ಯವೆಂದು ವಿಂಗಡಿಸಬಹುದಾದ, 11ನೆಯ ಶತಮಾನದಿಂದ 19ನೆಯ ಶತಮಾನದವರೆಗಿನ ಕೆಲವು ಪ್ರಾತಿನಿಧಿಕ ಪಠ್ಯಗಳನ್ನು ರವಿಚಂದ್ರ ಮತ್ತು ಹೆಗಡೆಯವರು ಜಾಗರೂಕತೆಯಿಂದ ಅನುವಾದಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ತಮ್ಮ ಅನುವಾದ ಯೋಜನೆಯನ್ನು ನಾಲ್ಕು ಸಂಪ್ರದಾಯಗಳಲ್ಲಿ ವಿಂಗಡಿಸುತ್ತ -ವಚನ ಪರಂಪರೆ (ವಚನ ಟ್ರೆಡಿಶನ್‌), ನಿರೂಪಣಾ ಪರಂಪರೆ (ನರೇಟಿವ್‌ ಟ್ರೆಡಿಶನ್‌), ಭಾವಗೀತೆಯ ಪರಂಪರೆ (ಲಿರಿಕಲ್‌ ಟ್ರೆಡಿಶನ್‌) ಹಾಗೂ ಪ್ರದರ್ಶನಕಲೆಗಳ ಪರಂಪರೆ (ಟ್ರೆಡಿಶನ್‌ ಆಫ್‌ ಪರ್ಫಾಮನ್ಸ್‌)- ಪ್ರತೀ ಪರಂಪರೆಗೆ ಪರಿಚಯಾತ್ಮಕ ಟಿಪ್ಪಣಿಯನ್ನು ಒದಗಿಸಿದ್ದಾರೆ. ಸಂಕ್ಷಿಪ್ತವಾದ ಪೀಠಿಕೆ ಹಾಗೂ ಪರಾಮರ್ಶನ ಗ್ರಂಥಗಳ ಪಟ್ಟಿಯನ್ನೊಳಗೊಂಡು, ಇಲ್ಲಿ ಮೂರು ಅನುಬಂಧಗಳಿವೆ: ಎರಡನೆಯ ಸಹಸ್ರಮಾನದ ಕನ್ನಡ ಜಗದ್ವಲಯದ ಪರಿಚಯ, ನಡುಗನ್ನಡ ಕುರಿತು ಟಿಪ್ಪಣಿ ಹಾಗೂ ಆಕರ ಗ್ರಂಥಗಳ ಮಾಹಿತಿ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅಂಗೀಕೃತಗೊಂಡ ಕೃತಿಗಳನ್ನು ಗಮನದಲ್ಲಿ ಇಟ್ಟುಕೊಂಡ ಅನುವಾದಕರು ಅಂಚಿನಲ್ಲಿರುವ ಕೆಲವು ಪಠ್ಯಗಳನ್ನೂ ತಮ್ಮ ಯೋಜನೆಗೆ ಆಯ್ಕೆ ಮಾಡಿಕೊಂಡಿದ್ದಾರೆ. ಈ ದೆಸೆಯಿಂದ ಅವರು ಯಕ್ಷಗಾನ-ತಾಳಮದ್ದಲೆ, ಮಲೆಮಹದೇಶ್ವರ ಕಾವ್ಯ, ಮಿತ್ರಾವಿಂದ ಗೋವಿಂದ, ಶ್ರೀಕೃಷ್ಣ ಪಾರಿಜಾತ ಹಾಗೂ ಸಂಗ್ಯಾ-ಬಾಳ್ಯಾದಂತಹ ಪ್ರದರ್ಶನ ಕಲೆಗಳ ಪಠ್ಯಗಳನ್ನು ಇಲ್ಲಿ ಅನುವಾದಿಸಿದ್ದಾರೆ. ಆಯ್ದ ವಚನಗಳಿಂದ ಪ್ರಾರಂಭವಾಗಿ, ಗಿರಿಜಾ ಕಲ್ಯಾಣ, ಹರಿಶ್ಚಂದ್ರ ಕಾವ್ಯ, ಕುಮಾರವ್ಯಾಸ ಭಾರತ, ಬತ್ತಲೇಶ್ವರ ರಾಮಾಯಣ ಇತ್ಯಾದಿ ಪಠ್ಯಗಳ ತುಣುಕುಗಳು ಸೇರಿದಂತೆ, ದಾಸ ಸಾಹಿತ್ಯ, ನಾಥ ಪರಂಪರೆ ಹಾಗೂ ಶಿಶುನಾಳ ಶರೀಫರ ಆಯ್ದ ಪಠ್ಯಗಳೆಲ್ಲವೂ ನಡುಗನ್ನಡ ಸಾಹಿತ್ಯದ ಚರಿತ್ರೆಯನ್ನು ಕಟ್ಟಿಕೊಡುತ್ತವೆ.

ಒಳನೋಟ

ಸ್ವತಃ ಇಂಗ್ಲಿಷ್‌ ಭಾಷೆಯಲ್ಲಿ ಕವಿತೆಗಳನ್ನು ರಚಿಸುವ ರವಿಚಂದ್ರ ಮತ್ತು ಇಂಗ್ಲಿಷ್‌, ಕನ್ನಡ ಸಾಹಿತ್ಯದ ಪರಿಚಯವಿರುವ ಎಂ.ಜಿ. ಹೆಗಡೆ, ಇವರಿಬ್ಬರ ಮೇಳದಿಂದ ಅನುವಾದಗಳು ಸೃಜನಾತ್ಮಕವಾಗಿ ಮೂಡಿಬಂದಿವೆ. ಹೆಚ್ಚಿನ ಅನುವಾದಗಳಲ್ಲಿ ಕನ್ನಡತನವು ಇಂಗ್ಲಿಷ್‌ ನುಡಿಯಲ್ಲಿ ಸಹಜವಾಗಿ ಮೂಡಿಬಂದು, ಅವು ಓದುಗರಿಗೆ ನಾವೀನ್ಯ, ವೈವಿಧ್ಯ ಹಾಗೂ ಜೀವಂತಿಕೆಯ ಅನುಭವವನ್ನು ಕೊಡುತ್ತವೆ. ಕನ್ನಡೇತರ ಓದುಗರಿಗೆ ಮಧ್ಯಗನ್ನಡ ಸಾಹಿತ್ಯದ ಹೊಳಹುಗಳನ್ನು ಇವು ಸಮರ್ಥವಾಗಿಯೇ ತೆರೆದಿಡುತ್ತವೆ. ಆದರೆ ಒಂದಲ್ಲಾ ಒಂದು ರೀತಿಯಲ್ಲಿ ಕಳೆದುಕೊಳ್ಳುವುದು, ಪಡೆದುಕೊಳ್ಳುವುದು ಅನುವಾದದ ಪ್ರಕ್ರಿಯೆಯಲ್ಲಿ ಇದ್ದೇ ಇದೆ. ಇಲ್ಲಿ ಕೆಲವು ಕಡೆ ಇಂಗ್ಲಿಷ್‌ ನುಡಿಗಟ್ಟುಗಳು ಸೋತಿರಬಹುದು, ಓದುಗರಿಗೆ ಅಸ್ಪಷ್ಟತೆ ಕಾಡಬಹುದು. ಅದೆಲ್ಲವೂ ಅನಿವಾರ್ಯ.

ಇಂತಹ ಯೋಜನೆಗಳಲ್ಲಿ ಆಧುನಿಕಪೂರ್ವ ಭಾಷೆ ಮತ್ತು ಸಂವೇದನೆಗಳನ್ನು ಆಧುನಿಕ ಮನಸ್ಸುಗಳಿಗೆ ಉಣಬಡಿಸುವುದು ಸವಾಲಿನ ಕೆಲಸವೇ ಸರಿ. ಕೇವಲ ಭಾಷಾ ಸಾಮರ್ಥ್ಯ ಮತ್ತು ಸಾಹಿತ್ಯ ಪಠ್ಯಗಳ ಪರಿಚಯದಿಂದ ನಡೆಯಬಹುದಾದ ವ್ಯಾಪಾರ ಇದಲ್ಲ. ಹೆಚ್ಚಿನ ಬೌದ್ಧಿಕ ಪರಿಶ್ರಮ ಬೇಡುವ ಇಂತಹ ಸಂಕಲನ ಮಾಡುವ ಕೆಲಸ, ಆ ಪರಂಪರೆಯೊಂದಿಗೆ ನಿರಂತರವಾಗಿ ತೊಡಗುವಿಕೆಯನ್ನು ಬಯಸುತ್ತದೆ. ಈ ನಿಟ್ಟಿನಲ್ಲಿ ವೆಲಚೇರು ನಾರಾಯಣ ರಾವ್‌ ಹಾಗೂ ಡೇವಿಡ್‌ ಶುಲ್‌ಮನ್‌ ಅವರು ಅನುವಾದಿಸಿ, ಸಂಪಾದಿಸಿದ ಕ್ಲಾಸಿಕಲ್‌ ತೆಲುಗು ಪೊಯೆಟ್ರಿ (2002) ನೆನಪಾಗುತ್ತದೆ. ಓದುಗರನ್ನೇ ರೂಪಾಂತರಿಸುವ ಶಕ್ತಿ ಹೊಂದಿರುವ ಈ ಅನುವಾದ ಎಲ್ಲ ದೃಷ್ಟಿಕೋನದಿಂದ ಅನುಕರಣೀಯ.

ಆಧುನಿಕ ಪೂರ್ವ ಭಾರತೀಯ ಸಾಹಿತ್ಯ, ಸಂಸ್ಕೃತಿ ಕುರಿತು ವಿದ್ವಾಂಸರ ಕುತೂಹಲ ಹೆಚ್ಚಾಗುತ್ತಿರುವ ಈ ಕಾಲದಲ್ಲಿ, ಪ್ರಸ್ತುತ ಸಂಕಲನವು ಸಂಶೋಧಕರಿಗೆ ಆಕರ ಗ್ರಂಥವಾಗಲಿದೆ. ಮಾನವಿಕ ಜ್ಞಾನಶಿಸ್ತುಗಳ ಪಠ್ಯಕ್ರಮಗಳಲ್ಲಿ ಇದನ್ನು ಅಳವಡಿಸಿಕೊಳ್ಳಲು ಯೋಗ್ಯವಾಗಿದೆ. ಅನುವಾದ ಕ್ಷೇತ್ರದಲ್ಲಿ ಪರಿಶ್ರಮ ಪಡುವವರು ಈ ಸಂಕಲನದಿಂದ ಹೆಚ್ಚಿನದನ್ನು ಕಲಿಯಬಹುದು. ಕನ್ನಡ ಓದುಗರು ಸಹ ತಮ್ಮ ಭಾಷೆಯ ಪಠ್ಯಗಳು ಇಂಗ್ಲಿಷ್‌ ಭಾಷೆಯಲ್ಲಿ ಯಾವ ಅನುಭವ ಕೊಡುತ್ತವೆ ಎಂಬ ಕುತೂಹಲದಿಂದ ಈ ಪುಸ್ತಕವನ್ನು ಓದಬಹುದು.

ಮುಖ್ಯವಾದ ಮಾತೆಂದರೆ, ಭಾರತೀಯ ಭಾಷೆಗಳಿಂದ ಇಂಗ್ಲಿಷ್‌ಗೆ ಆಗುವ ಅನುವಾದಗಳು ವಿರಳವಾಗಿರುವಾಗ ಕೇಂದ್ರ ಸಾಹಿತ್ಯ ಅಕಾಡೆಮಿಯ ಬೆಂಗಳೂರು ಕೇಂದ್ರ ಇಂತಹ ಕಾರ್ಯಗಳಿಗೆ ಸಾಂಸ್ಥಿಕ ಪ್ರೋತ್ಸಾಹ ನೀಡುತ್ತಿರುವುದು ಅಭಿನಂದನೀಯ. ಹೀಗೆಯೇ ರವಿಚಂದ್ರ ಹಾಗೂ ಹೆಗಡೆಯವರ ಈ ಪ್ರಯತ್ನ ಕನ್ನಡದಲ್ಲಿ ಮುಂದುವರೆಯಲಿ, ಕನ್ನಡ ಇನ್ನಷ್ಟು ವಿಶ್ವಾತ್ಮಕಗೊಳ್ಳಲಿ ಎಂಬುದಷ್ಟೆ ಹಾರೈಕೆ. ❖

ನೀತಿಬೋಧೆಯ ಐದು ಶತಕಗಳು

ಮೊದಲ ಓದು

ಭರ್ತೃಹರಿಯ ‘ನೀತಿಶತಕ’ದಿಂದ ಸ್ಫೂರ್ತಿ ಪಡೆದ ಹಿರಿಯ ವಿದ್ವಾಂಸ ಎಂ.ವಿ. ನಾಡಕರ್ಣಿ ಅವರು ಸಂಸ್ಕೃತದಲ್ಲಿ ರಚಿಸಿದ ಐದು ಶತಕಗಳ ಕನ್ನಡ ಅನುವಾದ ಮತ್ತು ಟಿಪ್ಪಣಿಗಳ ಗುಚ್ಛವೇ ‘ಸಾಮಾಜಿಕನೀತಿ ಕಾವ್ಯಗುಚ್ಛಃ’. ಲೇಖಕರೇ ತಿಳಿಸಿರುವಂತೆ ಇದು ಎರಡು ದಶಕಗಳ ತಪಸ್ಸಿನ ಫಲ. ಇಲ್ಲಿನ ಪ್ರತಿಯೊಂದು ಕೃತಿಯೂ ಸಾಮಾಜಿಕ ನೀತಿತತ್ತ್ವವನ್ನು ಪರಿಚಯಿಸುತ್ತದೆ. ಮಾನವ ಸಂಘಜೀವಿ. ಸಮಾಜದೊಂದಿಗೇ ಅವನ ಬದುಕು ಸಾಗಬೇಕು. ಹೀಗೆ ಸಮಾಜದೊಂದಿಗೆ ಬಾಳುವಾಗ ಅವನ ವ್ಯಕ್ತಿತ್ವ ಹೇಗಿರಬೇಕು, ಎಂತಹ ನೀತಿತತ್ತ್ವಗಳನ್ನು ಅಳವಡಿಸಿಕೊಳ್ಳಬೇಕು, ಹೊಣೆಗಾರಿಕೆಗಳನ್ನು ಹೇಗೆ ನಿಭಾಯಿಸಬೇಕು ಎನ್ನುವುದನ್ನು ಇಲ್ಲಿನ ಶತಕಗಳು ಸೊಗಸಾಗಿ ಕಟ್ಟಿಕೊಡುತ್ತವೆ.

ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ, ಐಸೆಕ್‌ನ ಸಂದರ್ಶಕ ಪ್ರಾಧ್ಯಾಪಕರೂ ಆದ ನಾಡಕರ್ಣಿ ಅವರು ಈ ಶತಕಗಳನ್ನು ರಚಿಸಿದ್ದು ಸಂಸ್ಕೃತದಲ್ಲಾದರೂ ಆಧುನಿಕ, ವೈಚಾರಿಕ ದೃಷ್ಟಿಕೋನದ ವಿಷಯಗಳನ್ನೇ ಅವುಗಳು ತುಂಬಿಕೊಂಡಿವೆ. ಶಾರದಾ ದಶಕದಿಂದ ಈ ಗ್ರಂಥ, ನೀತಿ ತತ್ತ್ವಗಳಿಗೆ ನಾಂದಿ ಹಾಡುತ್ತದೆ. ಸತ್ಯ, ಅಸತ್ಯಗಳ ನಡುವಿನ ಭೇದವನ್ನು ಅರಿಯಲು ಸಾಮರ್ಥ್ಯ ನೀಡುವಂತೆ ಶಾರದಾ ಮಾತೆಯನ್ನು ಈ ದಶಕ ಪ್ರಾರ್ಥಿಸುತ್ತದೆ.



ಪು: 174 ₹170

ಸಾಮಾಜಿಕನೀತಿ ಕಾವ್ಯಗುಚ್ಛಃ

ಲೇ: ಎಂ.ವಿ. ನಾಡಕರ್ಣಿ

ಪ್ರ: ಮನೋಹರ ಗ್ರಂಥಮಾಲಾ

ಸಂ: 9845447002

ಪರಿಸರನೀತಿ ಶತಕಮ್‌, ಗಾಂಧಿತತ್ತ್ವ ಶತಕಮ್‌, ಸನಾತನಧರ್ಮತತ್ತ್ವ ಶತಕಮ್‌, ಮಾನವಧರ್ಮ ಶತಕಮ್‌, ಪ್ರಜಾಪ್ರಭುತ್ವ ಶತಕಮ್‌ –ಶೀರ್ಷಿಕೆಗಳ ಹೆಸರೇ ಸೂಚಿಸುವಂತೆ ಒಂದೊಂದು ಅಧ್ಯಾಯವೂ ಒಂದೊಂದು ಮಹತ್ವದ ನೀತಿ ಕುರಿತಂತೆ ಮಾತನಾಡುತ್ತದೆ. ಮಾನವಧರ್ಮದ ಕುರಿತು ಇದುವರೆಗೆ ವ್ಯಕ್ತವಾದ ಚಿಂತನೆಗಳ ಸಾರವೇ ಇಲ್ಲಿನ ಪುಟ್ಟ ಶತಕಗಳಲ್ಲಿ ಹರಳುಗಟ್ಟಿದೆ. ಪ್ರಜಾಪ್ರಭುತ್ವದ ಕುರಿತ ಸಂಸ್ಕೃತ ಕೃತಿಗಳು ಓದಲು ಮಜವೆನಿಸಿದರೂ ಅವುಗಳು ಬಿಟ್ಟುಕೊಡುವ ನೀತಿ ಮಾತ್ರ ಅಗಾಧವಾದುದು. ಉದಾಹರಣೆಗೆ: ‘ಪ್ರಜಾರಾಜ್ಯೇನ ನ ಮಂತವ್ಯಂ ಕ್ಷೋಭೋ ವಾ ರಾಜಹೀನತಾ/ ಶಾಸನಂ ರಚಿತಂ ಲೋಕೈಃ ಲೋಕೈಃ ಏವ ಪ್ರತೀಕ್ಷಿತಮ್‌’ (ಪ್ರಜಾರಾಜ್ಯವೆಂದರೆ ಕ್ಷೋಭೆ ಅಥವಾ ಅರಾಜಕತೆಯೆಂದು ತಿಳಿಯಬಾರದು. ಕಾನೂನುಗಳು ಜನರಿಂದಲೇ ರಚಿತವಾದವು. ಅವರಿಂದಲೇ ಗೌರವಿಸಲ್ಪಡುತ್ತವೆ).

ಗಾಂಧಿತತ್ತ್ವಗಳು ಹಿಂದೆಂದಿಗಿಂತ ಈಗ ಹೇಗೆ ಪ್ರಸ್ತುತ ಎನ್ನುವುದನ್ನು ಇಲ್ಲಿನ ಕೃತಿಗಳು ಮನಮುಟ್ಟುವಂತೆ ಅರಹುತ್ತವೆ. ಒಂದು ಕೃತಿ ಹೀಗಿದೆ: ‘ಗ್ರಾಮೋದ್ಯೋಗಾಃ ಹಿ ಕುರ್ವಂತಿ ಗ್ರಾಮರಾಜ್ಯಂ ಪ್ರಭಾಯುತಮ್‌/ ನಿರರ್ಥಕಂ ಪ್ರಜಾತಂತ್ರಂ ವಿಕೇಂದ್ರೀಕರಣಂ ವಿನಾ’ (ಗ್ರಾಮೋದ್ಯೋಗಗಳೇ ಗ್ರಾಮರಾಜ್ಯವನ್ನು ಪ್ರಭಾವಿಯನ್ನಾಗಿ ಮಾಡುತ್ತವೆ. ಇಂತಹ ಆರ್ಥಿಕ ಅಥವಾ ಔದ್ಯೋಗಿಕ ವಿಕೇಂದ್ರೀಕರಣ ಇಲ್ಲದಿದ್ದರೆ ಪ್ರಜಾತಂತ್ರವು ನಿರರ್ಥಕವಾಗುತ್ತದೆ). ಇಂತಹ ಪ್ರಗತಿಪರ ವಿಚಾರಗಳನ್ನು ಮಂಡಿಸಲು ಲೇಖಕರು ಹಳೆಯ ಭಾಷೆ ಎನಿಸಿದ ಸಂಸ್ಕೃತವನ್ನು ಮಾಧ್ಯಮವನ್ನಾಗಿ ಮಾಡಿಕೊಂಡಿರುವುದು ವಿಶಿಷ್ಟವಾಗಿದೆ. ಗ್ರಂಥದಲ್ಲಿ ವ್ಯಕ್ತವಾದ ಪರಿಸರದ ಕಾಳಜಿ ಕೂಡ ಅಷ್ಟೇ ಅನನ್ಯವಾಗಿದೆ. ❖

‘ಕಾಯ’ದ ಸುತ್ತ ಹೆಪ್ಪುಗಟ್ಟಿದ ಛಿದ್ರಲೋಕ

ಪದ್ಮನಾಭ ಭಟ್‌

ತಮ್ಮ ಮೊದಲ ಕಾದಂಬರಿ ‘ಬಿಳಿಯ ಚಾದರ’ದಲ್ಲಿಯೇ ಕನ್ನಡ ಸಾಹಿತ್ಯಲೋಕಕ್ಕೆ ಹೊಸ ಸಂವೇದನೆಯನ್ನು ಪರಿಚಯಿಸಿದವರು ಗುರುಪ್ರಸಾದ ಕಾಗಿನೆಲೆ. ಆ ಸಂವೇದನೆಯನ್ನು ಮುಂದಿನ ಕೃತಿಗಳಲ್ಲಿ ಹಿಗ್ಗಿಸುತ್ತಲೇ ಬಂದಿದ್ದಾರೆ. ಅವರ ನಾಲ್ಕನೇ ಕಾದಂಬರಿ ‘ಕಾಯಾ’ ಕೂಡ ಬೆರಗುಗೊಳಿಸುವ ಹೊಸ ಜಗತ್ತನ್ನು ನಮ್ಮ ಮುಂದಿಡುತ್ತದೆ. ಹೊಸ ಜೀವನಕ್ರಮವನ್ನು ಕಟ್ಟಿಕೊಡುತ್ತದೆ.

ಈ ಕಾದಂಬರಿಯ ಎಲ್ಲ ಪಾತ್ರಗಳೂ ತಮ್ಮ ‘ಭಾರತೀಯ ಮೂಲದ ಭೂತ’ದಿಂದ ತಪ್ಪಿಸಿಕೊಂಡಿರುವುದು ಗಮನಾರ್ಹವಾದ ಅಂಶ. ಮುಖ್ಯಪಾತ್ರಗಳಾದ ಕಸ್ತೂರಿ ಮತ್ತು ಮಲೀಕರ ಹಿನ್ನೆಲೆಯ ಉಲ್ಲೇಖವಾದರೂ ಅದು ಅವರನ್ನು ನಿಯಂತ್ರಿಸುವಷ್ಟು ಪ್ರಭಾವಿಯಾಗಿಲ್ಲ. ಜೀವನಕ್ರಮದಲ್ಲಿಯೂ ಜೀವನದೃಷ್ಟಿಯಲ್ಲಿಯೂ ಅವರು ಅಲ್ಲಿಯವರೇ. ಇದು ಅನಿವಾಸಿ ಭಾರತೀಯರ ಸಾಹಿತ್ಯ ಹೊಸ ಘಟ್ಟ ಏರಿರುವುದರ ಸೂಚನೆಯೂ ಇರಬಹುದು.

ಈ ಕಾದಂಬರಿಯ ವಸ್ತು ಕನ್ನಡಕ್ಕೆ ತುಂಬ ಹೊಸದು. ಆದರೆ ಹೊಸದೇನನ್ನೋ ಹೇಳುತ್ತಿದ್ದೇನೆ, ಅರ್ಥ ಮಾಡಿಸುತ್ತಿದ್ದೇನೆ ಎಂಬ ಹಮ್ಮು ಲೇಖಕರಿಗಿಲ್ಲ. ತನ್ನಷ್ಟೇ ತನ್ನ ಓದುಗನಿಗೂ ತಿಳಿದಿದೆ ಎಂಬ ನಂಬಿಕೆಯಲ್ಲಿಯೇ ಅವರು ಬರೆಯುತ್ತಾರೆ.

ಇದು ಸ್ವಕೇಂದ್ರಿತ ಮನುಷ್ಯರ ಛಿದ್ರಲೋಕ. ಕಾಯಿಲೆ ವಾಸಿ ಮಾಡುವುದನ್ನು ಯಾರು ಬೇಕಾದರೂ ಮಾಡುತ್ತಾರೆ, ಆದರೆ ಸುಂದರಿಯನ್ನು ಅಪ್ರತಿಮ ಸುಂದರಿಯನ್ನಾಗಿಸುವುದು ಸವಾಲು; ಅದು ಹಣ ಮಾಡುವ ದಾರಿಯೂ ಹೌದು ಎನ್ನುವ ಮಲೀಕ ಒಂದೆಡೆ, ಅಜ್ಞಾತಲೋಕಕ್ಕೆ ಬಂದು ತನ್ನ ಸುಂದರ ಕನಸುಗಳನ್ನೆಲ್ಲ ಸುಟ್ಟುಕೊಂಡು ಏಡ್ಸ್‌ ಹತ್ತಿಸಿಕೊಳ್ಳುವ, ಕೊನೆಗೆ ಅದನ್ನೇ ತನ್ನ ಉನ್ನತಿಯ ಮೆಟ್ಟಿಲಾಗಿಸಿಕೊಳ್ಳುವ ಕಸ್ತೂರಿ ಇನ್ನೊಂದೆಡೆ. ಇವರ ನಡುವೆ ಏಡ್ಸ್‌ ಇಲ್ಲದಿದ್ದರೂ ಅದರ ನೆರಳಲ್ಲಿ ನರಕದ ಬದುಕು ಅನುಭವಿಸುತ್ತಿರುವ ಸಮಾಂತ ಇದ್ದಾಳೆ, ಪರಮಸುಂದರಿ ಪರಿ ಇದ್ದಾಳೆ, ಪರದೆಯ ಹಿಂದಿದ್ದುಕೊಂಡೇ ಎಲ್ಲವನ್ನೂ ನಿಯಂತ್ರಿಸುವ ಲೀಸಾ ಇದ್ದಾಳೆ. ಈ ಎಲ್ಲ ಪಾತ್ರಗಳ ಛಿದ್ರ ಮಾನಸಿಕ ಸ್ಥಿತಿಯ ರೂಪಕದ ಹಾಗೆ, ತನ್ನನ್ನು ತಾನೇ ಇರಿದುಕೊಳ್ಳುವ ಹನಿ ಮಠದ ಇದ್ದಾಳೆ. ಇವರ ಮೂಲಕವೇ ಒಂದೆಡೆ, ಕಾಯಕೇಂದ್ರಿತ ಭೌತಿಕ ಜಗತ್ತೂ ಇನ್ನೊಂದೆಡೆ ಸಂಕೀರ್ಣವಾದ ಮನುಷ್ಯ ಸಂಬಂಧಗಳ ಮಾನಸಿಕ ಜಗತ್ತೂ ಅನಾವರಣಗೊಳ್ಳುತ್ತ ಹೋಗುತ್ತವೆ. ಎರಡು ಕಾಲಘಟ್ಟದ ಕಥನಗಳನ್ನು ಸಮಾನಾಂತರವಾಗಿ ಬೆಳೆಸಿಕೊಂಡು ಹೋಗಿರುವ ನಿರೂಪಣಾ ತಂತ್ರವೂ ಪರಿಣಾಮಕಾರಿಯಾಗಿದೆ. ಪ್ಲಾಸ್ಟಿಕ್‌ ಸರ್ಜನ್‌ ಮಲೀಕ್‌ ತನ್ನ ಹೆಂಡತಿಯ ಚಹರೆಗಳನ್ನು ಸಮಾಂತಳಲ್ಲಿ ಕೆತ್ತುತ್ತ ಹೋಗುವುದು ಧ್ವನಿಪೂರ್ಣವಾಗಿದೆ.

ಈ ಕಾದಂಬರಿಯ ಒಂದು ಅಧ್ಯಾಯದ ಹೆಸರು ‘ಮೀ ಟೂ’. ಆ ಅಧ್ಯಾಯದ ಒಳಗಾಗಲಿ, ಪಾತ್ರಗಳ ಸಂಭಾಷಣೆಯಲ್ಲಾಗಲಿ ‘ಮೀ ಟೂ’ ಒಂದು ‘ಇಶ್ಯೂ’ ಆಗಿ ಬೆಳೆಯುವುದೇ ಇಲ್ಲ. ಲೀಸಾ ಎಂಬ ಅಜ್ಞಾತ ಹೆಣ್ಣು, ಮಲೀಕ ತನಗೆ ಚಿಕಿತ್ಸೆ ನೀಡಿದ ನಂತರ ತನ್ನ ಸ್ತನವನ್ನು ಅಸಭ್ಯವಾಗಿ ಮುಟ್ಟಿದ್ದಾನೆಂದು ಕೇಸು ಹಾಕುತ್ತಾಳೆ. ರಾಜಿಗಾಗಿ ದೊಡ್ಡ ಮೊತ್ತದ ಹಣದ ಬೇಡಿಕೆಯನ್ನೂ ಇಡುತ್ತಾಳೆ. ಇಡೀ ಕಾದಂಬರಿಯುದ್ದಕ್ಕೂ ಪ್ರವಹಿಸುವ ಈ ಹಣಕ್ಕಾಗಿ ಹೂಡಿದ ಕೇಸಿನ ವಿವರಗಳ ಅಧ್ಯಾಯಕ್ಕೆ ‘ಮೀ ಟೂ’ ಎಂದು ಹೆಸರಿಟ್ಟಿರುವುದು ಆ ಚಳವಳಿಯ ಅಪವ್ಯಾಖ್ಯಾನವಾಗಿಯೇ ಕಾಣಿಸುತ್ತದೆ. ಕಾದಂಬರಿಯಲ್ಲಿ ‘ಮೀ ಟೂ’ ಒಂದು ಇಶ್ಯೂ ಆಗಿ ಬೆಳೆದಿದ್ದರೆ, ಅದರ ದುರುಪಯೋಗವನ್ನೂ ತುಂಬ ಸಮರ್ಥವಾಗಿ ಹೇಳಲು ಸಾಧ್ಯವಿತ್ತು; ಕಾಯವನ್ನೇ ಕೇಂದ್ರವಸ್ತುವಾಗಿಟ್ಟುಕೊಂಡಿದ್ದ ಈ ಕೃತಿಗೆ ಬೇರೆಯದೇ ಆಯಾಮ ಸಿಗುವ ಸಾಧ್ಯತೆಯೂ ಇತ್ತು. ಆದರೆ ಅದರಲ್ಲಿ ಕಾದಂಬರಿಕಾರನಿಗೆ ಅಷ್ಟಾಗಿ ಆಸಕ್ತಿ ಇದ್ದಂತಿಲ್ಲ. ಅಲ್ಲದೆ ಕೊನೆಯ ಭಾಗದಲ್ಲಿ ಸಮಾಂತ ಹೇಳುವ ‘ಅಮ್ಮ, ಇದು ಮೀ ಟೂ ಯುಗ. ಆತನಂಥವರಿಗೆ ಶಿಕ್ಷೆಯಾದರೆ ಜಗತ್ತಿನ ಗಂಡಸರಿಗೆಲ್ಲ ಬುದ್ಧಿ ಬರುತ್ತದೆ’ ಎಂಬ ಮಾತೂ ಆ ಪಾತ್ರದ ಬಾಯಿಯಲ್ಲಿ ಸಹಜ ಮಾತಾಗಿ ಕೇಳಿಸುವುದಿಲ್ಲ; ಆಡಿಸಿದ ಮಾತಾಗಿ ಕೇಳಿಸುತ್ತದೆ.

ವಿಮರ್ಶೆ



ಪು: 344 ₹350

ಕಾಯಾ

ಲೇ: ಗುರುಪ್ರಸಾದ ಕಾಗಿನೆಲೆ

ಪ್ರ: ಅಂಕಿತ ಪ್ರಕಾಶನ

ವೆಬ್‌ಸೈಟ್‌: www.ankitapustaka.com

ಇನ್ನೊಂದು ಮುಖ್ಯ ಪಾತ್ರ ಕಸ್ತೂರಿ. ಬಹುಸಂಕಷ್ಟಗಳನ್ನು ಹಾದು, ಮೈಯಲ್ಲಿ ಏಡ್ಸನ್ನೂ ಮಡಿಲಲ್ಲಿ ಮಗಳನ್ನೂ ಇಟ್ಟುಕೊಂಡು ತನ್ನ ಬದುಕಿನ ದಾರಿಯನ್ನು ಕಟ್ಟಿಕೊಳ್ಳುವ ಹೆಣ್ಣು. ಆರಂಭದಲ್ಲಿಯೂ ಕೊನೆಯಲ್ಲಿಯೂ ಆಕೆಯ ಸಂಕಟ, ತಲ್ಲಣಗಳ ಒಳಜಗತ್ತು ಪರಿಣಾಮಕಾರಿಯಾಗಿ ಮೂಡಿಬಂದಿದೆ. ಆದರೆ ‘ಎಚ್‌ಐವಿ ಕಸ್ತೂರಿ’ಯಾಗಿ ಬೆಳೆಯುವುದನ್ನು ವಿವರಿಸುವ ‘ಕಾಯಾ ರಾಜಕಾರಣ’ ಎಂಬ ಹೆಸರಿನ ಎರಡು ಅಧ್ಯಾಯಗಳಲ್ಲಿ ಅವಳ ಅಂತರಂಗದ ಬದುಕು ಸಂಪೂರ್ಣ ಮಾಯವಾಗಿದೆ. ಬದಲಿಗೆ ಕಸ್ತೂರಿ ಎಂಬ ಪಾತ್ರ ಲೇಖಕರ ಕಣ್ಣ ಇಶಾರೆಯಂತೆ ನಡೆಯುವ ಕ್ಯಾರಿಕೇಚರ್‌ ಆಗಿಬಿಡುತ್ತದೆ. ಹಾಗಾಗಿಯೇ ಆ ಭಾಗದಲ್ಲಿ ಪಾತ್ರ ನಿಧಾನಕ್ಕೆ ಹಿಂದಕ್ಕೆ ಹೋಗಿ ಲೇಖಕ ಮುಂದಕ್ಕೆ ಬಂದಂತೆ ತೋರುತ್ತದೆ. ಇದರಿಂದಾಗಿ ಕಸ್ತೂರಿಯ ಪಾತ್ರವೂ ಕಾದಂಬರಿಯ ಅನುಭವಜಗತ್ತೂ ಕುಸಿದಿದೆ.

ಇನ್ನೊಂದು ಗಮನಾರ್ಹ ವಿಷಯ, ಈ ಕಾದಂಬರಿಯ ಮುಖ್ಯ ಹೆಣ್ಣುಪಾತ್ರಗಳೆಲ್ಲವೂ ಅವಲಂಬಿತರು ಇಲ್ಲವೇ ಅವಕಾಶವಾದಿಗಳು; ಕೆಲವೊಮ್ಮೆ ಎರಡೂ! ಹೊರಗಿನಿಂದ ಆಧುನಿಕ, ಸ್ವತಂತ್ರ ಮನಃಸ್ಥಿತಿಯ ವೇಷ ತೊಟ್ಟು ಹಣಕ್ಕಾಗಿ, ಯಶಸ್ಸಿಗಾಗಿ ಪುರುಷನನ್ನು ಯಾವುದೇ ಸಿಗ್ಗಿಲ್ಲದೆ ಬಳಸಿಕೊಳ್ಳುವವರು. ಮಲೀಕ ಕೊಡುವ ಜೀವನಾಂಶದಲ್ಲಿ ಪರಿ, ಎಡ್ವರ್ಡ್‌ ಎಂಬ ಬಡ ಪ್ರೊಫೆಸರ್‌ ಜೊತೆಗಿರುತ್ತಾಳೆ. ಎಡ್ವರ್ಡ್‌ನಿಗೊಬ್ಬಳು ಹ್ಯಾನಾ ಎಂಬ ಹೆಂಡತಿಯಿದ್ದಾಳೆ. ಅವಳಿಗೂ ಪರಿ, ಮಲೀಕನಿಂದ ತೆಗೆದುಕೊಳ್ಳುತ್ತಿರುವ ಜೀವನಾಂಶದ ಮೇಲೆ ಕಣ್ಣಿದೆ. ಇತ್ತ, ಸಮಾಂತ ಕೂಡ ಮೊದಲು ಅಮ್ಮನ ದುಡ್ಡಿನಲ್ಲಿ ನಂತರ ಮಲೀಕನ ಹಣದಲ್ಲಿ ಬದುಕು ಉಡಾಯಿಸುತ್ತಿರುವವಳು. ಕೊನೆಯಲ್ಲಿ ತೋಟ ತೆಗೆದುಕೊಳ್ಳಲು ಮುಂಗಡ ಹಣಕ್ಕಾಗಿ ಮಲೀಕನ ಬಳಿ ಹಣ ಕೇಳಿದಾಗ ಕಸ್ತೂರಿಗೆ ತನ್ನ ಮಗಳ ಬಗ್ಗೆ ಹೆಮ್ಮೆಯಾಗುತ್ತದೆ! ಕಸ್ತೂರಿಯೂ ತನ್ನನ್ನು ಸಿಕ್ಕಾಗೆಲ್ಲ ‘ಮುಟ್ಟುವ’ ಹಾಕಿನ್ಸ್‌ ಜೊತೆಗೇ ಬದುಕುತ್ತಾಳೆ. ಯಾಕೆ ಬದುಕುತ್ತಾಳೆ ಎಂದು ಕೇಳಿದರೆ ಅವಳ ಉತ್ತರ ‘ಅವನು ಗಂಡಸು’ ಎಂದು! ವ್ಯಕ್ತಿ ಸ್ವಾತಂತ್ರ್ಯ ಮತ್ತು ಸ್ವಾವಲಂಬಿ ಬದುಕನ್ನೇ ಸಾಮಾಜಿಕ ವ್ಯವಸ್ಥೆಯ ಗುರುತಾಗಿಸಿಕೊಂಡಿರುವ ಅಮೆರಿಕದಲ್ಲಿನ ಈ ಹೆಣ್ಣುಪಾತ್ರಗಳ ವರ್ತನೆ ಸೋಜಿಗ ಹುಟ್ಟಿಸುತ್ತದೆ.

ಕಾದಂಬರಿಯ ಮುಕ್ತಾಯ ತುಂಬ ಚೇತೋಹಾರಿಯೂ ಆಶಾದಾಯಕವೂ ಆಗಿದೆ. ಬದುಕಿಗೊಂದು ಗುರಿಯೇ ಇಲ್ಲದಂತಿದ್ದ ಸಮಾಂತ ಕೃಷಿ ಮಾಡಲು ತೊಡಗುತ್ತಾಳೆ. ಮಲೀಕ ತನ್ನ ಸೌಂದರ್ಯವರ್ಧನೆಯ ಕೆಲಸ ಬಿಟ್ಟು ಮದುಮಗಳ ಬೆರಳನ್ನು ಜೋಡಿಸುವ ಕೆಲಸದಲ್ಲಿ ತೊಡಗುತ್ತಾನೆ. ನಿಜದ ಅರ್ಥದಲ್ಲಿ ಡಾಕ್ಟರನಾಗುತ್ತಾನೆ. ಈ ಎರಡೂ ಪಾತ್ರಗಳು ತಮ್ಮ ನೆಮ್ಮದಿಯನ್ನು ಕಂಡುಕೊಳ್ಳುವುದು ನಿಸರ್ಗದ ಸನ್ನಿಧಾನದಲ್ಲಿ ಎನ್ನುವುದು ಧ್ವನಿಪೂರ್ಣವಾಗಿದೆ. ಕೊನೆಗೂ ಮನುಷ್ಯನ ಎಲ್ಲ ಗಾಯಗಳಿಗೆ ಮುಲಾಮು ಇರುವುದಿದ್ದರೆ, ಅವನ ವಿನಾಶವನ್ನು ತಡೆಯುವ ಶಕ್ತಿ ಯಾರಿಗಾದರೂ ಇದ್ದರೆ ಅದು ಪ್ರಕೃತಿಗೇ ಎಂಬುದನ್ನು ಸೂಚಿಸುವ ಈ ಮುಕ್ತಾಯ ‘ಕಾಯಾ’ಕ್ಕೊಂದು ಮಮತೆಯ ಮಾಯಕವನ್ನು ಕಲ್ಪಿಸುವಂತಿದೆ. ❖

ಅಂಬೇಡ್ಕರ್‌ ಅಂತರಂಗದ ಸ್ವಗತ

ಸಂವಿಧಾನ ರಚನೆಯ ಜವಾಬ್ದಾರಿ ನಿಭಾಯಿಸಿದ ಬಳಿಕ ಡಾ.ಬಿ.ಆರ್‌. ಅಂಬೇಡ್ಕರ್‌ ಅವರ ಅಂತರಂಗವನ್ನು ತೆರೆದಿಡುವ ಪ್ರಯತ್ನವೇ ‘ಅವಿತಿಟ್ಟ ಅಂಬೇಡ್ಕರ್‌’ ನಾಟಕ.

ಇದುವರೆಗೆ ಓದಿದ, ಕೇಳಿದ ಅಂಬೇಡ್ಕರ್‌ ಬದುಕಿನ ಆಚೆಗಿನ ಅಂತರಂಗದ ಸ್ವಗತ ಮೊನಚು ಮಾತಿನಲ್ಲಿ ವ್ಯಕ್ತವಾಗಿದೆ. ಸಂವಿಧಾನ ರಚನಾಸಭೆಯ ಉಪಾಧ್ಯಕ್ಷ ಟಿ.ಟಿ. ಕೃಷ್ಣಮಾಚಾರಿ ಅವರು ಅಂಬೇಡ್ಕರ್‌ ಅವರನ್ನು ಶ್ಲಾಘಿಸುವ ಮಾತಿನ ಹಿಂದಿದ್ದ ವ್ಯಂಗ್ಯ, ಕಾಂಗ್ರೆಸ್‌ ಸದಸ್ಯ ಅಶ್ರತ್‌ ಮೊಹಾನಿ, ಮಹಾವೀರ್‌ ತ್ಯಾಗಿ ಅವರ ವ್ಯಂಗ್ಯದ ಮಾತುಗಳು ಅಂಬೇಡ್ಕರ್‌ ಅವರನ್ನು ಅವಮಾನಿಸಿದ ಘಟನೆಗಳನ್ನೇ ಆಧಾರವಾಗಿಟ್ಟುಕೊಂಡು ನಾಟಕ ಬೆಳೆಯುತ್ತದೆ. ಈ ಘಟನೆಗಳ ಆಧಾರ ಗ್ರಂಥಗಳನ್ನೂ ಉಲ್ಲೇಖಿಸಲಾಗಿದೆ.

ಮೊದಲ ದೃಶ್ಯದಲ್ಲಿ ಶೇಷ ಹೆಸರಿನ ಪಾತ್ರದ ಸಂಭಾಷಣೆ ನಾಟಕದ ಸಾರ ತೆರೆದಿಟ್ಟಿದೆ. ‘ನಾವೀಗ ಕಳ್ಳರನ್ನು ಹಿಡಿಯಬೇಕಿಲ್ಲ. ಬಾಬಾ ಸಾಹೇಬರ ನಿಜವನ್ನು ಹುಡುಕಬೇಕು. ಹಾಗೇ ಮಾಡ್ತಾ ನಾವೇ ಕಳ್ಳರು, ಕ್ರಿಮಿನಲ್‌ಗಳು ಅನಿಸಿದರೆ ನಮಗೆ ಶಿಕ್ಷೆ ಕೊಡಬಾರದು’.

‘ನೀವು ಸೋತು ಹೋಗಿದ್ದೀರಿ ಎಂಬ ಚಿಂತೆ ಬೇಡ. ನಾವಿದ್ದೇವಲ್ಲ... ನಿಮ್ಮ ಆರೋಗ್ಯ ಕ್ಷೀಣಿಸುತ್ತಿದೆ. ಕಾಳಜಿ ಮಾಡಿ. ಜೀವನದ ಕೊನೆಯವರೆಗೂ ನಮ್ಮ ಜನಾಂಗದ ನಾಯಕನಾಗಿರುತ್ತೇನೆ. ಪ್ರತೀ ಚುನಾವಣೆಯನ್ನೂ ಗೆಲ್ಲುತ್ತೇನೆ’ ಎಂದು ನಾರಾಯಣ ಸಡೋಬ ಕಜ್ರೋಲ್ಕರ್‌ ಅವರನ್ನು ಪ್ರತಿನಿಧಿಸುವ ಪಾತ್ರವೊಂದು ಅಂಬೇಡ್ಕರ್‌ ಅವರನ್ನು ಅಣಕಿಸುತ್ತದೆ.



ಪು: 108 ₹120

ಅವಿತಿಟ್ಟ ಅಂಬೇಡ್ಕರ್‌

(ಸಂಶೋಧಿತ ನಾಟಕ)

ಲೇ: ಡಾ.ಸುಧಾಕರ ಹೊಸಳ್ಳಿ, ಪ್ರವೀಣ್‌ ಕುಮಾರ್‌ ಮಾವಿನಕಾಡು

ಪ್ರ: ಜ್ಞಾನಾಕ್ಷಿ ಪ್ರಕಾಶನ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ ಬೆಂಗಳೂರು

ಸಂ: 9845031335

‘ಅಸ್ಪೃಶ್ಯ ಎಂಬ ಶಬ್ದ ಬಳಸಿದರೆ ನನಗೆ ಸಕ್ಕರೆಯೂ ಸಿಹಿಯಾಗುವುದಿಲ್ಲ...’ ಎನ್ನುವಲ್ಲಿ ಅಗಾಧ ಅಸಹನೆ ವ್ಯಕ್ತವಾಗಿದೆ. ಕಾಂಗ್ರೆಸ್‌ನ ಕಪಿಮುಷ್ಟಿ, ಗಾಂಧಿ ಹೆಸರಿನ ದುರುಪಯೋಗ, ಮುಸ್ಲಿಮರ ಪ್ರತಿಕ್ರಿಯೆ, ದತ್ತೋಪಂಥ ಠೇಂಗಡಿ ಅವರೊಂದಿಗಿನ ಆತ್ಮೀಯ ಒಡನಾಟ, ದೇಶ ವಿಭಜನೆ ಸಂದರ್ಭದ ಪ್ರತಿಕ್ರಿಯೆಗಳನ್ನು ಈ ಪುಟ್ಟ ಕೃತಿಯಲ್ಲಿ 8 ಪಾತ್ರಗಳು ಹತ್ತು ದೃಶ್ಯಗಳಲ್ಲಿ ವಿವರವಾಗಿ ಕಟ್ಟಿಕೊಟ್ಟಿವೆ. ❖

ಫಾತಿಮಾ ರಲಿಯಾ

ಬರೆದ ಕಥೆ

ಬೇಲಿಯಾಚೆಗೂ ಬೆಳೆದ ನೆರಳು

ಶ್ರೀಧರನ ಅಮ್ಮ ಸಾವಿತ್ರಮ್ಮ ಮತ್ತು ಪಾತುಞಿಯದು ಗಳಸ್ಯ ಕಂಠಸ್ಯ ಸ್ನೇಹ. ಸಾವಿತ್ರಮ್ಮ ಈ ಮನೆಗೆ ಮದುವೆಯಾಗಿ ಬರುವಾಗಲೇ ಪಾತುಞಿ ಆ ಮನೆಯಲ್ಲಿದ್ದರು. ಅತ್ತೆಯ ಜೋರು, ಗಂಡನ ದರ್ಪ, ತೋಟ, ಆಳುಕಾಳು, ಸದಾ ನೆಂಟರಿಂದ ಗಿಜಿಗುಡುವ ಮನೆ ಎಲ್ಲದರಿಂದ ದೂರ ಹೋಗಿಬಿಡಬೇಕು ಅಂತ ಸಾವಿತ್ರಮ್ಮನಿಗೆ ಅನ್ನಿಸುವಾಗೆಲ್ಲಾ ನೆನಪಾಗುತ್ತಿದ್ದುದೇ ತನ್ನ ಮನೆಯಿಂದ ನಾಲ್ಕು ಗಾವುದ ದೂರದಲ್ಲಿರುವ ಪಾತುಞಿ. ವಿಧವೆ ಪಾತುಞಿಗೂ ಮಗಳು ಜೈನಬಾಳನ್ನು ಬಿಟ್ಟರೆ ಸಾವಿತ್ರಮ್ಮನೇ ಆಪ್ತಸಖಿ. ಅತ್ತೆಯ ಕಣ್ಣುತಪ್ಪಿಸಿ ಇಬ್ಬರೂ ಮುಸ್ಸಂಜೆ ಹೊತ್ತು ಕಷ್ಟ ಸುಖ ಮಾತಾಡಿಕೊಳ್ಳುತ್ತಿದ್ದರೆ ಸೂರ್ಯನೂ ನಿಧಾನವಾಗಿ ಕಂತುತ್ತಿದ್ದಾನೇನೋ ಅನ್ನಿಸುತ್ತಿತ್ತು. ಪಾತುಞಿಗೆ ರಂಗೋಲಿ ಹಾಕಲು ಕಲಿಸಿದ್ದು ಸಾವಿತ್ರಮ್ಮನೇ. ಶ್ರೀಧರ ಮತ್ತು ಜೈನಬಾಳೂ ಒಟ್ಟಿಗೆ ಆಡಿ ಬೆಳೆದವರು.

ಮುಂದೆ?

ಪೂರ್ಣ ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್‌ ಕೋಡ್‌ ಸ್ಕ್ಯಾನ್‌ ಮಾಡಿ.

https://www.prajavani.net/short-story

ಕವನ

ಮಮತಾ

ಬರೆದ ಕವನ

ಕಾರ್ಯಕಾರಣ ಸಂಬಂಧ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್‌ ಕೋಡ್‌ ಸ್ಕ್ಯಾನ್‌ ಮಾಡಿ.

https://www.prajavani.net/poetry

ಸಂಗೀತದ ಸೀಮೋಲ್ಲಂಘನ

10ನೇ ಪುಟದಿಂದ...

ಮೊದಲ ಬಾರಿಗೆ ವಿದೇಶದಲ್ಲಿ ಕಾರ್ಯಕ್ರಮ ನೀಡಲು ತಮ್ಮ ತಂಡದೊಂದಿಗೆ ಪ್ರವಾಸ ಮಾಡಿದ ಭಾರತೀಯ ಕಲಾಕಾರರೆಂದರೆ ಉದಯ್‌ ಶಂಕರ್‌ ಅವರ ನೃತ್ಯ ತಂಡದವರು. ಈ ತಂಡದೊಂದಿಗೆ ಆಗ ಬಾಲಕರಾಗಿದ್ದ ರವಿಶಂಕರ್‌ ಅವರ ವಿದೇಶ ಪ್ರವಾಸ ಆರಂಭವಾಗಿತ್ತು. ಮುಂದೆ 1960ರ ಸುಮಾರಿಗೆ ಅಮೆರಿಕದಲ್ಲಿ ಮುಖ್ಯವಾಹಿನಿಯಿಂದ ಬೇರೆಯಾಗಿ ನಿಂತು ಬದಲಾವಣೆಯ ಗಾಳಿ ಬೀಸಿದ ಹಿಪ್ಪಿ ಜನರೊಂದಿಗೆ ಗುರುತಿಸಿಕೊಂಡ ಇವರ ವಾದನ ಅತ್ಯಂತ ವೇಗವಾಗಿ ಎಲ್ಲರ ಗಮನ ಸೆಳೆಯಿತು.

ಆದರೆ ಇಲ್ಲಿ ನುಡಿಸುವುದರಿಂದ ಆಗುವ ಕೆಟ್ಟ ಪರಿಣಾಮಗಳನ್ನು ಅರಿತ ರವಿಶಂಕರ್‌ ಅವರು ಜಾರ್ಜ್‌ ಹಾರಿಸನ್‌ ಅವರ ಬೀಟಲ್ಸ್‌ ತಂಡವನ್ನು ಸೇರಿ ಅತ್ಯಂತ ಸಂವೇದನಾಶೀಲವಾದ (ಸೆನ್ಸೇಷನಲ್‌) ಸಂಗೀತದ ಆಲ್ಬಮ್‌ ಅನ್ನು 1967ರಲ್ಲಿ ಹೊರತಂದರು. ಇದರಿಂದ ರವಿಶಂಕರ್‌ ಅವರ ಖ್ಯಾತಿ ಎಷ್ಟು ಹೆಚ್ಚಿತೆಂದರೆ ಅಮೆರಿಕದ ಪ್ರಸಿದ್ಧ ಸಂಗೀತಗಾರರು ಕೂಡಾ ಇವರ ಬಳಿ ಭಾರತೀಯ ಸಂಗೀತದ ಗುಟ್ಟನ್ನು ತಿಳಿಯಲು ಸಂಗೀತ ಪಾಠಕ್ಕಾಗಿ ಬರಲಾರಂಭಿಸಿದರು.

ಮುಂದೆ ರವಿಶಂಕರ್‌ ತಮ್ಮ ಸಂಗೀತದೊಂದಿಗೆ ಮಾಡಿದ್ದು ಒಂದು ಪವಾಡ. ರವಿಶಂಕರ್‌ ಅವರ ಗುರುಗಳಾದ, ಮೈಹರ್‌ ಘರಾಣಾದ ಶ್ರೇಷ್ಠ ಗುರುಗಳಾದ ಅಲ್ಲಾವುದ್ದೀನ್‌ ಖಾನರು ಹಲವು ಬಗೆಯ ವಾದ್ಯಗಳನ್ನು ನುಡಿಸಬಲ್ಲವರೂ, ಪಾಶ್ಚಾತ್ಯ ಸಂಗೀತವನ್ನೂ ಬಹುಮಟ್ಟಿಗೆ ಅರಿತವರಾಗಿದ್ದರು. ಇವರ ಮಗ, ಸರೋದ್‌ ವಾದಕ ಅಲಿ ಅಕ್ಬರ್‌ ಖಾನರು ಸರೋದ್‌ ವಾದನದಲ್ಲಿ ದೊಡ್ಡ ಹೆಸರು ಮಾಡಿದವರು. ತಮ್ಮ ಗುರುಬಂಧು ರವಿಶಂಕರ್‌ ಅವರು ವಿದೇಶಿ ಪ್ರಯಾಣ ಆರಂಭಿಸಿದ ಕಾಲದಲ್ಲೇ ತಾವೂ ಅಮೆರಿಕದಲ್ಲಿ ಕಾರ್ಯಕ್ರಮ ನೀಡಲಾರಂಭಿಸಿದರು.

ಅಲಿ ಅಕ್ಬರ್‌ ಖಾನರಿಗೆ ಪ್ರಸಿದ್ಧ ಸಂಗೀತಗಾರರಾದ ಯಹೂದಿ ಮೆನುಹಿನ್‌ ಅವರ ಪರಿಚಯವಾಗಿ ಈ ಪ್ರವಾಸದಲ್ಲಿ ಭಾರತೀಯ ಸಂಗೀತದ ಬಗ್ಗೆ ಪಾಶ್ಚಾತ್ಯರಿಗಿರುವ ಆಸಕ್ತಿ, ಅವರ ಕಲಿಯುವ ಹಂಬಲದ ಅರಿವಾಯಿತು. ಭಾರತಕ್ಕೆ ಹಿಂತಿರುಗಿದ ನಂತರ 1956ರಲ್ಲಿ ಕಲ್ಕತ್ತಾದಲ್ಲಿ ಮೊದಲಬಾರಿಗೆ ಸಂಗೀತ ಕಾಲೇಜೊಂದನ್ನು ಖಾನರು ನಿರ್ಮಿಸಿದರು. ಆದರೆ ದುರ್ದೈವವಶಾತ್‌ 1960ರಲ್ಲಿ ಈ ಕಾಲೇಜನ್ನು ಮುಚ್ಚಬೇಕಾಯಿತು. 1965-66ರಲ್ಲಿ ಅಲಿ ಅಕ್ಬರ್‌ ಖಾನರು ಮತ್ತೆ ‘ಅಮೆರಿಕನ್‌ ಸೊಸೈಟಿ ಫಾರ್‌ ಈಸ್ಟರ್ನ್‌ ಆರ್ಟ್ಸ್‌’ನಲ್ಲಿ ಸಂಗೀತ ಪಾಠ ಮಾಡಲು ಕ್ಯಾಲಿಫೋರ್ನಿಯಾದ ಬರ್ಕ್ಲಿಗೆ ಬಂದು, ಮುಂದೆ ಇದೇ ಸಂಸ್ಥೆಯ ನೆರವಿನೊಂದಿಗೆ ಅವರು 1967ರಲ್ಲಿ ಬರ್ಕ್ಲಿಯಲ್ಲಿ ‘ಅಲಿ ಅಕ್ಬರ್‌ ಖಾನ್‌ ಕಾಲೇಜ್‌ ಆಫ್‌ ಮ್ಯೂಸಿಕ್‌’ನ್ನು ಸ್ಥಾಪಿಸಿದರು. ನಂತರದಲ್ಲಿ ಈ ಕಾಲೇಜು, ಸನ್‌ ರಾಫೆಲ್‌ಗೆ ವರ್ಗಾವಣೆಗೊಂಡಿತು.

ಕಲೆ: ಬಿ.ಎಸ್‌.ದೇಸಾಯಿ

ಖಾನ್‌ ಅವರು ಸ್ಥಾಪಿಸಿದ ಈ ಸಂಗೀತ ಕಾಲೇಜು ಅಮೆರಿಕದಲ್ಲಿ ನೆಲೆಯಾಗಿರುವ ಭಾರತೀಯ ಸಂಗೀತದ ಅತಿ ಪ್ರಮುಖ ಕೇಂದ್ರ. ಇದುವರೆಗೆ 10 ಸಾವಿರಕ್ಕೂ ಹೆಚ್ಚಿನ ಪಾಶ್ಚಿಮಾತ್ಯ ಮತ್ತು ಅಲ್ಲಿ ನೆಲೆಯಾಗಿರುವ ಭಾರತೀಯ ವಿದ್ಯಾರ್ಥಿಗಳು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ಪ್ರಸ್ತುತ ಈ ಕಾಲೇಜಿನ ಮುಖ್ಯಸ್ಥರಾಗಿ ಸುವಿಖ್ಯಾತ ತಬಲಾ ವಾದಕ ಸ್ವಪನ್‌ ಚೌಧುರಿ ಅವರು ಕಾರ್ಯ ನಿರ್ವಹಿಸುತ್ತಾ ಇದ್ದಾರೆ. 1985ರಲ್ಲಿ ಸ್ವಿಟ್ಜರ್ಲೆಂಡ್‌ನಲ್ಲಿ ಆರಂಭವಾದ ಈ ಕಾಲೇಜಿನ ಶಾಖೆಯಲ್ಲಿ ಪ್ರಸ್ತುತ ಅಲಿ ಅಕ್ಬರ್‌ ಖಾನರ ಶಿಷ್ಯರಾದ ಕೆನ್‌ ಝುಕರ್ಮನ್‌ ಅವರು ಮುಖ್ಯಸ್ಥರಾಗಿದ್ದಾರೆ. ಇದೇ ಕಾಲಘಟ್ಟದಲ್ಲಿ 1963ರಲ್ಲಿ ಕರ್ನಾಟಕಿ ಸಂಗೀತದ ಧ್ರುವತಾರೆ ಎಂ.ಎಸ್‌.ಸುಬ್ಬುಲಕ್ಷ್ಮಿ ಅವರು ಎಡಿನ್‌ಬರ್ಗ್‌ ಸಂಗೀತೋತ್ಸವದಲ್ಲಿ ಹಾಡಿ, ಜನಮೆಚ್ಚುಗೆ ಗಳಿಸಿದ್ದರು.

ಎಂ.ಎಸ್‌. ಅವರಂತೆ ಭಾರತೀಯ ಸಂಗೀತದ ಅನೇಕ ದಿಗ್ಗಜ ಕಲಾವಿದರಾದ ನಿಖಿಲ್‌ ಬಾನರ್ಜಿ, ಹರಿಪ್ರಸಾದ್‌ ಚೌರಾಸಿಯಾ, ಶಿವಕುಮಾರ್‌ ಶರ್ಮಾ, ಘಟಂ ಕಲಾವಿದ ವಿಕ್ಕು ವಿನಾಯಕರಾಮ್‌, ಎಲ್‌.ಸುಬ್ರಹ್ಮಣ್ಯಂ ಇವರೆಲ್ಲರೊಂದಿಗೆ ಆರಂಭವಾದ ವಿದೇಶದ ನಂಟು ಇನ್ನೂ ಗಾಢವಾಗೇ ಮುಂದುವರಿಯುತ್ತಾ ಬಂದಿದೆ.

ಅದೇ ರೀತಿ ರವಿಶಂಕರ್‌ ಅವರ ತಬಲಾ ಜೊತೆಗಾರರಾದ ಅಲ್ಲಾರಖಾರವರು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ನುಡಿಸಿ, ತಮ್ಮ ವಾದನದಿಂದ ಬಹುದೊಡ್ಡ ಸಂಖ್ಯೆಯಲ್ಲಿ ಪಾಶ್ಚಿಮಾತ್ಯರನ್ನು ಭಾರತೀಯ ಸಂಗೀತದೆಡೆಗೆ ಸೆಳೆದವರು. ಮುಂದೆ ರವಿಶಂಕರ್‌, ಅಲಿ ಅಕ್ಬರ್‌ ಖಾನ್‌ ಹಾಗೂ ಅಲ್ಲಾರಖಾರ ಸುಪುತ್ರ ತಬಲಾ ಮಾಂತ್ರಿಕ ಝಾಕಿರ್‌ ಹುಸೇನ್‌ ಇವರುಗಳು ಅಮೆರಿಕದಲ್ಲೇ ನೆಲೆಯಾದರು. ಹಾಗೆಯೇ ಕರ್ನಾಟಕಿ ಸಂಗೀತದ ಅಪರೂಪದ ವಯೋಲಿನ್‌ ವಾದಕರಾದ ಎಲ್‌.ಶಂಕರ್‌ ಅವರೂ ಅಮೆರಿಕದಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡರು.

ಈ ಕಲಾವಿದರು ವಿದೇಶಿಯರಿಗೆ ಭಾರತೀಯ ಸಂಗೀತದ ಸಾರವನ್ನು ಪರಿಚಯಿಸಿದರು, ತಾವೂ ಪಾಶ್ಚಾತ್ಯ ಸಂಗೀತ ಪದ್ಧತಿಯನ್ನು ಅರಿತರು, ಜೊತೆ ಸೇರಿ ಹಲವಾರು ಹೊಸ ಬಗೆಯ ಜಂಟಿ ಕಾರ್ಯಕ್ರಮಗಳನ್ನು, ಆರ್ಕೆಸ್ಟ್ರಾಗಳನ್ನು ರೂಪಿಸಿದರು. ಈ ಎಲ್ಲಾ ವಿನಿಮಯಗಳು ಹಲವು ರೀತಿಯಲ್ಲಿ ಭಾರತೀಯ ಸಂಗೀತಕ್ಕೆ ಲಾಭದಾಯಕವಾಯಿತು. ಸಂಗೀತವು ವಿಸ್ತಾರವನ್ನು ಪಡೆದುಕೊಂಡಿತು.

ಅಲಿ ಅಕ್ಬರ್‌ ಖಾನ್‌, ರವಿಶಂಕರ್‌ ಮುಂತಾದವರು ಪಶ್ಚಿಮ ದೇಶಗಳಲ್ಲಿ ಮಾಡಿದ ಕೆಲಸ, ನಿರ್ವಾತದಿಂದ ಆರಂಭವಾದದ್ದು. ಭಾರತೀಯ ಸಂಗೀತದ ಪರಂಪರೆ, ಇತಿಹಾಸ, ರಾಗ-ತಾಳಗಳ ವ್ಯವಸ್ಥೆ, ಇಲ್ಲಿನ ಶಿಕ್ಷಣ ಪದ್ಧತಿ, ಭಾಷೆ ಇವ್ಯಾವುದರ ಸುಳಿವೂ ಗೊತ್ತಿರದ ಹೊಸ ವಾತಾವರಣದಲ್ಲಿ ಅವರು ಭಾರತೀಯ ಸಂಗೀತದ ಪರಿಚಯ ಮಾಡಿಸಿದರು. ಮಾತ್ರವಲ್ಲ, ಗಂಭೀರವಾದ ಅಭ್ಯಾಸಿಗಳ ಪರಂಪರೆಯೊಂದನ್ನು ಇಲ್ಲಿ ಸೃಷ್ಟಿಸಿದರು. ಭಾರತೀಯ ಸಂಗೀತಕ್ಕೆ ಒಂದು ಹೊಸ ಮಗ್ಗುಲನ್ನು ಕೊಟ್ಟರು ಮತ್ತು ಇದರಿಂದಾಗಿ ಸಂಗೀತ ಲೋಕದಲ್ಲಿ ಹೊಸ ಪರ್ವವೊಂದರ ಉದಯವಾಯಿತು. ❖

ಪದಯಾನದ ಪರಯಾನ



ಪದ್ಯಾಣ ಗಣಪತಿ ಭಟ್

ತೆಂಕುತಿಟ್ಟು ಯಕ್ಷಗಾನದ ಪ್ರಸಿದ್ಧ ಭಾಗವತ ಪದ್ಯಾಣ ಗಣಪತಿ ಭಟ್. 'ಪದ್ಯಾಣ' ಎನ್ನುವುದು ಮನೆತನ. ಯಾರದ್ದೇ ಪ್ರತಿಯಾಗದ ಹಾಡುಗಾರಿಕೆ. ಸ್ವಂತದ್ದಾದ 'ಪದ್ಯಾಣ ಶೈಲಿ'ಯ ರೂಪೀಕರಣ. ಯಕ್ಷಲೋಕದಲ್ಲಿ ಒಂಟಿಸಲಗದಂತೆ ಪಯಣ. ಯಕ್ಷರಂಗವೇ ಬೆರಗಾದ ಶಾರೀರ. ಸರ್ವಾದರಣೀಯ ಭಾಗವತ. ಈಚೆಗೆ ರಂಗದಿಂದ ನಿವೃತ್ತರಾಗಿದ್ದರು. ಪದ್ಯಾಣರ ಪದಯಾನವು ಅಕ್ಟೋಬರ್ 12ರಂದು ಮೌನವಾಯಿತು.

ನಾ. ಕಾರಂತ ಪೆರಾಜೆ

ನನಗೆ ಆಗಿನ್ನೂ ಯಕ್ಷಗಾನ ಅಂಟದ ದಿನಗಳು. ನನ್ನೂರು ಪೆರಾಜೆಯಲ್ಲಿ ಯಕ್ಷಗುರು ಪ್ರಕಾಶ್‌ಚಂದ್ರ ಬಾಯಾರು ಅವರಿಂದ ರೂಪುಗೊಂಡ ಯಕ್ಷಗಾನದ ತಂಡ ಸಕ್ರಿಯವಾಗಿತ್ತು. ಪ್ರದರ್ಶನ ನೀಡಲು 'ಸಣ್ಣ ಮೇಳ'ವೂ ಸಕ್ರಿಯವಾಗಿತ್ತು. ಆಗ ಭಾಗವತ ದಾಸರಬೈಲು ಚನಿಯ ನಾಯ್ಕರು ಭಾಗವತರಾಗಿದ್ದರು. ಸುಳ್ಯ-ಕಲ್ಮಡ್ಕ ಗೋಳ್ತಾಜೆಯ ಸ್ಫುರದ್ರೂಪಿ ಯುವಕ ಗಣಪತಿ ಭಟ್ಟರು ಮದ್ದಳೆ-ಚೆಂಡೆ ವಾದಕರಾಗಿದ್ದರು. ಸರಳ ಉಡುಗೆ. ಮುದುಡಿ ಮುದ್ದೆಯಾಗುವ ಸ್ವಭಾವ.

ಒಂದಷ್ಟು ಸಮಯದ ಬಳಿಕ ನನಗೆ ಯಕ್ಷಗಾನ ಅಂಟಿತು. ಮೇಳಗಳ ಆಟಗಳನ್ನು ನೋಡುವ ಪರಿಪಾಟ ರೂಢಿಸಿಕೊಂಡೆ. ಆ ಹೊತ್ತಲ್ಲಿ ಸುರತ್ಕಲ್ ಮೇಳವು ಮಂಗಳೂರಿನ ನೆಹರೂ ಮೈದಾನದಲ್ಲಿ ಟೆಂಟ್ ಊರಿತ್ತು. ಐದು ರೂಪಾಯಿಯ ಟಿಕೆಟ್ ತೆಗೆದು ಟೆಂಟಿನೊಳಗೆ ಪ್ರವೇಶಿಸುವಾಗ ರಂಗದ ಪಡಿಮಂಚದಲ್ಲಿ ಗಣಪತಿ ಭಟ್ಟರು ಭಾಗವತಿಕೆ ಮಾಡುತ್ತಿದ್ದರು. ಅವರ ಹಾಡನ್ನು ಕೇಳುತ್ತಾ ಬೆರಗಿನಲ್ಲೇ ಬೆಳಗು ಮಾಡಿದ್ದೆ. ಇವೆಲ್ಲಾ ನಾಲ್ಕು ದಶಕದ ಹಿಂದಿನ ದಿನಮಾನಗಳು.

ನಾನು ಕಂಡ ಆ ಯುವಕ ನೆಚ್ಚಿಕೊಂಡ ಆಸಕ್ತಿಯು ಮುಂದೆ ಮನೆತನವೊಂದಕ್ಕೆ ಪರ್ಯಾಯ ಹೆಸರಾಗಿ ರೂಪುಗೊಂಡ ಬಗೆ ಅನನ್ಯ. ಅಂದಿನ ಗಣಪತಿ ಭಟ್, ಮುಂದೆ ಪದ್ಯಾಣ ಗಣಪತಿ ಭಟ್ಟರಾದರು. ಯಕ್ಷಗಾನದ ಮೇರು ಭಾಗವತನಾಗಿ ರೂಪುಗೊಂಡರು. ಸ್ವ-ನಿರ್ಮಿತ ಗಟ್ಟಿ ಯಕ್ಷಧ್ವನಿಯಲ್ಲಿ ರಂಗವಲ್ಲದೆ ಪ್ರೇಕ್ಷಕರನ್ನು ಕೂಡಾ ತೆಕ್ಕೆಗೆ ಸೇರಿಸಿಕೊಳ್ಳುವಷ್ಟು ಗಾಢತೆಯಿತ್ತು. ಹಿರಿಯರೊಂದಿಗೆ ಪಳಗಿದ ಪ್ರತಿಭೆ. ಅಬ್ಬಾ.. ಅದೇನು ಸ್ವರ. ಯಕ್ಷರಾತ್ರಿಗಳ ಅಬ್ಬರಕ್ಕೆ ಸೊಗಸನ್ನು ತಂದರು. ಸ್ವರ ಮಾತ್ರದಿಂದಲೇ ಆ ರಾತ್ರಿಗಳ ಸೊಬಗಿಗೂ ಕಾರಣರಾದರು.



ಹಿರಿಯರ ಹಿಡಿತಕ್ಕೆ ಸಿಕ್ಕದ ಬಾಲ್ಯ. ಔದಾಸೀನ್ಯದ ಶಾಲಾ ಕಲಿಕೆ. ಮನೆಯವರಿಗಿಂತಲೂ ಆಪ್ತ-ಸ್ನೇಹಿತರತ್ತ ಚಿತ್ತ. ಇಡೀ ಗ್ರಾಮವೇ ಗುರುತು ಮಾಡುವಂತಹ ಚಾಲಾಕಿ. ಬಾಲ್ಯದ ಬದುಕಿನಲ್ಲಿ ಗುರುತು ಹಿಡಿದ ರೀತಿಯೇ ಬೇರೆ. ನಂತರ ನೋಡುವ ಮನಃಸ್ಥಿತಿಯೇ ಬೇರೆ. ಇದಕ್ಕೆ ಕಾರಣ, ಗುರು ಮಾಂಬಾಡಿ ನಾರಾಯಣ ಭಾಗವತರು. ಶ್ರೀ ಕ್ಷೇತ್ರ ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ಭಾಗವತಿಕೆಯನ್ನು ಕಲಿತರು. ಚೆಂಡೆ, ಮದ್ದಳೆಯ ಕಲಿಕೆಯನ್ನು ಆರ್ಜಿಸಿದರು. ಮುಂದೆ 'ಭಾಗವತ'ರಾದರು.

ಸುರತ್ಕಲ್, ಮಂಗಳಾದೇವಿ, ಕರ್ನಾಟಕ, ಎಡನೀರು, ಹೊಸನಗರ, ಹನುಮಗಿರಿ ಮೇಳಗಳಲ್ಲಿ ನಾಲ್ಕು ದಶಕಕ್ಕೂ ಮಿಕ್ಕಿದ ವ್ಯವಸಾಯ ಮಾಡಿದರು. ಅಗರಿ ಶ್ರೀನಿವಾಸ ಭಾಗವತ, ಅಗರಿ ರಘುರಾಮ ಭಾಗವತ, ಶೇಣಿ ಗೋಪಾಲಕೃಷ್ಣ ಭಟ್, ತೆಕ್ಕಟ್ಟೆ ಆನಂದ ಮಾಸ್ತರ್ ಮೊದಲಾದ ಹಿರಿಯರ ಸಂಸರ್ಗದಿಂದ ಪರಿಪಕ್ವಗೊಂಡ ಪದ್ಯಾಣರ ಶಾರೀರ ಯಕ್ಷಗಾನ ಕಂಡ ಅಪೂರ್ವ ಧ್ವನಿಯಾಗಿ ಹೊರಹೊಮ್ಮಿತು. ಯಾರದ್ದೇ ಅನುಕರಣೆಗೊಳ್ಳದ ಹಾಡುಗಾರಿಕೆ. ಗಣಪತಿ ಭಟ್ಟರು ಯಕ್ಷರಂಗದಲ್ಲಿ ಬೆಳೆಯುತ್ತಿದ್ದಂತೆ ಅವರನ್ನು ದೂರದಿಂದ ನೋಡಿ ವಿಸ್ಮಯಪಟ್ಟವರೆಷ್ಟೋ! ಒಂಟಿಸಲಗನಂತೆ ಸಾಗಿದರು. ಈ ಬೀಸು ನಡೆಯು ಪದ್ಯಾಣರನ್ನು ಭಾಗವತಿಕೆಯಲ್ಲಿ ಪಕ್ವನನ್ನಾಗಿ ಮಾಡಿತು.

ಪದ್ಯಾಣ ಮತ್ತು ಸುರತ್ಕಲ್ ಮೇಳ – ಎರಡನ್ನೂ ಬಿಡಿಬಿಡಿಯಾಗಿ ನೋಡುವಂತಿಲ್ಲ. ಅವೆರಡೂ ಮಿಳಿತವಾದ ಪದಗಳು. ರಾಜಾ ಯಯಾತಿ, ನಾಟ್ಯರಾಣಿ ಶಾಂತಲಾ, ಕಡುಗಲಿ ಕುಮಾರರಾಮ, ಸತಿ ಶೀಲವತಿ, ಪಾಪಣ್ಣ ವಿಜಯ.. ಮೊದಲಾದ ಭಾವಸ್ಪರ್ಶದ, ಮನಸ್ಪರ್ಶದ ಕಥಾನಕಗಳ ಯಶದ ಹಿಂದೆ ಪದ್ಯಾಣದ ಕಾಣದ ಜಾಣ್ಮೆಯಿದೆ. ಅಜ್ಞಾತ ಆಧುನಿಕ ಪ್ರಸಂಗಗಳಿಗೆ ಪೌರಾಣಿಕದ ಅಚ್ಚಿನಲ್ಲಿ ಹೊಸ ವಿನ್ಯಾಸ ನೀಡಿದ ಮೇಳದ ಎಲ್ಲಾ ಕಲಾವಿದರ ಶ್ರಮ. ಸುರತ್ಕಲ್ ಮೇಳ ಹೋದಲ್ಲೆಲ್ಲಾ ಟೆಂಟ್ ಭರ್ತಿ. ಕೋಶವೂ ಭರ್ತಿ. ಮುಗಿಬೀಳುವ ಪ್ರೇಕ್ಷಕರು.. ಇವೆಲ್ಲಾ ಈಗ ಇತಿಹಾಸ.

ಪದ್ಯಾಣರ ಹಾಡಿನೊಳಗೆ ಬರೇ ಸಾಹಿತ್ಯವಲ್ಲ. ಅದರೊಳಗಿದೆ - ಪ್ರಸಂಗ, ಪಾತ್ರ, ಪಾತ್ರದ ಮನಸ್ಸು, ಸಂದರ್ಭ. ಇದನ್ನು ಗ್ರಹಿಸಿ ಹಾಡುತ್ತಿದ್ದದ್ದು ಅವರ ವಿಶೇಷತೆ. ರಾಗಗಳ ಸಂಚಾರ, ಅದು ಉಂಟುಮಾಡುವ ಪರಿಣಾಮ, ಸಾಹಿತ್ಯ ಸ್ಪಷ್ಟತೆ, ಶಾರೀರದ ಮಾಧುರ್ಯ.. ಇವೆಲ್ಲಾ ಪ್ರೇಕ್ಷಕರನ್ನು ಹುಚ್ಚುಕಟ್ಟಿಸಿದವು. ಪದ್ಯಾಣರು ಮಾತ್ರ ಈ ಹುಚ್ಚಿನಿಂದ ದೂರವಿದ್ದರು. ಹಾಗಾಗಿ ನೋಡಿ ಪದ್ಯಾಣರು ಅಂದು, ಇಂದು, ಎಂದೆಂದೂ ಮಾನ್ಯರು, ಸರ್ವಾದರಣೀಯರು.

ಈಚೆಗೆ ವಿಧಿವಶರಾದ ಭಾಗವತ ಬೊಟ್ಟಿಕೆರೆ ಪುರುಷೋತ್ತಮ ಪೂಂಜರು ಪದ್ಯಾಣರು ಬಳಸುತ್ತಿದ್ದ ರಾಗಗಳ ಕುರಿತು ಗಮನಸೆಳೆದಿದ್ದರು: 'ಪೌರಾಣಿಕ ಅಲ್ಲದೆ ಸಾಮಾಜಿಕ, ತುಳು ಪ್ರಸಂಗಗಳಲ್ಲಿ ಕೆಲವು ಅಪೂರ್ವ ರಾಗಗಳನ್ನು ಯಕ್ಷಗಾನ ಶೈಲಿಯಲ್ಲಿ ಹಾಡಿ ಜನಪ್ರಿಯಗೊಳಿಸಿದ್ದಾರೆ. ಸರಸ್ವತೀ, ಸಿಂಹೇಂದ್ರ ಮಧ್ಯಮ, ಸಾರಮತಿ, ಅಮೃತವರ್ಷಿಣಿ, ರೀತಿಗೌಳ, ಬಹುಧಾರಿ, ವಾಸಂತಿ... ಮೊದಲಾದ ಯಕ್ಷಗಾನಕ್ಕೆ ಹೊಸತೆನಿಸಿದ ರಾಗಗಳನ್ನು ದಿವಂಗತ ದಾಮೋದರ ಮಂಡೆಚ್ಚರು ಬಳಸುತ್ತಿದ್ದರೂ, ಗಣಪಣ್ಣನವರು ತಮ್ಮದೇ ಆದ ಶೈಲಿಯಲ್ಲಿ ನಿರೂಪಿಸಿ ಆ ರಾಗಗಳನ್ನು ಜನಪ್ರಿಯಗೊಳಿಸಿದರು. ಹೊಸ ಪೀಳಿಗೆಯ ಭಾಗವತರು ಇಂಥ ಅಪೂರ್ವ ರಾಗಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ' ಎಂದಿದ್ದರು.

ಅವರಿಗೆ ಯಕ್ಷಗಾನ ವೃತ್ತಿಯಲ್ಲ, ಬದುಕು. ಈ ಬದುಕು ಹೊಟ್ಟೆಪಾಡಿನದ್ದಲ್ಲ. ಹಾಗೆಂತ ಅಲ್ವೋ....? ಹೌದು... ಯಕ್ಷಗಾನಕ್ಕೆ ಸಮರ್ಪಿತ ಬದುಕು. ಯಕ್ಷಗಾನವೇ ಸರ್ವಸ್ವ. ಇದರೊಳಗಿತ್ತು, ಸ್ವಂತಕ್ಕಿಂತ - ಆಸೆ, ನಿರೀಕ್ಷೆ, ಕುಟುಂಬ, ಹೆಂಡತಿ, ಮಕ್ಕಳು, ಬಂಧುಗಳು, ಪುರಸ್ಕಾರ, ರಾಜಕೀಯ, ಲೋಕಸುದ್ದಿಗಳು - ಹೊರತಾದ ತ್ಯಾಗ. ಉಣ್ಣಲು ಅನ್ನವಿತ್ತು. ಉಡಲು ವಸ್ತ್ರ, ಪವಡಿಸಲು ಸೂರಿತ್ತು. ಹರಟಲು ಸ್ನೇಹವಲಯವಿತ್ತು. ಆದರೆ 'ಮನುಷ್ಯತ್ವ'ಕ್ಕೆ ಏರಿಸಿದ ಕಲೆಗೆ ಅವರದು ಮೊದಲ ಮಣೆ, ಆರಾಧನೆ ಆಗಿತ್ತು.

ನಾಲ್ಕೈದು ವರ್ಷಗಳ ಹಿಂದೆ ಪದ್ಯಾಣರನ್ನು ಅವರ ಅಭಿನಂದನಾ ಗ್ರಂಥ 'ಪದಯಾನ'ಕ್ಕಾಗಿ ಮಾತನಾಡಿಸಿದ್ದೆ. ಯಕ್ಷಗಾನ ರಂಗ ಹೊರತುಪಡಿಸಿ ಮಿಕ್ಕ 'ಋಣಾತ್ಮಕ' ವಿಚಾರ, ಯೋಚನೆಗಳಿಗೆ ಅಷ್ಟೊಂದು ಮಹತ್ವ ಕೊಡದ ಪದ್ಯಾಣರ ಯಕ್ಷ ಯಾನದ ಸುತ್ತ 'ಸಮರ್ಪಿತ ಬದುಕು' ಒಂದು ಸುಳಿದಾಡುತ್ತಿತ್ತು. ಯಕ್ಷಗಾನಕ್ಕೆ ಸಂಪೂರ್ಣ ತೊಡಗಿಸಿದ್ದರಿಂದಲೇ ಪದ್ಯಾಣರು ಉನ್ನತ ಸ್ಥಾನವನ್ನು ಪಡೆಯುವಂತಾಯಿತು.

ಮಗುವಿನ ಸ್ವಭಾವದ ಮುಗ್ಧ. ಕೊಡುಗೈ ಮನಸ್ಸಿನ ಧಾರಾಳಿ. ಕಣ್ಣೀರಿಗೆ ಶರಣಾಗುವ ವ್ಯಕ್ತಿತ್ವ. ಸ್ವ-ನಿರ್ಮಿತ ಜೀವನ ಶೈಲಿ - ಇವೆಲ್ಲವೂ ಪದ್ಯಾಣರ ವೃತ್ತಿ ಬದುಕಿಗೆ ಶೋಭೆ ತಂದಿದ್ದವು. ಮಡದಿ ಶೀಲಾಶಂಕರಿ ಗಂಡನ ಏಳ್ಗೆಯ ಹಿಂದಿನ ತ್ಯಾಗಮಯಿ. ಮಕ್ಕಳಾದ ಸ್ವಸ್ತಿಕ್, ಕಾರ್ತಿಕೇಯ ಇಬ್ಬರೂ ಉದ್ಯೋಗಸ್ಥರು. ಅಪ್ಪನ ಭಾಗವತಿಕೆಯ ಅಭಿಮಾನಿಗಳು. ಇಡೀ ಪದ್ಯಾಣ ಕುಟುಂಬವು ಗಣಪತಿ ಭಟ್ಟರನ್ನು ಸದಾ ಅಭಿನಂದಿಸಿರುವುದು ಕಲೆಗೆ ಸಂದ ಮಾನ.

ಗಣಪತಿ ಭಟ್ಟರು 2021 ಅಕ್ಟೋಬರ್ 12ರಂದು ಮರಣಿಸುವಾಗ ಅವರಿಗೆ ಅರುವತ್ತಾರು ವರುಷ. ಅಲ್ಪಕಾಲಿಕ ಅನಾರೋಗ್ಯ ಬಾಧಿಸದೇ ಇರುತ್ತಿದ್ದರೆ ಇನ್ನೂ ಹತ್ತು ವರುಷ ಯಕ್ಷರಂಗದಲ್ಲಿ ಅವರನ್ನು ಕಾಣಬಹುದಾಗಿತ್ತು. 'ಬದುಕು ಸಾಕು ಅಂತ ಆಗಲಿಲ್ಲ. ಯಕ್ಷಗಾನದ ವ್ಯವಸಾಯ ಸಾಕು' ಎಂದು ನಾಲ್ಕೈದು ತಿಂಗಳ ಹಿಂದೆ ಹೇಳಿದ್ದ ಪದ್ಯಾಣರು, ಬದುಕನ್ನೇ ಮುಗಿಸಿ, ಕೀರ್ತಿಯನ್ನು ಬಿಟ್ಟು ಹೋದರು. ಆ ಕೀರ್ತಿಯನ್ನು ಗೌರವಿಸುವುದು ಪದ್ಯಾಣರಿಗೆ ಸಲ್ಲಿಸುವ ಗೌರವ ಹಾಗೂ ನುಡಿ ನಮನ.

ಪ್ರೀತಿಯ ಬೆಸುಗೆಗೆ ಕಾದಿದೆ ಕಾಶ್ಮೀರ

10ನೇ ಪುಟದಿಂದ...

'ಯಾಕೆ ನೀವು ಕಾಶ್ಮೀರದಲ್ಲಿಯೇ ಇರಲು ಬಯಸುತ್ತೀರಿ? ದೇಶದ ಇತರ ಬೃಹತ್ ನಗರಗಳಿಗೆ ಬಂದರೆ ನಿಮಗೆ ಇಲ್ಲಿಗಿಂತ ಹೆಚ್ಚು ವೇತನ ಸಿಗುತ್ತದೆಯಲ್ಲ' ಎಂದು ಕೇಳಿದರೆ ಆತ ಮನೆಯ ತಾಪತ್ರಯಗಳ ಬಗ್ಗೆ ಹೇಳುತ್ತಾನೆ. ಆದರೆ ನಿಜವಾದ ಗುಟ್ಟು ಬೇರೆಯೇ ಇದೆ. ಅವನಿಗೆ ದೇಶದ ಬೇರೆ ಭಾಗದಲ್ಲಿ ಕೆಲಸ ಮಾಡಲು ಹಿಂಜರಿಕೆ.

ಪಹಲ್ಗಾಮ್ ನಲ್ಲಿ ಸಿಕ್ಕ ವ್ಯಾಪಾರಿಗಳಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ್ದವರೂ ಇದ್ದರು. 'ನಾವು ಬೆಂಗಳೂರಿನಿಂದ ಬಂದವರು' ಎಂದು ಹೇಳಿದ ತಕ್ಷಣ 'ಅಯ್ಯೋ ಬೆಂಗಳೂರಿನವರಾ, ನನಗೆ ಗೊತ್ತು, ಜಯನಗರ, ವಿಜಯನಗರ, ಶಿವಾಜಿನಗರ ಎಲ್ಲಾ ಗೊತ್ತು' ಎಂದು ಹೇಳುತ್ತಾ ನಮಗೆ ಇನ್ನಷ್ಟು ಆತ್ಮೀಯನಾಗಲು ಬಯಸಿದ. ಕನ್ನಡದ ಒಂದೆರಡು ಶಬ್ದಗಳನ್ನು ಹೇಳುವ ಬೀದಿ ಬದಿ ವ್ಯಾಪಾರಿಗಳು ಪಹಲ್ಗಾಮ್, ಪುಲ್ವಾಮಾ, ಸಂಗಮ್, ದಾಲ್ ಲೇಕ್ ಮುಂತಾದ ಕಡೆ ಸಿಗುತ್ತಾರೆ. ಆದರೆ ಅವರೆಲ್ಲಾ ಹಾಗೆ ಬಂದು ಹೀಗೆ ಹೋದವರು. ಯಾರೂ ಇಲ್ಲಿಯೇ ನೆಲೆಸಲು ಬಯಸುವವರಲ್ಲ. ಜೊತೆಗೆ ಅದು ಅವರ ವ್ಯಾಪಾರದ ತಂತ್ರ. ಒಂದಷ್ಟು ಶಾಲು, ಒಂದಿಷ್ಟು ಕೇಸರಿ ಮಾರಾಟವಾದರೆ ಸಾಕು ಅವರಿಗೆ.

ನಾಲ್ಕು ದಿನದ ನಮ್ಮ ಪಯಣದಲ್ಲಿ ಸಿಕ್ಕ ಇಬ್ಬರು ವಾಹನ ಚಾಲಕರೂ ಅಷ್ಟೇ. ಬಸ್ಸಿನಲ್ಲಿ ನಮ್ಮ ಜೊತೆ ಅಂತ್ಯಾಕ್ಷರಿಯಲ್ಲಿ ಸೇರಿಕೊಂಡರು. ವಾಹನ ಓಡಿಸುತ್ತಲೇ ಹಾಡು ಹೇಳುತ್ತಾ ನಮ್ಮನ್ನು ರಂಜಿಸಿದರು. ಕೇಸರಿ ಮಾರಾಟದ ಮಳಿಗೆಗೆ ಕರೆದುಕೊಂಡು ಹೋಗಿ ಕೇಸರಿ ಕೊಡಿಸಿದ್ದೇ ಅಲ್ಲದೆ 'ನಿಮ್ಮಲ್ಲೂ ಬೇಕಾದರೆ ಬೆಳೆಯಿರಿ' ಎಂದು ತೋಟದಿಂದ ಕೇಸರಿ ಗಡ್ಡೆ ಕೀಳಿಸಿ ತರಿಸಿಕೊಟ್ಟರು. 'ಕೇಸರಿ ಇಲ್ಲಿನ ವಾತಾವರಣಕ್ಕೆ ಬೆಳೆಯುತ್ತದೆ. ನಿಮ್ಮಲ್ಲಿ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಟ್ರೈ ಮಾಡಿ' ಎಂದು ಹುಷಾರಿನಿಂದ ಗಡ್ಡೆಗಳನ್ನು ಸುತ್ತಿ ಕೊಟ್ಟರು. ಇದೆಲ್ಲ ನೋಡಿದಾಗ ಕಾಶ್ಮೀರಿಗರ ಮನಸ್ಸು ಪ್ರೀತಿಗೆ ಹಾತೊರೆಯುತ್ತಿದೆ ಎನ್ನುವುದು ಸ್ಪಷ್ಟ.

ಬೆಂಗಳೂರನ್ನೇ ನೋಡಿ. ಇಲ್ಲಿ ಪಂಜಾಬಿಗಳಿದ್ದಾರೆ. ರಾಜಸ್ತಾನಿಗಳಿದ್ದಾರೆ. ಗುಜರಾತಿನಿಂದ ಬಂದವರಿದ್ದಾರೆ. ಬಿಹಾರದವರಂತೂ ಬೇಕಾದಷ್ಟು ಜನ ಇದ್ದಾರೆ. ಆದರೆ ಕಾಶ್ಮೀರಿಗರು? ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಏನಿದರ ಹಕೀಕತ್. ಕಾಶ್ಮೀರಿಗಳಿಗೆ ಸದಾ ಕಾಲ ಅಭದ್ರತೆ ಚಿಂತೆ. ಪ್ರತ್ಯೇಕತೆಯ ಬೇಸರ. ಭಾರತದ ಇತರ ಭಾಗದ ಜನರು ತಮ್ಮನ್ನು ಸ್ವೀಕರಿಸುವುದಿಲ್ಲವೇನೋ ಎಂಬ ಭಾವನೆ. ಕಾಶ್ಮೀರ ಎಂದರೆ ಭಯೋತ್ಪಾದಕರು, ಉಗ್ರಗಾಮಿಗಳು ಎಂದೇ ಭಾವಿಸಬಹುದೆಂಬ ಕೀಳು ಭಾವನೆ ಅವರನ್ನು ಆವರಿಸಿದಂತೆ ಕಾಣುತ್ತದೆ. ಕಾಶ್ಮೀರದ ಜನರ ಜೊತೆ ಒಡನಾಟ ನಡೆಸಿದರೆ, ಅವರ ಜೊತೆ ಮಾತನಾಡುತ್ತಿದ್ದರೆ ಅವರು ಸ್ನೇಹಕ್ಕಾಗಿ ಹಾತೊರೆಯುತ್ತಿದ್ದಂತೆ ಭಾಸವಾಗುತ್ತದೆ. ನಾವೇ ಅವರನ್ನು ಪ್ರತ್ಯೇಕವಾಗಿ ಇಟ್ಟು ಬಿಟ್ಟಿದ್ದೀವೇನೋ ಎಂಬ ಅಪರಾಧಿ ಪ್ರಜ್ಞೆ ಕಾಡಿದರೆ ಆಶ್ಚರ್ಯವಿಲ್ಲ. ನಿಜವಾದ ಅರ್ಥದಲ್ಲಿ ನಾವೇ ಪ್ರತ್ಯೇಕತಾವಾದಿಗಳು. ಅವರನ್ನು ನಮ್ಮವರನ್ನಾಗಿ ಮಾಡಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ ಎಂದೇ ಅನಿಸುತ್ತದೆ.

ಕನ್ನಡದ ಸಿನಿಮಾದಲ್ಲಿ ದೊಡ್ಡಣ್ಣ ಅವರ ಜೋಕ್ ನಲ್ಲಿ ಹೇಳುವಂತೆ ಕಾಶ್ಮೀರ ಈಗಲೂ ಸೀರಿಯಸ್ ಆಗಿದೆ. ಭಾರತದ ಎಲ್ಲರೂ ತಕ್ಷಣವೇ ಪ್ರೀತಿಯ ಭರವಸೆಯೊಂದಿಗೆ ಅಲ್ಲಿಗೆ ತೆರಳಬೇಕಿದೆ. ನಮ್ಮ ಆತ್ಮೀಯತೆಯ ಅಪ್ಪುಗೆಯಲ್ಲಿ ಅದನ್ನು ಮುಳುಗಿಸಬೇಕಿದೆ. ಮಿಲಿಟರಿ ಮಾಡದ ಕೆಲಸವನ್ನು ಒಂದು ವಿಶ್ವಾಸದ ನಗೆ ಮಾಡುತ್ತದೆ. ಪ್ರೀತಿಯ ಬೆಸುಗೆಗೆ ಕಾದಿದೆ ಕಾಶ್ಮೀರ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಶೇಷ – ವಿಶೇಷ ಭಾಗಾಕಾರಗಳು

ಇಲ್ಲಿ ಕೆಲವು ಸಂಖ್ಯೆಗಳಿವೆ. ಅವುಗಳನ್ನು ಭಾಗಿಸಿದಾಗ ಉಳಿಯುವ ಶೇಷಗಳು ವಿಶೇಷವಾಗಿವೆ ಗಮನಿಸಿ

1) **14622047999**
ಈ ಸಂಖ್ಯೆಯನ್ನು 10ರಿಂದ ಭಾಗಿಸಿದಾಗ ಶೇಷ – 9
9ರಿಂದ ಭಾಗಿಸಿದಾಗ ಶೇಷ – 8
8ರಿಂದ ಭಾಗಿಸಿದಾಗ ಶೇಷ – 7
7ರಿಂದ ಭಾಗಿಸಿದಾಗ ಶೇಷ – 6
6ರಿಂದ ಭಾಗಿಸಿದಾಗ ಶೇಷ – 5
5ರಿಂದ ಭಾಗಿಸಿದಾಗ ಶೇಷ – 4
4ರಿಂದ ಭಾಗಿಸಿದಾಗ ಶೇಷ – 3
3ರಿಂದ ಭಾಗಿಸಿದಾಗ ಶೇಷ – 2
2ರಿಂದ ಭಾಗಿಸಿದಾಗ ಶೇಷ – 1 ಉಳಿಯುತ್ತದೆ

2) **2519** - ಈ ಸಂಖ್ಯೆಗೂ ಮೇಲಿನಂತೆ ಶೇಷ ಉಳಿಯುತ್ತಾ ಹೋಗುತ್ತವೆ

3) **301** - ಆದರೆ ಈ ಸಂಖ್ಯೆಯನ್ನು
2ರಿಂದ ಭಾಗಿಸಿದಾಗಲೂ 1 ಶೇಷ
3ರಿಂದ ಭಾಗಿಸಿದಾಗಲೂ 1 ಶೇಷ
4ರಿಂದ ಭಾಗಿಸಿದಾಗಲೂ 1 ಶೇಷ
5ರಿಂದ ಭಾಗಿಸಿದಾಗಲೂ 1 ಶೇಷ

(ಭಾಗಿಸಿ ಖಾತ್ರಿ ಮಾಡಿಕೊಳ್ಳಿ)

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ರಮಣನ ಜನ = ______
2. ರಹದಾರಿ = ______
3. ದಾರಪಟ = ______
4. ಜನರ ಬಲಿ = ______

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಕಾಟ 2. ಮಗು 3. ಹುಗಿ 4. ಕಡ್ಡಿ
5. ಕಟ್ಟು 6. ಜೋಡಿ 7. ಕರ 8. ಗಡಿ

1.		ಬ	
2.		ಪ	
3.		ಡು	
4.		ಣ್ಕ	
5.		ರ	
6.		ದಾ	
7.		ಲ	
8.		ಶೋ	

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೆಲವು ಎರಡಕ್ಷರದ ಪದಗಳನ್ನು ಕೊಡಲಾಗಿದೆ. ಒಂದು ಅರ್ಥ ಕೊಡಲಾಗಿದೆ. ಇನ್ನೊಂದು ಅರ್ಥ ಹೊಂದಿಸಿ

A ವಿಭಾಗ

1. ಪಾಲಕ	= 1) ಸೊಪ್ಪು	2) ______	A. ಮೇಕೆ
2. ದೊರೆ	= 1) ಸಿಗು	2) ______	B. ಅರಣ್ಯ
3. ಕುಡಿ	= 1) ಪಾನಮಾಡು	2) ______	C. ನೆನಪಿಸಿಕೋ
4. ಆಡು	= 1) ನುಡಿ	2) ______	D. ಪಾತಿ
5. ಮಿಡಿ	= 1) ಹೀಚು	2) ______	E. ತೆರಿಗೆ
6. ಕಾಡು	= 1) ಪೀಡಿಸು	2) ______	F. ಬಡಿಗೆ
7. ದಂಡ	= 1) ಜುಲ್ಮಾನೆ	2) ______	G. ಅರಸ
8. ಮಡಿ	= 1) ಸಾಯು	2) ______	H. ಸ್ಪಂದಿಸು
9. ಕರ	= 1) ಹಸ್ತ	2) ______	I. ಒಡೆಯ
10. ನೆನೆ	= 1) ಒದ್ದೆಯಾಗು	2) ______	J. ಚಿಗುರು

B ವಿಭಾಗ

ಇಲ್ಲಿ ಕೊಟ್ಟಿರುವ ನುಡಿಗಟ್ಟುಗಳನ್ನು ಮತ್ತು ಅರ್ಥಗಳನ್ನೂ ಹೊಂದಿಸಿ

1. ಎತ್ತಿದ ಕೈ	A. ಮುಕ್ತಾಯ
2. ಉಪ್ಪು ಖಾರ ಹಚ್ಚು	B. ಚಾಡಿ ಹೇಳು
3. ಆಟ ನಡೆ	C. ಸಂರಕ್ಷಿಸು
4. ಇತಿಶ್ರೀ	D. ನಿಷ್ಪ್ರಯೋಜಕ
5. ಕಿವಿಕಚ್ಚು	E. ಇಲ್ಲದ್ದನ್ನು ಸೇರಿಸು
6. ತಲೆ ಇಲ್ಲ	F. ಪ್ರೀತಿಪಾತ್ರ
7. ಬೆನ್ನು ಕಾಯು	G. ಪ್ರಭಾವಬೀರು
8. ರೈಲುಬಿಡು	H. ಸುಳ್ಳು ಹೇಳು
9. ಮುಂಗೈಯರಗಿಳಿ	I. ಬುದ್ಧಿ ಇಲ್ಲ
10. ಭೂಮಿಗೆ ಭಾರ	J. ಪ್ರವೀಣ

ಡಶ್ಗ ಚಿಕ್ಕು ಕೇಶ್ರುಷ್ಕು ಕಥೆಯ

ಅತಿ ಆಸೆ ಗತಿ ಕೇಡು

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಒಂದೂರಿನಲ್ಲಿ ಸಾಮಾನ್ಯ ವ್ಯಕ್ತಿಯೊಬ್ಬ ಆಗರ್ಭ ಶ್ರೀಮಂತನಾಗಬೇಕು ಎಂದು ಕನಸು ಕಾಣುತ್ತಾನೆ



ತನ್ನ ಆಸೆ ಈಡೇರಲು ಆತ ದೇವರನ್ನು ಕುರಿತು ದೀರ್ಘಕಾಲ ತಪಸ್ಸು ಮಾಡುತ್ತಾನೆ



ಪ್ರತ್ಯಕ್ಷನಾದ ದೇವರು ಅವನ ಆಸೆ ಈಡೇರಲು, ಸೂರ್ಯಾಸ್ತದ ಒಳಗೆ ಕಬ್ಬಿಣ ತಂದು ಕೊಟ್ಟರೆ ಚಿನ್ನವಾಗಿಸುವುದಾಗಿ ಹೇಳುತ್ತಾನೆ

ಅದಕ್ಕಾಗಿ ಈ ವ್ಯಕ್ತಿಯು ಕಬ್ಬಿಣದ ವಸ್ತುಗಳನ್ನು ರಾಶಿ ಹಾಕುತ್ತಲೇ ಇರುತ್ತಾನೆ.

ಸಾಧ್ಯವಾದಷ್ಟು ಹೆಚ್ಚು ಚಿನ್ನ ಪಡೆಯಲು ಕಬ್ಬಿಣ ರಾಶಿ ಹಾಕುವ ಭರದಲ್ಲಿ ಸೂರ್ಯಾಸ್ತದ ಸಮಯ ಕಳೆದೇ ಹೋಯಿತು

ಕಬ್ಬಿಣದ ವಸ್ತುಗಳು ಹಾಗೇ ಉಳಿದವು. ಅತಿಯಾಸೆಯಿಂದ ಸ್ವಲ್ಪ ಚಿನ್ನವೂ ಸಿಗದಾಯಿತು ಎಂದು ದುಃಖಿಸುತ್ತಾನೆ

ಶಬ್ದಗಳೊಡನೆ ಸರಸ

ಇಲ್ಲಿ ಕೊಟ್ಟಿರುವ ಕೆಲವು ವಾಕ್ಯಗಳಲ್ಲಿ ಹೊಲದಲ್ಲಿ ರೈತ ಬೆಳೆಯುವ ಕೆಲವು ಬೆಳೆಗಳ ಹೆಸರು ತುಂಬಿ ವಾಕ್ಯ ಪೂರ್ಣ ಮಾಡಿ.

1. ಆತ ನಮಗೆ ____ ರದ ಸಂಬಂಧಿ
2. ಮಕ್ಕಳೇ ವೀರ ____ ಬಾಳಿರಿ
3. ____ ಬಾಗಿಲಿಗೆ ತಳಿರು ತೋರಣ ಕಟ್ಟಿ ಶೃಂಗರಿಸಿದ್ದರು
4. ಸುಮ್ಮನೆ ____ ದ್ದ ಮಾತನಾಡಬೇಡ
5. ಅ ____ ಕ್ಕಾರ ಹಾಕುತ್ತಾ ಜನ ಈ ಕಡೆಗೆ ಬರುತ್ತಿದ್ದಾರೆ
6. ____ ಕ್ಕ ತಂದು ಸಾಲ ತೀರಿಸಿದ್ದೇನೆ
7. ಆತನ ಮಾತಿನಲ್ಲಿ ಯಾವುದೇ ____ ಲ್ಲ
8. ಆತನ ____ ಈ ಭಾಗದಲ್ಲಿ ತುಂಬಾ ಪ್ರಸಿದ್ಧಿ ಇದೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು
1. ಸಾವಿರ 2. ತಬಲಾ 3. ಕವಿತೆ 4. ಅಬಲೆ
5. ಕಕ್ಕಸ 6. ಕವಿತೆ 7. ಕುಪ್ಪತ್ತು 8. ಜೀವನ

ಶಬ್ದಗಳೊಡನೆ ಸರಸ
1. ದ್ವಂದ್ವ 2. ಪಂಪ 3. ಗುಂಗು 4. ದುಂದು
5. ಚುಂಚು 6. ಕಂಕ 7. ಸಂಸ

ಅದಲು ಬದಲು ಕಂಚಿ ಕದಲು
1. ಆಕಾಶಯಾನ 2. ಬಕ್ಕತಲೆ
3. ಮಾನವಕುಲ 4. ಬಿಟ್ಟ ವಿಚಾರ

ಟ್ವೆಂಟಿ -20 ಮ್ಯಾಚ್

1-D	2- S	3-C	4-T	5-B
6-E	7-M	8-F	9-R	10-H
11-G	12-J	13-I	14-A	15-L
16-P 1	7-Q	18-O	19-K	20-N

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ವೇದಾ ಎಸ್.
ಬೆಂಗಳೂರು

ಸಯೀಶ್ ಎಸ್.
ಶಿವಮೊಗ್ಗ

ವಿನೋದ ಕುಮಾರ್
ಬಳ್ಳಾರಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:
majakoora@prajavani.co.in

ದ್ರಾವಿಡ್‌ಗೆ ಬಲಾಢ್ಯ ತಂಡ ಕಟ್ಟುವ ಹೊಣೆ?

ನವದೆಹಲಿ (ಪಿಟಿಐ): ಭಾರತ ತಂಡದಲ್ಲಿ ಆಡುವಾಗ 'ಗೋಡೆ'ಯೆಂಬ ಖ್ಯಾತಿ ಗಳಿಸಿದ್ದ ರಾಹುಲ್ ದ್ರಾವಿಡ್, ನಂತರ ಯುವ ತಂಡಗಳ ಮುಖ್ಯ ಕೋಚ್ ಆಗಿ ಮಾಡಿದ್ದ ಸಾಧನೆಯು ಅಮೋಘವಾದದ್ದು.

ಇದೀಗ ಅವರ ಮುಂದೆ ಭವಿಷ್ಯದ ಭಾರತ ಸೀನಿಯರ್ ತಂಡವನ್ನು ಕಟ್ಟಿ ಬೆಳೆಸುವ ಹೊಣೆಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ನೀಡಿದೆ.

ಪ್ರಸ್ತುತ ಮುಖ್ಯ ಕೋಚ್ ಆಗಿರುವ ರವಿಶಾಸ್ತ್ರಿ ಅವರ ಕಾರ್ಯಾವಧಿಯು ಇದೇ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ನಂತರ ಮುಕ್ತಾಯವಾಗಲಿದೆ. ಅವರ ಸ್ಥಾನಕ್ಕೆ48 ವರ್ಷದ ದ್ರಾವಿಡ್ ಬರಲಿದ್ದಾರೆ.

ಹೋದ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾದಲ್ಲಿ ವಿರಾಟ್ ಕೊಹ್ಲಿ ಅನುಪಸ್ಥಿತಿಯಲ್ಲಿ ಭಾರತದ ಯುವ ಪಡೆ ಐತಿಹಾಸಿಕ ಟೆಸ್ಟ್ ಸರಣಿ ಜಯ ಸಾಧಿಸಿದಾಗಿನಿಂದಲೂ ರಾಹುಲ್ ಅವರ ಹೆಸರು ಕೇಳಿಬರುತ್ತಿತ್ತು. ಆದರೆ ರಾಹುಲ್ ಮಾತ್ರ ನಿರಾಕರಿಸುತ್ತಲೇ ಬಂದಿದ್ದಾರೆ. ಇದೀಗ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅವರು ಮನವೊಲಿಸಿದ ನಂತರ ಒಪ್ಪಿಕೊಂಡಿದ್ದಾರೆಂದು ಮೂಲಗಳು ತಿಳಿಸಿವೆ.

ತಮ್ಮ ಕುಟುಂಬದೊಂದಿಗೆ ಹೆಚ್ಚು ಕಾಲ ಕಳೆಯುವ ಉದ್ದೇಶದಿಂದ ಆಗ ನಿರಾಕರಿಸಿದ್ದರೆನ್ನಲಾಗಿದೆ. ಇದೀಗ ಮಕ್ಕಳು ಕೂಡ ದೊಡ್ಡವರಾಗಿದ್ದಾರೆ. ಆದ್ದರಿಂದ ದ್ರಾವಿಡ್ ಕೋಚ್ ಹುದ್ದೆಯ ಹೊಣೆ ನಿಭಾಯಿಸಲು ಒಪ್ಪಿರಬಹುದು ಎಂದು ಬಿಸಿಸಿಯ ಮೂಲಗಳು ತಿಳಿಸಿವೆ.

ಆಯ್ಕೆ ಪ್ರಕ್ರಿಯೆಗೆ ಸಂದರ್ಶನ

ದ್ರಾವಿಡ್ ಅವರನ್ನು ಕೋಚ್ ಆಗಿ ನೇಮಕ ಮಾಡುವ ನಿರ್ಧಾರವನ್ನು ಬಿಸಿಸಿಐ ಕೈಗೊಂಡಿದ್ದರೂ ಕೂಡ ನಿಯಮಾವಳಿಯಂತೆ ಆಯ್ಕೆ ಸಂದರ್ಶನ ಪ್ರಕ್ರಿಯೆ ನಡೆಸಲಿದೆ.

ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಅವರ ಶಿಫಾರಸುಗಳ ಮೇರೆಗೆ ನಿಯಮಾವಳಿಯನ್ನು ರೂಪಿಸಲಾಗಿದೆ. ಅದರಲ್ಲಿ ಕ್ರಿಕೆಟ್ ಆಯ್ಕೆ ಸಮಿತಿಯ ಮೂಲಕವೇ ಕೋಚ್‌ಗಳ ನೇಮಕ ಮಾಡುವುದು ಕಡ್ಡಾಯ. ಆದ್ದರಿಂದ ಈ ಪ್ರಕ್ರಿಯೆಯನ್ನು ಬಿಸಿಸಿಐ ಪಾಲಿಸಲಿದೆ ಎನ್ನಲಾಗಿದೆ.

ನವೆಂಬರ್ 17ರಿಂದ ಭಾರತದಲ್ಲಿ ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಸರಣಿಗೂ ಮುನ್ನ ಈ ಎಲ್ಲ ಪ್ರಕ್ರಿಯೆಗಳನ್ನು ಮುಗಿಸುವ ಸಾಧ್ಯತೆ ಇದೆ.

ಅವರು ಭಾರತ ಎ ಮತ್ತು 19 ವರ್ಷದೊಳಗಿನವರ ತಂಡದ ಮುಖ್ಯ ಕೋಚ್ ಆಗಿದ್ದಾಗ ಬೆಳೆದ ಪ್ರತಿಭೆಗಳು ಈಗ ಭಾರತ ತಂಡದಲ್ಲಿ ಮಿಂಚುತ್ತಿದ್ದಾರೆ. ಪೃಥ್ವಿ ಶಾ, ರಿಷಭ್ ಪಂತ್, ಹನುಮವಿಹಾರಿ, ಶುಭಮನ್ ಗಿಲ್ ಅವರು ಪ್ರಮುಖ ಆಟಗಾರರು.

ಸದ್ಯ ತಂಡದಲ್ಲಿರುವ ಅನುಭವಿ ಆಟಗಾರರಾದ 35 ವರ್ಷದ ರೋಹಿತ್ ಶರ್ಮಾ, 33 ವರ್ಷದ ವಿರಾಟ್ ಕೊಹ್ಲಿ, ಮೊಹಮ್ಮದ್ ಶಮಿ, ಇಶಾಂತ್ ಶರ್ಮಾ, ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಅವರು ತಂಡಕ್ಕೆ ಉತ್ತಮ ಕಾಣಿಕೆ ಕೊಡುತ್ತಿದ್ದಾರೆ. ಕೆಲವು ವರ್ಷಗಳ ನಂತರ ಅವರು ನಿವೃತ್ತರಾದಾಗ ಆ ಸ್ಥಾನಗಳನ್ನು ತುಂಬುವವರನ್ನು ಸಿದ್ಧಗೊಳಿಸುವ ಹೊಣೆ ದ್ರಾವಿಡ್ ಅವರ ಮೇಲೆ ಬೀಳಲಿದೆ.

ರವಿಶಾಸ್ತ್ರಿ ಮಾರ್ಗದರ್ಶನದಲ್ಲಿ ತಂಡವು ಹಲವು ದಾಖಲೆಗಳನ್ನು ಮಾಡಿದೆ. ವಿದೇಶಿ ನೆಲದಲ್ಲಿ ಬಲಾಢ್ಯ ತಂಡಗಳನ್ನು ಮಣಿಸಿದೆ. ಆದ್ದರಿಂದ ಅದೇ ಸಾಧನೆಯನ್ನು ಮುಂದುವರಿಸುವ ಸವಾಲು ಕೂಡ ರಾಹುಲ್ ಮುಂದಿದೆ.

ರವಿಶಾಸ್ತ್ರಿ ಅವರಿಗೆ ಬಿಸಿಸಿಐ ₹ 8.5 ಕೋಟಿ ವೇತನ ನೀಡುತ್ತಿದೆ. ದ್ರಾವಿಡ್ ಅವರಿಗೆ ಅದಕ್ಕಿಂತಲೂ ಹೆಚ್ಚು ಲಭಿಸುವ ಸಾಧ್ಯತೆ ಇದೆ ಎಂದೂ ಮೂಲಗಳು ಹೇಳಿವೆ.

ದ್ರಾವಿಡ್ ಅವರ ಆಪ್ತರಾಗಿರುವ ಪಾರಸ್ ಮಾಂಬ್ರೆ ಅವರನ್ನು ಬೌಲಿಂಗ್ ಕೋಚ್ ಆಗಿ ನೇಮಕ ಮಾಡುವ ಸಾಧ್ಯತೆಯೂ ಇದೆ. ವಿಕ್ರಂ ರಾಥೋಡ್, ಬ್ಯಾಟಿಂಗ್ ಕೋಚ್ ಆಗಿ ಮುಂದುವರಿಯುವ ನಿರೀಕ್ಷೆ ಇದೆ.

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ದ್ವಿಶತಕ	ಅರ್ಧಶತಕ
ಟೆಸ್ಟ್	164	13288	270	36	5	63
ಏಕದಿನ	344	10889	153	12	0	83
ಟ್ವೆಂಟಿ–20	1	31	31	0	0	0

ಭಾರತ ತಂಡದ ಮುಖ್ಯ ಕೋಚ್‌ಗಳು

ಕೋಚ್	ಅವಧಿ	ದೇಶ
ಕೆಕಿ ತಾರಾಪುರ್	1971	ಭಾರತ
ಹೇಮು ಅಧಿಕಾರಿ	1971-74	ಭಾರತ
ಗುಲಾಬ್‌ರಾಯ್ ರಾಮಚಂದ್	1975	ಭಾರತ
ದತ್ತಾ ಗಾಯಕವಾಡ್	1978	ಭಾರತ
ಸಲೀಮ್ ದುರಾನಿ	1980-81	ಭಾರತ
ಅಶೋಕ್ ಮಂಕಡ್	1982	ಭಾರತ
ಪಿಆರ್. ಮಾನಸಿಂಗ್	1983-87	ಭಾರತ
ಚಂದು ಬೋರ್ಡೆ	1988-89	ಭಾರತ
ಬಿಷನ್ ಸಿಂಗ್ ಬೇಡಿ	1990-91	ಭಾರತ
ಅಶೋಕ್ ಮಂಕಡ್	1991	ಭಾರತ
ಅಬ್ಬಾಸ್ ಅಲಿ ಬೇಗ್	1991-92	ಭಾರತ
ಅಜಿತ್ ವಾಡೇಕರ್	1992-96	ಭಾರತ
ಸಂದೀಪ್ ಪಾಟೀಲ	1996	ಭಾರತ
ಮದನ್ ಲಾಲ್	1996-97	ಭಾರತ
ಅನ್ಷುಮನ್ ಗಾಯಕವಾಡ್	1997-99	ಭಾರತ
ಕಪಿಲ್ ದೇವ್	1999-2000	ಭಾರತ
ಜಾನ್ ರೈಟ್	2000-05	ನ್ಯೂಜಿಲೆಂಡ್
ಗ್ರೇಗ್ ಚಾಪೆಲ್	2005-07	ಆಸ್ಟ್ರೇಲಿಯಾ
ಲಾಲ್‌ಚಂದ್ ರಜಪೂತ್	2007-08	ಭಾರತ
ಗ್ಯಾರಿ ಕರ್ಸ್ಟನ್	2008-11	ದಕ್ಷಿಣ ಆಫ್ರಿಕಾ
ಡಂಕನ್ ಫ್ಲೆಚರ್	2011-15	ಜಿಂಬಾಬ್ವೆ
ರವಿಶಾಸ್ತ್ರಿ	2015-16	ಭಾರತ
ಸಂಜಯ್ ಬಾಂಗರ್	2016	ಭಾರತ
ಅನಿಲ್ ಕುಂಬ್ಳೆ	2016-17	ಭಾರತ
ರವಿಶಾಸ್ತ್ರಿ	2017 ರಿಂದ ಇಲ್ಲಿಯವರೆಗೆ	ಭಾರತ
ರಾಹುಲ್ ದ್ರಾವಿಡ್ (ಶ್ರೀಲಂಕಾ ಪ್ರವಾಸಕ್ಕೆ ಮಾತ್ರ)	2021	ಭಾರತ

ಫುಟ್‌ಬಾಲ್: ಚೆಟ್ರಿ ಬಳಗಕ್ಕೆ ಮಣಿದ ನೇಪಾಳ ತಂಡ

ಭಾರತ ಸ್ಯಾಫ್ ಚಾಂಪಿಯನ್

ಸುನಿಲ್ ಚೆಟ್ರಿ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಟ್ವಿಟರ್ ಚಿತ್ರ

ಮಾಲಿ (ಮಾಲ್ಡೀವ್ಸ್) (ಪಿಟಿಐ): ನಾಯಕ ಸುನಿಲ್ ಚೆಟ್ರಿ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ 80ನೇ ಗೋಲು ಗಳಿಸಿ ಮಿಂಚಿದರು. ಈ ಮೂಲಕ ಲಯೊನೆಲ್ ಮೆಸ್ಸಿ ಸಾಧನೆಯನ್ನು ಸಮಗಟ್ಟಿದರು. ಚೆಟ್ರಿ (49ನೇ ನಿಮಿಷ), ಸುರೇಶ್ ಸಿಂಗ್ (50ನೇ ನಿ) ಮತ್ತು ಸಹಲ್ ಅಬ್ದುಲ್ ಸಮದ್ (90ನೇ ನಿ) ಅವರ ಗೋಲುಗಳ ನೆರವಿನಿಂದ ಭಾರತ ತಂಡ ಸ್ಯಾಫ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ತನ್ನದಾಗಿಸಿಕೊಂಡಿತು.

ಇಲ್ಲಿನ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ನೇಪಾಳವನ್ನು ಭಾರತ 3–0 ಗೋಲುಗಳಿಂದ ಮಣಿಸಿತು. ಈ ಮೂಲಕ ಎಂಟನೇ ಬಾರಿ ಸ್ಯಾಫ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡಿತು. ಮೊದಲ ಬಾರಿ ಫೈನಲ್ ಪ್ರವೇಶಿಸಿದ ನೇಪಾಳ ನಿರಾಸೆ ಕಂಡಿತು.

37 ವರ್ಷದ ಸುನಿಲ್ ಚೆಟ್ರಿ ಅವರು ಮೆಸ್ಸಿ ಸಾಧನೆಯನ್ನು ಸಮಟ್ಟುವುದರೊಂದಿಗೆ ಸದ್ಯ ಆಡುತ್ತಿರುವವರ ಪೈಕಿ ಅತಿ ಹೆಚ್ಚು ಗೋಲು ಗಳಿಸಿದವರ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದರು.

ಪಂದ್ಯದ ಮೊದಲಾರ್ಧದಲ್ಲಿ ಭಾರತ ಪಾರಮ್ಯ ಮೆರೆದಿತ್ತು. ಆದರೆ ಚೆಂಡನ್ನು ಗುರಿ ಮುಟ್ಟಿಸಲು ಸಾಧ್ಯವಾಗಲಿಲ್ಲ. ದ್ವಿತೀಯಾರ್ಧ ಆರಂಭಗೊಂಡು ಸ್ವಲ್ಪ ಹೊತ್ತಿನಲ್ಲೇ ಚೆಟ್ರಿ ತಂಡಕ್ಕೆ ಮುನ್ನಡೆ ಗಳಿಸಿಕೊಟ್ಟರು. ಈ ಆಘಾತದಿಂದ ಚೇತರಿಸಿಕೊಳ್ಳುವ ಮೊದಲೇ ನೇಪಾಳಕ್ಕೆ ಸುರೇಶ್ ಸಿಂಗ್ ಮತ್ತೆ ಪೆಟ್ಟುಕೊಟ್ಟರು. ಬಲಭಾಗದಿಂದ ಪ್ರೀತಂ ಕೊತಾಲ್ ನೀಡಿದ ಚೆಂಡಿಗೆ ತಲೆಯೊಡ್ಡಿ ಸುನಿಲ್ ಚೆಟ್ರಿ ಮೊದಲ ಗೋಲು ಗಳಿಸಿದರು. ಯಾಸಿರ್ ಮೊಹಮ್ಮದ್ ನೀಡಿದ ಮೋಹಕ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಿಸಿ ಸುರೇಶ್ ಗೋಲು ಗಳಿಸಿದರು. ಸಹಲ್ ಏಕಾಂಗಿಯಾಗಿ ಚೆಂಡನ್ನು ಡ್ರಿಬಲ್ ಮಾಡುತ್ತ ಬಂದು ಮೋಹಕ ಗೋಲು ಗಳಿಸುವುದರೊಂದಿಗೆ ಮುನ್ನಡೆ ಹೆಚ್ಚಿಸಿದರು.

52ನೇ ನಿಮಿಷದಲ್ಲಿ ಮನ್ವೀರ್ ಸಿಂಗ್ ಅವರಿಗೆ ಗೋಲು ಗಳಿಸುವ ಅವಕಾಶ ಲಭಿಸಿತ್ತು. ಆದರೆ ಅವರು ಎಡಗಾಲಿನಿಂದ ಒದ್ದ ಚೆಂಡು ಗುರಿ ಸೇರಲಿಲ್ಲ. 79ನೇ ನಿಮಿಷದಲ್ಲಿ ಉದಾಂತ ಸಿಂಗ್ ಕೂಡ ಚೆಂಡಿನೊಂದಿಗೆ ಮುನ್ನಡೆದಿದ್ದರು. ಆದರೆ ರೋಹಿತ್ ಚಾಂದ್ ಅವರು ನೇಪಾಳದ ರಕ್ಷಣೆಗೆ ನಿಂತರು.

ಕ್ರಿಕೆಟಿಗ ಅವಿ ಬಾರೊಟ್ ನಿಧನ

ರಾಜ್‌ಕೋಟ್/ಅಹಮದಾಬಾದ್ (ಪಿಟಿಐ): ಸೌರಾಷ್ಟ್ರ ಕ್ರಿಕೆಟ್ ತಂಡದ ಆಟಗಾರ, ಭಾರತ 19 ವರ್ಷದೊಳಗಿನವರ ತಂಡದ ಮಾಜಿ ನಾಯಕ ಅವಿ ಬಾರೊಟ್ (29) ಹೃದಯಸ್ತಂಭನದಿಂದ ಶುಕ್ರವಾರ ನಿಧನರಾದರು. ಅವರಿಗೆ ತಾಯಿ ಮತ್ತು ಪತ್ನಿ ಇದ್ದಾರೆ.

2019-20ರ ರಣಜಿ ಟೂರ್ನಿಯಲ್ಲಿ ಸೌರಾಷ್ಟ್ರ ಚಾಂಪಿಯನ್ ಆಗಿದ್ದಾಗ ಅವಿ ತಂಡದಲ್ಲಿದ್ದರು. ಹರಿಯಾಣ ಮತ್ತು ಗುಜರಾತ್ ತಂಡಗಳ ಪರವಾಗಿಯೂ ಅವರು ಆಡಿದ್ದಾರೆ.

ಟಿಟಿ: ಯಶಸ್ವಿನಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಯಶಸ್ವಿನಿ ಘೋರ್ಪಡೆ

ಬೆಂಗಳೂರು: ರಾಜ್ಯದ ಯಶಸ್ವಿನಿ ಘೋರ್ಪಡೆ ಅವರು ಮಸ್ಕತ್‌ನಲ್ಲಿ ನಡೆದ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ 17 ವರ್ಷದೊಳಗಿನ ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

17 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ಅವರು ಉಜ್ಬೆಕಿಸ್ತಾನದ ಮಗ್ದೀವ ಅವರನ್ನು 12-10, 11-3, 11-4ರಲ್ಲಿ ಮಣಿಸಿದರು. ಸೆಮಿಫೈನಲ್‌ನಲ್ಲಿ ಅವರು ಭಾರತದ ತನೀಶಾ ವಿರುದ್ಧ 11 -6, 11-7, 11-9ರಲ್ಲಿ ಜಯ ಗಳಿಸಿದ್ದರು.

ಕ್ವಾರ್ಟರ್ ಫೈನಲ್‌ನಲ್ಲೂ ಅವರಿಗೆ ಭಾರತದ ಆಟಗಾರ್ತಿ ಎದುರಾಳಿಯಾಗಿದ್ದರು. ಲಕ್ಷಿತಾ ವಿರುದ್ಧ 11-8, 11-4, 11-3ರಲ್ಲಿ ಗೆಲುವು ದಾಖಲಿಸಿದ್ದರು.

ಹಾಕಿ: ನಿಶಾ, ಲಿಖಿತಾಗೆ ರಾಜ್ಯ ತಂಡಗಳ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಶಾ ಪಿ.ಸಿ ಮತ್ತು ಲಿಖಿತಾ ಎಸ್.ಪಿ ಅವರು ಹಾಕಿ ಇಂಡಿಯಾದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ರಾಜ್ಯದ ಸೀನಿಯರ್ ಮತ್ತು ಜೂನಿಯರ್ ತಂಗಳನ್ನು ಮುನ್ನಡೆಸುವರು.

ಇದೇ 20ರಿಂದ 30ರ ವರೆಗೆ ಜೂನಿಯರ್ ಚಾಂಪಿಯನ್‌ಷಿಪ್ ಜಾರ್ಖಂಡ್‌ನಲ್ಲಿ ನಡೆಯಲಿದೆ. ಸೀನಿಯರ್ ಚಾಂಪಿಯನ್‌ಷಿಪ್ 21ರಿಂದ 31ರ ವರೆಗೆ ಉತ್ತರಪ್ರದೇಶದಲ್ಲಿ ನಡೆಯಲಿದೆ.

ತಂಡಗಳು: ಸೀನಿಯರ್: ಚಿತ್ರಶ್ರೀ, ಶ್ರವ್ಯ ಜಿ.ಬಿ (ಗೋಲ್‌ಕೀಪರ್‌ಗಳು); ಕಾವ್ಯ ಕೆ.ಆರ್, ಸೌಮ್ಯಶ್ರೀ ಎನ್.ಆರ್, ಶಾಯಿನಾ ತಂಗಮ್ಮ, ಪೂಜಿತ್ ಬಿ.ಎಂ, ಯಶಿಕಾ ಎಂ.ಜಿ, ಅಂಜಲಿ ಎಚ್.ಆರ್, ಹೇಮಾ ಎ.ಎಚ್, ಸಂಧ್ಯಾ ಎಸ್.ಡಿ, ಪೂಜಾ ಎಂ.ಡಿ, ನಿಶಾ ಪಿ.ಸಿ (ನಾಯಕಿ), ಪವಿತ್ರಾ ಪಿ.ಎ, ವಿದ್ಯಾ ಕೆ.ಎಸ್, ಧನ್ಯಾ ಎಂ.ಜಿ, ದೀಪ್ತಿ ಕೆ.ಎ, ಯುಕ್ತಾ ಎಸ್, ನಿಹಾ ಎನ್. ಕೋಮಲ ಬಿ.ಎನ್ (ಮ್ಯಾನೇಜರ್), ಜಾನ್ ವರ್ಗೀಸ್ (ಕೋಚ್).

ಜೂನಿಯರ್ ವಿಭಾಗ: ತೇಜಸ್ವಿನಿ ಡಿ.ಎನ್, ಧನುಶ್ರೀ ಎಚ್.ಜಿ (ಗೋಲ್ ಕೀಪರ್‌ಗಳು), ನಿಶು ಎಸ್.ಎಸ್, ಪಾರ್ವತಿ ಕೆ.ಎ, ಶಿಲ್ಪಾ ಪಿ.ಟಿ, ಆದಿರ, ಜಾಹ್ನವಿ ಎಚ್.ಎಸ್, ಸಹನಾ ಸಿ.ಎಂ, ಪ್ರಗತಿ ಸಿ.ಕೆ, ಲಿಖಿತಾ ಎಸ್.ಪಿ (ನಾಯಕಿ) ಲೀಲಾವತಿ ಕೊಪ್ಪದ್, ಸಿಂಚನಾ ಎಚ್.ಪಿ, ಚಂದನಾ ಜೆ, ಅನ್ನಪೂರ್ಣ ಕೆ.ಎಸ್, ಕಾವ್ಯ ಜಿ, ಜೀವಿತಾ ಬಿ.ಜಿ, ಶಯ ಕಾವೇರಮ್ಮ, ದೇಚಮ್ಮ ಪಿ.ಜಿ, ರಾಖಿ ಪೂವಮ್ಮ (ಮ್ಯಾನೇಜರ್), ನಾಗಲಿಂಗಸ್ವಾಮಿ (ಕೋಚ್).